ಶ್ರೀ

ಶ್ರೀ ವಾದಿರಾಜಯತಿ ವಿರಚಿತ

ಶ್ರೀ ಶ್ರುತಿತತ್ತ್ವಪ್ರಕಾಶಿಕಾ

Complimentary Copy



ಅನುವಾದಕರು

ಬಿ. ವೆಂಕಟೇಶಾಚಾರ್ಯರು

Publisher :

Dr. B. V. Raghavendra Rao
62, Ambika Vilas
Gandhibazar, Basavanagudi
[560004]

Printers :

Prabha Printing House
22/A, D. V. Gundappa Road
Basavangudi
[560004]

ಬೆಲೆ : ರೂ. 2-50

Copies can be had of :

B. S. Pranesha Rao
47, Second Street
Model House Block, Basavangudi
[560004]

ಮುನ್ನುಡಿ

ಶ್ರೀ ವೇದಾಂತವಿದ್ಯಾಸಾಮ್ರಾಜ್ಯಾಧಿರಾಜ ಶ್ರೀಮದಾನಂದತೀರ್ಥ ತ್ರೈಲೋಕ್ಯಾಚಾರ್ಯರ ವರಮತೋದ್ಧಾರಕ ಶ್ರೀ ವಾದಿರಾಜತೀರ್ಥಶ್ರೀಚರಣರಿಂದ ವಿರಚಿತವಾದ ಶ್ರುತಿತತ್ವಪ್ರಕಾಶಿಕಾ ಗ್ರಂಥವು ದುರ್ವಾದಿಗರ್ವಾದಿ ವಿಭೇದನದಲ್ಲಿ ವಜ್ರಾಯುಧಕ್ಕೆ ಸಮಾನವಾಗಿದೆ. ವಿಷ್ಣುಸರ್ವೋತ್ತಮತ್ವಾದಿ ನವರತ್ನಗಳ ತತ್ವಜ್ಞಾನಾಮೃತಪಾನವನ್ನು ಮಾಡಿಸಿ ಸಜ್ಜನರನ್ನು ಅಜರಾಮರರನ್ನಾಗಿ ಮಾಡಲು ಸಮರ್ಥವಾಗಿದೆ.

ಅದ್ಭುತವಾದ ಈ ಗ್ರಂಥಕ್ಕೆ ಸರಳ ಕನ್ನಡ ಭಾಷೆಯಿಂದ ಅನುವಾದವನ್ನು ದಿವಂಗತ ಶ್ರೀ ಬಿ. ವೆಂಕಟೇಶಾಚಾರ್ಯರು ಮಾಡಿ ಸಜ್ಜನರಿಗೆ ಮಹೋಪಕಾರವನ್ನು ಮಾಡಿದ್ದಾರೆ. ನಾವು ಇದರ ಕೆಲಭಾಗವನ್ನು ನೋಡಿ ಬಹಳ ಸಂತೋಷಪಟ್ಟಿದ್ದೇವೆ.

ಶ್ರೀ ಬಿ. ವೆಂಕಟೇಶಾಚಾರ್ಯರು 'ಸರಸಭಾರತೀವಿಲಾಸಾ'ದಿ ಗ್ರಂಥಗಳನ್ನೂ ಕನ್ನಡಭಾಷೆಯಿಂದ ಅನುವಾದ ಮಾಡಿದ್ದು ಎಲ್ಲರಿಗೂ ವಿದಿತವಾಗಿಯೇ ಇದೆ. ಶ್ರೀ ಬಿ. ವೆಂಕಟೇಶಾಚಾರ್ಯರು ಮೂವತ್ತು ವರ್ಷಗಳ ಕಾಲ ತಮ್ಮ ಮನೆಯಲ್ಲಿ ನ್ಯಾಯಸುಧಾದಿ ಗ್ರಂಥಗಳ ಪ್ರವಚನವನ್ನು ಮಾಡಿ ಬಹು ವೈಭವದಿಂದ ಮಂಗಳ ಮಹೋತ್ಸವಗಳನ್ನು ನಡೆಸಿದ್ದಾರೆ. ಅವರಿಗೆ ಅನೇಕ ಮಾಧ್ವಮಹಾಪೀಠಾಧಿಪತಿಗಳು ಶಾಸ್ತ್ರನಿಧಿ, ಮಾಧ್ವಭೂಷಣ, ಸಚ್ಛಾಸ್ತ್ರಪ್ರವಚನರತ್ನ ಇತ್ಯಾದಿ ಬಿರುದುಗಳನ್ನು ಅನುಗ್ರಹಿಸಿದ್ದಾರೆ. ಅವರಿಗೆ ಶ್ರೀಮಧ್ವಶಾಸ್ತ್ರದಲ್ಲಿ ಇರುತ್ತಿದ್ದ ಅಚಲಶ್ರದ್ಧಾ, ಭಕ್ತ್ಯಾದಿಗುಣಗಳೂ ಮತ್ತು ಅವರ ಸದಾಚಾರಗಳು ಅವರ ಶಿಷ್ಯರಾದ ಐವತ್ತು ಅರವತ್ತು ಲೌಕಿಕ ಸದ್ಗೃಹಸ್ಥರಲ್ಲಿ ಪ್ರತಿಬಿಂಬಿತಗಳಾಗಿ ಈಗಲೂ ಕಾಣುತ್ತಿವೆ.

ಇಂಥಾ ಆದರ್ಶ ಜೀವನವನ್ನು ನಡೆಸಿದ ಶ್ರೀ ಬಿ. ವೆಂಕಟೇಶಾಚಾರ್ಯರ ಉತ್ತಮ ಕೀರ್ತಿಯು ಚಿರಸ್ಥಾಯಿ ಆಗಲು ಕಾರಣವಾದ ಅವರ ಈ ಕೃತಿಯನ್ನು ಪ್ರಕಾಶಪಡಿಸಿದ ಅವರ ಮಕ್ಕಳು ಅವರ ಉತ್ತಮ ಸೇವೆಯನ್ನು ಮಾಡಿ ಧನ್ಯರಾಗಿದ್ದಾರೆ.

ಜಗದ್ಗುರು ಶ್ರೀ ಮಧ್ವಾಚಾರ್ಯ ಸಂಸ್ಥಾನ
ಉಡುಪಿ ಶ್ರೀ ಫಲಿಮಾರು ಭಂಡಾರಕೇರಿ
ಮಠಗಳ ಅಧಿಪತಿಗಳಾದ
ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಗಳವರು



ಮಾಧ್ವಭೂಷಣ ಸಚ್ಛಾಸ್ತ್ರಪ್ರವಚನರತ್ನ ವೇದಾಂತವಾಚಸ್ಪತಿ

ರಾವ್ ಬಹದ್ದೂರ್ ಪ್ರೊಫೆಸರ್ **ಶ್ರೀ ಬಿ. ವೆಂಕಟೇಶಾಚಾರ್ಯ**

18-6-1879 — 27-5-1972

ಪ್ರಕಾಶಕರ ಮಾತು

ನನ್ನ ಪೂಜ್ಯ ತೀರ್ಥರೂಪರವರ ಈ ಕೃತಿ ರಚನೆಯಾಗಿ ಈಗ ಸುಮಾರು ಹದಿನೈದು ವರ್ಷಗಳೇ ಕಳೆದಿವೆ. ಇದು ರಚನೆಗೊಂಡ ಕ್ರಮವೇ ಒಂದು ಸ್ವಾರಸ್ಯಕರ ಪ್ರಸಂಗವಾಗುತ್ತದೆ. ಪ್ರತಿದಿನ ಮಧ್ಯಾಹ್ನ ಕೊನೆಯ ಪಕ್ಷ ಒಂದು ಘಂಟೆಯ ಕಾಲ ಇದಕ್ಕಾಗಿ ನಮ್ಮ ತಂದೆಯವರು ವಿನಿಯೋಗಿಸುತ್ತಿದ್ದರು. ಶ್ರೀಮಾನ್ ಜಿ. ಕೆ. ಮಾಧವರಾಯರು ಬರೆಯುವುದಕ್ಕೆ ಸಹಾಯ ಮಾಡುತ್ತಿದ್ದರು. ಇಬ್ಬರೂ ಇಳಿವಯಸ್ಸಿನವರು. ಇಬ್ಬರು ವಯೋವೃದ್ಧರ ಈ ಕೆಲಸ ಸಂಪೂರ್ಣವಾಗುವುದಕ್ಕೆ ಎರಡು ಮೂರು ವರ್ಷಗಳೇ ಹಿಡಿಯಿತೆಂದರೆ ಆಶ್ಚರ್ಯವಿಲ್ಲ. ಇಷ್ಟೆಲ್ಲಾ ಶ್ರಮಪಟ್ಟರೂ ಈ ಕೃತಿಯನ್ನು ಅಚ್ಚಿಗೆ ಕಳಿಸುವುದು ಆಗಲೇ ಇಲ್ಲ. ಶ್ರೀಮಾನ್ ಜಿ. ಕೆ. ಮಾಧವರಾಯರು ಈ ಬಗ್ಗೆ ಪದೇ ಪದೇ ಹೇಳುತ್ತಿದ್ದುದು ನನಗೆ ತಿಳಿದಿದೆ. ದೈವಚಿತ್ತದಲ್ಲಿ ಏನಿತ್ತೋ—ಅಂತೂ ಈ ಕೃತಿಯನ್ನು ಪ್ರಕಟಿಸುವ ಭಾಗ್ಯ ನನ್ನದಾಗಿದೆ. ನಮ್ಮ ತಂದೆಯವರ ಕಾಲದಲ್ಲೇ ಪ್ರಾಯಶಃ ಈ ಕೆಲಸ ಮುಗಿದಿದ್ದರೆ ಅವರಿಗೆ ಎಷ್ಟು ಸುಖ, ಸಮಾಧಾನಗಳು ದೊರಕುತ್ತಿದ್ದವು ಎಂಬುದರ ಬಗ್ಗೆ ನಾನು ಹೇಳಬೇಕಾಗಿಲ್ಲ. ಪರೋಕ್ಷವಾಗಿ ಈ ಕೆಲಸಕ್ಕೆ ನನ್ನ ತಂದೆಯವರ ಕೊನೆಯ ದಿನಗಳಲ್ಲಿ ನನ್ನನ್ನು ಪ್ರೇರೇಪಿಸಿದವಳು ನನ್ನ ತಂಗಿ ಚಿ|| ಸೌ|| ಲಕ್ಷ್ಮೀದೇವಿ. ಈ ಕಾರ್ಯದಲ್ಲಿ ನನ್ನ ತಮ್ಮಂದಿರಾದ ವಿಜಯ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಬಿ. ವಿ. ನಾರಾಯಣರಾವ್ ಮತ್ತು ಮಣಿಪಾಲ ಇಂಜನಿಯರಿಂಗ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಬಿ.ವಿ.ಕೃಷ್ಣಮೂರ್ತಿ ಇವರಿಬ್ಬರೂ ಈ ಗ್ರಂಥ ಪ್ರಕಾಶನದಲ್ಲಿ ಆದರ ವಿಶ್ವಾಸ ತೋರಿ ಸಹಕರಿಸಿರುತ್ತಾರೆ. ಹೀಗಾಗಿ ಇಂದು ಈ ಗ್ರಂಥ ಬೆಳಕಿಗೆ ಬರುತ್ತಿದೆ.

ಇದರ ನಕಲುಗಳನ್ನು ತೆಗೆಯುವುದರಲ್ಲಿ ಶ್ರೀಯುತ ಜಿ. ಕೆ. ಮಾಧವರಾಯರು ತೋರಿರುವ ಸಹನೆ, ಆದರ ಅಚ್ಚಿನ ಬಗ್ಗೆ ತೋರಿರುವ ಉತ್ಸಾಹ, ನಿಷ್ಠೆ ಇವುಗಳು ನಮ್ಮಂಥ ಕಿರಿಯರನ್ನು ನಾಚಿಸುವಂಥದು. ಅವರ ಸಹಾಯಕ್ಕೆ ನಾನು ನಮ್ರ ನಮಸ್ಕಾರಪೂರ್ವಕ ಈ ಸಾಹಸಕ್ಕೆ ಅವರ ಆಶೀರ್ವಾದವನ್ನು ಕೇಳಿಕೊಳ್ಳುವುದಲ್ಲದೇ ಮತ್ತೇನನ್ನು ತಾನೆ ಮಾಡಬಲ್ಲೆ ?

22-5-72 ರಂದು ಅಚ್ಚಾಗುವ ಕೆಲಸ ಪ್ರಾರಂಭವಾಯಿತು. ನನ್ನ ಭಾವಂದಿರಾದ ಶ್ರೀ ಜಿ. ಯಂ. ಕೃಷ್ಣಮೂರ್ತಿಯವರು ಅಚ್ಚಿಗೆ ಅನುಕೂಲ ವಾಗುವಂತೆ, ಮತ್ತೆ ಸುಂದರ ಪ್ರತಿಯೊಂದನ್ನು ತಮ್ಮ ಮಾವನವರ ಸೇವೆ ಯೆಂದು ಭಾವಿಸಿ ಮಾಡಿಕೊಟ್ಟಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ.

ಶ್ರೀಯುತ ಸಿ. ಎಸ್. ಮಧ್ವಾಚಾರ್ಯರು ಅಚ್ಚಿಗೆ ಮುಂಚೆಯೂ, ಅಚ್ಚಾಗುತ್ತಿರುವಾಗಲೂ ಕರಡುಪ್ರತಿಗಳನ್ನು ತಿದ್ದುವುದರಲ್ಲಿ ಸಹಕರಿಸಿದ್ದಾರೆ. ಈ ಕೆಲಸ ಎಷ್ಟು ಕಷ್ಟ ಎಂಬುದು ಮಾಡಿ ಗೊತ್ತಾದವರು ಮಾತ್ರ ತಿಳಿದುಕೊಂಡಾರು. ನನ್ನ ತೀ|| ರವರ ಬಗ್ಗೆ ಅವರಿಗಿದ್ದ ಗೌರವ ಪೂಜ್ಯ ಭಾವಗಳ ಪ್ರತೀಕವಾಗಿದೆ ಎಂದರೆ ತಪ್ಪಾಗಲಾರದು. ಅವರಿಗೆ ನಾನು ಚಿರಋಣಿಯಾಗಿದ್ದೇನೆ.

ಈ ಕೃತಿಗೆ ಪೂಜ್ಯ ಫಲಿಮಾರು ಹಾಗು ಭಂಡಾರಕೇರಿ ಮಠಗಳ ಅಧಿಪತಿಗಳಾದ ಶ್ರೀ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರು ಮುನ್ನುಡಿ ಬರೆದು ಅನುಗ್ರಹಿಸಿದ್ದಾರೆ. ನನ್ನ ತಂದೆಯವರ ಬಗ್ಗೆ ಅವರು ತೋರುತ್ತಿದ್ದ ವಿಶ್ವಾಸ, ಪ್ರೀತಿಗಳ ಸಂಕೇತವೇ ಈ ಮುನ್ನುಡಿ. ಸ್ವತಃ ಪರಮ ಪಂಡಿತರೂ, ಜ್ಞಾನಿಗಳೂ ಆದ ಅವರ ನಾಲ್ಕು ಮಾತುಗಳು ಇಂಥ ನಮ್ಮ ಕಾರ್ಯಕ್ಕೆ ಎಷ್ಟು ಸ್ಫೂರ್ತಿದಾಯಕವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅವರಿಗೆ ನನ್ನ ನಮಸ್ಕಾರಗಳನ್ನು ಈ ಮೂಲಕ ತಿಳಿಸುತ್ತೇನೆ.

ಇಷ್ಟು ಸುಂದರವಾಗಿ ಮುದ್ರಿಸಿಕೊಟ್ಟ ಶ್ರೀ ಡಿ. ಎಸ್. ಕೃಷ್ಣಾಚಾರ್ ಅವರಿಗೆ ನಾನು ಋಣಿ ಎಂದು ಮಾತ್ರ ಹೇಳಿದರೆ ತುಂಬ ಕಡಿಮೆಯೇ ಆಗುತ್ತದೆ. ಎಷ್ಟೋ ಕೆಲಸಗಳ ಒತ್ತಡವಿದ್ದರೂ, ಅವರು ನಮ್ಮ ಪ್ರಾರ್ಥನೆಯನ್ನು ಮನ್ನಿಸಿ, ಇಷ್ಟು ಬೇಗ ಮುದ್ರಿಸಿಕೊಟ್ಟಿದ್ದಕ್ಕಾಗಿ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ತೀ|| ರವರ ಕಾಲದಲ್ಲೇ ಪ್ರಕಟವಾದ ಜನಗಳ ಮನ್ನಣೆ ಪಡೆದ 'ಸರಸಭಾರತೀ ವಿಲಾಸ'ದಂತೆ ಈ ಕೃತಿಯೂ ಭಗವದ್ಭಕ್ತರ ಮನ್ನಣೆ ಪಡೆದರೆ ನನ್ನ ಯತ್ನಕ್ಕೆ ಇನ್ಯಾವ ತೆರನ ಪ್ರತಿಫಲವನ್ನೂ ನಾನು ನಿರೀಕ್ಷಿಸಲಾರೆ.

ರಾಘವೇಂದ್ರ

ವಿಷಯಾನುಕ್ರಮಣಿಕಾ



ಕರೋತು ಮಮ ಕಲ್ಯಾಣಂ ಹರಿರ್ಹಯಮುಖಾಭಿಧಃ |
ಗುರುಶ್ಚ ಮಧ್ವನಾಮಾ ಮೇ ವರದೋಽಸ್ತು ನಿರಂತರಮ್ ||



ಭಾವಿಸಮೀರ ಶ್ರೀ ವಾದಿರಾಜರು

ಶ್ರೀಃ

ಶ್ರೀ ವಾದಿರಾಜ ವಿರಚಿತ

ಶ್ರುತಿತತ್ತ್ವಪ್ರಕಾಶಿಕಾ

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ
ಲಕ್ಷ್ಮೀಹಯಗ್ರೀವಾಯ ನಮಃ

ಹರಿಃ ಓಂ

ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ |
ಹೃದ್ಯಾಯ ಶುದ್ಧವಿದ್ಯಾಯ ಮಧ್ವಾಯ ಚ ನಮೋ ನಮಃ ||
ತಪೋವಿದ್ಯಾವಿರಕ್ತ್ಯಾದಿಸದ್ಗುಣೌಘಾಕರಾನಹಮ್ |
ವಾದಿರಾಜಗುರೂನ್ವಂದೇ ಹಯಗ್ರೀವದಯಾಶ್ರಯಾನ್ ||

ಗ್ರಂಥದ ಆದಿಯಲ್ಲಿ ಹರಿಗುರುಗಳನ್ನು ಸ್ಮರಿಸಿ ಅವರ ಕೃಪಾಬಲದಿಂದ "ಶ್ರುತಿತತ್ತ್ವಪ್ರಕಾಶಿಕಾ" ಎಂಬ ಗ್ರಂಥವನ್ನು ರಚಿಸುವೆನೆಂದು ಶ್ರೀ ವಾದಿರಾಜರು ಹೇಳುತ್ತಾರೆ.

ಭಾರತ್ಯಾಶ್ಚ ಸರಸ್ವತ್ಯಾ ವಾಯೋಶ್ಚ ಬ್ರಹ್ಮಣಃ ಶ್ರಿಯಃ |
ಹರೇರ್ಹಯಾನನಾಖ್ಯಸ್ಯ ಗುರೂಣಾಂ ಚ ಕೃಪಾಬಲಾತ್ || ೧ ||

ವಾದಿರಾಜಾಭಿಧಃ ಸೋಽಹಂ ಶ್ರುತಿತತ್ತ್ವಪ್ರಕಾಶಿಕಾಮ್ |
ಅಘೌಘನಾಶಿಕಾಂ ವಿದ್ವಜ್ಜನವಕ್ತ್ರಪ್ರಕಾಶಿಕಾಮ್ || ೨ ||

ವಿಚಿತ್ರವಿಮಲಾರ್ಥೌಘ(ರ್ಥಾನಾಂ) ಸಾಧಿಕಾಂ
ಸತ್ಪ್ರಮೋದಿಕಾಮ್ |
ಕರೋಮಿ ದುರ್ಮತಧ್ವಾಂತಬಾಧಿಕಾಂ ಮೋಕ್ಷಸಾಧಿಕಾಮ್ ||

ಭಾರತೀದೇವಿಯ, ಸರಸ್ವತೀದೇವಿಯ, ವಾಯುದೇವರ, ಬ್ರಹ್ಮದೇವರ, ರಮಾದೇವಿಯ ಮತ್ತು ಹಯವದನನಾಮಕ ಹರಿಯ, ಹಾಗೆಯೇ ಗುರುಗಳ ಕೃಪಾಬಲದಿಂದ ವಾದಿರಾಜನೆಂಬ ನಾನು "ಶ್ರುತಿತತ್ತ್ವಪ್ರಕಾಶಿಕಾ" ಗ್ರಂಥವನ್ನು ರಚಿಸುತ್ತೇನೆ. ಎಂತಹ ಗ್ರಂಥವನ್ನು ಮಾಡುವಿರಿ? ಎಂದರೆ ಹೇಳು

ತ್ತಾರೆ: ಓದಿ ಮನನಮಾಡುವ ಜನರ ಪಾಪಸಮೂಹವನ್ನು ನಾಶಮಾಡುವ, ವಿದ್ವಜ್ಜನರ ಮುಖವನ್ನು ಪ್ರಕಾಶಗೊಳಿಸುವ, ವಿಚಿತ್ರವಾದ ಆಶ್ಚರ್ಯಕರವಾದ ಮತ್ತು ಶುದ್ಧವಾದ ಪ್ರಮೇಯ (ಅರ್ಥ) ಸಮೂಹವನ್ನು ಸಾಧಿಸುವ ಮತ್ತು ಸಜ್ಜನರಿಗೆ ಆನಂದವನ್ನುಂಟುಮಾಡುವ, ಮೇಲಾಗಿ ದುಷ್ಟಮತಗಳೆಂಬ ಕತ್ತಲೆಯನ್ನು ಹೋಗಲಾಡಿಸುವ, ಮೋಕ್ಷಕ್ಕೆ ಸಾಧಕವಾದ ಗ್ರಂಥವನ್ನು ಮಾಡುತ್ತೇನೆ (೧, ೨, ೩).

"ಶ್ರುತಿತತ್ತ್ವಪ್ರಕಾಶಿಕಾ" ಎಂದರೆ, ಶ್ರುತಿಯ ತತ್ತ್ವವನ್ನು ಪ್ರಕಾಶಮಾಡುವ ಗ್ರಂಥ. ಶ್ರುತಿಯ ತತ್ತ್ವವೆಂದರೆ ಶ್ರುತಿಯಲ್ಲಿ ಪ್ರತಿಪಾದ್ಯವಾದ ತತ್ತ್ವ. ತತ್ತ್ವವೆಂದರೆ ಪ್ರಮೇಯ. ಅಂತೂ ಶ್ರುತಿಯಲ್ಲಿ ಪ್ರತಿಪಾದ್ಯವಾದ (ಮುಖ್ಯ) ಪ್ರಮೇಯವನ್ನು ಪ್ರಕಾಶಿಸುವ ಗ್ರಂಥ. ಶ್ರುತಿಯಲ್ಲಿ ಉಕ್ತವಾದ ತತ್ತ್ವವು ಶ್ರುತಿಯಿಂದ ತಿಳಿದುಬರುತ್ತೆ. ಈ ಗ್ರಂಥದಿಂದೇನು? ಅಂದರೆ ಶ್ರುತಿಯಲ್ಲಿ ಪ್ರತಿಪಾದ್ಯವಾದ ತತ್ತ್ವವು ಯಾವುದೆಂಬುದರಲ್ಲಿ ಭಿನ್ನಾಭಿಪ್ರಾಯವುಂಟು. ನಿಜವಾದ ತತ್ತ್ವವನ್ನು ಮುಖ್ಯಪ್ರಾಣದೇವರು ಹರಿಯ ಆಜ್ಞಾನುಸಾರವಾಗಿ ಭೂಮಿಯಲ್ಲಿ ಶ್ರೀಮದಾನಂದತೀರ್ಥರೆಂಬ ನಾಮದಿಂದ ಅವತರಿಸಿ ತಾವು ರಚಿಸಿದ ಗ್ರಂಥಗಳಲ್ಲಿ ವಿಚಾರಪೂರ್ವಕವಾಗಿ ನಿರ್ಣಯಿಸಿರುತ್ತಾರೆ. ಆ ತತ್ತ್ವವು ಹೀಗೆ:

ನಾರಾಯಣನೇ ಪರಬ್ರಹ್ಮ. ಅವನೊಬ್ಬನೇ ಸ್ವತಂತ್ರ ತತ್ತ್ವ. ಈ ಪರಬ್ರಹ್ಮನಾದ ನಾರಾಯಣನು ಪೂರ್ಣಾನಂದಾದಿ ಕಲ್ಯಾಣಗುಣಪೂರ್ಣನು. ಪಂಚಭೇದವುಳ್ಳ ಈ ಪ್ರಪಂಚವು ಎಲ್ಲಾ ವಿಧದಲ್ಲಿಯೂ ಅವನ ಅಧೀನವಾದದ್ದು. ಮೋಕ್ಷವು ನಾರಾಯಣನ ಪ್ರಸಾದದಿಂದಲೇ ಲಭ್ಯವಾದದ್ದು. ಮೋಕ್ಷದಾಯಕವಾದ ಈ ಅನುಗ್ರಹವು (ಪ್ರಸಾದವು) ಪರಮಾತ್ಮನಲ್ಲಿ ಮಾಡುವ ಭಕ್ತಿಯಿಂದಲೇ ಸಾಧ್ಯ. ಭಕ್ತಿಯೆಂದರೆ ಪರಮಾತ್ಮನ ಸರ್ವೋತ್ತಮತ್ವ, ಸ್ವಾತಂತ್ರ್ಯಾದಿಗುಣಜ್ಞಾನಪೂರ್ವಕವಾಗಿ ಅವನಲ್ಲಿ ಮಾಡುವ ಸುದೃಢಸ್ನೇಹ. ಅಂತೂ ಪರಮಾತ್ಮನ ಸರ್ವೋತ್ತಮತ್ವ ಜ್ಞಾನವು ಮುಮುಕ್ಷುವಾದ ಅಧಿಕಾರಿಗೆ ಅವಶ್ಯಕ. ಆದ್ದರಿಂದ ಜೀವನ ಮೋಕ್ಷಕ್ಕಾಗಿ ಪ್ರವೃತ್ತವಾದ ಶ್ರುತಿಗೆ ಪರಮಾತ್ಮನ ಮಹಿಮೆಯನ್ನು ಉದ್ಘೋಷಿಸುವುದರಲ್ಲಿಯೇ ಮುಖ್ಯತಾತ್ಪರ್ಯ.

ಇದಕ್ಕೆ ಪೂರ್ವಪಕ್ಷಿಗಳಾದ ಮಾಯಾವಾದಿಗಳು ಹೇಳುವುದು ಹೀಗಿದೆ: ಯಾವ ಭೇದವೂ ಯಾವ ಧರ್ಮವೂ ಇಲ್ಲದ ಬ್ರಹ್ಮವು ಒಂದೇ ತತ್ತ್ವ. ಇದು ನಿಷ್ಕ್ರಿಯವೂ, ನಿರಾಕಾರವೂ, ಸರ್ವಪ್ರಮಾಣಾಗೋಚರವೂ ಆದದ್ದು.

ಈಶ್ವರನು, ಸರ್ವಜ್ಞತ್ವ ಸರ್ವಕರ್ತೃತ್ವ, ಇತ್ಯಾದಿ ಧರ್ಮವುಳ್ಳವನು. ಆದರೆ ಈ ಧರ್ಮಗಳು ಮಾಯಾಮಯವಾದ್ದರಿಂದ ಮಿಥ್ಯಾ. ಜೀವನು ಅಜ್ಞನಾಗಿಯೂ, ದುಃಖಿಯಾಗಿಯೂ, ಕರ್ತನಾಗಿಯೂ ತೋರಿಬರುತ್ತಾನೆ. ಜೀವೇಶ್ವರರಿಗೆ ಭೇದವಿಲ್ಲ. ಈಶ್ವರನಲ್ಲಿರುವ ಧರ್ಮಗಳೂ ಜೀವನಲ್ಲಿರುವ ಧರ್ಮಗಳೂ ಮಿಥ್ಯಾ. ಆದ್ದರಿಂದ ಇವರಿಬ್ಬರೂ ಸ್ವರೂಪದಲ್ಲಿ ಬ್ರಹ್ಮವಸ್ತುವಿನಿಂದ ಭಿನ್ನರಲ್ಲ.

ವಿಶ್ವವು ಮಿಥ್ಯಾ. ಭ್ರಾಂತಿಯಲ್ಲಿ ಕಂಡುಬರುವ ಹಗ್ಗದಲ್ಲಿ ಆರೋಪಿತವಾದ ಸರ್ಪದಂತೆ ವಿಶ್ವವು ಬ್ರಹ್ಮನಲ್ಲಿ ಆರೋಪಿತವಾಗಿ ತೋರುತ್ತದೆ.

ಗುರೂಪದಿಷ್ಟವಾದ ಮಹಾವಾಕ್ಯಗಳ ಅರ್ಥಸಾಕ್ಷಾತ್ಕಾರ ಜೀವನಿಗಾದಲ್ಲಿ, ಅವಿದ್ಯಾನಿವೃತ್ತಿರೂಪವಾದ ಮೋಕ್ಷವು ಉಂಟಾಗುತ್ತದೆ.

ವಿಷ್ಣುತತ್ತ್ವನಿರ್ಣಯದ ಟೀಕೆಯಲ್ಲಿ ಮಾಯಾವಾದಿಗಳ ಮತವನ್ನು ಜಯತೀರ್ಥರು ನಿರೂಪಿಸಿರುವರು. ಇದರ ಕನ್ನಡ ಭಾಷಾಂತರವು ಗ್ರಂಥದ ಕೊನೆಯಲ್ಲಿ ಸೇರಿಸಿದೆ.

ಈ ಶ್ರುತಿತತ್ತ್ವಪ್ರಕಾಶಿಕಾ ಗ್ರಂಥದಲ್ಲಿ ವಿಚಾರಕ್ಕೆ ವಿಷಯವಾದ, ಮಾಯಾವಾದಿಗಳು ಮಹಾವಾಕ್ಯಗಳೆಂದು ಗ್ರಹಿಸಿರುವ, ಶ್ರುತಿಗಳು ಇವು :

೧. "ನೇಹ ನಾನಾಸ್ತಿ ಕಿಂಚನ" ಕಾಠಕ ೨-೧. ಬೃಹದಾರಣ್ಯ ೬-೪-೧೯. (ಶ್ಲೋ. ೪-೩೯೧)

೨. "ಅಹಂ ಬ್ರಹ್ಮಾಸ್ಮಿ" ಬೃಹದಾರಣ್ಯ ೩-೫-೪ (ಶ್ಲೋ. ೩೯೨-೪೦೪ [೧])

೩. "ಸರ್ವಂ ಖಲ್ವಿದಂ ಬ್ರಹ್ಮ" ಛಾಂದೋಗ್ಯ ೫-೧೪-೧ (ಶ್ಲೋ. ೪೦೪ [೨]-೪೨೨ [೧])

೪. "ಏಕಮೇವಾದ್ವಿತೀಯಂ ಬ್ರಹ್ಮ" ಛಾಂ. ೬-೨-೧ (ಶ್ಲೋ. ೪೩[೨]-೪೫[೧].

೫. "ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ" ಛಾಂ. ೬-೮-೭ (ಶ್ಲೋ. ೪೫[೨]-೯೯)

೬. "ಕೇವಲೋ ನಿರ್ಗುಣಶ್ಚ" ಶ್ವೇತಾಶ್ವತರ ೬-೧೧ (ಶ್ಲೋ. ೫೦೦-೫೦೭).

ಈ ವಾಕ್ಯಗಳಿಗೂ ಇತರ 'ಮಹಾವಾಕ್ಯಗಳೆಂದು' ಪರರು ಗ್ರಹಿಸಿರುವ ವಾಕ್ಯಗಳಿಗೂ ಶ್ರೀಮದಾಚಾರ್ಯರು ತಮ್ಮ ಗ್ರಂಥಗಳಲ್ಲಿ ಸಂದರ್ಭಾನುಸಾರ ಯೋಗ್ಯವಾದ ಅರ್ಥವನ್ನು ಉಪಕ್ರಮಾದಿ ಲಿಂಗಗಳಿಂದ ನಿರೂಪಿಸಿರುತ್ತಾರೆ. ಈ ನಿರೂಪಣೆಯನ್ನು ತಮ್ಮದೇ ಆದ ಸೊಬಗನ್ನೊಳಗೊಂಡ ಯುಕ್ತಿಜಾಲನೆಯಿಂದಲೂ ಉಚಿತವಾದ ಶ್ರುತಿಸ್ಮೃತಿಗಳನ್ನುದಹರಿಸಿ ಅವುಗಳ ಅರ್ಥವನ್ನು ಮನಸ್ಸಿಗೆ ನೆಟ್ಟುವಂತೆ ಹೃದಯಂಗಮವಾದ ರೀತಿಯಲ್ಲಿ ನಿರೂಪಿಸುವುದರ ಮೂಲಕವೂ, ಪುಷ್ಟೀಕರಿಸುವುದು ಶ್ರೀ ವಾದಿರಾಜರಿಗೆ ಈ ಕೃತಿಯನ್ನು ರಚಿಸುವುವರಲ್ಲಿ ಗುರಿ. ಆದ್ದರಿಂದ ಈ ಗ್ರಂಥವು ಅತ್ಯುಪಾದೇಯವಾದದ್ದು. ಇದನ್ನು ಓದಿ ಮನನಮಾಡಿದಲ್ಲಿ ಶ್ರೀ ಸರ್ವಜ್ಞಾಚಾರ್ಯರಲ್ಲಿ ಭಕ್ತಿಯೂ, ಅವರು ನಿರೂಪಿಸಿರುವ ತತ್ತ್ವದಲ್ಲಿ ದೃಢವಾದ ನಂಬಿಕೆಯೂ ಸಜ್ಜನರಿಗೆ ಉಂಟಾಗುವುದು. ಈ ನಂಬಿಕೆಯು ಮೋಕ್ಷಕ್ಕೆ ಸಾಧನವಾದ, ಪರಮಾತ್ಮನಲ್ಲಿ ಅಧಿಕಾರಿಯು ಮಾಡಬೇಕಾದ, ಭಕ್ತಿಯನ್ನುಂಟುಮಾಡಿ ತದ್ವಾರಾ ಮೋಕ್ಷಕ್ಕೆ ಸಾಧನವಾಗುತ್ತೆ.

ಇವುಗಳಲ್ಲಿ 'ನೇಹ ನಾನಾಸ್ತಿ ಕಿಂಚನ' ಎಂಬ ವಾಕ್ಯವನ್ನು ಮೊದಲು ವಿಚಾರಮಾಡುತ್ತಾರೆ. ಇದು ಕಾಠಕ ಉಪನಿಷತ್ತಿನಲ್ಲಿಯೂ ಬೃಹದಾರಣ್ಯಕ ಉಪನಿಷತ್ತಿನಲ್ಲಿಯೂ ಕಂಡುಬರುತ್ತೆ. ಹಿಂದುಮುಂದಿನ ವಾಕ್ಯಗಳನ್ನು ವಿಚಾರಮಾಡಿದಲ್ಲಿ, ಈ ವಾಕ್ಯಕ್ಕೆ ಪರಮಾತ್ಮನ ಅವತಾರರೂಪಗಳಿಗೂ, ಅವನ ಸರ್ವಜ್ಞತ್ವಾದಿ ಗುಣಗಳಿಗೂ, ಅವನ ಅವಯವಗಳಿಗೂ, ಕ್ರಿಯೆಗಳಿಗೂ ಮೂಲರೂಪದಿಂದಲೇ ಆಗಲಿ ಪರಸ್ಪರವಾಗಿಯೇ ಆಗಲಿ ಸ್ವಲ್ಪವೂ ಭೇದವು ಇಲ್ಲವೆಂದು ಅರ್ಥ. ಸಿದ್ಧಾಂತರೀತ್ಯಾ ಶ್ರುತಿಯ ಪ್ರತಿಪದಾರ್ಥವು ಹೀಗೆ:

ಇಹ=ಸಗುಣನೂ ನಾನಾವತಾರವನ್ನು ತಾಳಿದವನೂ ಆದ ಬ್ರಹ್ಮನಲ್ಲಿ ಕಿಂಚನ ನಾನಾ=ಕಿಂಚನ ನಾನಾತ್ವಂ=ಯಾವ ಸ್ವಲ್ಪ ಭೇದವೂ ಕೂಡ ನ=ಇಲ್ಲವು. ಅಂದರೆ,

ಬ್ರಹ್ಮನಲ್ಲಿ ಧರ್ಮಾದಿಗಳು ಅನಂತವಾಗಿ ಇವೆ. ಅವುಗಳಲ್ಲಿ ಭೇದ ಮಾತ್ರ ಇಲ್ಲ. ಇದನ್ನು ಸ್ಥಾಪಿಸುವುದಕ್ಕೆ ಮೊದಲು ಮಾಯಾವಾದಿಗಳು ಹೇಳುವ ಅರ್ಥವು ಯುಕ್ತಿಯುಕ್ತವಲ್ಲವೆಂಬುದನ್ನು ವಾದಿರಾಜರು ನಿರೂಪಿಸುತ್ತಾರೆ.

'ನೇಹ ನಾನಾಸ್ತಿ ಕಿಂಚನ' (೪-೩೯)

ನೇಹ ನಾನೇತಿ ವಾಕ್ಯಾತ್ತೇ ಜಗತ್ತ್ಯಾಗೋ ಭವೇದ್ಯದಿ ।
ತರ್ಹಿ ಜೀವೋಽಪಿ ತ್ಯಾಜ್ಯಃ ಸ್ಯಾದ್ಯತೋ ಜಗದಿದಂ ಜಡ ॥ ೪ ॥
ಜಡಾಜಡಾತ್ಮಕಂ ಸರ್ವೇ ಪ್ರವದಂತಿ ವಿಚಕ್ಷಣಾಃ ।

'ನೇಹ ನಾನಾಸ್ತಿ ಕಿಂಚನ' ಎಂಬ ವಾಕ್ಯದಿಂದ ನಿನಗೆ ಜಗತ್ತಿನ ತ್ಯಾಗವು ಆಗುವುದಾದರೆ ಆಗ್ಯೆ ಜೀವನನ್ನೂ ಕೂಡ ಬಿಡಬೇಕಾದೀತು. ಏಕೆಂದರೆ, ಎಲ್ಲೈ ಜಡನೇ! ಈ ಜಗತ್ತು ಜಡಾಜಡಾತ್ಮಕವೆಂದು ಎಲ್ಲಾ ವಿವೇಕಿಗಳೂ ಹೇಳುತ್ತಾರೆ.

ಇದರ ವಿವರಣೆ: 'ನೇಹ ನಾನಾಸ್ತಿ ಕಿಂಚನ' ಈ ವಾಕ್ಯಕ್ಕೆ ಮುಂದೆ ಹೇಳುವಂತೆ ಮಾಯಾವಾದಿಗಳು ಅರ್ಥ ಹೇಳುತ್ತಾರೆ.

ಇಹ=ಬ್ರಹ್ಮನಲ್ಲಿ, ನಾನಾ=ಭಿನ್ನವಾದ, ಕಿಂಚನ=ಯಾವ ಸ್ವಲ್ಪವೇ ಆಗಲಿ ಜಗತ್ತು, ನ=ಇಲ್ಲ. ಬ್ರಹ್ಮನಲ್ಲಿ ಭಿನ್ನವಾದ ಯಾವುದೇ ಆಗಲಿ ಜಗತ್ತು ಇಲ್ಲ.

ಅವರ ಅಭಿಪ್ರಾಯ ಹೀಗೆ. ಜಗತ್ತು ಬ್ರಹ್ಮನಲ್ಲಿ ಆರೋಪಿತವಾಗಿ ಕಾಣುತ್ತೆ. ಹೇಗೆ ಭ್ರಾಂತಿಯಲ್ಲಿ ಹಗ್ಗದಲ್ಲಿ ಆರೋಪಿತವಾಗಿ ಸರ್ಪವು ಕಾಣುತ್ತೆಯೋ ಹಾಗೆ. ಸರ್ಪವು ಹಗ್ಗದಲ್ಲಿ ನಿಜವಾಗಿ ಇಲ್ಲವಷ್ಟೇ. ಹಾಗೆಯೇ ಪ್ರಪಂಚವೂ ನಿಜವಾಗಿ ಇಲ್ಲ.

ಹೀಗೆ ಹೇಳಿದಲ್ಲಿ, ಹೇಗೆ ಜಡಪ್ರಪಂಚವು ಅಂದರೆ ಅಚೇತನಪ್ರಪಂಚವು ಇಲ್ಲವೋ ಹಾಗೆಯೇ ಜೀವಸಮೂಹವೂ ಇಲ್ಲವೆಂದು ಹೇಳಬೇಕಾದೀತು.

ಏಕೆಂದರೆ ಪ್ರಪಂಚವು ಜೀವ ಮತ್ತು ಜಡ ಇವುಗಳನ್ನು ಒಳಗೊಂಡದ್ದು ಎಂದು ಎಲ್ಲರೂ ಒಪ್ಪಿರುವರು. ಆಗಲಿ ಏನು ಬಾಧಕವೆಂದರೆ ಹೇಳುತ್ತಾರೆ.

ಜಡಕ್ಷಯಾದಭೀತಸ್ಯ ಜೀವಹಿಂಸಾಽಭವತ್ತವ ॥ ೫ ॥
ಜೀವಾಭಾವೇ ಚ ಕೋ ವಕ್ತಾ ಪ್ರತಿವಕ್ತಾ ಚ ಕೋ ವದ ।

ಜಡನಾಶದಿಂದ ಭಯವಿಲ್ಲದ ನಿನಗೆ, ಜೀವನಾಶ ಆಯಿತು. ಜೀವನಾಶವನ್ನು ನೀನು ಒಪ್ಪಬೇಕಾಯಿತು. ಆಗಲೇನು ಅಂದರೆ ಜೀವನಿಲ್ಲದಲ್ಲಿ ವಾದಿ ಯಾರು? ಪ್ರತಿವಾದಿ ಯಾರು ? ಹೇಳು.

ಗುರುಶಿಷ್ಯರು ಮಾಡುವ ವಿಚಾರವು ಮೋಕ್ಷಕ್ಕಾಗಿ. ಮೋಕ್ಷವು ಜೀವನಿಗೆ. ಜೀವನೇ ಇಲ್ಲದಲ್ಲಿ ಶಿಷ್ಯನಿಲ್ಲ, ಗುರುವೂ ಇಲ್ಲ. ಗುರುಶಿಷ್ಯರು ಮಾಡುವ ಪ್ರಶ್ನೋತ್ತರರೂಪವಾದ ವಿಚಾರವು ಹೇಗೆ ಕೂಡುತ್ತೆ. ಕೂಡುವುದಿಲ್ಲ ಎಂದಭಿಪ್ರಾಯ. ಗುರುಶಿಷ್ಯರಿಬ್ಬರೂ ಜೀವರಾದ್ದರಿಂದ ಇಲ್ಲವಾದರು. ಅಥವಾ ವಾದಮಾಡುವುದಕ್ಕೆ ಪ್ರತಿವಾದಿಗಳೇ ಇಲ್ಲದೇಹೋಗುವರು.

ಯತಃ ಕಿಂಚನಶಬ್ದೋಽಯಂ ನ ಮುಂಚತಿ ಹಿ ಕಿಂಚನ ॥ ೬ ॥

ಕಿಂಚನ ಎಂಬ ಶಬ್ದವು ಯಾವುದನ್ನೂ ಬಿಡುವುದಿಲ್ಲವಾದ್ದರಿಂದ 'ನೇಹ ನಾನಾಸ್ತಿ ಕಿಂಚನ' ವಾಕ್ಯವು ನಿನ್ನ ಅರ್ಥದ ಪ್ರಕಾರ ಜಡ ಮತ್ತು ಜೀವ ಇಬ್ಬರೂ ಇಲ್ಲವೆಂದು ಹೇಳುತ್ತದೆ ಎಂದಾಯಿತು.

ಸರ್ವಗ್ರಾಸೇ ಚ ಯಃ ಶಕ್ತಃ ಕ್ರೀಡಯಾ ದ್ವೌ ಗ್ರಸೇದಸೌ ।

ಸರ್ವವನ್ನೂ ನುಂಗುವುದರಲ್ಲಿ ಶಕ್ತಿಯುಳ್ಳ ಈ ಕಿಂಚನ ಶಬ್ದವು ಲೀಲಾಮಾತ್ರದಿಂದ ಎರಡನ್ನೂ ನುಂಗೀತು. (ಈ ಎರಡು ಯಾವುದೆಂದರೆ ಜಡ ಮತ್ತು ಜೀವ.)

ತ್ರ್ಯಂಗೀಕಾರಾಚ್ಚ ಲಘುತಾ ದ್ವ್ಯಂಗೀಕಾರೇ ಯತೋ ಮತಾ ॥
ಅತೋ ಜಡನಿಷೇಧೋಽಸ್ತು ಜೀವಸ್ತ್ವರ್ಥರಿತೋಽಸ್ತು ನಃ ।
ಇತಿ ಭಾವೋ ಯದಿ ತದಾ ದ್ವ್ಯಂಗೀಕಾರಾಚ್ಚ ದುರ್ಮತೇ ॥ ೮ ॥
ಏಕಸ್ಯೈವಾಂಗೀಕೃತೌ ಚ ಕಿಂ ನ ಸ್ಯಾದತಿ ಲಾಘವಮ್ ।
ಅತಃ ಕ್ಷಿಪತು ಸೇಯಂ ವಾಗ್ದ್ವಗಜ್ಜೀವಜಡಾತ್ಮಕಮ್ ॥ ೯ ॥

ಲಾಘವಾತ್ತ್ವದಭಿಪ್ರೇತಾದ್ಬ್ರಹ್ಮೈಕಮವಶೇಷಯೇತ್ ।

ಮೂರು ಒಪ್ಪುವುದಕ್ಕಿಂತ ಎರಡು ಒಪ್ಪುವುದು ಲಾಘವ. ಆದ್ದರಿಂದ ಜಡವಿಲ್ಲವೆಂದು ಹೇಳಿ ಜೀವನು ಉಳಿಸಲ್ಪಟ್ಟನು, ಎಂದು ನಮ್ಮ ಅಭಿಪ್ರಾಯವೆನ್ನುವಿಯೋ? ಆಗ ಎಲೈ ದುಷ್ಟಬುದ್ಧಿಯೇ! ಎರಡು ಒಪ್ಪುವುದಕ್ಕಿಂತ ಒಂದನ್ನೇ ಒಪ್ಪುವುದು ಅತಿ ಲಾಘವ. ಹಾಗೇಕೆ ಆಗಬಾರದು? ಆದ್ದರಿಂದ ಈ 'ನೇಹ ನಾನಾಸ್ತಿ ಕಿಂಚನ' ಎಂಬುವ ಮಾತು ಜೀವಜಡಾತ್ಮಕವಾದ ಜಗತ್ತನ್ನು ತಳ್ಳಲಿ. ಆಗ ನಿನಗೊಪ್ಪಿಗೆಯಾದ ಲಾಘವದಿಂದ ಈ ವೇದ ವಾಕ್ಯ ಬ್ರಹ್ಮನೊಬ್ಬನನ್ನುಳಿಸೀತು.

ಇದರ ಅಭಿಪ್ರಾಯ. ಬ್ರಹ್ಮ, ಜೀವ, ಜಡ ಮೂರು ಇರತಕ್ಕದ್ದು. ಇವುಗಳಲ್ಲಿ ಮೂರನ್ನೂ ಒಪ್ಪುವುದು ಗೌರವ. ಆದ್ದರಿಂದ ಜಡವನ್ನು ಇಲ್ಲವೆಂದು ಹೇಳಿ ಬ್ರಹ್ಮಜೀವರನ್ನು ನಾವು ಅಂಗೀಕರಿಸಿದ್ದೇವೆ ಎಂದು ಮಾಯಾವಾದಿಗಳು ಹೇಳಿದರೆ, ಅದಕ್ಕೆ ಉತ್ತರ: ಮೂರು ಅಂಗೀಕರಿಸುವುದಕ್ಕಿಂತ ಎರಡನ್ನು ಅಂಗೀಕರಿಸುವುದು ಲಾಘವವಾದರೆ, ಒಂದನ್ನೇ ಅಂಗೀಕರಿಸುವುದು ಹೆಚ್ಚು ಲಾಘವವಾದೀತು. ಆದ್ದರಿಂದ ಜೀವ ಜಡ ಇಬ್ಬರನ್ನೂ ಅಂಗೀಕರಿಸದೇ ಬ್ರಹ್ಮನೊಬ್ಬನನ್ನೇ ಅಂಗೀಕರಿಸಬಹುದಷ್ಟೇ? ಆಗಲೇನು ಅಂದರೆ, ಜಡದ ಜೊತೆಗೆ ಜೀವನೂ ಇಲ್ಲದಂತಾಯ್ತು. ಆಗ ಜೀವನು ಸ್ವರೂಪದಲ್ಲಿ ಸತ್ಯನು ಎಂಬ ನಿನ್ನ ಮತವು ಏನಾಯಿತು?

ಯದಿ ನಾನಾತ್ವಮಾತ್ರಸ್ಯ ನಿಷೇಧೋಽತ್ರ ಮತಸ್ತವ ॥ ೧೦ ॥

ಯತೋ ವಿಧಿರ್ನಿಷೇಧಶ್ಚೋಪಸಂಕ್ರಾಮೇದ್ವಿಶೇಷಣಮ್ ।
ಇತಿ ನ್ಯಾಯಾದ್ವಿಶೇಷ್ಯಂ ತು ಜೀವಮುರ್ವರಿತಂ ವದೇಃ ॥ ೧೧ ॥

ತ್ವನ್ನ್ಯಾಯಾದೇವ ತರ್ಹ್ಯಜ್ಞ ಜಗಚ್ಚೋರ್ವರಿತಂ ಭವೇತ್ ।
ಯತ್ಕಿಂಚನಪದಂ ಶ್ರೌತಂ ವಿಶೇಷ್ಯಮುಭಯಂ ವದೇತ್ ॥ ೧೨ ॥

ಸರ್ವನಾಮಪದಸ್ಯಾಸ್ಯ ಕಥನೇಕಾರ್ಥವಾಚಿತಾ ।

ಭೇದವನ್ನು ಮಟ್ಟಿಗೆ ಈ ವಾಕ್ಯವು ನಿಷೇಧಮಾಡುತ್ತದೆ. ಏಕೆಂದರೆ ಉಂಟು, ಇಲ್ಲ ಎಂಬ ಮಾತುಗಳು ಯಾವುದನ್ನು ಕುರಿತು ಉಂಟು, ಇಲ್ಲ ಎಂದು ಹೇಳುತ್ತವೆಯೋ ಅದರ ವಿಶೇಷಣಕ್ಕೆ ಸಂಬಂಧಿಸುತ್ತದೆ. ಈ ನ್ಯಾಯ

ದಿಂದ ಬ್ರಹ್ಮನಿಂದ ಭಿನ್ನನಾದ ಜೀವನಿಲ್ಲವೆಂದರೆ, ಭೇದವಿಲ್ಲ ಜೀವನಿದ್ದಾನೆ ಎಂದಾಯಿತು. ಅಂತೂ ಜೀವನು ಉಳಿದ. ಹೀಗೆ ನಿನ್ನ ಅಭಿಪ್ರಾಯವೇನು? ಹಾಗಾದರೆ ನಿನ್ನ ನ್ಯಾಯದಿಂದಲೇ ಎಲೊ ಅಜ್ಞ! ಜಗತ್ತೂ (ಜಡವೂ) ಉಳಿದಂತಾಯಿತು. ಆ ಜಗತ್ತಿನಲ್ಲಿ ಜಡವೂ ಸೇರಿದೆ. ಏಕೆಂದರೆ ಶ್ರುತಿಯಲ್ಲಿರುವ 'ಕಿಂಚನ' ಪದವು ವಿಶೇಷ್ಯವಾದ ಜೀವನನ್ನೂ ಜಡವನ್ನೂ ಹೇಳೀತು. ಅದು ಹೇಗೆ? ಎಂದರೆ ಶ್ರುತಿಯಲ್ಲಿರುವ 'ಕಿಂಚನ' ಎಂಬ ಸರ್ವನಾಮಪದಕ್ಕೆ ಜೀವನೆಂದು ಮಟ್ಟಿಗೆ ಹೇಗೆ ಅರ್ಥ ಮಾಡುವುದು? ಅದು ಆಗುವುದಿಲ್ಲ.

ಜಡಭೇದನಿಷೇಧೇನ ಜಡಸ್ಯ ತ್ವವಶೇಷಣೇ ॥ ೧೩ ॥

ಜಡಾಭಿನ್ನಂ ಬ್ರಹ್ಮ ಭವೇತ್ತಚ್ಚ ಯುಕ್ತಿಬಹಿಷ್ಕೃತಮ್ ।
ಯತೋ ವಿರುದ್ಧಯೋರೈಕ್ಯಂ ನ ವದನ್ತಿ ವಿಚಕ್ಷಣಾಃ ॥ ೧೪ ॥

(ಮಾಯಾವಾದಿ) ಭೇದವನ್ನು ನಿಷೇಧಮಾಡಿ ಜಡವು ಉಳಿದರೆ, ಬ್ರಹ್ಮನು ಜಡದಿಂದ ಅಭಿನ್ನನಾದಾನು. ಇದು ಯುಕ್ತಿಗೆ ವಿರುದ್ಧ. ಏಕೆಂದರೆ ವಿರುದ್ಧವಾದ ವಸ್ತುಗಳಿಗೆ ಐಕ್ಯವನ್ನು ವಿಚಕ್ಷಣರು ಹೇಳುವುದಿಲ್ಲ. ಅಂದರೆ ಬ್ರಹ್ಮ ಚೇತನ, ಜಡ ಅಚೇತನ. ಇವೆರಡಕ್ಕೂ ಐಕ್ಯವನ್ನು ಹೇಳಕೂಡದು, ಎಂದಭಿಪ್ರಾಯ.

ಏವಂ ಚೇಜ್ಜೀವನಾನಾತ್ವಮಾತ್ರಸ್ಯಾನವಶೇಷಣೇ ।
ಜೀವಸ್ಥಿತ್ಯವಶೇಷಃ ಸ್ಯಾತ್ತಸ್ಯ ತು ಬ್ರಹ್ಮಣೈಕತಾ ॥ ೧೫ ॥

ವಾಚ್ಯಾ ಭೇದವಿಹೀನಸ್ಯ ತ್ವೇಕತಾ ಯದ್ಬಲಾದ್ಭವೇತ್ ।
ನ ಚೇಜ್ಜಡಸ್ಯೈಕತಾ ಚ ಕಥಮಾಶಂಕ್ಯತೇ ತ್ವಯಾ ॥ ೧೬ ॥

ಹೀಗೆ ಮಾಯಾವಾದಿಯು ಅಂದಲ್ಲಿ ಇದಕ್ಕೆ ತತ್ತ್ವವಾದಿಗಳ ಉತ್ತರ ಹೀಗೆ: ಜೀವಭೇದ ಮಟ್ಟಿಗೆ ಉಳಿಯದೇ ಜೀವ ಮಟ್ಟಿಗೆ ಉಳಿದಲ್ಲಿ ಆ ಜೀವನಿಗೆ ಬ್ರಹ್ಮನಿಂದ ಐಕ್ಯವು ಆಗುತ್ತೆಂದು ಹೇಳಬೇಕು. ಏಕೆಂದರೆ, ಯಾವ ವಸ್ತುಗಳಿಗೆ ಭೇದವಿಲ್ಲವೋ ಅವು ಒಂದೇ ಎಂಬ ನ್ಯಾಯವು ಇದೆ. ಹಾಗಿಲ್ಲದಲ್ಲಿ ಬ್ರಹ್ಮನಿಗೆ ಜಡದಿಂದ ಐಕ್ಯವನ್ನು ನೀನು ಹೇಗೆ ಶಂಕಿಸಿದಿ?

ಜೀವ ಬ್ರಹ್ಮ ಐಕ್ಯವು ನನಗೆ ಸಮ್ಮತವೇ ಎಂಬುವಿಯೇನು? ಅದು ಯೋಗ್ಯವಲ್ಲವೆಂದು ಹೇಳುತ್ತಾರೆ.

ಜೀವಸ್ಯ ಬ್ರಹ್ಮಣೈಕ್ಯಂ ಯತ್ತಚ್ಚ ಯುಕ್ತಿಬಹಿಷ್ಕೃತಮ್ ।
ಯತೋ ವಿರುದ್ಧಯೋರೈಕ್ಯಂ ನ ವದನ್ತಿ ವಿಚಕ್ಷಣಾಃ ॥ ೧೭ ॥

ಯಥಾ ಜಡತ್ವಂ ಬ್ರಹ್ಮೈಕ್ಯವಿರೋಧಿ ಸ್ಯಾತ್ತಥೈವ ಚ ।
ದುಃಖಿತ್ವಾಲ್ಪಜ್ಞತಾದ್ಯಾಶ್ಚ ಕಿಂ ನ ಬ್ರಹ್ಮೈಕ್ಯಬಾಧಿಕಾಃ ॥ ೧೮ ॥

ಜೀವನಿಂದ ಬ್ರಹ್ಮನಿಗೆ ಐಕ್ಯವು ಯಾವುದು ನೀನು ಹೇಳುತ್ತೀಯೋ ಅದೂ ಕೂಡ ಯುಕ್ತಿ ವಿರುದ್ಧವಾದದ್ದೇ. ಏಕೆಂದರೆ, ವಿರುದ್ಧಧರ್ಮವುಳ್ಳ ವಸ್ತುಗಳಿಗೆ ವಿಚಕ್ಷಣರು ಐಕ್ಯವನ್ನು ಹೇಳುವುದಿಲ್ಲ. ಯಾವ ರೀತಿಯಲ್ಲಿ ಜಡದಲ್ಲಿರುವ ಜಡತ್ವವು ಜಡಕ್ಕೆ ಬ್ರಹ್ಮನಿಂದ ಐಕ್ಯವನ್ನು ಹೇಳುವುದರ ವಿರೋಧಿಯೋ ಹಾಗೆಯೇ ದುಃಖಿತ್ವ ಅಲ್ಪಜ್ಞತಾ ಇವೇ ಮೊದಲಾದವುಗಳು ಜೀವನಿಂದ ಬ್ರಹ್ಮನಿಗೆ ಐಕ್ಯವನ್ನು ಹೇಳುವುದಕ್ಕೆ ಬಾಧಕವಾಗುವುದಿಲ್ಲವೇ? ಆಗೇ ಆಗುತ್ತೆ.

'ಆನಂದೋ ಬ್ರಹ್ಮ' 'ವಿಜ್ಞಾನಂ ಬ್ರಹ್ಮೇ' ತ್ಯಾದ್ಯಾಂ ಶ್ರುತಿಂ ಸ್ಮರ।
ವಿರುದ್ಧಧರ್ಮತ್ಯಾಗೇನ ಯದ್ಯೈಕ್ಯಮಭಿಧಿತ್ಸಿತಮ್ ॥ ೧೯ ॥

ತರ್ಹಿ ತದ್ವಜ್ಜಡತ್ವಾದೇಸ್ತ್ಯಾಗೇನ ಜಗತಾ ಸಹ ।
ನೈಕತಾಪಿ ಕುತೋ ವಾಚ್ಯಾ ನ ಚೇಚ್ಛೋಚ್ಯಾ ಸ್ಥಿತಿಸ್ತವ ॥ ೨೦ ॥

'ಆನಂದೋ ಬ್ರಹ್ಮ'=ಆನಂದವು ಬ್ರಹ್ಮನು.

'ವಿಜ್ಞಾನಂ ಬ್ರಹ್ಮ'=ವಿಜ್ಞಾನವು ಬ್ರಹ್ಮ ಇವೇ ಮೊದಲಾದ ಶ್ರುತಿಗಳನ್ನು ಸ್ಮರಿಸು. ವಿರುದ್ಧ ಧರ್ಮಗಳನ್ನು ಬಿಟ್ಟು ಐಕ್ಯವನ್ನು ಹೇಳುವುದು ನಿನಗೆ ಇಷ್ಟವಾದಲ್ಲಿ ಜಡತ್ವಾದಿ ಗುಣಗಳನ್ನು ಬಿಟ್ಟು ಜಗತ್ತಿನಿಂದ ಬ್ರಹ್ಮನಿಗೆ ಐಕ್ಯವನ್ನು ಏಕೆ ಹೇಳಬಾರದು? ಇದನ್ನು ಒಪ್ಪದಿದ್ದರೆ ನಿನ್ನ ಅವಸ್ಥೆ ಬಹಳ ಶೋಚನೀಯವಾದದ್ದು.

ಏಕಸ್ಮಿನ್ನೇವ ವಾಕ್ಯೇ ಸ್ಯಾತ್ಕಥಂ ಮಂದ ದ್ವಯೀ ಗತಿಃ ।
ಐಕ್ಯಂ ಚೇದುಭಯೋಶ್ಚ ಸ್ಯಾನ್ಮಿಥ್ಯಾತ್ವಂ ಚ ದ್ವಯೋರಪಿ ॥ ೨೧ ॥

ಎಲೈ ಮಂದ! ಒಂದೇ ವಾಕ್ಯದಲ್ಲಿ ಎರಡು ಮಾರ್ಗವು ಹೇಗೆ ಆದೀತು? ಬ್ರಹ್ಮನಿಂದ ಐಕ್ಯ ಹೇಳಿದರೆ ಜಡ ಜೀವ ಇವೆರಡಕ್ಕೂ ಬ್ರಹ್ಮನಿಂದ ಐಕ್ಯ ಆದೀತು. ಮಿಥ್ಯೆಯೆಂದಲ್ಲಿ ಎರಡೂ ಮಿಥ್ಯಾ ಆಗಬೇಕು.

ಇದರ ಅಭಿಪ್ರಾಯ. "ನೇಹ ನಾನಾಸ್ತಿ ಕಿಂಚನ" ಎಂಬ ವಾಕ್ಯದಲ್ಲಿ 'ಕಿಂಚನ' ಶಬ್ದಕ್ಕೆ ಜೀವಜಡಾತ್ಮಕವಾದ ಪ್ರಪಂಚವೆಂದು ಅರ್ಥ ಹೇಳಬೇಕು. ಆಗ, ಇಲ್ಲಿ 'ನ' ಎಂಬ ಪದಕ್ಕೆ ಭೇದವಿಲ್ಲ ಎಂದು ಅರ್ಥ ಮಾಡಿದರೆ ಬ್ರಹ್ಮ ಜೀವನಿಂದ ಭಿನ್ನನಲ್ಲ. ಅಂತೂ ಜೀವ ಉಳಿದ. ಭೇದ ಹೋಯಿತು. ಹೀಗೆ ಜೀವನಿಗೆ ಮಟ್ಟಿಗೆ ಹೇಳುವುದಕ್ಕಾಗುವುದಿಲ್ಲ. ಜಡಕ್ಕೂ ಹೇಳಬೇಕು. ಅಂತೂ ಬ್ರಹ್ಮನಿಗೂ ಜಡಕ್ಕೂ ಭೇದವಿಲ್ಲ ಎಂದಾಯಿತು. ಇದನ್ನು ನೀನು ಒಪ್ಪುವುದಿಲ್ಲ. ಅಥವಾ ಬ್ರಹ್ಮನಲ್ಲಿ ಜಡವು ಬೇರೆಯಾಗಿಲ್ಲವೆಂದರೆ, ಜಡವು ಮಿಥ್ಯೆ ಎಂದು ಅಭಿಪ್ರಾಯ. ಹೀಗೆ ನೀನು ಅನ್ನುವುದಾದರೆ, ಬ್ರಹ್ಮನಲ್ಲಿ ಜೀವನಿಲ್ಲವೆಂದರೆ, ಜೀವನೂ ಮಿಥ್ಯೆ ಎಂದು ಹೇಳಬೇಕಾಗುತ್ತದೆ.

ನ ಹೀಯಂ ವಾಗ್ದ್ವಿವದನಾ ಭುಜಂಗೀವ ದ್ವಯಂ ವದೇತ್ ।
ವಿರುದ್ಧಧರ್ಮನಾಶೇಽಪಿ ಯಥಾ ಜೀವೇ ಭವನ್ಮತೇ ॥ ೨೨ ॥

ಚಿದ್ರೂಪಮಾತ್ರಂ ಶಿಷ್ಟಂ ಸ್ಯಾತ್ತಥಾ ಜಡಜಗತ್ಯಪಿ ।
ವಿರುದ್ಧಧರ್ಮನಾಶೇ ಚ ಸದ್ರೂಪಮನುವಶಿಷ್ಯತಾಮ್ ॥ ೨೩ ॥

ಯಥಾ ಚಿದ್ರೂಪಮಾತ್ರಂ ಚ ಚಿದ್ಬ್ರಹ್ಮೈಕ್ಯೇ ನ ಬಾಧಕಮ್ ।
ತಥಾ ಸದ್ರೂಪಮಾತ್ರಂ ಚ ಸದ್ಬ್ರಹ್ಮೈಕ್ಯೇ ನ ಬಾಧಕಮ್ ॥೨೪॥

ಈ 'ನೇಹ ನಾನಾಸ್ತಿ ಕಿಂಚನ' ಎಂಬ ಮಾತು ಎರಡು ಬಾಯುಳ್ಳ ಹೆಣ್ಣುಸರ್ಪದಂತೆ ಜೀವ ಜಡರ ವಿಷಯದಲ್ಲಿ ಬೇರೆ ಬೇರೆಯಾಗಿ ಹೇಳುವುದಿಲ್ಲ. ವಿರುದ್ಧಧರ್ಮ ನಾಶವಾಗಿ ಹೇಗೆ ಜೀವನಲ್ಲಿ ಚಿದ್ರೂಪ ಮಾತ್ರ ನಿನ್ನ ಮತದಲ್ಲಿ ಉಳಿಯುತ್ತೆಯೋ ಹಾಗೆಯೇ ಜಡವಾದ ಜಗತ್ತಿನಲ್ಲಿಯೂ ಕೂಡ ವಿರುದ್ಧ ಧರ್ಮನಾಶವಾಗಿ ಸದ್ರೂಪ ಮಾತ್ರ ಉಳಿಯಲೇನು. ಏನು ಬಾಧಕ? ಚಿದ್ರೂಪ ಮಾತ್ರ ಜೀವನು ಮತ್ತು ಚಿದ್ರೂಪ ಮಾತ್ರ ಬ್ರಹ್ಮನು ಇವರಿಗೆ ಐಕ್ಯವು ಹೇಗೆ ಬಾಧಕವಲ್ಲವೋ ಹಾಗೆಯೇ ಸದ್ರೂಪ

ಮಾತ್ರ ಜಡ ಮತ್ತು ಸದ್ರೂಪ ಮಾತ್ರ ಬ್ರಹ್ಮ ಇವರಿಗೆ ಐಕ್ಯವು ಬಾಧಕವಲ್ಲ. ಚಿತ್ತಿನಿಂದ ಚಿತ್ತಿಗೆ ಹೇಗೆ ಐಕ್ಯವೋ ಹಾಗೆಯೇ ಸತ್ತಿನಿಂದ ಸತ್ತಿಗೆ ಐಕ್ಯ.

ಸರ್ವಥೈಕಂ ವಾಕ್ಯಮಿದಮರ್ಥಮೇಕವಿಧಂ ವದೇತ್ ।
ನ ಚೇದ್ವಿರಮ್ಯವ್ಯಾಪಾರೋ ಮಹಾದೋಷೋ ಭವೇತ್ತವ ॥೨೫॥

'ನೇಹ ನಾನಾಸ್ತಿ ಕಿಂಚನ' ಎಂಬ ಒಂದು ವಾಕ್ಯವು ಅರ್ಥವನ್ನು ಒಂದು ವಿಧವಾಗಿ ಹೇಳೀತು. ಹಾಗಲ್ಲದಲ್ಲಿ 'ವಿರಮ್ಯವ್ಯಾಪಾರರೂಪ'ವಾದ ಮಹಾದೋಷವು ನಿನಗೆ ಬಂದೀತು. ಇದರ ಅಭಿಪ್ರಾಯ :

ವಿರಮ್ಯ ವ್ಯಾಪಾರ = ನಿಂತು ನಿಂತು ವ್ಯಾಪಾರಮಾಡೋಣ. ಇದು ಚೇತನನ ಧರ್ಮ. 'ನೇಹ ನಾನಾಸ್ತಿ ಕಿಂಚನ' ಎಂಬೀ ವಾಕ್ಯವನ್ನು ಕೇಳುವುದರಿಂದ ಹುಟ್ಟಿದ ಮನೋವೃತ್ತಿರೂಪವಾದ ಜ್ಞಾನವು ಜಡವಾದದ್ದು. ಈ ಜ್ಞಾನವನ್ನು ಗ್ರಹಿಸುವುದರ ಮೂಲಕ ಸಾಕ್ಷಿಯು, ಅಂದರೆ ಜೀವನು, ಅರ್ಥವನ್ನು ತಿಳಿಯುತ್ತಾನೆ. ಮನೋವೃತ್ತಿರೂಪವಾದ ಜ್ಞಾನವು ಜಡವಾದ್ದರಿಂದ ಮೊದಲು ಒಂದು ವಿಧವಾಗಿ ಅರ್ಥವನ್ನು ಸಾಕ್ಷಿಗೆ ತೋರಿಸಿ, ನಿಂತು, ಮತ್ತೊಂದು ಅರ್ಥವನ್ನು ಆಮೇಲೆ ತೋರಿಸುವುದಿಲ್ಲ. ಇಚ್ಛಾಪೂರ್ವಕವಾಗಿ ವರ್ತಿಸುವ ಚೇತನನಿಗೆ ಮಾತ್ರಗೆ ಇದು ಸಾಧ್ಯ. ಆದ್ದರಿಂದ ಒಂದೇ ವಿಧವಾದ ಅರ್ಥ ಈ ವಾಕ್ಯದಿಂದ ತಿಳಿದುಬರಬೇಕು.

(ವಿರಮ್ಯ ವ್ಯಾಪಾರಃ—ಸ್ಥಿತ್ವಾ ಸ್ಥಿತ್ವಾ ವ್ಯಾಪಾರೋ ವಿರಮ್ಯ ವ್ಯಾಪಾರಃ, ಚೇತನ ಧರ್ಮಃ, ಸ ಚ ಬುದ್ಧೌ ನ ಸಂಭವತಿ. ತಸ್ಯಾ ಜಡತ್ವಾತ್—ಶ್ರೀನಿವಾಸತೀರ್ಥರು.)

ಜೀವಾಭಾವೇ ಕಸ್ಯ ಮೋಕ್ಷ ಇತಿ ಚೇತ್ಸೋಽಪಿ ನೇಷ್ಯತಾಮ್ ।
ಯಥಾ ಪುಣ್ಯಫಲಸ್ಯಾಪ್ತ್ಯೈ ನ ಸ್ವರ್ಗೋ ಮೃಗ್ಯತೇ ತ್ವಯಾ ॥೨೬॥

ತಥಾ ಜ್ಞಾನಫಲಸ್ಯಾಪ್ತ್ಯೈ ನಾಪವರ್ಗೋಽಪಿ ಮೃಗ್ಯತಾಮ್ ।

'ನೇಹ ನಾನಾಸ್ತಿ ಕಿಂಚನ' ಎಂಬ ವಾಕ್ಯಕ್ಕೆ ಜಡವು ಹೇಗೆ ಇಲ್ಲವೋ ಹಾಗೆಯೇ ಜೀವನೂ ಕೂಡ ಇಲ್ಲವೆಂದಲ್ಲಿ ಯಾರಿಗೆ ಮೋಕ್ಷ? ಹೀಗೆ ನೀನು

ಅಂದಲ್ಲಿ ಹೇಗೆ ಸ್ವರ್ಗವು ಇಲ್ಲದೇ ಇರುವುದರಿಂದ, ಪುಣ್ಯದ ಫಲವಾದ ಸ್ವರ್ಗವು ನಿನಗೆ ಅಪೇಕ್ಷಿತವಲ್ಲವೋ ಹಾಗೆಯೇ ಮುಕ್ತಿಯೂ ಕೂಡ ಅಪೇಕ್ಷಿತವಲ್ಲದೇ ಹೋಗಲೇನು ?

ಶ್ರುತೇರಪ್ರಾಮಾಣ್ಯಭೀತಿರುಭಯತ್ರಾಪಿ ಯತ್ಸಮಾ ॥ ೨೭ ॥

ಸರ್ವಮಿಥ್ಯಾತ್ವವಾದೇ ಚ ಮೋಕ್ಷೋ ಮಿಥ್ಯಾ ನ ಕಿಂ ವದ ।

ಬ್ರಹ್ಮಜ್ಞಾನದಿಂದ ಜೀವನಿಗೆ ಮೋಕ್ಷವಾಗುತ್ತದೆ ಎಂದು ಹೇಳುವ ಶ್ರುತಿಗೆ ಅಪ್ರಾಮಾಣ್ಯ ಬರುತ್ತದೆ. ಆದ್ದರಿಂದ ಜೀವನನ್ನು ಉಳಿಸಿಕೊಳ್ಳ ಬೇಕು ಎಂದರೆ ಸ್ವರ್ಗವನ್ನು ಒಪ್ಪದೇ ಹೋದಲ್ಲಿ ಜ್ಯೋತಿಷ್ಟೋಮಯಾಗ ಮಾಡುವುದರಿಂದ ಸ್ವರ್ಗವು ಆಗುತ್ತದೆ ಎಂಬ ಶ್ರುತಿಗೂ ಅಪ್ರಾಮಾಣ್ಯ ಬರುತ್ತದೆ. ಸ್ವರ್ಗವು ಮಿಥ್ಯಾ ಎನ್ನುವಿಯೋ ? ಆಗ್ಗೆ ಮುಕ್ತಿಯೂ ಮಿಥ್ಯಾ ಆಗಬೇಕು. ಸರ್ವವೂ ಮಿಥ್ಯಾ ಎನ್ನುವವನಿಗೆ ಮೋಕ್ಷವೂ ಮಿಥ್ಯಾ ಅಲ್ಲವೇನು ? ಹೇಳು. ಆದ್ದರಿಂದ ವೇದಕ್ಕೆ ಅಪ್ರಾಮಾಣ್ಯ ಬರುವುದೆಂಬ ಭಯ ಉಭಯತ್ರ ಸಮ.

ಅವಿದ್ಯಾಯಾ ನಿವೃತ್ತಿಸ್ತೇ ಯತೋ ಮುಕ್ತಿರ್ಮತೇ ಮತಾ ॥೨೮॥

ಸಾ ಚಾಭಾವಸ್ವರೂಪತ್ವಾದ್ಬ್ರಹ್ಮಣಾತೋ ಮೃಷಾ ನ ಕಿಮ್ ।

ನಿನ್ನ ಮತದಲ್ಲಿ ಅವಿದ್ಯಾನಿವೃತ್ತಿಯು ಮೋಕ್ಷ. ಅದು (ಅವಿದ್ಯಾ ಅಭಾವವು) ಅಭಾವರೂಪವಾದದ್ದು. ಆದ್ದರಿಂದ ಭಾವರೂಪನಾದ ಬ್ರಹ್ಮ ನಿಂದ ಮುಕ್ತಿಯು ಬೇರೆಯಾಯಿತು. ಬ್ರಹ್ಮನಿಂದ ಬೇರೆಯಾದದ್ದೆಲ್ಲವೂ ಮಿಥ್ಯಾ. ಆದ್ದರಿಂದ ಆ ಮುಕ್ತಿಯು ಮಿಥ್ಯಾ ಅಲ್ಲವೇನು ? ಮಿಥ್ಯಾನೇ.

ಯದ್ಯಭಾವೋ ದ್ವಿತೀಯೋಽಸ್ತಿ ತರ್ಹಿ ಭಾವೋಽಪಿ ಚೇಷ್ಯತಾಮ್ ॥ ೨೯ ॥

ಕಥಂ ಸಾಮಾನ್ಯವಾಗೇಷಾ ವಿಶೇಷೇ ಪರ್ಯವಸ್ಯತಿ ।

ಬ್ರಹ್ಮನಿಂದ ಎರಡನೆಯದಾದ ಅಭಾವವು ಉಂಟು ಎಂದಲ್ಲಿ ಭಾವರೂಪವಾದದ್ದೂ ಉಂಟು ಎಂದು ನಿನಗೆ ಇಷ್ಟವಾಗಲೇನು. 'ನೇಹ ನಾನಾಸ್ತಿ ಕಿಂಚನ' ಎಂಬ ಸಾಮಾನ್ಯವಾಕ್ಯವು ಭಾವರೂಪವಾದ ಪದಾರ್ಥ

ಗಳನ್ನು ನಿಷೇಧಮಾಡುವುದರಲ್ಲಿ ಮಟ್ಟಿಗೆ ಪರ್ಯವಸಾನವಾಗುತ್ತದೆ ಎಂಬುದು ಹೇಗಾಗುವುದು ?

ಸ್ವಾರ್ಥಾಭಾವಸಜಾತೀಯಮಭಾವಂ ಯದಿ ವಾಗಿಯಮ್ ॥೩೦॥

ರಕ್ಷೇತ್ತರ್ಹಿ ಸ್ವಾರ್ಥಮೇನಮೇವ ಕಸ್ಮಾದ್ಧಿ ರಕ್ಷತಿ ।
ಸಹೇನ್ದ್ರಾಯೇತಿವಜ್ಜಾತೀಯೇನ ಸಾಕಂ ಕ್ಷಿಪೇಚ್ಚಮುಮ್ ॥೩೧॥

'ನೇಹ ನಾನಾಸ್ತಿ ಕಿಂಚನ' ಎಂಬುವುದು ಜಗತ್ತಿನ ಅಭಾವವನ್ನು ಹೇಳುತ್ತದೆ. ಆ ಜಗತ್ತಿನ ಅಭಾವವು ಅಭಾವರೂಪವಾಗಿದ್ದು ಬ್ರಹ್ಮನಿಂದ ಬೇರೆಯಾವರೂ ಮಿಥ್ಯಾ ಅಲ್ಲ. ಅದರ ಹಾಗೆಯೇ ಅದಕ್ಕೆ ಸದೃಶವಾದ ಅವಿದ್ಯಾನಿವೃತ್ತಿರೂಪವಾದ ಅಭಾವವೂ ಮಿಥ್ಯಾ ಅಲ್ಲ. ಹೀಗೆನ್ನುವಿಯೇನು? ಅದು ಸರಿಯಲ್ಲ. ಏಕೆಂದರೆ 'ನೇಹ ನಾನಾಸ್ತಿ ಕಿಂಚನ' ಎಂಬ ಶ್ರುತಿಯು ಜಗದಭಾವವನ್ನು ಹೇಳುತ್ತದೆಂದು ನಿನ್ನ ಅಭಿಪ್ರಾಯ. ಜಗತ್ತಿನಲ್ಲಿ ಭಾವ ವಸ್ತುಗಳೂ ಅಭಾವವಸ್ತುಗಳೂ ಎರಡೂ ಉಂಟು. ಈಗ ಜಗತ್ತು ಇಲ್ಲ ವೆಂದರೆ ಭಾವವಸ್ತುವೂ ಇಲ್ಲ ಅಭಾವವಸ್ತುವೂ ಇಲ್ಲ ಎಂದಾಗಬೇಕು. ಭಾವವಸ್ತುವನ್ನು ಉಳಿಸದೇ ಅಭಾವವಸ್ತುವನ್ನು ಹೇಗೆ ಉಳಿಸೀತು ? ಜಗತ್ತಿನಲ್ಲಿ ಭಾವಾಭಾವ ಎರಡೂ ಇವೆಯಷ್ಟೆ. ಒಂದು ವೇಳೆ ಭಾವವಸ್ತುವನ್ನು ನಿಷೇಧಮಾಡುತ್ತೆಂದಲ್ಲಿ ಅಭಾವವಸ್ತುವನ್ನೂ ನಿಷೇಧಮಾಡಲಿ. "ಸಹೇಂದ್ರಾಯ ತಕ್ಷಕಾಯ ಸ್ವಾಹಾ" ಎಂಬಲ್ಲಿ ಇಂದ್ರನು ಇಲ್ಲದೆ ತಕ್ಷಕನು ಮಟ್ಟಿಗೆ ಆಹುತಿಗೆ ವಿಷಯನು ಹೇಗೆ ಆದಾನು ?

ಸ್ವಾಪ್ರಾಮಾಣ್ಯಭಯಾತ್ಸ್ವಾರ್ಥಮೇನಂ ಯದಿ ಚ ನ ಕ್ಷಿಪೇತ್ ।
ಶ್ರುತಿರೇಷಾ ತರ್ಹಿ ಭಾವಮಪಿ ಶ್ರುತ್ಯನ್ತರೋದಿತಮ್ ॥ ೩೨ ॥

ಕಥಂ ಕ್ಷಿಪೇದ್ಯತೋ ವಂಶೀಯಸ್ಯ ದತ್ತಂ ದಶಾರ್ಥಕಮ್ ।
ತದ್ವಂಶಜಸ್ಯ ಸ್ವಸ್ಯಾಪಿ ಭವತೀತಿ ವಿದೋ ವಿದುಃ ॥ ೩೩ ॥

ಅಭಾವವನ್ನು ರಕ್ಷಿಸದೇ ಹೋದಲ್ಲಿ 'ನೇಹ ನಾನಾಸ್ತಿ ಕಿಂಚನ' ಶ್ರುತಿಗೆ ಅಪ್ರಾಮಾಣ್ಯ ಬರುತ್ತದೆಯಾದ್ದರಿಂದ ಶ್ರುತಿಯು ತನ್ನ ಪ್ರಾಮಾಣ್ಯವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಆ ಅಭಾವವನ್ನು ದೂರ ತಳ್ಳ

ವುದಿಲ್ಲ. ಅಂದರೆ ಅಭಾವವನ್ನು ಉಳಿಸುತ್ತದೆ. ಹೀಗೆ ಶ್ರುತಿಗೆ ತನಗೆ ಅಪ್ರಾಮಾಣ್ಯ ಬರಬಾರದೆಂಬುದು ಅಭಿಪ್ರಾಯವಾದಲ್ಲಿ "ವಿಶ್ವಂ ಸತ್ಯಂ" ಎಂಬಿವೇ ಮೊದಲಾದ ತನ್ನ ಜಾತಿಗೆ ಸೇರಿದ ಶ್ರುತಿಗಳ ಪ್ರಾಮಾಣ್ಯವನ್ನು ರಕ್ಷಿಸುವುದಕ್ಕಾಗಿ 'ನೇಹ ನಾನಾಸ್ತಿ ಕಿಂಚನ' ಶ್ರುತಿಯು ಭಾವಪ್ರಪಂಚ ವನ್ನೂ ಉಳಿಸಲಿ. ಇದಕ್ಕೆ ಲೋಕನ್ಯಾಯವೂ ಉಂಟು. ಒಂದು ವಂಶಕ್ಕೆ ಯಾವುವೇ ಅರಿಷ್ಟರೂಪ ಶಾಪ ಒದಗಿದ್ದರೆ, ಆ ಶಾಪವು ಆ ವಂಶೀಯನಾದ ತನಗೂ ಅನ್ವಯಿಸುತ್ತೆಂಬುದು ತಿಳಿವಳಿಕೆಯುಳ್ಳವರ ಮತ.

ಅಪೌರುಷೇಯವೇದಸ್ಯಾಪ್ರಾಮಾಣ್ಯೇ ಚೇದೃಶೀ ಶ್ರುತಿಃ ।
ಭವೇತ್ಸ್ವಯಂ ಚಾಪ್ರಮಾಣಂ ಶ್ರುತಿತ್ವಸ್ಯಾವಿಶೇಷತಃ ॥ ೩೪ ॥

ಅಪೌರುಷೇಯವಾದ "ವಿಶ್ವಂ ಸತ್ಯಂ" ಇದೇ ಮೊದಲಾದ ಶ್ರುತಿಯು ಪ್ರಮಾಣವಾಗದೇ ಹೋದರೆ 'ನೇಹ ನಾನಾಸ್ತಿ ಕಿಂಚನ' ಎಂಬ ಶ್ರುತಿಯೂ ತಾನೇ ಅಪ್ರಮಾಣವಾಗುತ್ತದೆ. ಶ್ರುತಿತ್ವವು ಎರಡರಲ್ಲಿಯೂ ಇರುವುದರಿಂದ 'ನೇಹ ನಾನಾಸ್ತಿ ಕಿಂಚನ' ಶ್ರುತಿಯು ಅಪ್ರಮಾಣವು ; ಶ್ರುತಿಯಾದ್ದರಿಂದ 'ವಿಶ್ವಂ ಸತ್ಯಂ' ಎಂಬ ಶ್ರುತಿಯಂತೆ—ಹೀಗೆ ಅನುಮಾನ ಮಾಡಬಹುದು.

ಕಿಂಚಾಭಾವಾಭಾವರೂಪೇ ಭಾವೇಽಪ್ಯಸ್ತಿ ಹ್ಯಭಾವತಾ ।
ಜಾಮಾತೃತ್ವಾಕಾರವತಿ ವಿಪ್ರೇ ವಿಪ್ರಮುಮಾನಯನ್ ॥ ೩೫ ॥

ಅಪಿ ಜಾಮಾತೃತಾಸತ್ತ್ವಾದ್ಯಥಾ ಭೋಜಯತಿ ಕ್ಷಿತೌ ।
ತಥೈವಾಭಾವತಾಸತ್ತ್ವಾದ್ಭಾವಂ ಮಾನಯತು ಶ್ರುತಿಃ ॥ ೩೬ ॥

ಭಾವವಸ್ತುವನ್ನು ಅಭಾವಾಭಾವ ವಸ್ತುವೆಂದು ಹೇಳಬಹುದು. ಭಾವತ್ವೇನ ಅದನ್ನು ಉಳಿಸದೇಹೋದರೂ ಅದರ ಅಭಾವಾಭಾವತ್ವವನ್ನು ನೋಡಿ ಅದನ್ನುಳಿಸು. ಲೋಕದಲ್ಲಿ ಜನರು ಒಬ್ಬ ಪುರುಷನನ್ನು ಬ್ರಾಹ್ಮಣ ನೆಂಬ ನಿಮಿತ್ತದಿಂದ ಸತ್ಕಾರಮಾಡದೇ ಹೋದರೂ, ಅವನೇ ಅಳಿಯನಾಕಾರ ವನ್ನು ಹೊಂದಿದರೆ ಅಂದರೆ ಅಳಿಯನಾದರೆ ಭೋಜನಾದಿಗಳಿಂದ ಅವನನ್ನು ಪೂಜಿಸುವರು. ನಿನಗೆ ಭಾವವಸ್ತುವನ್ನುಳಿಸುವುದರಲ್ಲಿ ಮನಸ್ಸು ಬಾರದು. ಅಭಾವವಸ್ತುವನ್ನುಳಿಸುವುದರಲ್ಲಿ ತಾತ್ಪರ್ಯವುಳ್ಳ ನಿನಗೆ ಭಾವವಸ್ತುವನ್ನೇ

ಅಭಾವಾಭಾವವೆಂದು ಕರೆದರೆ ನಿನಗೆ ಇಷ್ಟವಾದ ಅಳಿಯನಂತಿರುವ ಅಭಾವಾಕಾರವನ್ನು ಹೊಂದಿ ಅದು ಉಳಿಯಬಹುದಷ್ಟೇ.

ಅಭಾವಾಭಾವ=ಅಭಾವದ ಅಭಾವ=ಭಾವ

ಕಿಂಚ ಸ್ವಾರ್ಥಸಜಾತೀಯೇಽಪ್ಯಭಾವೇ ಕುರ್ವತೀ ರತಿಮ್ ।
ಶ್ರುತಿಃ ಸ್ವಜಾತೀಯಭಾವೇ ರತಿಂ ಕಸ್ಮಾನ್ನ ಕಾರಯೇತ್ ॥ ೩೭ ॥

ಸುತಾಭಾವೇಽಪಿ ವನ್ಧ್ಯಾ ಚ ಕಾಙ್ಕ್ಷೇತ್ಸ್ವಸ್ಯೈವ ಜೀವನಮ್ ।
ಅರ್ಥಾಭಾವೇ ಕೃವಜನಂ ಸ್ಯಾದ್ರಜ್ಜ್ವಹಿಜ್ಞಾನವತ್ಸ್ವಯಮ್ ॥
ಜೀವೇದೇವ ಶ್ರುತಿಃ ಸೈಷಾ ದೋಷೋಽಸೌ ನ(ಸ್ವ)ಸ್ವಘಾತಕಃ ।
ಅತಃ ಸ್ವಜಾತೀಯಭಾವಂ ನೈವೋಪೇಕ್ಷೇತ ವಾಗಿಯಮ್ ॥ ೩೮ ॥

'ನೇಹ ನಾನಾಸ್ತಿ ಕಿಂಚನ' ಶ್ರುತಿಗೆ ಬ್ರಹ್ಮನಲ್ಲಿ ಪ್ರಪಂಚವಿಲ್ಲವೆಂದರ್ಥ ; ಅಂದರೆ ಪ್ರಪಂಚಾಭಾವವೆಂದು ಅದಕ್ಕೆ ಅರ್ಥ. ಇದಕ್ಕೆ ಸಮಾನವಾದದ್ದು ಅವಿದ್ಯಾಽಭಾವರೂಪವಾದ ಮುಕ್ತಿ. ಇದನ್ನು (ಪ್ರಪಂಚಾಭಾವವನ್ನು) ಉಳಿಸಿದಹಾಗೆ ಅವಿದ್ಯಾ ಅಭಾವವನ್ನೂ ಉಳಿಸುತ್ತದೆ. ಶ್ರುತಿಯ ಅರ್ಥಕ್ಕೆ ಸಜಾತೀಯವಾದ ಅವಿದ್ಯಾಭಾವವನ್ನು ರಕ್ಷಿಸುವುದರಲ್ಲಿ ಆಸಕ್ತಿಯುಳ್ಳ ಶ್ರುತಿಯು ತಾನು ಭಾವರೂಪವಾದದ್ದರಿಂದ ತನ್ನ ಜಾತಿಗೆ ಸೇರಿದ ಭಾವರೂಪವಾದ ಪ್ರಪಂಚವನ್ನು ರಕ್ಷಿಸುವುದರಲ್ಲಿ ಪ್ರೀತಿಯನ್ನೇಕೆ ಮಾಡದೇ ಇದ್ದೀತು? ಮಗನು ಇಲ್ಲದೇಹೋದರೂ ತಾನು ಜೀವಿಸುವುದರಲ್ಲಿ ಬಂಜೆಯು ಆಕಾಂಕ್ಷಿಸುವಳಷ್ಟೆ! 'ನೇಹ ನಾನಾಸ್ತಿ ಕಿಂಚನ' ಶ್ರುತಿಯು ತನ್ನ ಅರ್ಥವಾದ ಪ್ರಪಂಚಾಭಾವವನ್ನು ಉಳಿಸದೇ ಇದ್ದಲ್ಲಿ ಹಗ್ಗದಲ್ಲಿ ಆರೋಪಿತವಾದ ಸರ್ಪದ ಜ್ಞಾನದಂತೆ, ಶ್ರುತಿಗೆ ಅಪ್ರಾಮಾಣ್ಯ ಬರುತ್ತದೆ. ಶ್ರುತಿಯಾದರೋ ತಾನು ಮಟ್ಟಿಗೆ ಉಳಿದೇ ಉಳಿಯುತ್ತದೆ. ಈ ದೋಷವು ತನ್ನನ್ನು, ಅಂದರೆ ಶ್ರುತಿಯನ್ನು, ನಾಶಮಾಡತಕ್ಕದ್ದಲ್ಲ. ಆದ್ದರಿಂದ ತನ್ನ ಜಾತಿಗೆ ಸೇರಿದ ಭಾವರೂಪವಾದ ಪ್ರಪಂಚವನ್ನು ಈ 'ನೇಹ ನಾನಾಸ್ತಿ ಕಿಂಚನ' ಶ್ರುತಿಯು ಉಪೇಕ್ಷೆಮಾಡುವುದಿಲ್ಲ. ಶ್ರುತಿಯೂ ಭಾವರೂಪವಾದದ್ದು, ಪ್ರಪಂಚವೂ ಭಾವರೂಪವಾದದ್ದು. ತನ್ನನ್ನು ಉಳಿಸಿಕೊಂಡಮೇಲೆ ತನ್ನ ಜಾತಿಗೆ ಸೇರಿದ ಭಾವರೂಪವಾದ ಪ್ರಪಂಚವನ್ನು ಉಳಿಸಿಕೊಳ್ಳುವುದಿಲ್ಲವೇನು?

ಭಾವತ್ವಸ್ಯಾವಿಶೇಷೇಣ ತದಭಾವೇ ಸ್ವಯಂ ಚ ನ ।
ತತ್ಸಹೈವ ಪ್ರವೃತ್ತಿಃ ಸ್ಯಾನ್ನಿವೃತ್ತಿರ್ವಾ ಭವೇತ್ಸಹ ॥ ४೦ ॥

ರಕ್ಷೇಚ್ಚೇದುಭಯಂ ರಕ್ಷೇತ್ಕ್ಷಿಪೇಚ್ಚೇದುಭಯಂ ಕ್ಷಿಪೇತ್ ।
ಏಕಂ ಸಂಧಿತ್ಸತೋ ನೋ ಚೇದಪರಂ ಚ್ಯವತೇ ಯತಃ ॥ ४೧ ॥

ಭಾವರೂಪವಾದ ಪ್ರಪಂಚವು ಇಲ್ಲವೆಂದು ಶ್ರುತ್ಯರ್ಥವಾದಲ್ಲಿ ಭಾವರೂಪವಾದ ಶ್ರುತಿಯೂ ಕೂಡ ಇಲ್ಲವೆಂದು ಹೇಳಬೇಕು. ಶ್ರುತಿಯು ತನ್ನನ್ನು ಉಳಿಸಿಕೊಂಡರೆ ಅದರ ಜೊತೆಯಲ್ಲಿ ಪ್ರಪಂಚವನ್ನೂ ಉಳಿಸಬೇಕು. ಪ್ರಪಂಚವನ್ನು ನಿವೃತ್ತಿಮಾಡಿದರೆ ಶ್ರುತಿಯನ್ನೂ ನಿವೃತ್ತಿಮಾಡಬೇಕು. ರಕ್ಷಿಸಿದರೆ ಎರಡನ್ನೂ ರಕ್ಷಿಸಬೇಕು. ತಳ್ಳಿದರೆ ಎರಡನ್ನೂ ತಳ್ಳಬೇಕು. ಹಾಗಿಲ್ಲದಲ್ಲಿ ಪ್ರಪಂಚವಿಲ್ಲವೇಹೋದರೆ ಶ್ರುತಿಯಿದೆ ಎಂದು ಹೇಳಲಾಗುವುದಿಲ್ಲ. ಶ್ರುತಿ ಇದೆ ಎಂದು ಹೇಳಿದರೆ ಪ್ರಪಂಚವು ಇಲ್ಲವೆಂದು ಹೇಳಲಾಗುವುದಿಲ್ಲವೆಂದರ್ಥ.

ಅನ್ಯಭಾವಕ್ಷಯೋ ನ ಸ್ಯಾದ್ಭಾವರೂಪಸ್ವರಕ್ಷಣೇ ।
ಸರ್ವಸ್ಯಾಸಮ್ಮತಂ ಜೀವಾಭಾವಂ ವಚ್ಮಿ ಕಥಂ ತ್ವಿತಿ ॥ ४೨ ॥

ಶಂಕಾ ಚೇಜ್ಜಗದೇತಚ್ಚ ಜಡಂ ನಾಸ್ತೀತಿ ವಕ್ತಿ ಕಃ ।
ಜೀವಾಭಾವಂ ಚ ಚಾರ್ವಾಕಗುರುರ್ನೋವಾಚ ಕಿಂ ಗುರುಃ॥४೩॥

ಶ್ರುತಿಯು ಭಾವರೂಪವಾದ ತನ್ನನ್ನು ರಕ್ಷಿಸಿದಲ್ಲಿ ಭಾವರೂಪವಾದ ಇನ್ನೊಂದರ ನಾಶವು ಆಗುವುದಿಲ್ಲ. ಸರ್ವರಿಗೂ ಅಸಮ್ಮತವಾದ ಜೀವನ ಅಭಾವವನ್ನು ಹೇಗೆ ಹೇಳಲಿ ಎಂದು ನಿನಗೆ ಶಂಕಾ ಬಂದರೆ ಈ ಜಡವಾದ ಜಗತ್ತನ್ನು ಇಲ್ಲವೆಂದು ಯಾರು ಹೇಳುವರು? (ಜಗತ್ತನ್ನು ಇದೆಯೆಂದೇ ಎಲ್ಲರೂ ತಿಳಿದಿದ್ದಾರಷ್ಟೆ.) ಜೀವನ ಅಭಾವವನ್ನೂ ಕೂಡ ಚಾರ್ವಾಕ ಗುರುವಾದ ಬೃಹಸ್ಪತಿಯು ಹೇಳಿಲ್ಲವೇನು? ಆದ್ದರಿಂದ ಜೀವಾಭಾವವನ್ನು ಯಾರೂ ಹೇಳಲಿಲ್ಲವೆಂದು ಹೇಗೆ ಹೇಳುವಿ?

ಜಡಸ್ಯ ಜಗತಃ ಸೋಽಪಿ ಹ್ಯಸ್ತಿತ್ವಮನುಮನ್ಯತೇ ।
ಲೋಕಯಾತ್ರಾಽಪಿ ಸಕಲಾ ಭವೇಚ್ಚಾರ್ವಾಕವತ್ತ್ವ ॥ ४४ ॥

ಚಾರ್ವಾಕನೂ ಕೂಡ ಜಗತ್ತಿನ ಇರುವಿಕೆಯನ್ನು ಒಪ್ಪುತ್ತಾನೆ. ಹಾಗೆ ಜಗತ್ತನ್ನು ಇದೆಯೆಂದು ನೀನೂ ಒಪ್ಪಿದಲ್ಲಿ ಚಾರ್ವಾಕನಂತೆ ಲೋಕ ಯಾತ್ರೆಯು ನಿನಗೂ ಆದೀತು.

ಅತೋ ಜಗನ್ಮೃಷಾತ್ವಾಶಾ ಸೇಯಂ ದೇಶಾನ್ತರಂ ಗತಾ ।
ತಮಃ ಪ್ರವೇಶಸಮಯೇ ಗೃಹಾಣಾಸ್ಯಾಃ ಕರಾಂಬುಜಂ ॥ ೪೫ ॥

ಯತೋ ಭೋಜ್ಯಂ ಚ ಪೇಯಂ ಚ ಭಕ್ಷ್ಯಂ ಲೇಹ್ಯಂ ಚ ತತ್ರ ನ ।
ಯದಸ್ತಿ ತಚ್ಚ ತೇ ಚಕ್ಷುರ್ನ ಪಶ್ಯತಿ ಕದಾಚನ ॥ ೪೬ ॥

ಅತಸ್ತತ್ರಾಖಿಲಂ ವಸ್ತು ನಾಸ್ತೀತ್ಯನುದಿನಂ ಜಪ ।

ಆದ್ದರಿಂದ ಜಗತ್ತು ಮಿಥ್ಯಾ ಎಂಬ ಆಶೆಯು ದೇಶಾಂತರಕ್ಕೆ ಹೋಯಿತು. ಜಗತ್ತು ಮಿಥ್ಯಾ ಎಂದು ಹೇಳುವುದರ ಫಲವಾದ ತಮಸ್ಸನ್ನು ಪ್ರವೇಶಮಾಡುವ ಸಮಯದಲ್ಲಿ ' ಜಗನ್ಮೃಷಾತ್ವಾಶಾ ' ಎಂಬ ಸ್ತ್ರೀಯ ಕರ ಕಮಲವನ್ನು ಹಿಡಿ. ಏಕೆಂದರೆ, ಭೋಜ್ಯವೇ ಆಗಲೀ ಪಾನೀಯವೇ ಆಗಲೀ ಭಕ್ಷ್ಯವೇ ಆಗಲೀ ಲೇಹ್ಯವೇ ಆಗಲೀ ಅಲ್ಲಿ ಇಲ್ಲ. ಯಾವುದು ಇದೆಯೋ ಅದು ನಿನ್ನ ಕಣ್ಣಿಗೆ ತಮಸ್ಸಿನಲ್ಲಿ ಸರ್ವಥಾ ಕಾಣುವುದಿಲ್ಲ. ಅಲ್ಲಿ ಯಾವ ವಸ್ತುವೂ ಇಲ್ಲವೆಂದು ಪ್ರತಿದಿನವೂ ಜಪಿಸತಕ್ಕವನಾಗು. ಇದರ ಅಭಿಪ್ರಾಯ. ಜಗತ್ತು ಮಿಥ್ಯಾ ಎಂದು ಹೇಳುವವರಿಗೆ ತಮಸ್ಸು ಫಲ. ಆ ತಮಸ್ಸಿನಲ್ಲಿ ಹಸಿವು ಬಾಯಾರಿಕೆ ಮೊದಲಾದದ್ದು ಆದರೂ ಭೋಜ್ಯಪೇಯಾದಿಗಳಿಲ್ಲ. ಆಶಾ ಇದೆ. ಆಶಾಕ್ಕೆ ವಿಷಯವಾದದ್ದು ಇಲ್ಲ. ಸಂಸಾರದಲ್ಲಿ ನಿನಗೆ ಪ್ರಪಂಚದ ಮೃಷಾತ್ವದಲ್ಲಿ ಆಶಾ ಇದೆ. ತಮಸ್ಸಿನಲ್ಲಿ ಭೋಜ್ಯ, ಪೇಯ ವಸ್ತುಗಳ ಆಶಾ ಇದ್ದು ಹೇಗೆ ಭೋಜ್ಯಪೇಯಾದಿಗಳಿಲ್ಲವೋ ಹಾಗೆಯೇ ಸಂಸಾರಾವಸ್ಥೆಯಲ್ಲಿ ಪ್ರಪಂಚದ ಮೃಷಾತ್ವದಲ್ಲಿ ಆಶೆ ಇದ್ದರೂ ಪ್ರಪಂಚದ ಮೃಷಾತ್ವವಿಲ್ಲ.

ಈ ಒಂದನೇ ಭಾಗದಲ್ಲಿ ಇದುವರೆವಿಗೂ ' ಇಹ ' ಎಂದರೆ ಬ್ರಹ್ಮನೆಂದು ಅರ್ಥ.

ಎರಡನೆಯ ಭಾಗ

ಕಿಂ ಚೇಹೇತಿ ಪದಂ ತೇ ತದ್ಯದಿ ಬ್ರಹ್ಮಪರಂ ಭವೇತ್ ॥ ೪೭ ॥

ತದಾ ಘಟೇತ ತ್ವದ್ಭ್ರಾಂತಿಬೀಜಾದಂಕುರಕಲ್ಪನಾ ।
ಇಹೇತಿ ಪದಮೇತತ್ತು ಪ್ರಾಯೋ ಲೋಕಸ್ಯ ವಾಚಕಮ್ ॥ ೪೮ ॥

ಅಲ್ಲದೇ 'ನೇಹ ನಾನಾಸ್ತಿ ಕಿಂಚನ' ಎಂಬಲ್ಲಿ ಇಹ ಎಂಬ ಈ ಪದವು ಬ್ರಹ್ಮಪರವಾದಲ್ಲಿ, ಆಗ ನಿನ್ನ ಭ್ರಾಂತಿಯೆಂಬ ಬೀಜದಿಂದ ಮೊಳಕೆಯನ್ನು ಕಲ್ಪಿಸುವುದು ಘಟಿಸುತ್ತಿತ್ತು. ಅಂದರೆ

ಇಹ=ಬ್ರಹ್ಮನಲ್ಲಿ ಕಿಂಚನ=ಸ್ವಲ್ಪವಾದ ನಾನಾ=ಭಿನ್ನವಾದ

ಜಗತ್ತು, ನಾಸ್ತಿ=ಇಲ್ಲ. ಅಂತೂ ಬ್ರಹ್ಮನಲ್ಲಿ ಜಗತ್ತು ಇಲ್ಲವೆಂದು ಅರ್ಥಮಾಡಿದಿಯಷ್ಟೇ. ಆದರೆ ಇದು 'ಇಹ' ಎಂಬುದಕ್ಕೆ ಬ್ರಹ್ಮ ಎಂದು ಅರ್ಥಮಾಡಿದರೆ ತಾನೇ ಆದೀತು. 'ಇಹ' ಎಂಬ ಈ ಪದವು ಪ್ರಾಯಃ ಲೋಕವನ್ನು ಹೇಳುತ್ತೆ.

ಲೋಕೇಽಸ್ಮಿನ್ನಾಸ್ತಿ ಕಿಮಪಿ ನಾನಾಭೂತಮಿತಿ ಶ್ರುತೇಃ ।
ಅರ್ಥೇ ಸತಿ ಭವೇದ್ಬ್ರಹ್ಮಾಭಾವೋಽಪಿ ಭವತೋ ಮತೇ ॥ ೪೯ ॥

ಆಗ ಈ ಲೋಕದಲ್ಲಿ ಅನೇಕವಾದದ್ದು ಯಾವುದೂ ಇಲ್ಲವೆಂದೂ ಶ್ರುತಿಗೆ ಅರ್ಥವಾಗುತ್ತದೆ. ಆಗ ಬ್ರಹ್ಮಾಭಾವವೂ ಕೂಡ ನಿನ್ನ ಮತದಲ್ಲಿ ಆದೀತು.

ಇಹೇತಿ ತು ಪದಂ ಲೋಕ ಇತ್ಯೇವಾರ್ಥಂ ವದೇತ್ಕಿಲ ।
ಇಹಾಮುತ್ರೇತಿ ವದತಾ ಕಿಮಿಹೇತಿ ಪದೋದಿತಮ್ ॥ ೫೦ ॥

ಇಹ (ಇಲ್ಲಿ) ಎಂಬ ಪದವು ಲೋಕದಲ್ಲಿ ಎಂಬುದಾಗಿಯೇ ಅರ್ಥವನ್ನು ಹೇಳುತ್ತದಷ್ಟೆ. "ಇಹಾಮುತ್ರ"=ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಎಂದು ಹೇಳುವಾಗ 'ಇಹ' ಪದಕ್ಕೆ ಅರ್ಥವೇನು? ಈ ಲೋಕದಲ್ಲಿ ಎಂದಷ್ಟೆ.

"ಇಹ ಕ್ಲೇಶಾಯ ಮಹತೇ ಪ್ರೇತ್ಯಾನನ್ತಸುಖಾಯ ಚ ।"
ಇತಿ ಭಾರತವಾಕ್ಯೇ ಚ ಕಿಮಿಹೇತಿ ಪದೋದಿತಮ್ ॥ ೫೧ ॥

"ಇಹ ಕ್ಲೇಶಾಯ" ಎಂಬ ಈ ಭಾರತವಾಕ್ಯದಲ್ಲಿ 'ಇಹ' ಎಂಬ ಪದದಿಂದ ಹೇಳಲ್ಪಟ್ಟದ್ದು ಯಾವುದು? ಈ ಲೋಕದಲ್ಲಿಯೆಂದು ಅರ್ಥವಷ್ಟೇ. ಇಹ=ಇಲ್ಲಿ.

ಭಾರತಶ್ಲೋಕದ ಅರ್ಥ: ಬ್ರಾಹ್ಮಣ ಜನ್ಮವು ಈ ಲೋಕದಲ್ಲಿ ಬಹಳ ಕ್ಲೇಶಕ್ಕೂ ಮರಣಾನಂತರದಲ್ಲಿ ಅನಂತ ಸುಖಕ್ಕೂ ಆಗುತ್ತದೆ ಎಂದರ್ಥ.

ಇಹ ಪಕ್ಷೀ ನೇಹ ಪಕ್ಷೀತ್ಯತ್ರ ಕಿಂ ವಕ್ತಿ ತತ್ಪದವ್ ।
ತಸ್ಮಾಜ್ಜಗದ್ವಾಚಿತಾಽಸ್ಯ ಪದಸ್ಯಾಖಿಲಸಮ್ಮತಾ ॥ ೫೨ ॥

ಆಮುಷ್ಮಿಕಂ ಬ್ರಹ್ಮ ಕಥಮಿಹ ಶಬ್ದೇನ ಭಣ್ಯತಾಮ್ ।

ಇಲ್ಲಿ ಪಕ್ಷೀ ಇದೆ, ಇಲ್ಲಿ ಪಕ್ಷೀ ಇಲ್ಲ ಎಂಬಲ್ಲಿ 'ಇಹ' ಎಂಬ ಪದವು ಏನು ಹೇಳುತ್ತದೆ? ಆದ್ದರಿಂದ 'ಇಹ' ಎಂಬ ಪದಕ್ಕೆ ಜಗತ್ತು ಎಂಬ ಅರ್ಥವು ಸರ್ವಸಮ್ಮತವಾದದ್ದು. ಆಮುಷ್ಮಿಕಂ=ಪರಲೋಕಕ್ಕೆ ಸಂಬಂಧಪಟ್ಟ ಪರೋಕ್ಷನಾದ ಬ್ರಹ್ಮನನ್ನು 'ಇಹ' ಎಂಬ ಶಬ್ದದಿಂದ ಹೇಳುವುದಕ್ಕೆ ಹೇಗೆ ಆಗುತ್ತದೆ?

ಪ್ರಾಕ್ ಪ್ರಸ್ತುತಂ ಚ ಯದ್ವಸ್ತು ತಚ್ಚೇಹೇತ್ಯುಚ್ಯತೇ ಕ್ವಚಿತ್ ॥
ಸಾಮಾನ್ಯತಸ್ತ್ವಿಹಪದಂ ಜಗದ್ವಾಚಿ ನ ಸಂಶಯಃ ।

ಹಿಂದೆ ಪ್ರಸ್ತುತವಾದ ವಸ್ತು ಯಾವುದೋ ಅದು ಕೂಡ ಕೆಲವು ವೇಳೆಯಲ್ಲಿ 'ಇಹ' ಎಂದು ಹೇಳಲ್ಪಡುತ್ತೆ. ಆದರೆ ಹಿಂದೆ ಯಾವುದೂ ಪ್ರಸಕ್ತವಾಗದೇ ಸಾಮಾನ್ಯವಾಗಿ 'ಇಹ' ಎಂದು ಹೇಳಿದಾಗ ಅದು ಜಗದ್ವಾಚಕವೆಂಬುವುದರಲ್ಲಿ ಸಂಶಯವಿಲ್ಲ.

ಶಿಖಯಾ ಸಹ ಭಿಕ್ಷೂಣಾಂ ಶಿರಸೋ ಮುಣ್ಡನೇ ಸತಿ ॥ ೫೪ ॥

ಕರ್ತುಃ ಕಾರಯಿತುಶ್ಚಾಪಿ ಯಥಾ ಸ್ಯಾದತಿಲಾಘವಮ್ ।
ತಥಾ ಸರ್ವಸ್ಯ ಜಗತೋ ಬ್ರಹ್ಮಣಾ ಸಹ ಮುಣ್ಡನೇ ॥ ೫೫ ॥

ಸರ್ವನಾಸ್ತಿತ್ವ ವಕ್ತುಸ್ತೇ ಕಿಂ ನ ಸ್ಯಾದತಿಲಾಘವಮ್ ।

('ಇಹ' ಎಂದರೆ ಜಗತ್ತು ಎಂದಲ್ಲಿ ಜಗತ್ತು ಇಲ್ಲವೆಂದು ಮಟ್ಟಿಗೆ ಶ್ರುತ್ಯರ್ಥವಾಗಲಿ ಬ್ರಹ್ಮನನ್ನು ಏಕೆ ಸೇರಿಸಿದಿರಿ ಎಂದು ಕೇಳುವಿಯೇನು?) ಇದಕ್ಕೆ ಉತ್ತರ: ಸನ್ಯಾಸಿಗಳಿಗೆ ಶಿಖಾಸಹಿತವಾಗಿ ಶಿರಸ್ಸನ್ನು ಮುಂಡನ ಮಾಡಿದರೆ ಮಾಡಿಸಿಕೊಳ್ಳುವವನಿಗೂ ಮಾಡುವವನಿಗೂ ಅತ್ಯಂತ ಲಾಘವ ಹೇಗೋ ಹಾಗೆ ಬ್ರಹ್ಮಸಹಿತವಾಗಿ ಸರ್ವಜಗತ್ತಿನ ಮುಂಡನವನ್ನು ಮಾಡಿದರೆ ಅಂದರೆ ಇಲ್ಲವೆಂದು ಹೇಳಿದರೆ, ಸರ್ವವೂ ಇಲ್ಲವೆಂದು ಹೇಳುವ ನಿನಗೆ, ಅತಿಶಯವಾದ ಲಾಘವವು ಏಕೆ ಆಗುವುದಿಲ್ಲ? ಬ್ರಹ್ಮವಸ್ತುವಿದೆ, ಜಗತ್ತಿಲ್ಲ ಹೀಗೆಂಬುದು ಬಿಟ್ಟು, ಎರಡೂ ಇಲ್ಲ ಎಂಬುದು ಪರಮ ಲಾಘವ. ಲಘು ಮಾರ್ಗವನ್ನವಲಂಬಿಸುವುದು ನಿನಗೆ ಗುಣವಷ್ಟೆ? ಹೀಗೆ ಅಭಿಪ್ರಾಯ.

ಅಸ್ತಿತ್ವಮಾತ್ರಸಿದ್ಧ್ಯರ್ಥಮಧಿಷ್ಠಾನಮಪೇಕ್ಷ್ಯತೇ ॥ ೫೬ ॥

ಪ್ರಮೈವ ನಾಸ್ತಿತಾಧೀಸ್ತೇ ಯಯಾ ಬಾಧ್ಯಂ ಜಗದ್ವದೇಃ ।
ತತ್ರಾಧಿಷ್ಠಾನಶೇಷೋಽಪಿ ವ್ಯರ್ಥೈವೇತಿ ಮತಿರ್ಮಮ ॥ ೫೭ ॥

ಜಗದಸ್ತಿ (ಜಗತ್ತು ಇದೆ) ಎಂಬ ಜ್ಞಾನದಲ್ಲಿ ಅಸ್ತಿತ್ವವು ಸತ್ಯ. ಜಗತ್ತು ಭ್ರಾಂತಿ ಕಲ್ಪಿತ. ಹೀಗೆ ಮಾಯಾವಾದಿಗಳ ಅಭಿಪ್ರಾಯ. ಈ ಜಗತ್ತಿನ ಭ್ರಾಂತಿಗೆ ಅಧಿಷ್ಠಾನ ಒಂದಿದ್ದರೆ ಅಸ್ತಿತ್ವವು ಉಳಿಯುತ್ತದೆ. ಅದು ಹೇಗೆಂದರೆ, ಸರ್ಪಭ್ರಾಂತಿಯಲ್ಲಿ ಸರ್ಪವು ಇದೆ ಎಂಬ ಜ್ಞಾನವು ಬರುತ್ತದೆ. ನಿಜವಾಗಿರುವುದು ಯಾವುದೆಂದರೆ ಹಗ್ಗ. ಸರ್ಪವು ಮಿಥ್ಯಾ. ಅಂತೂ ಅಸ್ತಿತ್ವವು ಉಳಿಯಬೇಕಾದರೆ ಸರ್ಪಭ್ರಾಂತಿಗೆ ಅಧಿಷ್ಠಾನವಾದ ಹಗ್ಗ ಇರಬೇಕು. ಹಾಗೆಯೇ ಜಗದಸ್ತಿ ಎಂಬ ಜ್ಞಾನ ಬಂದಾಗ ಅಸ್ತಿತ್ವವು ಉಳಿಯಬೇಕಾದರೆ ಜಗತ್ತಿಗೆ ಅಧಿಷ್ಠಾನವಾದ ಬ್ರಹ್ಮವಸ್ತುವು ಇರಬೇಕು. ಅಂದರೆ 'ಅಸ್ತಿ' ಇದೆ ಎಂಬ ಜ್ಞಾನಕ್ಕೆ ವಿಷಯವಾದದ್ದು ಒಂದು ಇರಬೇಕು. ಅದೇ ಬ್ರಹ್ಮವಸ್ತು ಎಂದು ಮಾಯಾವಾದಿಗಳ* ಅಭಿಪ್ರಾಯ.

---

* ಶಂಕರಭಾಷ್ಯ—ಗೀತಾ (೨–೧೬) "ನಾಸತೋ ವಿದ್ಯತೇ ಭಾವೋ....ವ್ಯಾಖ್ಯಾನ.

ಹೀಗೆನ್ನುವಿಯೇನು? ಅದು ಸರಿಯಲ್ಲ. ಏಕೆಂದರೆ, ಯಾವ ಜ್ಞಾನದಿಂದ ಜಗತ್ತು ಬಾಧ್ಯವಾಗುತ್ತದೆ ಎಂದು ನೀನು ಹೇಳುವಿಯೋ ಆ ಯಥಾರ್ಥ ಜ್ಞಾನವು 'ಅಸ್ತಿ' ಎಂಬ ಜ್ಞಾನವಲ್ಲ. 'ಇದೆ' ಎಂಬ ಜ್ಞಾನವು ಇದ್ದರಷ್ಟೆ ಜಗದ್ಭ್ರಾಂತಿಗೆ ಅಧಿಷ್ಠಾನವನ್ನು ಹುಡುಕಬೇಕಾದದ್ದು. ಅದೇ ಇಲ್ಲದಿರುವಾಗ ಅಸ್ತಿತ್ವವನ್ನು ಉಳಿಸುವುದಕ್ಕಾಗಿ 'ಬ್ರಹ್ಮನು ಇದಾನೆ' ಎಂದು ಹೇಳುವುದು ವೃಥಾ ಎಂದು ನನ್ನ ಅಭಿಪ್ರಾಯ.

ತತಃ ಕಿಂಚನ ನೇತ್ಯುಕ್ತಿರ್ಜಗದ್ಬ್ರಹ್ಮ ಚ ಬಾಧತಾಮ್ ।
ಪೋಷಯೇದ್ವಾ ದೂಷಯೇದ್ವಾ ಯತ್ಸರ್ವಂ ಸರ್ವವಾಚಕಂ ॥

ಕಿಂಚನೇತಿ ಪದಂ ಮುಂದ ಕಥಂ ಕಂಚನ ಶೇಷಯೇತ್ ।

ಆದ್ದರಿಂದ 'ಕಿಂಚನನ' ಸ್ವಲ್ಪವೂ ಇಲ್ಲ, ಈ ಮಾತು ಜಗತ್ತನ್ನೂ ಬ್ರಹ್ಮನನ್ನೂ ಬಾಧಿಸಲೇನು. ಅಂದರೆ, ಎರಡೂ ಇಲ್ಲವೆಂದು ತಿಳಿಸಲೇನು. ಏಕೆಂದರೆ ಸರ್ವವನ್ನೂ ಹೇಳುವ 'ಕಿಂಚನ' ಎಂಬ ಪದವು ಸರ್ವವನ್ನೂ ಪೋಷಿಸುತ್ತದೆ ಅಥವಾ ಸರ್ವವನ್ನೂ ದೂರ ಮಾಡುತ್ತದೆ. ಆದುದರಿಂದ ಎಲೈ ಮಂದನೇ! ಆ ಪದವು ಹೇಗೆ ತಾನೇ ಯಾವುದನ್ನಾದರೂ ಉಳಿಸೀತು.

ಯದಿ ಶ್ರೌತನಿಷೇಧೋಽಯಮಿಹೇತಿ ಪದಬೋಧಿತಮ್ ॥ ೫೯ ॥
ಸ್ವಾಧಾರಭೂತಂ ತು ಜಗನ್ನ ಬಾಧೇತೇತಿ ಶಂಕಸೇ ।
ತರ್ಹಿ ಸತ್ಯಂ ಜಗದಿದಂ ಜೀವತು ಬ್ರಹ್ಮ ನಶ್ಯತು ॥ ೬೦ ॥

ಇದರ ಅಭಿಪ್ರಾಯ :— ಸರ್ಪ ಭ್ರಾಂತಿಯಲ್ಲಿ "ಇಲ್ಲಿ ಸರ್ಪ" ಎಂದು ತಿಳಿದವನಿಗೆ ಆಪ್ತನು ಇಲ್ಲಿ ಸರ್ಪ ಇಲ್ಲವೆಂದು ಉಪದೇಶಿಸಿದಾಗ ಕಾಣುವ ಸರ್ಪವು ಇಲ್ಲವೆಂದು ತಿಳುವಳಿಕೆ ಬರುತ್ತದೆಯೇ ಹೊರ್ತು 'ಇಲ್ಲಿ' ಎಂಬ ಪದದಿಂದ ಬೋಧ್ಯವಾದ, ಸರ್ಪಕ್ಕೆ ಆಧಾರವಾದ ಎದುರಿಗಿರುವ ವಸ್ತು ಇಲ್ಲವೆಂದು ತಿಳಿದುಬರುವುದಿಲ್ಲ. ಈಗ "ನೇಹ ನಾನಾಸ್ತಿ ಕಿಂಚನ" ಎಂಬ ಶ್ರುತಿಯಲ್ಲಿ ಕಿಂಚನ ಪದದಿಂದ ಬೋಧ್ಯವಾದ ವಸ್ತುವು ನಿಷೇಧಿಸಲ್ಪಟ್ಟಿದೆ ಅಂದರೆ ಇಲ್ಲವೆಂದು ಹೇಳಲ್ಪಟ್ಟಿದೆ. ಆದರೆ, ಆಧಾರಭೂತವಾದ 'ಇಹ' ಶಬ್ದದಿಂದ ಬೋಧ್ಯವಾದದ್ದು ನಿಷೇಧಿಸಲ್ಪಟ್ಟಿಲ್ಲ. 'ಕಿಂಚನ' ಅಂದರೆ

ಬ್ರಹ್ಮನನ್ನು ಸೇರಿಸಿಕೊಂಡು ಸರ್ವ ಜಗತ್ತೂ ಪ್ರಸಕ್ತವಾಗಿದೆ—ಅಂದಲ್ಲಿ, ಆಧಾರಭೂತವಾದದ್ದೂ ಇಲ್ಲವೆಂದು ಹೇಳಬೇಕಾದೀತು. ಆಧಾರವನ್ನು ಉಳಿಸುವುದಕ್ಕಾಗಿ ಜಗತ್ತಿನ ಕೆಲವು ಭಾಗ ಉಳಿಯಲಿ ಎಂದು ನೀನು ಶಂಕಿಸಿದರೆ, 'ಇಹ' ಪದಕ್ಕೆ ಎದುರಿಗಿರುವ ಜಗತ್ತು ಎಂದು ಅರ್ಥ ಮಾಡುವುದು ಯೋಗ್ಯವಾದ್ದರಿಂದ ಅದು ಉಳಿಯಲಿ. ಬ್ರಹ್ಮನು ಇಲ್ಲದೇ ಹೋಗಲಿ ಏಕೆಂದರೆ :

ನಿರೀಶ್ವರಾಶ್ಚ ಯೇ ಸಂತಿ ಸಾಂಖ್ಯಾ ಮೀಮಾಂಸಕಾದಯಃ ।
ತತ್ಸಿದ್ಧಾಂತಾನುಸಾರೇಣ ಶ್ರುತಿರೇಷಾ ಪ್ರವರ್ತತಾಮ್ ॥ ೬೧ ॥

ಆಗ ಈಶ್ವರನಿಲ್ಲವೆಂದು ಹೇಳುವ ಸಾಂಖ್ಯರು ಮೀಮಾಂಸಕರು ಯಾರು ಇದಾರೆಯೋ ಅವರ ಸಿದ್ಧಾಂತಕ್ಕೆ ಅನುಸಾರವಾಗಿ ಈ ಶ್ರುತಿಯು ಅರ್ಥವನ್ನು ಕೊಡುವುದರಲ್ಲಿ ಪ್ರವರ್ತಿಸಲಿ.

ನ ಕಿಂಚನೇತಿ ವಾಕ್ಯಸ್ಥ ನಞಶ್ಚೋದರಪೂರಣಮ್ ।
ಅನನ್ತಜೀವಸಂಘಾತಸಹಿತಬ್ರಹ್ಮಣಾ ಭವೇತ್ ॥ ೬೨ ॥

'ನ ಕಿಂಚನ' ಎಂಬೀ ವಾಕ್ಯದಲ್ಲಿರುವ ನಿಷೇಧವಾಚಕವಾದ 'ನಞ'ದ ಉದರವನ್ನು ಪೂರ್ಣಮಾಡುವುದಕ್ಕೆ ಅನಂತ ಜೀವಸಂಘದಿಂದ ಸಹಿತವಾದ ಬ್ರಹ್ಮನಿಂದ ಆದೀತು. ಇದರ ಅಭಿಪ್ರಾಯ:— ಇಲ್ಲಿ ಯಾವುದೂ ಇಲ್ಲ ವೆಂದಾಗ, ನ ಕಿಂಚನ ಎಂಬ ವಾಕ್ಯವು ಸಾರ್ಥಕವಾಗಬೇಕಾದರೆ ಯಾವುದೋ ಸ್ವಲ್ಪವಾದದ್ದು ಇಲ್ಲವೆಂದು ಹೇಳಲಾಗದು. ಅನಂತ ಜೀವರ ಸಹಿತವಾದ ಬ್ರಹ್ಮನು ಇಲ್ಲವೆಂದರೆ ಸಾರ್ಥಕವಾಗುತ್ತದೆ ಎಂದು.

(ಇದು ಎಲ್ಲವೂ ಅನಿಷ್ಟಾಪಾದನ)

ಪ್ರಕೃತ್ಯೈವ ತು ಸೃಷ್ಟಿಃ ಸ್ಯಾತ್ಸರ್ವಾ ಸಾಂಖ್ಯಮತೇ ಯಥಾ ।
ತ್ವಂ ಚ ಲಕ್ಷಣತಾಟಸ್ಥ್ಯವಾದೀ ಮಾಯಾಮಯಂ ಜಗತ್ ॥ ೬೩ ॥
ಬ್ರೂಷೇ ಮಾಯಾಂ ತು ಯಾಂ ಸಾಂಖ್ಯಃ ಪ್ರಕೃತಿಂ ಪ್ರಾಹ ಕಾಪಿಲಃ

ಸಾಂಖ್ಯಮತದ ಪ್ರಕಾರ ಪ್ರಕೃತಿಯಿಂದಲೇ ಸರ್ವಸೃಷ್ಟಿಯು ಆದೀತು. ಹಾಗೆಯೇ ಜಗಜ್ಜನ್ಮಾದಿ ಲಕ್ಷಣವು ತಟಸ್ಥಲಕ್ಷಣವೆಂದು ಹೇಳುವ ನೀನೂ

ಕೂಡ ಜಗತ್ತು ಮಾಯಾಮಯವೆಂದು, ಅಂದರೆ ಮಾಯಾಪರಿಣಾಮರೂಪ ವಾದದ್ದೆಂದು, ಹೇಳುತ್ತಿ. ಮಾಯೆಯಾದರೋ ಯಾವುದು ಸಾಂಖ್ಯರು ಪ್ರಕೃತಿ ಎಂದು ಹೇಳುವರೋ ಅದೇ ಆಗಿದೆ.

ಯದ್ಯೇವಮಪಿ ಜೀವಶ್ಚ ಬ್ರಹ್ಮ ಚಾಪೇಕ್ಷಿತೇ ತವ ॥ ೬೪ ॥

ಶ್ರುತಿಂ ಮತಿಮುಪಾಸ್ತಿಂ ಚ ರಕ್ಷ ಜೀವವಿಮೋಕ್ಷದಾಮ್ ।
ತದರ್ಥಂ ಪುಸ್ತಕಂ ರಕ್ಷ ರಕ್ಷ ಭಕ್ಷ್ಯಾದಿಕಂ ವಸು ॥ ೬೫ ॥

ಗೃಹಂ ರಕ್ಷ ಮಠಂ ರಕ್ಷ ಕಃ ಪುಮಾನಶನೋಜ್ಝಿತಃ ।
ಶೃಣುಯಾನ್ಮನನಂ ಕುರ್ಯಾದ್ಧ್ಯಾಯೇದ್ವಾ ಬ್ರಹ್ಮ ನಿರ್ಗುಣಮ್ ॥ ೬೬ ॥

ಹೀಗಿದ್ದರೂ ಜೀವನನ್ನೂ ಬ್ರಹ್ಮನನ್ನೂ ಉಳಿಸುವುದರಲ್ಲಿ ನಿನಗೆ ಅಪೇಕ್ಷೆಯಿದ್ದಲ್ಲಿ, ಜೀವನಿಗೆ ಮೋಕ್ಷವನ್ನು ಕೊಡುವ ಶ್ರುತಿಯನ್ನೂ, ಜ್ಞಾನ ವನ್ನೂ, ಉಪಾಸನೆಯನ್ನೂ ರಕ್ಷಿಸು ಅಂದರೆ ಶ್ರವಣ ಮನನ ಉಪಾಸನೆ ಯನ್ನೂ ರಕ್ಷಿಸು. ಅದಕ್ಕಾಗಿ ಪುಸ್ತಕವನ್ನು ರಕ್ಷಿಸು. ಭೋಜನದ್ರವ್ಯಾದಿ ಗಳನ್ನು ರಕ್ಷಿಸು. ಮಠವನ್ನು ರಕ್ಷಿಸು. ಏಕೆ ಇವುಗಳನ್ನು ರಕ್ಷಿಸಬೇಕೆನ್ನು ವಿಯೋ? ಊಟವಿಲ್ಲದವನು ಯಾವನು ತಾನೇ ನಿರ್ಗುಣಬ್ರಹ್ಮನನ್ನು ಕೇಳಿಯಾನು, ಮನನ ಮಾಡಿಯಾನು, ಧ್ಯಾನವಾದರೂ ಮಾಡಿಯಾನು?

ಶ್ರವಣಘ್ರಾಣರಸನನಯನಾಂಘ್ರಿಕರಾದಿಕಾನ್ ।
ಜೀವಸ್ಯಾದನಯೋಗ್ಯಾಂಶ್ಚ ಪದಾರ್ಥಾನ್ ಕಿಂ ನ ರಕ್ಷಸಿ ॥ ೬೭ ॥

ಜೀವನನ್ನು ರಕ್ಷಿಸಿದರೆ ಅವನ ಶ್ರವಣೇಂದ್ರಿಯ ಘ್ರಾಣೇಂದ್ರಿಯ ರಸನೇಂದ್ರಿಯ ಕಣ್ಣು ಕಾಲು ಕೈ ಇವು ಮೊದಲಾಗಿ ಜ್ಞಾನಕರ್ಮೇಂದ್ರಿಯ ಗಳನ್ನೂ ಮತ್ತು ಜೀವನಭೋಗಕ್ಕೆ ಯೋಗ್ಯವಾದ ಪದಾರ್ಥಗಳನ್ನೂ ಏಕೆ ನೀನು ರಕ್ಷಿಸುವುದಿಲ್ಲ? ರಕ್ಷಿಸಲೇಬೇಕು.

ಜೀವೇ ಪರಂ ಪ್ರವಿಶತಿ ಯದ್ವಿಶೇಯುರಿಮೇಽನುಗಾಃ ।
ಸರ್ವಮಿಥ್ಯಾತ್ವವಾದಸ್ತತ್ಸರ್ವಥಾ ತೇ ನ ಶೋಭತೇ ॥ ೬೮ ॥

ಇವನ್ನೆಲ್ಲಾ ಏಕೆ ಉಳಿಸಬೇಕು? ಎನ್ನಲಾಗದು. ಕೇವಲ ಜೀವನು ಉಳಿಯೋಣವೆಂಬ ಮನೆಯನ್ನು ಪ್ರವೇಶಿಸುತ್ತಿರಲು ಆಗ ಹಿಂದೆ ಹೇಳಿದ

ಅವನ ಎಲ್ಲಾ ಪರಿವಾರವೂ ಪ್ರವೇಶಿಸುತ್ತದೆ. ಆದ್ದರಿಂದ ಎಲ್ಲವೂ ಮಿಥ್ಯಾ ಎಂಬ ವಾದವು ನಿನಗೆ ಶೋಭಿಸುವುದಿಲ್ಲ.

ನಾನಾ ವಿನಾ ಕಿಂಚನೇಹ ನಾಸ್ತೀತ್ಯಾಹ ಯತಃ ಶ್ರುತಿಃ ।
ಅಸಹಾಯಾರ್ಥವಾಚಿಭ್ಯಾಂ ವಿನಞ್ಭ್ಯಾಂ ಹಿ ಯತೋ ಬುಧಾಃ ॥ ೬೯ ॥

ನಾನಾಞೌ ಪ್ರತ್ಯಯೌ ಪ್ರಾಹುಃ ಸೂತ್ರಕಾರಾದಯೋ ಭುವಿ ।
ಕಿಂ ವಿನೇತಿ ಯದಾಽಽಕಾಂಕ್ಷಾ ತದೋಕ್ತಮಖಿಲಂ ವಸು ॥ ೭೦ ॥

ಸರ್ವಾಧಾರಂ ಚ ಯದ್ಬ್ರಹ್ಮ ವ್ಯಾಪ್ತಂ ಕಾಲಾದಿಕಂ ಚ ಯತ್ ।
ತದಿದಂ ಸಕಲಂ ವಸ್ತು ವಿನಾ ನಾಸ್ತೀಹ ಕಿಂಚನ ॥ ೭೧ ॥

ಇತ್ಯೇವ ಶ್ರುತಿವಾಕ್ಯಾರ್ಥೋ ಭವೇದ್ಧಿ ಪದಸಂಪದಾ ।
ಏವಂ ಚ ಸಕಲಂ ಸತ್ಯಮನಾಯಾಸೇನ ಸಿದ್ಧ್ಯತಿ ॥ ೭೨ ॥

ಶ್ರುತಿಯ ಅರ್ಥವು ಹೀಗೂ ಆಗುತ್ತೆ :—

ನಾನಾ=ವಿನಾ ಬಿಟ್ಟು (excluding) ಇಹ=ಇಲ್ಲಿ, ಕಿಂಚನ=ಯಾವುದೂ ನಾಸ್ತಿ=ಇಲ್ಲ. ಎಂಬುದಾಗಿ. ಅಂತೂ ಬಿಟ್ಟು, ಇಲ್ಲಿ ಯಾವುದೂ ಇಲ್ಲವೆಂದಂತಾಯಿತು. ಈಗ 'ನಾನಾ' ಎಂಬುದಕ್ಕೆ ವಿನಾ=ಬಿಟ್ಟು ಎಂದು ಅರ್ಥವನ್ನು ಹೇಳುವುದಕ್ಕೆ ಏನು ಸಾಧಕವೆಂದಲ್ಲಿ ಪಾಣಿನಿಯ ಸೂತ್ರವು ಎಂದು ಹೇಳುತ್ತಾರೆ. ಸೂತ್ರ ಇದು. ವಿನಞ್ ಭ್ಯಾಂ ನಾನಾಞೌ ನ ಸಹ (೫-೨-೨೭). ನಾ ಮತ್ತು ನಾಞ್ ಇವೆರಡು ಪ್ರತ್ಯಯಗಳೂ ವಿ ಮತ್ತು ನಞ್ ಪದಗಳ ಮುಂದೆ ಕ್ರಮವಾಗಿ ಬರುತ್ತವೆ. ಯಾವ ಅರ್ಥದಲ್ಲಿ ಎಂದರೆ, ಒಟ್ಟಾಗಿರುವುದಿಲ್ಲವೆಂಬ ಅರ್ಥದಲ್ಲಿ ಅಂತೂ, ನಾನಾ=ವಿನಾ=ಬಿಟ್ಟು ಎಂದರ್ಥ. ಈಗ ಯಾವುದನ್ನು ಬಿಟ್ಟು ಎಂದು ಆಕಾಂಕ್ಷಾ ಬಂದರೆ, ಹಿಂದೆ ಹೇಳಿದ ಗೃಹವೇ ಮೊದಲಾದ ಎಲ್ಲ ಸಂಪತ್ತು ಸರ್ವಾಧಾರನಾದ ಮತ್ತು ವ್ಯಾಪ್ತನಾದ ಬ್ರಹ್ಮ, ವ್ಯಾಪ್ತವಾದ ಕಾಲಾದಿಗಳು ಯಾವುವು ಉಂಟೋ ಆ ಸಕಲ ವಸ್ತುಗಳನ್ನೂ ಬಿಟ್ಟು ಇಲ್ಲಿ ಬೇರೆ ಯಾವುದೂ ಇಲ್ಲ. ಹೀಗೇನೆ ಪದ ಸಾಮರ್ಥ್ಯದಿಂದ ಶ್ರುತ್ಯರ್ಥವು ಆದೀತು. ಅಂತೂ ಸಕಲವೂ ಸತ್ಯವೆಂಬುದಾಗಿ ಸಿದ್ಧಿಸಿತು.

ದೇಹಂ ವಿನಾ ನ ಚೇಜ್ಜೀವೋ ಯಥಾ ದೇಹೋಽಪಿ ಸಿಧ್ಯತಿ ।
ವಹ್ನಿಂ ವಿನಾ ನಚೇದ್ಧೂಮೋ ಯಥಾ ವಹ್ನಿಶ್ಚ ಸಿಧ್ಯತಿ ॥ ೭೩ ॥

ಏವಂ ವಿನಾ ಯೇನ ಯನ್ನ ತತ್ತೇನ ಸಹ ಸಿಧ್ಯತಿ ।
ತಸ್ಮಾದ್ಬ್ರಹ್ಮಾವಿನಾಭಾವಂ ಜಗತೋ ವಕ್ತಿ ವಾಗಿಯಂ ॥ ೭೪ ॥

ದೇಹವನ್ನು ಬಿಟ್ಟು ಜೀವನು ಇಲ್ಲವೆಂದಲ್ಲಿ ಹೇಗೆ ದೇಹವೂ ಸಿದ್ಧಿಯಾಗುತ್ತದೆಯೋ, ಅಗ್ನಿಯನ್ನು ಬಿಟ್ಟು ಧೂಮವಿಲ್ಲವೆಂದಲ್ಲಿ ಹೇಗೆ ಅಗ್ನಿಯೂ ಸಿದ್ಧಿಸುತ್ತದೆಯೋ, ಹಾಗೆಯೇ ಯಾವುದನ್ನು ಬಿಟ್ಟು ಯಾವುದು ಇಲ್ಲವೋ ಅದು ಅದರ ಸಹಿತವಾಗಿ ಸಿದ್ಧಿಸುತ್ತದೆ. ಆದ್ದರಿಂದ ಈ ಶ್ರುತಿಯು ಜಗತ್ತಿಗೆ ಬ್ರಹ್ಮನನ್ನು ಬಿಟ್ಟು ಇರದೇ ಇರೋಣ ಅಂದರೆ ಬ್ರಹ್ಮನನ್ನು ಆಶ್ರಯಿಸಿಕೊಂಡಿರೋಣವನ್ನು ಹೇಳುತ್ತದೆ. ಇದಕ್ಕೆ ಪ್ರಮಾಣ:— "ನ ತದಸ್ತಿ ವಿನಾ ಯತ್ಸ್ಯಾನ್ ಮಯಾ ಭೂತಂ ಚರಾಚರಂ" (ಭಗವದ್ಗೀತಾ 10-39)— ಚರಾಚರಂ ಯನ್ಮಯಾ ವಿನಾ ಭೂತಂ ತನ್ನಾಸ್ತಿ— ಚರಾಚರಾತ್ಮಕ ಪ್ರಪಂಚದಲ್ಲಿ ನನ್ನನ್ನು ಬಿಟ್ಟು ಇರುವುದು ಯಾವುದೂ ಇಲ್ಲ. ಎಲ್ಲವೂ ನನ್ನನ್ನು ಆಶ್ರಯಿಸಿದೆ.

ಸಂಬಂಧೋ ಹ್ಯವಿನಾಭಾವಃ ಸ ಚ ನೈಕಸ್ಯ ಕುತ್ರಚಿತ್ ।
ಸಂಬಂಧಿದ್ವಯಭಿನ್ನೋ ಯಃ ಸ್ವಯಮೇಕಸ್ತದಾಶ್ರಯಃ ॥ ೭೫ ॥

ಸಂಬಂಧೋ ಯಂ ಖಲು ಸತಾಂ ಸ ಚೈಕಸ್ಯ ಕಥಂ ವದ ।

ಸಂಬಂಧವೆಂದರೆ ಬಿಟ್ಟು ಇರದೇ ಇರುವುದು, ಎಂದು. ಆದ್ದರಿಂದ ಅದು ಒಂದಕ್ಕೇನೇ ಎಂದಿಗೂ ಕೂಡುವುದಿಲ್ಲ. ಸಂಬಂಧವು ಸಂಬಂಧವುಳ್ಳ ಎರಡರಿಂದ ಬೇರೆಯಾಗಿ ತಾನು ಒಂದೇ ಇದ್ದು ಆ ಸಂಬಂಧಿಗಳನ್ನು ಆಶ್ರಯಿಸಿ ಇರುವುದು. ಸಂಬಂಧವು ನಿಶ್ಚಯವಾಗಿ ಇರುವ ವಸ್ತುಗಳಿಗೇನೇ. ಅದು ಒಂದೇ ವಸ್ತುವಿಗೆ ಹೇಗೆ ಆದೀತು? ಹೇಳು. ಎಂದರೆ, ಇಲ್ಲಿ ಬ್ರಹ್ಮನಿಗೂ ಜಗತ್ತಿಗೂ ಅವಿನಾಭಾವರೂಪ ಸಂಬಂಧವಿದೆ. ಈ ಸಂಬಂಧವು ಬ್ರಹ್ಮನು ಒಬ್ಬನೇ ಇದ್ದಲ್ಲಿ ಕೂಡುವುದಿಲ್ಲ. ಬ್ರಹ್ಮನೂ ಜಗತ್ತೂ ಎರಡೂ ಇರಬೇಕು. ಹೀಗೆ ಅಭಿಪ್ರಾಯ.

ಇದನ್ನು ಗಮನಿಸಬೇಕು. ಬ್ರಹ್ಮನನ್ನು ಬಿಟ್ಟು ಜಗತ್ತು ಇರಲಾರದು. ಬ್ರಹ್ಮನಿರುವುದಕ್ಕೆ ಜಗತ್ತಿರಲೇ ಬೇಕೆಂದಿಲ್ಲ. ಇದು ಸಿದ್ಧಾಂತ ರೀತ್ಯಾ.

ಪಶ್ಯಶ್ರುತೇಃ ಕುಶಲತಾಂ ವಾಚೋಭಂಗ್ಯೈವ ಯಾಽನ್ತತಃ ॥ ೭೬ ॥

ದ್ವಾ ಜೀವಪರಮಾ(ತ್ಮಾನೌ)ತ್ಮಾನೌ ಸಖಾಯೌ ಸಯುಜೌ ಖಗೌ ।

ಲೀಲಯಾ ಸ್ಥಾಪಯಾಮಾಸ ಸ್ವಜ್ಯೇಷ್ಠಾ ಭಗಿನೀ ಶ್ರುತಿಃ ॥ ೭೭ ॥

ಯತೋ ನಿರವಕಾಶಾ ಚಾತ್ತೃತ್ವಾನತ್ತೃತ್ವಯುಕ್ತಿತಃ ।

ಸ್ಪಷ್ಟಸ್ವಾರ್ಥಪರಾ ಚೇಯಂ ಯಸ್ಮಾತ್ಸ್ಮೃತಿಸಖೀಯುತಾ ॥೭೮॥

ಜೀವಪರಮಾತ್ಮರು ಇಬ್ಬರು ಸ್ನೇಹಿತರು. ಒಟ್ಟಿಗೆ ಇರುವ ಎರಡು ಪಕ್ಷಿಗಳು ಎಂಬೀ ಅರ್ಥವುಳ್ಳ 'ದ್ವಾಸುಪರ್ಣಾ' ಎಂಬ ಯಾವ ಶ್ರುತಿಯು ಕೊನೆಯಲ್ಲಿ ಲೀಲಾಮಾತ್ರದಿಂದ ಈ ಭೇದ ಪ್ರಮೇಯವನ್ನು ಸ್ಥಾಪಿಸಿತೋ, ಅದರ ಕೌಶಲವನ್ನು ನೋಡು. ಏಕೆಂದರೆ, ನಿರವಕಾಶವಾದ ಕರ್ಮಫಲ ಭೋಕ್ತೃತ್ವ ಅದರ ಅಭೋಕ್ತೃತ್ವರೂಪ ಯುಕ್ತಿಯಿಂದಲೂ ಸ್ಮೃತಿರೂಪ ಸಖಿಯಿಂದ ಕೂಡಿರುವುದರಿಂದಲೂ ಈ 'ದ್ವಾಸುಪರ್ಣಾ' ಶ್ರುತಿಯು ಸ್ಪಷ್ಟಾರ್ಥವುಳ್ಳದ್ದು. ಇಲ್ಲಿ ಪ್ರಸಕ್ತವಾದ ಶ್ರುತಿಯು ಹೀಗೆ ಇದೆ.

ದ್ವಾ ಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯ-
ನಶ್ನನ್ನನ್ಯೋ ಅಭಿಚಾಕಶೀತಿ ॥ ಮುಂಡಕ ೩-೧-೧ ॥

ಸಮಾನೇ ವೃಕ್ಷೇ ಪುರುಷೋ ನಿಮಗ್ನೋಽ
ನೀಶಯಾ ಶೋಚತಿ ಮುಹ್ಯಮಾನಃ ।
ಜುಷ್ಟಂ ಯದಾ ಪಶ್ಯತ್ಯನ್ಯಮೀಶ-
ಮಸ್ಯ ಮಹಿಮಾನಮಿತಿ ವೀತಶೋಕಃ ॥ ಮುಂ. ೩-೧-೨ ॥

ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ
ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್ ।

ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ
ನಿರಂಜನಃ ಪರಮಂ ಸಾಮ್ಯಮುಪೈತಿ ॥ ಮುಂ. ೩-೧-೩ ॥

ಯಾವಾಗಲೂ ಒಟ್ಟಾಗಿರತಕ್ಕ ಪರಸ್ಪರ ಸ್ನೇಹವುಳ್ಳ ಎರಡು ಪಕ್ಷಿಗಳುಂಟು. ಇವು ಒಂದೇ ದೇಹಾಖ್ಯ ಅಶ್ವತ್ಥವೃಕ್ಷವನ್ನು ಆಲಿಂಗಿಸಿವೆ. ಅವೆರಡರಲ್ಲಿ ಒಂದು, ಜೀವಾಖ್ಯ ಪಕ್ಷಿಯು, ಅಶ್ವತ್ಥವೃಕ್ಷದ ಫಲವನ್ನು (ಕರ್ಮಫಲವನ್ನು) ರುಚಿ ಎಂದು ಭ್ರಮಿಸಿ ತಿಂದು ಜೀವಿಸುತ್ತದೆ. ಈ ಪಕ್ಷಿಯಿಂದ ಬೇರೆಯಾದ ಈಶಾಖ್ಯಪಕ್ಷಿಯು ಕರ್ಮಫಲವನ್ನು ಉಪಜೀವಿಸಿಕೊಂಡಿರದೆ ಬೆಳಗುತ್ತಿದೆ. ವೃಕ್ಷಕ್ಕೆ ಹೋಲಿಸಿರುವ ಒಂದೇ ಶರೀರದಲ್ಲಿ ಪುರುಷನು ಅಂದರೆ ಜೀವನು ಈ ದೇಹ ನನ್ನದು ಇದರಿಂದ ನನಗೆ ಸುಖವುಂಟು ಎಂದು ಅದರಲ್ಲಿ ನಿತರಾಂ ಮಗ್ನನಾಗಿ ಸ್ವತಂತ್ರವಾದ ಈಶೇಚ್ಛೆಯಿಂದ ಮೋಹಪಡುತ್ತಾ ದುಃಖಿಸುತ್ತಾನೆ. ಯಾವಾಗ ಸರ್ವಸೇವ್ಯನೂ, ತನ್ನಿಂದ ಅನ್ಯನೂ, ಸರ್ವಸ್ವಾಮಿಯೂ ಆದ ಈಶನನ್ನೂ ಜಗತ್ಸೃಷ್ಟ್ಯಾದಿ ಅವನ ಮಹಿಮೆಯನ್ನೂ ನೋಡುತ್ತಾನೋ (ಅಂದರೆ ತಿಳಿಯುತ್ತಾನೋ) ಆಗ ಶೋಕದಿಂದ ಬಿಡಲ್ಪಡುವವನಾಗುತ್ತಾನೆ. ಯಾವಾಗ 'ಪಶ್ಯಃ' ಅಂದರೆ ಜೀವನು ಬಂಗಾರದವರ್ಣವುಳ್ಳ ಜಗತ್ಕರ್ತನಾದ ಹಿರಣ್ಯಗರ್ಭನ ಉತ್ಪತ್ತಿಗೆ ಕಾರಣನಾದ ಷಡ್ಗುಣೈಶ್ವರ್ಯಸಂಪನ್ನನಾದುದರಿಂದ ಪುರುಷನಾಮಕನಾದ ತನ್ನ ಸ್ವಾಮಿಯನ್ನು ಅಪರೋಕ್ಷದಿಂದ ನೋಡುತ್ತಾನೆಯೋ ಆಗ ಆ ಅಪರೋಕ್ಷ ಜ್ಞಾನವನ್ನು ಹೊಂದಿದ ಜೀವನು ಸರ್ವಪಾಪವನ್ನೂ, ಅನಿಷ್ಟ ಪುಣ್ಯವನ್ನೂ ಕಳೆದುಕೊಂಡು ದೋಷಲೇಪವಿಲ್ಲದವನಾಗಿ ಪರಮಾತ್ಮನ ಉತ್ತಮ ಸಾಮ್ಯವನ್ನು ಹೊಂದುತ್ತಾನೆ. [ಮುಂ. ೩-೧, ೨, ೩]

ಎರಡು ಪಕ್ಷಿಗಳು ಎಂದು ಹೇಳಿರುವುದರಿಂದ ಜೀವೇಶ್ವರರು ಭಿನ್ನರೆಂದು ಸಿದ್ಧವಾಯಿತು. ಅಲ್ಲದೇ ಅನ್ಯ, ಅನ್ಯ ಎಂದು ಜೀವೇಶ್ವರರಿಗೆ ಭೇದವನ್ನು ಪುನಃ ಪುನಃ ಹೇಳಿರುವುದರಿಂದ ಶ್ರುತಿಗೆ ಜೀವೇಶ್ವರರ ಭೇದದಲ್ಲಿ ತಾತ್ಪರ್ಯವುಂಟೆಂದು ನಿಶ್ಚಯಿಸಬೇಕು. ಕರ್ಮಫಲವನ್ನು ಅನುಭವಿಸುವವನು ಜೀವನು; ಕರ್ಮಫಲಾಪೇಕ್ಷೆಯಿಲ್ಲದೇ ಸ್ವತಂತ್ರನಾಗಿ ತನ್ನ ಸ್ವಭಾವ ಮಹಿಮೆಯಿಂದ ಬೆಳಗುವವನು ಈಶನು; ಎಂದು ಜೀವೇಶ್ವರರು ಅತ್ಯಂತ

ವಿಲಕ್ಷಣ ಧರ್ಮವುಳ್ಳವರು ಎಂದು ಜೀವೇಶ್ವರರ ಭೇದದಲ್ಲಿ ಪ್ರಬಲವಾದ ಉಪಪತ್ತಿಯನ್ನು ತೋರಿಸಿ ಭೇದವನ್ನು ಧೃಢಪಡಿಸಿದೆ. ಅಲ್ಲದೇ "ಪರಮಂ ಸಾಮ್ಯಂ ಉಪೈತಿ" ಎಂದು ಮುಕ್ತಿಯಲ್ಲಿಯೂ ಜೀವೇಶ್ವರರಿಗೆ ಸಾಮ್ಯವನ್ನು ಹೇಳಿರುವುದರಿಂದ ಸಂಸಾರದಲ್ಲಿ ತೋರುವ ಭೇದವು ಪರಮಾರ್ಥವೇ ಎಂದು ನಿಶ್ಚಯಿಸಬೇಕು.

ಇಲ್ಲಿ ಹೇಳುವ ಭೇದವು ವ್ಯಾವಹಾರಿಕ ಭೇದ. "ತತ್ತ್ವಮಸಿ", "ಅಹಂ ಬ್ರಹ್ಮಾಸ್ಮಿ" ಎಂಬೀ ಮೊದಲಾದ ಶ್ರುತಿಗಳು ಪರಮಾರ್ಥವಾದ ಅಭೇದವನ್ನು ಹೇಳುತ್ತವೆ ಎನ್ನುವುದಕ್ಕೆ ಆಗುವುದಿಲ್ಲ. ವ್ಯಾವಹಾರಿಕ ಭೇದವೆಂದರೆ ಮಿಥ್ಯಾಭೇದವೆಂದು ಈ ವಾದಿಗಳ ಅಭಿಪ್ರಾಯ ಹೇಳಿದಂತಾಯಿತು. ಅಂತೂ 'ದ್ವಾಸುಪರ್ಣಾ' ಶ್ರುತಿಯು ಬೇರೆ ಮಾತಿನಿಂದ ಅಪ್ರಮಾಣವೆಂದು ಹೇಳಿದ ಹಾಗಾಯಿತು. ಅಲ್ಲದೆ ಈಶನು ಬಂಗಾರಬಣ್ಣವುಳ್ಳವನು, ಜಗತ್ಕರ್ತನು ಬ್ರಹ್ಮದೇವರ ಉತ್ಪತ್ತಿಗೆ ಕಾರಣನು ಇವೇ ಮೊದಲಾದ ಪ್ರಮಾಣಾಂತರಗಳಿಂದ ತಿಳಿಯಲಾರದ ಪ್ರಮೇಯಗಳು ಕಂಡುಬರುವುದರಿಂದ ಈ ಶ್ರುತಿಯಲ್ಲಿ ತಾತ್ಪರ್ಯದ್ಯೋತಕವಾದ ಅಪೂರ್ವತೆಯು ಕಂಡುಬರುತ್ತೆ. ಇತರ ಪ್ರಮಾಣಗಳಿಂದ ತಿಳಿಯಲ್ಪಡದ ಜೀವನಿಂದ ಬೇರೆಯಾದ ವಸ್ತು ಈಶನು ಎಂದು ತೋರಿಸುವ ಧರ್ಮಗಳನ್ನು ಈ ಶ್ರುತಿಯು ತಾನೇ ಹೇಳಿ ಪುನಃ ಆ ಧರ್ಮಗಳು ವ್ಯಾವಹಾರಿಕ ಅಂದರೆ ಸುಳ್ಳು ಎಂದು ತಾನೇ ಮತ್ತೊಂದು ಕಡೆ ಹೇಳಿದರೆ ಶ್ರುತಿಯು ಉನ್ಮತ್ತನ ವಾಕ್ಯದಂತೆ ಪರಮ ಅಪ್ರಮಾಣವಾಗಬೇಕಾದೀತು.

ಅಲ್ಲದೇ ಮುಕ್ತಿಗೆ ಸಾಧನವಾದ ಬ್ರಹ್ಮಜ್ಞಾನವು ಯಾವುದೆಂಬುದು ಇಲ್ಲಿ ಹೀಗೆ ನಿಶ್ಚಯಿಸಲ್ಪಟ್ಟಿದೆ :— ಪರಬ್ರಹ್ಮನು ಸರ್ವಸ್ವಾಮಿ. ಜೀವನಿಂದ ಭಿನ್ನನು. ಜಗತ್ಕರ್ತನು. ವಿಗ್ರಹವುಳ್ಳವನು. ಮಹಿಮಾವಂತನು. ಸರ್ವಸೇವ್ಯನು. ಈ ಪರೋಕ್ಷಜ್ಞಾನದಿಂದ ಅಪರೋಕ್ಷಜ್ಞಾನ. ಅಪರೋಕ್ಷಜ್ಞಾನದಿಂದ ಮುಕ್ತಿ ; ಇಂತಹವನಿಗೇನೇ ಮೋಕ್ಷಜನಕವಾದ ಪರಮಾತ್ಮನ ಪ್ರಸಾದ. ಬ್ರಹ್ಮನು ನಿರಾಕಾರನು, ಜೀವನಿಂದ ಅಭಿನ್ನನು, ಒಬ್ಬನೇ ಇರುವುದರಿಂದ ಅಸೇವ್ಯನು, ನಿರ್ಧರ್ಮಕನಾದುದರಿಂದ ಮಹಿಮಾಹೀನನು

ಎಂಬ ಜ್ಞಾನವು ಅನರ್ಥಸಾಧಕವು. ಅಪೌರುಷೇಯವಾದುದರಿಂದ ಶ್ರುತಿಯಲ್ಲಿ ಹೇಳಿರುವುದು ಪರಮಾರ್ಥವೆಂದು ತಿಳಿಯಬೇಕು.

ಈ ಶ್ರುತಿಯು "ನೇಹ ನಾನಾಸ್ತಿ ಕಿಂಚನ" 'ತತ್ತ್ವಮಸಿ' ಎಂಬ ಶ್ರುತಿಯ ಅಪೇಕ್ಷಯಾ ಪ್ರಬಲವಾದದ್ದು. ಅಂದರೆ ನಿರವಕಾಶವಾದದ್ದು. ಇದನ್ನು ಮನಸ್ಸಿನಲ್ಲಿಟ್ಟು 'ದ್ವಾಸುಪರ್ಣಾ' ಶ್ರುತಿಯನ್ನು ಜ್ಯೇಷ್ಠ ಭಗಿನೀ (ಅಕ್ಕ) ಎಂದೂ, "ನೇಹ ನಾನಾಸ್ತಿ ಕಿಂಚನ" ಎಂಬ ಶ್ರುತಿಯನ್ನು ಕನಿಷ್ಠ ಭಗಿನೀ (ತಂಗಿ) ಎಂದೂ ಹೇಳಬಹುದಷ್ಟೆ. (ಕನಿಷ್ಠ ಭಗಿನಿ=ಸಾವಕಾಶ) ಸ್ಮೃತಿ ಸಖೀ ಎಂಬಲ್ಲಿ ಇಲ್ಲಿ ತೋರಿಸಿರುವ ಭಾಗವತ ಶ್ಲೋಕವು ಸೂಚಿತವಾಗಿದೆ.

ಸುಪರ್ಣಾವೇತೌ ಸದೃಶೌ ಸಖಾಯೌ
ಯದೃಚ್ಛಯೈತೌ ಕೃತನೀಡೌ ಚ ವೃಕ್ಷೇ ।
ಏಕಸ್ತಯೋಃ ಖಾದತಿ ಪಿಪ್ಪಲಾನ್ನ-
ಮನ್ಯೋ ನಿರನ್ನೋಽಪಿ ಬಲೇನ ಭೂಯಾನ್ ॥
(ಭಾಗವತ ೧೧-೧೧-೬)

ಸ್ನೇಹಿತರಾದ ಇಬ್ಬರು ಚಿದಾನಂದಸ್ವರೂಪರಾದ್ದರಿಂದ ಸದೃಶರಾದ ಎರಡು ಪಕ್ಷಿಗಳು (ಜೀವಪರಮಾತ್ಮರು) ಅದೃಷ್ಟಪ್ರೇರಕನಾದ ಪರಮಾತ್ಮನ ಇಚ್ಛೆಯಿಂದ ದೇಹವೆಂಬ ವೃಕ್ಷದಲ್ಲಿ ಗೂಡುಮಾಡಿಕೊಂಡು ಇರುವರು. ಅದರಲ್ಲಿ ಒಂದು ಪಕ್ಷಿಯು ಕರ್ಮಫಲರೂಪವಾದ ಅಶ್ವತ್ಥವೃಕ್ಷದ ಹಣ್ಣನ್ನು ತಿನ್ನುತ್ತದೆ. ಇದು ಜೀವನು. ಈ ಜೀವಾಖ್ಯಪಕ್ಷಿಗಿಂತ ಅನ್ಯವಾದ ಈಶಾಖ್ಯಪಕ್ಷಿಯು ಆ ಕರ್ಮಫಲವನ್ನು ಉಪಜೀವಿಸಿಕೊಳ್ಳದೇ ಸ್ವರೂಪಭೂತವಾದ ಸಾಮರ್ಥ್ಯದಿಂದ ಬಹುವಾಗಿ ಬೆಳಗುತ್ತಿದೆ.

ತಸ್ಮಾದಿಯಂ ಶ್ರುತಿರ್ಜ್ಯೇಷ್ಠಾ ಕನಿಷ್ಠಾಃ ಶ್ರುತಯೋಽಪರಾಃ ।
ತಾಶ್ಚ ತದನುಸಾರಿತ್ವೇ ಜೀವನ್ತಿ ನ ತತೋಽನ್ಯಥಾ ॥ ೭೯ ॥

ಅತೋ ಮೀಮಾಂಸಕಾಚಾರ್ಯೋ ಮಧ್ವಾಚಾರ್ಯೋ ಜಗದ್ಗುರುಃ ।
ಏಕ ಏವ ಜಯೀ ನಾನ್ಯೋ ಯದ್ವಾಸಃ ಸೋಽಹಮೀದೃಶಃ ॥೮೦॥

ಆದ್ದರಿಂದ ಈ ಶ್ರುತಿಯು (ದ್ವಾಸುಪರ್ಣಾ) ಜ್ಯೇಷ್ಠಾ (ನಿರವಕಾಶ). "ನೇಹ ನಾನಾಸ್ತಿ" ಇತ್ಯಾದಿ ಶ್ರುತಿಗಳು ಕನಿಷ್ಠಾ (ಸಾವಕಾಶ) ಆದ್ದರಿಂದ "ನೇಹ ನಾನಾಸ್ತಿ ಕಿಂಚನ" ಎಂಬಿವೇ ಮೊದಲಾದ ಶ್ರುತಿಗಳು 'ದ್ವಾಸುಪರ್ಣಾ' ಶ್ರುತಿಯನ್ನು ಉಪಜೀವಿಸಿಕೊಂಡಿರುತ್ತವೆ. 'ದ್ವಾಸುಪರ್ಣಾ' ಶ್ರುತಿಯು ಇವುಗಳನ್ನು (ಈ ಶ್ರುತಿಗಳನ್ನು) ಉಪಜೀವಿಸಿ ಕೊಂಡಿಲ್ಲ. ಆದ್ದರಿಂದ ಮೀಮಾಂಸಕಾಚಾರ್ಯರಾದ, ಜಗದ್ಗುರುಗಳಾದ ಮಧ್ವಾಚಾರ್ಯರೊಬ್ಬರೇನೇ ಜಯವುಳ್ಳವರು. ಇತರರು ಅಲ್ಲ. ಆಚಾರ್ಯರ ದಾಸ ನಾನು. ಅವರ ದಾಸನಾದ್ದರಿಂದಲೇ ನಾನು ಇಂತಹವನು. ಅಂದರೆ ಕುಶಲತೆಯಿಂದ ಶ್ರುತಿಯನ್ನು ವ್ಯಾಖ್ಯಾನಮಾಡುವ ಶಕ್ತಿಯುಳ್ಳವನು. ಶ್ರೀಮಧ್ವಾಚಾರ್ಯರು 'ದ್ವಾಸುಪರ್ಣಾ' ಶ್ರುತಿಯು ನಿರವಕಾಶ ಶ್ರುತಿ ಯೆಂದೂ ಎರಡು ಮೂರು ಅರ್ಥಗಳು ಹೇಳಬಹುದಾದ, ಆದ್ದರಿಂದಲೇ ಸಾವಕಾಶವೆಂದು ಕರೆಯಲ್ಪಡುವ 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ', 'ನೇಹ ನಾನಾಸ್ತಿ ಕಿಂಚನ' ಇತ್ಯಾದಿ ಶ್ರುತಿಗಳಿಗೆ 'ದ್ವಾಸುಪರ್ಣಾ' ಶ್ರುತಿಯ ಅರ್ಥಕ್ಕೆ ಅನುಗುಣವಾದ ಅರ್ಥವನ್ನು ಮಾಡಬೇಕೆಂದು ವಿಚಾರಪೂರ್ವಕ ನಿರ್ಣಯಿಸಿರುತ್ತಾರೆ.

ಇದುವರೆವಿಗೆ ಅದ್ವೈತಿಗಳ ವ್ಯಾಖ್ಯಾನ ಖಂಡನ.

ಮೂರನೆಯ ಭಾಗ

ಇದರ ಮುಂದೆ ಸ್ವಸಿದ್ಧಾಂತಾನುಸಾರ 'ನೇಹ ನಾನಾಸ್ತಿ ಕಿಂಚನ' ಶ್ರುತಿಯ ಅರ್ಥ ವಿವರಣೆ.

ಕಿಂಚ ಪ್ರಪಂಚಪರತಾಯಾಂ ಚ ಕಿಂಚಿನ್ನ ದೂಷಣಮ್ ।
ಇತಿ ದರ್ಶಯಿತುಂ ಪ್ರೌಢ್ಯಾ ಚರ್ಚೇಯಮನುಖಿಲಾ-
(ಕೃತಾ)ऽऽದೃತಾ ॥ ೬೧ ॥

'ನೇಹ ನಾನಾಸ್ತಿ ಕಿಂಚನ' ಶ್ರುತಿಯಲ್ಲಿ 'ಇಹ' ಎಂಬ ಶಬ್ದಕ್ಕೆ ಬ್ರಹ್ಮನಲ್ಲಿ ಎಂದು ಮಾಯಾವಾದಿಗಳು ಅರ್ಥಮಾಡಿ ಬ್ರಹ್ಮನಲ್ಲಿ ಭಿನ್ನವಾದ ಜಗತ್ತು

ಇಲ್ಲವೆಂದು ಅರ್ಥಮಾಡಿರುವರು. ಆ 'ಇಹ' ಪದಕ್ಕೆ ಲೋಕರೂಢಿಯನ್ನನುಸರಿಸಿ ಪ್ರಪಂಚ ಎಂದು ಅರ್ಥಮಾಡಿದರೆ ಈ ಶ್ರುತಿಯು ವಿರುದ್ಧವಾಗದೇ ಇರುವುದಲ್ಲದೇ ಅನುಕೂಲವೂ ಆಗುತ್ತದೆ ಎಂದು ತೋರಿಸಲು ಈ ಮೇಲೆ ಹೇಳಿದ ಚರ್ಚೆಯು ಪ್ರೌಢಿಮೆಯಿಂದ ಮಾಡಲಾಯಿತು.

ವಸ್ತುತಸ್ತು ಶ್ರುತಿರಿಯಂ ಪೂರ್ವಾಪರವಿಚಾರಣೇ ।
ವಿಷ್ಣೋಃ ಸ್ವಗತನಾನಾತ್ವಂ ತತ್ತ್ವಂ ನೇತ್ಯೇವ ಶಂಸತಿ ॥ ೮೨ ॥

ವಸ್ತು ಸ್ಥಿತಿಯಲ್ಲಿ ಪೂರ್ವಾಪರ ವಾಕ್ಯಗಳನ್ನು ವಿಚಾರಮಾಡಿದರೆ ಈ ಶ್ರುತಿಯು ವಿಷ್ಣುವಿನ ಸ್ವಗತ ನಾನಾತ್ವವು (ಅಂದರೆ ಭೇದವು) ತತ್ವವಲ್ಲವೆಂದೇನೇ ಹೇಳುತ್ತದೆ.

ಯದೇವೇಹ ತದೇವಾಮುತ್ರಾಪಿ ನಿತ್ಯಂ ಚ ವರ್ತತೇ ।
ಯದಮುತ್ರ ತದೇವೇಹ ಜಗತ್ಯಪಿ ಚ ವರ್ತತೇ ॥ ೮೩ ॥

ಸರ್ವಾಂತರ್ಯಾಮಿ ರೂಪೇಣ ಸರ್ವಸಾಕ್ಷಿತಯಾ ತಥಾ ।
ಇತ್ಯುಪಕ್ರಮವಾಕ್ಯಂ ಯದ್ವಿಸ್ಪಷ್ಟಾರ್ಥಂ ಪ್ರತೀಯತೇ ॥ ೮೪ ॥

ಏವಂ ಚಾನನ್ತಾವತಾರಾ ಯೇ ಚ ಲೋಕಪ್ರವರ್ತಕಾಃ ।
ತೇಷಾಂ ನಾರಾಯಣಾಖ್ಯೇನ ಮೂಲರೂಪೇಣ ಚಾಭಿದಾಂ ॥ ೮೫ ॥

ತಾತ್ಪರ್ಯದ್ಯೋತನಾಯ ದ್ವಿರಾವೃತ್ತ್ಯಾ ಸಾವಧಾರಣಮ್ ।
ಸಾಮಾನಾಧಿಕರಣ್ಯೋಕ್ತ್ಯಾ ನಿರ್ಣಯಾಯ ಶ್ರುತಿಃ ಸತೀ ॥ ೮೬ ॥

'ನೇಹ ನಾನಾಸ್ತಿ' ಎಂಬ ಶ್ರುತಿಯು ಕಾಠಕ ಉಪನಿಷತ್ತಿನಲ್ಲಿಯೂ (೨-೧-೧೧) ಬೃಹದಾರಣ್ಯಕ ಉಪನಿಷತ್ತಿನಲ್ಲಿಯೂ (೬-೪-೧೯) ಇದೆ. ಯಾವ ರೂಪಗಳ ಸಮೂಹವು ಈ ಲೋಕದಲ್ಲಿದೆಯೋ ಅದೇನೇ ಅಲ್ಲಿಯೂ ಕೂಡ ಯಾವಾಗಲೂ ಇದೆ. ಯಾವುದು ಅಲ್ಲಿ ಇದೆಯೋ ಅದೇ ಈ ಜಗತ್ತಿನಲ್ಲಿಯೂ ಇದೆ. ಹೀಗೆ ಸರ್ವಾಂತರ್ಯಾಮಿ ರೂಪದಿಂದ ಹೃದಯದಲ್ಲಿ ಸರ್ವಸಾಕ್ಷಿಯಾಗಿರುವನಾಗಿ ಅನಂತ ರೂಪಗಳನ್ನು ಪರಮಾತ್ಮನು ತಾಳಿರುವನು. ಲೋಕಪ್ರವರ್ತಕಗಳಾದ ಅನೇಕ ಅವತಾರ ರೂಪಗಳೂ ಅವನಿಗುಂಟು. ಇವೆಲ್ಲವೂ 'ಯದೇವೇಹ' ಎಂಬ ವಾಕ್ಯದಲ್ಲಿನ 'ಇಹ' ಪದದಿಂದ ಹೇಳಲ್ಪಟ್ಟಿವೆಯೆಂದು ಸ್ಪಷ್ಟವಾಗಿ ತೋರಿಬರುತ್ತೆ. ಈ ರೂಪಗಳಿಗೂ

ವೈಕುಂಠದಲ್ಲಿನ ಮೂಲರೂಪಕ್ಕೂ ಯಾವ ಭೇದವೂ ಇಲ್ಲವೆಂದು ತಾತ್ಪರ್ಯ ಪೂರ್ವಕವಾಗಿ ಶ್ರುತಿಯು ಹೇಳುತ್ತೆ. ಶ್ರುತಿಗೆ ಈ ಅರ್ಥದಲ್ಲಿ ಅಭಿಪ್ರಾಯ ವಿದೆಯೆಂದು ಹೇಗೆ ತಿಳಿಯುವುದು? ಅಂದರೆ 'ಯಾವುದು ಇಲ್ಲಿ ಇದೆಯೋ ಅದೇ ಅಲ್ಲಿದೆ' ಎಂಬಲ್ಲಿ 'ಅದೇ' ಎಂದು ಒತ್ತಿ ಹೇಳುವುದು. 'ಯಾವುದು ಇಲ್ಲಿಯೋ ಅದೇ ಅಲ್ಲಿ', 'ಯಾವುದು ಅಲ್ಲಿಯೋ ಅದೇ ಇಲ್ಲಿ' ಹೀಗೆ ಸಮಾನಾಧಿಕರಣ್ಯದಿಂದ ಎರಡಾವರ್ತಿ ಹೇಳುವುದು ಇದಕ್ಕೆ ಗಮಕ. ಹೀಗೆ ನಿರ್ಣಯ ಮಾಡುವುದರ ಮೂಲಕ ಪರಮಾತ್ಮನ ರೂಪಗಳಲ್ಲಿ ಯಾವ ಭೇದವೂ ಇಲ್ಲವೆಂದು ಶ್ರುತಿಯು ತಿಳಿಸಿಕೊಡುತ್ತೆ. ಈ ರೀತಿಯಲ್ಲಿ ಶ್ರುತಿ ಯಲ್ಲಿರುವ ಪದಸ್ವಾರಸ್ಯವನ್ನು ಗಮನಿಸಿದವರಿಗೆ ಶ್ರುತಿತಾತ್ಪರ್ಯವು ಬೇರೆಯಾದ್ದಲ್ಲವೆಂದು ನಿಸ್ಸಂಶಯವಾಗಿ ತಿಳಿದುಬರುತ್ತೆ. ಇಷ್ಟೇ ಅಲ್ಲ. ತಾತ್ಪರ್ಯದ್ಯೋತಕವಾದದ್ದು ಮತ್ತೊಂದುಂಟು. ಪರಮಾತ್ಮನ ರೂಪ ಗಳಲ್ಲಿ ಭೇದವನ್ನು ತಿಳಿದವನಿಗೆ ಪಾಪಫಲವನ್ನು ಹೇಳುತ್ತದೆ. ಯಾವ ನಾದರೆ ಪರಮಾತ್ಮನ ರೂಪಗಳಲ್ಲಿ ಭೇದವನ್ನು ತಿಳಿಯುವನೋ ಅವನು ಜನನಮರಣರೂಪವಾದ ಸಂಸಾರದಲ್ಲಿರುವನು ಮತ್ತು ಯಮನಿಂದ ನರಕ ವನ್ನೂ ಅನುಭವಿಸುವನು ಎಂದು ಶ್ರುತಿಯು ಉದ್ಘೋಷಿಸುತ್ತದೆ. ಇದನ್ನೇ ಮುಂದಿನ ಶ್ಲೋಕದಲ್ಲಿ ವಿಶದಮಾಡುತ್ತಾರೆ.

ಸ್ವೋಕ್ತೇಽರ್ಥೇಽಸ್ಮಿನ್ಪುನರಪಿ ತಾತ್ಪರ್ಯದ್ಯೋತನಾಯ ಸಾ ।
ಮೃತ್ಯೋಃ ಸ ಮೃತ್ಯುಂ ಗಚ್ಛೇತ್ಸ(ಯ) ಇಹ ನಾನೇವ ಪಶ್ಯತಿ
॥ ೮೭ ॥

ಶ್ರುತಿಯು ತಾನು ಹೇಳಿದ ಅರ್ಥದಲ್ಲಿ ತಾತ್ಪರ್ಯವಿದೆ ಎಂದು ತೋರಿಸುವುದಕ್ಕೋಸ್ಕರ "ಮೃತ್ಯೋಃಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ" (ಕಾ ೨-೧-೧೧) ಎಂದು ಪರಮಾತ್ಮನ ಗುಣಕ್ರಿಯಾರೂಪ ಗಳಲ್ಲಿ ಭೇದವನ್ನು ತಿಳಿದಲ್ಲಿ ಅನರ್ಥಫಲವಾಗುತ್ತೆಂದು ಹೇಳುತ್ತದೆ. ಈ ಶ್ರುತಿಯ ಅರ್ಥ. ಯಾರಾದರೆ ಪರಮಾತ್ಮನ ರೂಪಗುಣ ಕರ್ಮಗಳಲ್ಲಿ ಭೇದವನ್ನಾಗಲೀ ಭೇದಾಭೇದವನ್ನಾಗಲೀ ತಿಳಿಯುವನೋ ಅವನು ಮೃತ್ಯುವಿನಿಂದ ಮೃತ್ಯುವಿಗೆ ಹೋಗುತ್ತಾನೆ. ಅಂದರೆ ಯಮನು ಅವನನ್ನು ನೀಚವಾದ ನರಕಗಳಲ್ಲಿ ಹಾಕುತ್ತಾನೆಂದು ಅಭಿಪ್ರಾಯ.

ಇತ್ಯಾಹ ತಸ್ಯ ವಾಕ್ಯಸ್ಯಾಪ್ಯರ್ಥೋऽತಿಸ್ಪಷ್ಟ ಏವ ಹಿ ।
ಇಹ ವಿಷ್ಣುಸ್ವರೂಪೇಷು ಭೇದಾಭಾವಂ ಮಯೋದಿತಮ್ ॥ ೮೮ ॥
ಅನಂಗೀಕೃತ್ಯ ಕುಮತಿರ್ನಾನಾತ್ವಂ ಯಸ್ತು ಪಶ್ಯತಿ ।
ತದ್ವಜ್ಜನಿಂ ಚ ದುಃಖಂ ಚ ಮೃತಿಂ ಚ ಪರತನ್ತ್ರತಾಮ್ ॥ ೮೯ ॥
ಅವತಾರೇಷು ಯಃ ಪಶ್ಯೇದಿವ ಶಬ್ದೇನ ಸೂಚಿತಾನ್ ।
ಸ ಮಾರಕಾಚ್ಚ ನರಕಾದತ್ಯನ್ತಕ್ಲೇಶಕಾರಕಮ್ ॥ ೯೦ ॥
ಗಚ್ಛತ್ಯಧೋಲೋಕರೂಪಂ ತಮೋऽನ್ಧಂ ನಾತ್ರ ಸಂಶಯಃ ।

ಹೀಗೆ ಶ್ರುತಿಯು ಹೇಳುತ್ತೆ. ವಾಕ್ಯದ ಅರ್ಥವೂ ಅತಿಸ್ಪಷ್ಟವಾಗಿಯೇ ಇದೆ. ವಿಷ್ಣುರೂಪಗಳಲ್ಲಿ ಭೇದವಿಲ್ಲವೆಂದು ನಾನು (ಶ್ರುತಿ) ಹೇಳಿದ್ದನ್ನು ಅಂಗೀಕಾರಮಾಡದೇ ದುಷ್ಟಬುದ್ಧಿಯುಳ್ಳ ಯಾವನು ಭೇದವನ್ನೇ ಆಗಲಿ (ಭೇದಾಭೇದವನ್ನೇ ಆಗಲಿ) ತಿಳಿಯುತ್ತಾನೋ ಹಾಗೆಯೇ 'ಇವ' ಶಬ್ದದಿಂದ ಸೂಚಿತವಾದ ಅವತಾರಗಳಲ್ಲಿ ಪರಮಾತ್ಮನಿಗೆ ದುಃಖವನ್ನೂ, ಮರಣವನ್ನೂ, ಪಾರತಂತ್ರ್ಯವನ್ನೂ ಯಾವನು ತಿಳಿಯುತ್ತಾನೋ ಅವನು ಮೃತ್ಯುರೂಪವಾದ ನರಕದಲ್ಲಿ ಬಿದ್ದು ಅತ್ಯಂತ ದುಃಖವನ್ನು ಕೊಡುವ ಅಧೋಗತಿಯಾದ ತಮಸ್ಸಿಗೂ ಹೋಗುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಇತಿ ವಿಷ್ಣೋಃ ಸ್ವರೂಪೇಷು ನಾನಾತ್ವದ್ರಷ್ಟುರಂಜಸಾ ॥ ೯೧ ॥
ಅನರ್ಥಮಪಿ ಚ ಪ್ರಾಹ ತಸ್ಮಾದ್ರೂಪೇಷು ಮಾಪತೇಃ ।
ನಾನಾತ್ವಂ ತನ್ನಿಮಿತ್ತಾಶ್ಚ ದೋಷಾಃ ಸನ್ತಿ ನ ಕರ್ಹಿಚಿತ್ ॥ ೯೨ ॥

ಈ ರೀತಿಯಲ್ಲಿ ವಿಷ್ಣುವಿನ ಸ್ವರೂಪಗಳಲ್ಲಿ ಭೇದವನ್ನು ತಿಳಿಯುವವನಿಗೆ ಅನರ್ಥವನ್ನೂ ಕೂಡ ಚೆನ್ನಾಗಿ ಹೇಳುತ್ತದೆ. ಆದ್ದರಿಂದ ರಮಾಕಾಂತನ ರೂಪಗಳಲ್ಲಿ ಭೇದವು ಆ ಭೇದ ನಿಮಿತ್ತಕವಾದ ದೋಷಗಳೂ ಸರ್ವಥಾ ಇಲ್ಲ.

ಇತ್ಯಸ್ವಗತನಾನಾತ್ವಂ ಹರಿರೂಪೇಷು ಸಾದರಮ್ ।
ಶ್ರುತಿರುಕ್ತ್ವಾ ತತ್ರ ಹೇತುಂ ನೇಹ ನಾನೇತಿ ವಾಕ್ಯತಃ ॥ ೯೩ ॥
ಸ್ಪಷ್ಟೀಚಕಾರ ತೇನೇದಂ ವಾಕ್ಯಂ ಚ ಪ್ರಾಕ್ತನೋಕ್ತಿವತ್ ।
ವಿಷ್ಣೋ ಸ್ವಗತನಾನಾತ್ವಮಾತ್ರಂ ನೇತ್ಯಾಹ ನೇತರತ್ ॥ ೯೪ ॥

ಹೀಗೆ ಶ್ರುತಿಯು ಹರಿಯಲ್ಲಿ ಸ್ವಗತ ಭೇದವನ್ನು ಆದರಪೂರ್ವಕವಾಗಿ ಇಲ್ಲವೆಂದು ಹೇಳಿ ಈ ವಿಷಯದಲ್ಲಿ ಕಾರಣವನ್ನು 'ನೇಹ ನಾನಾಸ್ತಿ ಕಿಂಚನ' ಎಂಬ ವಾಕ್ಯದಲ್ಲಿ ಸ್ಪಷ್ಟಮಾಡಿತು. ಆದಕಾರಣ ಈ "ನೇಹ ನಾನಾಸ್ತಿ ಕಿಂಚನ" ವಾಕ್ಯವು ಹಿಂದಿನ ವಾಕ್ಯದಂತೆ ('ಯದೇವೇಹ ತದಮುತ್ರ', ಕಾ. ೩-೧-೧೦) ಸ್ವಗತ ಭೇದವನ್ನು ಮಾತ್ರ ಇಲ್ಲವೆಂದು ಹೇಳುತ್ತದೆ. ಇದರಿಂದ ಬೇರೆಯಾದ್ದನ್ನು ಹೇಳುವುದಿಲ್ಲ. ಹೇತುವಿನಿಂದ ಸಾಧಿಸುವ ರೀತಿ : ಪರಮಾತ್ಮನ ರೂಪಗಳಲ್ಲಿ ಗುಣಕ್ರಿಯಾದಿಗಳಲ್ಲಿ ಸ್ವಗತ ಭೇದವೇ ಆಗಲಿ ಭೇದಾಭೇದವೇ ಆಗಲಿ ಇಲ್ಲ—ಏಕೆಂದರೆ, ಹಾಗೆ ಭೇದವನ್ನು ತಿಳಿದವರಿಗೆ ತಮಃಪ್ರಾಪ್ತಿರೂಪ ಅನರ್ಥವು ಆಗುತ್ತದೆಯಾದ್ದರಿಂದ.

ಅತೋಽತ್ರ ವಿಶ್ವಮಿಥ್ಯಾತ್ವಂ ವದನ್ ಶ್ವಾ ಶ್ವಪಚೋಽಪಿ ವಾ ।
ಗರ್ದಭೋ ವಾ ಯತಃ ಪೂರ್ವವಾಕ್ಯಾರ್ಥಂ ನಾಸ್ಮರಚ್ಛುಧೀಃ ॥ ೯೫ ॥

ಆದ್ದರಿಂದ ಈ ಶ್ರುತಿಯು ಪ್ರಪಂಚ ಮಿಥ್ಯಾತ್ವವನ್ನು ಹೇಳುತ್ತದೆಂದು ಯಾವನು ಅನ್ನುವನೋ ಅವನು ಇಲ್ಲವೇ ನಾಯಿಯಾಗಿರಬೇಕು ಅಥವಾ ನಾಯಿಯ ಮಾಂಸವನ್ನು ತಿನ್ನುವವನಾಗಿರಬೇಕು, ಅಥವಾ ಕತ್ತೆಯಾಗಿರಬೇಕು. (ಅದೇಕೆ ಹೀಗೆನ್ನುವಿರಿ ಎನ್ನುವಿಯಾ?) ಅದಕ್ಕೆ ಇದು ಕಾರಣ. ದುಷ್ಟಬುದ್ಧಿಯಾದ ಇವನು ಹಿಂದಿನ ವಾಕ್ಯದ ಅರ್ಥವನ್ನು ಸ್ಮರಣೆ ಮಾಡಲಿಲ್ಲ.

ಸರ್ವಾಂತರ್ಯಾಮಿರೂಪಾಣಾಮಧಿಷ್ಠಾನತಯಾ ಪರಮ್ ।
ಜಗತ್ಪ್ರಸ್ತಾವೋಽತ್ರ ಚಾಸ್ತಿ ತಥಾಽಪಿ ನ ತದುಚ್ಯತೇ ॥ ೯೬ ॥
ಮುಖ್ಯಾರ್ಥೇ ಸತಿ ನಾಮುಖ್ಯಮಾಕಾಂಕ್ಷಂತೇ ಯತೋ ಬುಧಾಃ ।

ಸರ್ವ ವಸ್ತುಗಳಲ್ಲಿಯೂ ಅಂತರ್ಯಾಮಿಯಾಗಿರತಕ್ಕ ಪರಮಾತ್ಮನಿಗೆ ಅಧಿಷ್ಠಾನವಾಗಿ ಅಲ್ಲಿ (ಶ್ರುತಿಯಲ್ಲಿ) ಜಗತ್ತು ಪ್ರಸಕ್ತವಾಗಿದೆ. ಆದರೂ 'ಇಹ' ಎಂಬ ಪದದಿಂದ ಅದು ಹೇಳಲ್ಪಡುವುದಿಲ್ಲ. ಕಾರಣವೇನೆಂದರೆ, ಒಂದು ಪದಕ್ಕೆ ಮುಖ್ಯಾರ್ಥವು ಸಂಭವವಾಗುವಾಗ ಅಮುಖ್ಯಾರ್ಥವನ್ನು ಪಂಡಿತರು ಹೇಳುವುದಿಲ್ಲ.

ತಥಾಽಪಿ ಗುರುಣಾ ಸಾರ್ಧಮನ್ತೇವಾಸಿನಿ ಚಾಽಗತೇ ॥ ೯೭ ॥

ತಸ್ಮಾಪಿ ಚೋಪಚಾರೇಣ ಯಥಾನ್ನಾದ್ಯಂ ಪ್ರದೀಯತೇ ।
ತಥಾ ಜಗದ್ವ್ಯಾಚಿತಾಯಾಮಪಿ ವಿಶ್ವಸ್ಯ ರಕ್ಷಕಮ್ ॥ ೯೮ ॥

ಪರಿತ್ಯಜ್ಯಾಸ್ಮದುಕ್ತಾರ್ಥಂ ಯಸ್ತ್ವನರ್ಥಪರಂಪರಾಮ್ ।
ದಿಶಂತಮರ್ಥಂ ಗೃಹ್ಣಾತಿ ಸ ಶ್ವಾದ್ಯನ್ಯತಮೋ ನ ಕಿಮ್ ॥ ೯೯ ॥

ಸಶಿಷ್ಯಾಣಾಂ ಗುರೂಣಾಂ ಚ ಯಥಾ ಘಾತಕರೋ ನರಃ ।

ಹೀಗಾವರೂ (ಮುಖ್ಯತಯಾ ಪರಮಾತ್ಮನು ಪ್ರಸಕ್ತನಾಗಿದ್ದರೂ) ಗುರುವಿನ ಜೊತೆಯಲ್ಲಿ ಶಿಷ್ಯನು ಬಂದಲ್ಲಿ ಶಿಷ್ಯನಿಗೂ ಕೂಡ ಉಪಚಾರದಿಂದ ಅನ್ನಾದಿಗಳನ್ನು ಹೇಗೆ ಕೊಡುತ್ತೇವೆಯೋ ಹಾಗೆ ' ಇಹ ' ಎಂಬ ಪದಕ್ಕೆ ಜಗತ್ತು ಎಂದು ಅರ್ಥಮಾಡಿ (ಶ್ಲೋಕ ೬೯ರಿಂದ ೭೨ನೇ ಶ್ಲೋಕಾರ್ಥ ವನ್ನು ನೋಡಿ) ಶ್ರುತಿಗೆ ಸಮಂಜಸವಾದ ಅರ್ಥವನ್ನು ಮಾಡಿರುವೆವು. ಈ ಮಾರ್ಗವನ್ನು ಬಿಟ್ಟು ನಾವು ' ಇಹ ' ಎಂಬ ಪದಕ್ಕೆ ಹೇಳುವ ವಿಶ್ವರಕ್ಷಕ ನಾದ ಪರಮಾತ್ಮನನ್ನು ಪರಿತ್ಯಾಗಮಾಡಿ ಯಾವನಾದರೆ ಅನರ್ಥಪರಂಪರಾ ವನ್ನು ತಂದೊಡ್ಡುವ ಅರ್ಥವನ್ನು ಸ್ವೀಕಾರ ಮಾಡುವನೋ ಅವನು ಶಿಷ್ಯರ ಸಹಿತವಾಗಿ ಬಂದ ಗುರುಗಳಿಗೆ ಘಾತಕವನ್ನು ಮಾಡುವ ನರನು ಹೇಗೋ ಹಾಗೆ ಇವನೂ ಕೂಡ ನಾಯಿಯೇ ಮೊದಲಾದ ಹೀನಜಂತುಗಳಲ್ಲೊಬ್ಬನಲ್ಲ ವೇನು ?

ಪ್ರತಿಜ್ಞಾರೂಪತೋ ನಾನಾತ್ವಭಾವೋ ವಿಷ್ಣುಮೂರ್ತಿಷು ॥೧೦೦॥

ಸಾದರಂ ಚ ಸತಾತ್ಪರ್ಯಂ ಪೂರ್ವಸ್ಮಿನ್ ವಾಕ್ಯ ಈರಿತಃ ।
ಪುನಸ್ತತ್ರೈವ ತಾತ್ಪರ್ಯದ್ಯೋತನಾಯ ಹರೌ ಮಿಥಃ ॥ ೧೦೧ ॥

ನಾನಾರ್ಥದರ್ಶಿನೋ ವಾಽಪಿ ಹ್ಯನರ್ಥಃ ಕಥಿತಃ ಶ್ರುತೌ ।
ತತ್ರೈವ ಯುಕ್ತಿರೂಪತ್ವೇನೇದಂ ವಾಕ್ಯಂ ವಿವೇಕಿಭಿಃ ॥ ೧೦೨ ॥

ಯೋಜನೀಯಂ ನಚೇತ್ತತ್ಕ್ರಾಂತಾರ್ಥತ್ಯಾಗೇನ ದೂಷಣಮ್ ।
ಉಪಕ್ರಮವಿರೋಧಾಖ್ಯಂ ಕಥಂ ನಸ್ಯಾದ್ವಿಚಾರಯ ॥ ೧೦೩ ॥

'ಯದೇವೇಹ ತದಮುತ್ರ ಯದಮುತ್ರ ತದನ್ವಿಹ' ಎಂದು ಪೂರ್ವ ವಾಕ್ಯದಲ್ಲಿ ಪ್ರತಿಜ್ಞಾರೂಪವಾಗಿ ವಿಷ್ಣುವಿನ ಮೂರ್ತಿಗಳಲ್ಲಿ ಭೇದವಿಲ್ಲವೆಂಬ ತತ್ತ್ವವು ಆದರಪೂರ್ವಕವಾಗಿಯೂ ತಾತ್ಪರ್ಯ ಸಹಿತವಾಗಿಯೂ ಉಕ್ತವಾಗಿದೆ. ಪುನಃ ಆ ವಿಷಯದಲ್ಲಿಯೇ ತಾತ್ಪರ್ಯವಿದೆ ಎಂದು ತೋರಿಸುವುದಕ್ಕಾಗಿ ಮುಂದಿನ ವಾಕ್ಯದಲ್ಲಿ ಅಂದರೆ, "ಮೃತ್ಯೋಸ್ಸಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ" ಎಂಬಲ್ಲಿ ಪರಮಾತ್ಮನ ರೂಪಗಳಲ್ಲಿ ಪರಸ್ಪರ ಭೇದವನ್ನು ತಿಳಿಯುವವನಿಗೆ ಅನರ್ಥವನ್ನು ಶ್ರುತಿಯು ಹೇಳುತ್ತದೆ. ಇದೇ ವಿಷಯದಲ್ಲಿ ಯುಕ್ತಿರೂಪವಾಗಿ ಈ ವಾಕ್ಯವನ್ನು ವಿವೇಕಿಗಳು ಯೋಜನೆ ಮಾಡಬೇಕು (ಅರ್ಥ ಹೇಳಬೇಕು). ಇಲ್ಲದಲ್ಲಿ ಪ್ರಾರಂಭದಲ್ಲಿ ಹೇಳಿದ ಅರ್ಥವನ್ನು ಬಿಡುವುದರಿಂದ ಉಪಕ್ರಮ ವಿರೋಧವೆಂಬ ದೂಷಣವು ಹೇಗೆ ಬರದೇ ಇದ್ದೀತು? ವಿಚಾರಮಾಡು.

ಅಪ್ರಸ್ತುತ ಪ್ರಪಂಚಸ್ಯ ವಿಚಾರೋಽತ್ರ ನ ಶೋಭತೇ ।
ಇಹ ಬ್ರಹ್ಮಣಿ ರೂಪಾಣಿ ಯಾನಿ ಸನ್ತಿ ಸಹಸ್ರಶಃ ॥ ೧೦೪ ॥

ಯೇ ಚಾವಯವರೂಪೇಣ ಸನ್ತಿ ಹಸ್ತಾದಯೋ ಹರೌ ।
ಗುಣಾಶ್ಚ ಯೇ ಶ್ರುತ್ಯುದಿತಾಃ ಸನ್ತ್ಯನನ್ತಾಶ್ಚ ಸನ್ತತಾಃ ॥ ೧೦೫ ॥

ಏತೇಷು ಕಿಂಚನಾಪೀಶಾನ್ಮೂಲರೂಪಾಜ್ಜನಾರ್ದನಾತ್ ।
ನಾನಾಭೂತಂ ನಾಸ್ತಿ ತಥಾ ಸ್ವಾವತಾರೇಷು ಚ ಪ್ರಭೋಃ ॥೧೦೬॥

ನಾನಾ ಚಾವಯವೇಭ್ಯೋಽಸ್ತಿ ಗುಣಾದಿಭ್ಯೋಽಪಿ ನಾಸ್ತಿ ತು ।
ಮಿಥಶ್ಚ ಮತ್ಸ್ಯಕೂರ್ಮಾದಿ ರೂಪೇಷ್ವಪಿ ಚ ನೈವ ಸಾ ॥ ೧೦೭ ॥

ಅಪ್ರಸ್ತುತವಾದ ಪ್ರಪಂಚದ ವಿಚಾರವು ಇಲ್ಲಿ ಶೋಭಿಸುವುದಿಲ್ಲ. ಈ ಬ್ರಹ್ಮನಲ್ಲಿ ಯಾವ ಅನಂತರೂಪಗಳಿವೆಯೋ, ಹಸ್ತಪಾದಾದಿಗಳೇ ಮೊದಲಾದ ಅವಯವಗಳಿವೆಯೋ ಅಲ್ಲದೇ ಶ್ರುತ್ಯುಕ್ತವಾದ ಸಂತತಾಃ= ನಿತ್ಯಗಳಾದ ಅಥವ ಚೆನ್ನಾಗಿ ವ್ಯಾಪ್ತಗಳಾದ ಅನಂತ ಗುಣಗಳಿವೆಯೋ, ಇವುಗಳಿಗೆ ಮೂಲರೂಪಿಯಾದ ಜನಾರ್ದನನಿಂದ ಯಾವ ಸ್ವಲ್ಪವೇ ಆಗಲಿ ಭೇದವು ಇಲ್ಲ. ಹಾಗೆಯೇ ಸ್ವಾಮಿಗೆ ತನ್ನ ಅವತಾರಗಳಲ್ಲಿ ಅವಯವಗಳಿಂದಲೇ ಆಗಲಿ ಗುಣಗಳಿಂದಲೇ ಆಗಲಿ ಭೇದವು ಇಲ್ಲ. ಹಾಗೆಯೇ

ಮತ್ಸ್ಯ ಕೂರ್ಮಾದಿ ಪರಮಾತ್ಮನ ಅವತಾರರೂಪಗಳಿಗೆ ಪರಸ್ಪರವಾಗಿಯೂ ಭೇದವಿಲ್ಲವೇ ಇಲ್ಲ.

ಇತೀಹೇತಿಪದಾದೇವ ಪ್ರಸ್ತುತೇಷ್ವಮಿತೇಷು ಚ ।
ಮೂಲರೂಪಾದಭಿನ್ನತ್ವಾತ್ತತ್ಸ್ವಭಾವಾನುಸಾರಿಷು ॥ ೧೦೮ ॥

ಪೂರ್ವೋಕ್ತ ಹರಿರೂಪೇಷು ತೇಷಾಮೇವ ಗುಣೇಷು ಚ ।
ತೇಷಾಮೇವಚ ರೂಪಾಣಾಂ ಹಸ್ತಾದ್ಯವಯವೇಷು ಚ ॥ ೧೦೯ ॥

ತದ್ವದೇವ ಪ್ರಸ್ತುತೇಷು ನಾನಾತ್ವಸ್ಯ ನಿಷೇಧನಮ್ ।
ಶ್ರುತಿರೇಷಾ ಕುರುತ ಇತ್ಯರ್ಥ ಏವಾತ್ರ ಶೋಭತೇ ॥ ೧೧೦ ॥

ಹೀಗೆ 'ಇಹ' ಎಂಬ ಪದದಿಂದಲೇನೇ ಪ್ರಸ್ತುತವಾದ ಅನಂತವಾದ ರೂಪಗಳಿಗೆ ಮೂಲರೂಪದಿಂದ ಭೇದವಿಲ್ಲದಿರುವುದರಿಂದ ಆ ಮೂಲರೂಪದ ಸ್ವಭಾವವನ್ನು ಅನುಸರಿಸಿದ ಹಿಂದೆ ಹೇಳಲ್ಪಟ್ಟ ಪರಮಾತ್ಮನ ರೂಪಗಳಲ್ಲಿಯೂ, ಆ ರೂಪಗಳ ಗುಣಗಳಲ್ಲಿಯೂ ಅದೇ ರೀತಿಯಲ್ಲಿ ಪ್ರಸಕ್ತವಾದ ಆ ರೂಪಗಳ ಹಸ್ತಾದಿ ಅವಯವಗಳಲ್ಲಿಯೂ, ಭೇದದ ನಿಷೇಧವನ್ನು ಶ್ರುತಿಯು ಮಾಡುತ್ತದೆ ಎಂಬೀ ಅರ್ಥವೇ ಶೋಭಿಸುವುದು.

ಅಪ್ರಸ್ತುತ ಜಗನ್ನಾನಾತ್ವಸ್ಯ ವಾರ್ತಾಽಪಿ ನಾತ್ರತತ್ ।
ವಕ್ತುಂ ಯುಕ್ತಂ ಬುದ್ಧಿಮತಾ ಪೂರ್ವೋತ್ತರವಿವೇಕಿನಾ ॥೧೧೧॥

ಅಪ್ರಸ್ತುತವಾದ ಜಗತ್ತಿನ ನಾನಾತ್ವದ ಅಂದರೆ ಭೇದದ ಮಾತೇ ಇಲ್ಲ. ಪೂರ್ವೋತ್ತರಗಳನ್ನು ವಿವೇಚನಮಾಡುವ ಬುದ್ಧಿವಂತರಿಗೆ ಅದು ಹೇಳುವುದು ಯುಕ್ತವಲ್ಲ.

ಗುಣಾನ್ವಿನಾ ಯತೋ ರೂಪಂ ತಥಾ ಹಸ್ತಾದಿಕಾನ್ ವಿನಾ ।
ನೈವಾಸ್ತಿ ತೇನ ಸರ್ವಂ ಚ ಪೂರ್ವಂ ಪ್ರಕ್ರಾನ್ತಮೇವ ಹಿ ॥೧೧೨॥

(ಪರಮಾತ್ಮನ ರೂಪಗಳು ಪ್ರಸಕ್ತವಾಗಿವೆ. ಆದರೆ ಗುಣಗಳು ಎಲ್ಲಿ ಪ್ರಸಕ್ತವಾದವು? ಹಸ್ತಾದಿಗಳು ಎಲ್ಲಿ ಪ್ರಸಕ್ತವಾದವು?) ಎಂದರೆ ಉತ್ತರ-

ಗುಣಗಳಿಲ್ಲದೇ, ಹಸ್ತಾದಿಗಳಿಲ್ಲದೇ ರೂಪ (Form) ಇಲ್ಲ. ಆದ್ದರಿಂದ ಇವೆಲ್ಲವೂ ಪೂರ್ವದಲ್ಲಿ ಪ್ರಸಕ್ತವಾದವುಗಳೇ.

ಯತಶ್ಚೋದೇತಿ ಸೂರ್ಯೋಽಸ್ತಂ ಯತ್ರ ಗಚ್ಛತ್ಯಧೀಶ್ವರೇ ।
ಇತಿ ಸೂರ್ಯಾದಿದೇವಾನಾಂ ಪ್ರೇರಕತ್ವಾದಯೋ ಗುಣಾಃ ॥೧೧೩

ಪೃಥಕ್ತ್ವೇ ಪೂರ್ವಂ ಕಥಿತಾಃ ಪ್ರಸ್ತುತಸ್ಯ ಕಥೈವ ತತ್ ।
ಪರೇಷಾಮಿವ ತಸ್ಮಾನ್ನೋ ನ ಕಾಽಪ್ಯಪ್ರಸ್ತುತಾ ಕಥಾ ॥ ೧೧೪ ॥

"ಯತಶ್ಚೋದೇತಿ ಸೂರ್ಯೋಽಸ್ತಂ ಯತ್ರ ಚ ಗಚ್ಛತಿ| ತಂ ದೇವಾಸ್ಸರ್ವೇ ಅರ್ಪಿತಾಸ್ತದುನಾತ್ಯೇತಿ ಕಶ್ಚನ||" (ಕಾಠಕ ೨-೧-೯) ಎಂಬ ಕಾಠಕ ಶ್ರುತಿಯಲ್ಲಿ ಸೂರ್ಯಾದಿ ದೇವತೆಗಳನ್ನು ಪ್ರೇರಿಸುವುದೇ ಮೊದಲಾದ ಗುಣಗಳು ಪೃಥಕ್ಕಾಗಿ ಹಿಂದೆ ಹೇಳಲ್ಪಟ್ಟಿವೆ. ಆದ್ದರಿಂದ ಪ್ರಸ್ತುತವಾದದ್ದನ್ನೇ 'ಇಹ' ಎಂದು ಹೇಳುತ್ತದೆ. ಹೀಗಿರುವುದರಿಂದ ಇತರರಿಗೆ ಹೇಗೆ ಅಪ್ರಸ್ತುತ ಕಥನರೂಪ ದೋಷ ಬರುತ್ತದೋ ಹಾಗೆ ನಮಗೆ ಬರುವುದಿಲ್ಲ. ಅಪ್ರಸ್ತುತ ವಾದ್ದು ಯಾವುದೂ ನಾವು ಹೇಳಲಿಲ್ಲ.

ಕಿಂಚನೇತಿ ಪದಸ್ವಾರಸ್ಯೇನಾರ್ಥತ್ರಿತಯಂ ಶ್ರುತಿಃ ।
ಅಭಿಪ್ರೈತಿ ಯತಸ್ತಸ್ಮಾದುಕ್ತಾರ್ಥಃ ಶೋಭತೇತರಾಮ್ ॥ ೧೧೫ ॥

ಅಲ್ಲದೆ 'ಕಿಂಚನ' ಎಂಬ ಪದದ ಸ್ವಾರಸ್ಯದಿಂದಲೂ, ರೂಪ, ಅವಯವ, ಗುಣ ಇವು ಮೂರೂನು ಶ್ರುತಿಗೆ ಅಭಿಪ್ರೇತವಾದದ್ದೆಂದು ಕಂಡು ಬರುವುದರಿಂದ ನಾವು ಹೇಳಿದ ಅರ್ಥವು ಅತ್ಯಂತವಾಗಿ ಶೋಭಿಸುತ್ತದೆ.

ನ ಹಿ ಕಿಂಚನ ವಾಚ್ ಮುಂಚೇತ್ಕಂಚನಾರ್ಥಂ ಮಹೋದರೀ ।

ದೊಡ್ಡಹೊಟ್ಟೆಯುಳ್ಳ 'ಕಿಂಚನ' ಎಂಬ ವಾಕ್ಕು ಯಾವ ಅರ್ಥವನ್ನೂ ಬಿಡದೆ ಎಲ್ಲವನ್ನೂ ನುಂಗುತ್ತಾಳೆ.

ರೂಪನಾನಾತ್ವವೇತ್ತೄಣಾಂ ದ್ವಿರನರ್ಥ ಉದಾಹೃತಃ ॥ ೧೧೬ ॥

ಪರಮಾತ್ಮನ ರೂಪಗಳಲ್ಲಿ ಭೇದವನ್ನು ತಿಳಿಯುವವರಿಗೆ ಅನರ್ಥ ವಾಗುತ್ತೆಂದು ಶ್ರುತಿಯಲ್ಲಿ ಎರಡು ಸಾರಿ ಹೇಳಿದೆ.

"ಮೃತ್ಯೋಸ್ಸಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ ||
(ಕಾ. ೨.೧.೧೦)

ಮನಸೈವೇದಮಾಪ್ತವ್ಯಂ ನೇಹ ನಾನಾಸ್ತಿ ಕಿಂಚನ |
ಮೃತ್ಯೋಸ್ಸಮೃತ್ಯುಂ ಗಚ್ಛತಿ ಯ ಇಹ ನಾನೇವ ಪಶ್ಯತಿ" ||
(ಕಾ. ೨.೧.೧೧)

ಧರ್ಮನಾನಾತ್ವವೇತ್ತುಸ್ತು ನಾನರ್ಥಃ ಸ್ಪಷ್ಟಮೀರಿತಃ ।

ಪರಮಾತ್ಮನ ಜ್ಞಾನಾನಂದಾದಿ ಧರ್ಮಗಳಲ್ಲಿ ಭೇದವನ್ನು ತಿಳಿದವನಿಗೆ ಆಗುವ ಅನರ್ಥವನ್ನು ಶ್ರುತಿಯು ಸ್ಪಷ್ಟವಾಗಿ ಹೇಳಲಿಲ್ಲ. (ಆದ್ದರಿಂದ ಈ ನ್ಯೂನತೆಯನ್ನು ಇಲ್ಲದ ಹಾಗೆ ಮಾಡಲು ಮುಂದೆ ಶ್ರುತಿಯು.)

ಸಿಂಹಾವಲೋಕನನ್ಯಾಯಾದ್ಧರ್ಮನಾನಾತ್ವವೇತ್ತರಿ || ೧೧೭ ||

ಏವಂ ಧರ್ಮಾನ್ ಪೃಥಕ್ ಪಶ್ಯನ್ನಿತ್ಯನರ್ಥಂ ಪುನಃ ಸ್ವಯಮ್ ।
ಸ್ಪಷ್ಟಮಾಹ ತತಃ ಸರ್ವತ್ರೈಕವಾಕ್ಯತ್ವಮಪ್ಯಭೂತ್ || ೧೧೮ ||

ಸಿಂಹವು ಹೋಗುತ್ತಾ ಹೇಗೆ ಹಿಂತಿರುಗಿ ನೋಡುತ್ತದೆಯೋ ಹಾಗೆ ಶ್ರುತಿಯು ಪರಮಾತ್ಮನ ಜ್ಞಾನಾನಂದಾದಿ ಧರ್ಮಗಳಿಗೆ ಪರಮಾತ್ಮನಿಂದಲೂ ಪರಸ್ಪರವಾಗಿಯೂ ಭೇದವನ್ನು ತಿಳಿಯುವವನಿಗೆ "ಏವಂ ಧರ್ಮಾನ್ ಪೃಥಕ್ ಪಶ್ಯನ್ ತಾನೇವಾನುವಿಧಾವತಿ" (ಕಾ. ೨.೧.೧೪) ಎಂಬೀ ವಾಕ್ಯದಲ್ಲಿ ಪುನಃ ತಾನೇನೇ ಸ್ಪಷ್ಟವಾಗಿ ಅನಿಷ್ಟಫಲವನ್ನು ಹೇಳುತ್ತದೆ. ಆದ್ದರಿಂದ ಎಲ್ಲ ಸ್ಥಳದಲ್ಲಿಯೂ ಏಕವಾಕ್ಯತಾ ಬಂತು.

ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ ।
ಏವಂ ಧರ್ಮಾನ್ಪೃಥಕ್ ಪಶ್ಯಂಸ್ತಾನೇವಾನು ವಿಧಾವತಿ ||
(ಕಾ. ೨.೧-೧೪)

ಶ್ರೀ ಪರಮಾತ್ಮನ ಜ್ಞಾನಾನಂದಾದಿಗುಣಗಳು ಶ್ರೀ ಪರಮಾತ್ಮನಿಂದಲೂ, ಪರಸ್ಪರವಾಗಿಯೂ ಭಿನ್ನಗಳಾಗಿವೆ ಎಂಬುದಾಗಿ ತಿಳಿಕೊಂಡವನಿಗೆ, ಪರ್ವತಶಿಖರದಲ್ಲಿ ಬಿದ್ದ ನೀರು ಹೇಗೆ ಅದೇ ಕ್ಷಣದಲ್ಲಿ ಅಧಃ ಪ್ರದೇಶಕ್ಕೆ ಓಡಿಹೋಗುತ್ತದೆಯೋ ಹಾಗೆಯೇ ಇವುಗಳ ಭೇದ ಜ್ಞಾನಾನಂತರದಲ್ಲಿಯೇ ತಮಸ್ಸು ಪ್ರಾಪ್ತವಾಗುತ್ತದೆಯೇ ಸರಿ.

ಏವಂ ಚ ಮೂಲರೂಪಾದೌ ಸರ್ವತ್ರ ಪರಮಾತ್ಮನಃ ।
ಅಸಾಧಾರಣರೂಪಾಂಸ್ತು ನಿಯಂತೃತ್ವೇಶಕಾದಿಕಾನ್ ॥ ೧೧೯ ॥

ವ್ಯಾಪ್ತತ್ವಾದೀಂಶ್ಚ ಸದ್ಧರ್ಮಾನ್ಪೂರ್ವಂ ಪ್ರಸ್ತಾವಿತಾನ್ವಿಭೋಃ ।
ಪೃಥಕ್ ಪಶ್ಯಂಶ್ಚೈವಮೇವ ರೂಪನಾನಾತ್ವದರ್ಶಿವತ್ ॥ ೧೨೦ ॥

ಅಧಃ ಪತತಿ ಗಿರ್ಯಗ್ರವೃ(ಷ್ಟನೀರ)ಷ್ಟೋದಕಮಿವೇತಿ ಚ ।
ಅನರ್ಥಂ ಧರ್ಮನಾನಾತ್ವದರ್ಶಿನೋಽಪಿ ಹ್ಯದರ್ಶಯತ್ ॥ ೧೨೧ ॥

ಈ ರೀತಿಯಲ್ಲಿ ಮೂಲರೂಪ ಮತ್ತು ಅವತಾರ ರೂಪಗಳಲ್ಲಿ ಸರ್ವತ್ರ ಪರಮಾತ್ಮನಿಗೆ ಇರುವ ನಿಯಾಮಕತ್ವ, ಈಶತ್ವ, ದೇಶಕಾಲಗುಣಗಳಿಂದ ವ್ಯಾಪ್ತತ್ವ ಇವೇ ಮೊದಲಾದ, ಇತರರಲ್ಲಿ ಇಲ್ಲದ, ಅವನಲ್ಲಿ ಮಟ್ಟಿಗೆ ಇರುವ, ಹಿಂದೆ ಪ್ರಸ್ತಾಪಿಸಲ್ಪಟ್ಟ ಸ್ವಾಮಿಯ ಧರ್ಮಗಳನ್ನು ಭಿನ್ನವಾಗಿ ತಿಳಿದಲ್ಲಿ, ರೂಪಗಳಲ್ಲಿ ಭೇದವನ್ನು ತಿಳಿದವನಿಗೆ ಹೇಗೋ ಹಾಗೆ, ಬೆಟ್ಟದಮೇಲೆ ಬಿದ್ದ ನೀರು ಹೇಗೆ ತಟ್ಟನೆ ಕೆಳಗೆ ಬೀಳುವುದೋ ಹಾಗೇ ಭೇದವನ್ನು ತಿಳಿದ ಕೂಡಲೇ ಅಧೋಲೋಕವಾದ ತಮಸ್ಸಿಗೆ ಬೀಳುವನು ಎಂಬುದಾಗಿ ಧರ್ಮ ಭೇದವನ್ನು ತಿಳಿದವನಿಗೂ ಕೂಡ ಅನರ್ಥವನ್ನು ಪ್ರತಿಪಾದಿಸಿ ಇರುವುದರಿಂದ ಏಕವಾಕ್ಯತಾ ಬಂತು.

ಯತಶ್ಚೋದೇತೀತಿ ವಾಕ್ಯೇ ದೇವಯನ್ತೃತ್ವಮೀರಿತಮ್ ।
ಯದೇವೇತಿ ಚ ವಾಕ್ಯೇ ಚ ಜಗದ್ಯನ್ತೃತ್ವಮೀರಿತಮ್ ॥ ೧೨೨ ॥

ಜಗತಿ ವ್ಯಾಪ್ತತಾ ಚೋಕ್ತಾ ತೇನ ಸರ್ವೇಶತಾಽಪಿ ಚ ।
ಉಕ್ತಾ ಪ್ರಭೋರ್ದೇಹಿನಾಶೇಽಪ್ಯನಾಶಾನ್ನಿತ್ಯತಾಪಿ ಚ ॥ ೧೨೩ ॥

ಅಜಾತಮೂಲರೂಪೇಣಾಭಿನ್ನತ್ವಾದ್ದೇಹಿಭಿಃ ಸಹ ।
ಅಜಾತತ್ವಾಚ್ಚ ಜನ್ಮಾದಿದೋಷಾಣಾಮತಿದೂರತಾ ॥ ೧೨೪ ॥

ಇತ್ಯಾದ್ಯಾ ಬ್ರಹ್ಮಧರ್ಮಾಶ್ಚ ಯದನನ್ತಾಃ ಪ್ರಕೀರ್ತಿತಾಃ ।
ಅತೋ ಧರ್ಮಾನಿತಿಪದಂ ಸರ್ವಾನಪಿ ನಿಜೋದರೇ ॥ ೧೨೫ ॥

ಸಂಜಗ್ರಾಹ ತತಃ ಸರ್ವೇ ಧರ್ಮಾಶ್ಚ ಬ್ರಹ್ಮರೂಪಿಣಃ ।
ಆಸನ್ನಾನಾತ್ವಲೇಶೋಽಪಿ ನೈತೇಷ್ವಸ್ತೀತಿ ಸಿದ್ಧ್ಯತಿ ॥ ೧೨೬ ॥

" ಯತಶ್ಚೋದೇತಿ ಸೂರ್ಯಃ " (ಕಾ. ೨.೧.೯) ಎಂಬ ವಾಕ್ಯದಲ್ಲಿ ಪರಮಾತ್ಮನಿಗೆ ದೇವತೆಗಳ ನಿಯಾಮಕತ್ವವು ಹೇಳಲ್ಪಟ್ಟಿತು. "ಯದೇವೇಹ" (ಕಾ. ೨.೧.೧೦) ಎಂಬ ವಾಕ್ಯದಲ್ಲಿ ಜಗತ್ತಿನ ನಿಯಾಮಕತ್ವವೂ, ಜಗತ್ತಿನಲ್ಲಿ ವ್ಯಾಪಿಸಿರೋಣವೂ ಆದ್ದರಿಂದಲೇ ಅವನಿಗೆ ಸರ್ವೇಶತ್ವವೂ ಹೇಳಲ್ಪಟ್ಟಿತು. ದೇಹಯೋಗ ವಿಯೋಗರೂಪವಾದ ಜನಿಮೃತ್ಯುವು ಹೇಗೆ ಜೀವನಿಗೆ ಇದೆಯೋ ಹಾಗೆ ಪರಮಾತ್ಮನಿಗೆ ಜನಿಮೃತ್ಯುವು ಇಲ್ಲದಿರುವುದರಿಂದ ನಿತ್ಯತ್ವವೂ ಹೇಳಲ್ಪಟ್ಟಿತು. ಏಕೆಂದರೆ ಹುಟ್ಟದೇ ಇದ್ದ ಮೂಲರೂಪದಿಂದ ಅವತಾರ ರೂಪಗಳಿಗೂ ಅಂತರ್ಯಾಮಿ ರೂಪಗಳಿಗೂ ಅಭೇದ ಹೇಳಿದೆ. ಆದ್ದರಿಂದಲೇ ಜೀವನ ಜೊತೆಯಲ್ಲಿ ಹುಟ್ಟದಿರುವುದರಿಂದ ಪರಮಾತ್ಮನಿಗೆ ಜನ್ಮಾದಿದೋಷಗಳು ಅತಿ ದೂರವಾದವು. ಇತ್ಯಾದಿ ಅನಂತವಾದ ಬ್ರಹ್ಮ ಧರ್ಮಗಳು ಶ್ರುತಿಯಲ್ಲಿ ಹಿಂದೆ ಹೇಳಲ್ಪಟ್ಟದ್ದರಿಂದ " ಏವಂ ಧರ್ಮಾನ್ ಪೃಥಕ್ ಪಶ್ಯನ್ " (ಕಾ. ೨.೧.೧೪) ಎಂಬ ವಾಕ್ಯದಲ್ಲಿರುವ ' ಧರ್ಮಾನ್ ' ಎಂಬ ಪದವು ಸರ್ವ ಬ್ರಹ್ಮಧರ್ಮಗಳನ್ನೂ ತನ್ನ ಉದರದಲ್ಲಿ ಎಳೆದು ಕೊಂಡಿತು. ಆದ್ದರಿಂದ ಸರ್ವಧರ್ಮಗಳೂ ಕೂಡ ಬ್ರಹ್ಮಸ್ವರೂಪಭೂತ ಗಳಾದವು. ಇವುಗಳಲ್ಲಿ ಲೇಶವಾದರೂ ಭೇದವಿಲ್ಲವೆಂಬುದು ಸಿದ್ಧಿಸುತ್ತದೆ.

ರೂಪಾವಯವಧರ್ಮಾಣಾಂ ಯಸ್ಮಾದ್ಭೇದಂ ನ್ಯವಾರಯತ್ ।
ಕಿಂಚನೇತಿ ಪದಸ್ವಾರಸ್ಯೇನ ಶ್ರುತಿಸರಸ್ವತೀ ॥ ೧೨೭ ॥
ಅತೋ ಮಿಥ್ಯಾದರ್ಶನೇನೈವಾನರ್ಥೋಽಯಮುದೀರಿತಃ ।
ನ ತು ಸೂರ್ಯೋದಯದ್ರಷ್ಟುರಿವ ನಿಂದನಮಾತ್ರತಃ ॥ ೧೨೮ ॥

ಶ್ರುತಿವಾಕ್ಯವು ' ಕಿಂಚನ ' ಎಂಬೀ ಪದದ ಅರ್ಥಸ್ವಾರಸ್ಯದಿಂದ ಪರಮಾತ್ಮನ ರೂಪ, ಅವಯವ, ಧರ್ಮಗಳಲ್ಲಿ ಭೇದವನ್ನು ನಿವಾರಣೆ ಮಾಡಿತು. ಆದ್ದರಿಂದ ಸೂರ್ಯೋದಯವನ್ನು ನೋಡುವವನಿಗೆ ನಿಂದಿಸುವ ಮಾತ್ರದಿಂದ ಅನರ್ಥವು ಹೇಳಿರುವುದು ಹೇಗೋ ಹಾಗಲ್ಲದೆ, ಪರಮಾತ್ಮನಲ್ಲಿ ಇಲ್ಲದ ಭೇದವನ್ನು ನೋಡುವ ಮಿಥ್ಯಾಜ್ಞಾನದಿಂದ ಈ ಅನರ್ಥವು ಅಂದರೆ ತಮಃಪ್ರಾಪ್ತಿರೂಪವಾದ ಅನರ್ಥವು ಹೇಳಿದೆ.

"ನೇಕ್ಷೇತೋದ್ಯಂತಮಾದಿತ್ಯಂ ನಾಸ್ತಮ್ಯಂತಂ ಕದಾಚನ |
ನೋಪರಕ್ತಂ ನವಾರಿಸ್ಥಂ ನ ಮಧ್ಯಂ ನಭಸೋಗತಂ || ಇತಿ ಸ್ಮೃತಿಃ" ||

ಉದಯಿಸತಕ್ಕ ಮತ್ತು ಅಸ್ತನಾಗುವ ಸೂರ್ಯನನ್ನು ಸರ್ವಥಾ ನೋಡಬಾರದು. ಹಾಗೆಯೇ ಗ್ರಹಗ್ರಸ್ತ ಸೂರ್ಯನನ್ನೂ ಮಧ್ಯಂದಿನದ ಸೂರ್ಯನನ್ನೂ ನೋಡಬಾರದು.

ವಿದ್ಯಮಾನನಿಷೇಧಾರ್ಥದ್ರಷ್ಟೄಣಾಂ ಪಾತಕಂ ತು ಯತ್ ।
ತದಲ್ಪಮೇವ ನ ಮಹದಿತಿ ಸರ್ವಸ್ಯ ಸಮ್ಮತಮ್ ॥ ೧೨೯ ॥

ಫಲಂ ಚಾಸ್ಯ ಸ್ವಲ್ಪಮೇವ ನ ತು ನಾರಕದರ್ಶನಮ್ ।
ತಮಃ ಪ್ರಾಪ್ತಿಸ್ತು ನಿತರಾಂ ತಸ್ಮಾದೇತನ್ನಿದರ್ಶನಮ್ ॥ ೧೩೦ ॥

ವಿದ್ಯಮಾನಸ್ಯ ಭೇದಸ್ಯ ದೃಷ್ಟಿರೇವಾತ್ರ ನಿನ್ದಿತಾ ।
ಇತಿ ಶಂಕಾಪಿಶಾಚೀ ಚ ಗರ್ಭಸ್ರಾವಾನ್ಮೃತಾಽಭವತ್ ॥ ೧೩೧ ॥

ಇರುವ ಯಾವುದಾದರೂ ಒಂದು ವಸ್ತುವನ್ನು ನೋಡಬಾರದೆಂದು ಶಾಸ್ತ್ರವು ನಿಷೇಧಮಾಡಿದರೆ, ಹಾಗೆ ಅದನ್ನು ನೋಡುವವನಿಗೆ ಬರುವ ಪಾಪವು ಯಾವುದೋ ಅದು ಸ್ವಲ್ಪವೇ, ದೊಡ್ಡದಲ್ಲವೆಂಬುದು ಸರ್ವಸಮ್ಮತ. ಆ ಪಾಪದ ಫಲವೂ ಸ್ವಲ್ಪವೇ. ಅದರಿಂದ ನರಕದರ್ಶನವಾಗುವುದಿಲ್ಲ. ತಮಃ ಪ್ರಾಪ್ತಿಯಂತೂ ಅದರಿಂದ ಸುತರಾಂ ಇಲ್ಲ. ಹೀಗಿರುವುದರಿಂದ "ಯ ಇಹ ನಾನೇವ ಪಶ್ಯತಿ" (ಕಾ. ೨.೧.೧೦) ಎಂಬಲ್ಲಿ "ಯಾವನು ಭೇದವನ್ನು ನೋಡುತ್ತಾನೋ" ಎಂಬುದರ ಅಭಿಪ್ರಾಯವು ಹೀಗೆ. ಪರಮಾತ್ಮನಲ್ಲಿ ಸ್ವಗತ ಭೇದವಿದೆ. ಆದರೆ ಅದನ್ನು ನೋಡಬಾರದು ಎಂದು ಹೇಳಬಹುದು. ಅಂತಹವನು ನಿಂದಿಸಲ್ಪಟ್ಟಿದ್ದಾನೆ, ಎಂಬ ಈ ಶಂಕಾಪಿಶಾಚಿಯೂ ಕೂಡ ಗರ್ಭಸ್ರಾವವಾದ ಮಗು ಸತ್ತಂತೆ ಸತ್ತಿತು. ಅಂದರೆ ಅಭಿಪ್ರಾಯ ಹೀಗೆ. ಪರಮಾತ್ಮನಲ್ಲಿ ಸ್ವಗತಭೇದವಿದೆ. ಆದರೆ ಅದನ್ನು ನೋಡಬಾರದು. ಹಾಗೆ ನೋಡಿದರೆ ಅದರಿಂದ ಬರುವ ಪಾಪವು ಅಲ್ಪವು ಎಂದು ಹೇಳುತ್ತೀಯೇನು? ಆ ಶಂಕಾಪಿಶಾಚಿಯೂ ಕೂಡ ಹುಟ್ಟಿದ ಕೂಡಲೇ, ಗರ್ಭಸ್ರಾವವಾದ ಮಗು ವಿನಂತೆ, ಇಲ್ಲಿ ನಿರೂಪಿಸಿದ ರೀತಿಯಲ್ಲಿ ಸತ್ತಿತು.

ನಾಸ್ಮಾ ಗೇಹಂ ಪ್ರವಿಶತಿ ಮನ್ಸಾದ್ದ ಶಂಕಾಪಿಶಾಚಿಕಾ ।
ಯನ್ಮಂತ್ರರೂಪಿಣೀ ಸೇಯಂ ಶ್ರುತಿರ್ಭೂತಭಯಂಕರೀ ॥ ೧೩೨ ॥

ದೃಢಬದ್ಧ ಕವಾಟಾ ಚ ಪ್ರಾಙ್ ನಾನಾತ್ವನಿಷೇಧನಾತ್ ।
ಅವಿದ್ಯಮಾನಪಾರ್ಥಕ್ಯದೃಷ್ಟಿರ್ಮಿಥ್ಯಾಮತಿರ್ನ ಕಿಮ್ ॥ ೧೩೩ ॥
ಅತಃ ಕುಚೋದ್ಯಕರ್ತಾರಃ ಸರ್ವೇಽಪ್ಯಾಸನ್ಪುರಾದ್ಬಹಿಃ ।

ಈ ಶ್ರುತಿಯ ಮನೆಯನ್ನು ಹಿಂದೆ ಹೇಳಿದ, ಮುಂದಸು ಮಾಡುವ, ಶಂಕೆಯೆಂಬ ಪಿಶಾಚಿಯು ಪ್ರವೇಶಿಸುವುದಿಲ್ಲ. ಮಂತ್ರರೂಪಿಣಿಯಾದ ಈ ಶ್ರುತಿಯು ಪಿಶಾಚಿಗಳೇ ಮೊದಲಾದ ಭೂತಗಳಿಗೆ ಭಯವನ್ನುಂಟುಮಾಡತಕ್ಕವಳು. ಮೊದಲು ಭೇದವನ್ನು "ನೇಹ ನಾನಾಸ್ತಿ ಕಿಂಚನ" ಎಂದು ನಿಷೇಧ ಮಾಡುವ ಮೂಲಕ ಚೆನ್ನಾಗಿ ಮುಚ್ಚಲ್ಪಟ್ಟ ಬಾಗಿಲುಳ್ಳ ಮನೆಯಲ್ಲಿರುವಳು. ಆದ್ದರಿಂದ ಇಲ್ಲದ ಭೇದವನ್ನು ತಿಳಿಯುವುದು ಮಿಥ್ಯಾಜ್ಞಾನವಲ್ಲವೇನು? ಈ ಕಾರಣದಿಂದ ಕುಚೋದ್ಯಮಾಡುವವರೆಲ್ಲರೂ ಊರಿನ ಹೊರಗಾದರು. ಇದರ ಅಭಿಪ್ರಾಯ:— "ನೇಹ ನಾನಾಸ್ತಿ ಕಿಂಚನ" ಎಂಬುವ ವಾಕ್ಯದಿಂದ ಪರಮಾತ್ಮನ ರೂಪಗಳಲ್ಲಿಯೂ, ಗುಣಗಳಲ್ಲಿಯೂ, ಅವಯವಗಳಲ್ಲಿಯೂ ಪರಸ್ಪರ ಭೇದವಿಲ್ಲವೆಂದು ನಿರೂಪಿಸಿ, ಅನಂತರ "ಮೃತ್ಯೋಸ್ಸಮೃತ್ಯುಮಾಪ್ನೋತಿ" ಎಂಬ ವಾಕ್ಯದಿಂದ ಪರಮಾತ್ಮನಲ್ಲಿ ಇಲ್ಲದ ಭೇದವನ್ನು ಇದೆ ಎಂದು ತಿಳಿಯುವ ಮಿಥ್ಯಾಜ್ಞಾನಿಗೆ ತಮಃ ಪ್ರವೇಶರೂಪವಾದ ಅನರ್ಥವನ್ನು ಹೇಳಿರುವುದರಿಂದ ಇದ್ದ ಭೇದವನ್ನು ತಿಳಿದವನಿಗೆ ಅನರ್ಥ ಆಗುತ್ತೆಂದು ಏಕೆ ಹೇಳಬಾರದು? ಎಂಬ ಶಂಕಾಕ್ಕೆ ಸರ್ವಥಾ ಅವಕಾಶವಿಲ್ಲ.

'ಊರ್ಧ್ವಪುಂಡ್ರ ವಿಹೀನಸ್ಯ ಶ್ಮಶಾನಸದೃಶಂ ಮುಖಮ್ ॥೧೩೪॥
ಅವಲೋಕ್ಯ ಮುಖಂ ತೇಷಾಮಾದಿತ್ಯಮವಲೋಕಯೇತ್ ।'
ಇತಿ ಸ್ಮೃತೌ ನಿಂದಿತಸ್ಯ ಮುಖಸ್ಯ ಸತ ಏವ ಹಿ ॥ ೧೩೫ ॥
ದರ್ಶನೇ ಸತಿ ತಚ್ಛುದ್ಧ್ಯೈ ಸೂರ್ಯೇಕ್ಷಾಮಾತ್ರಮೀರಿತಮ್ ।
ಅದೃಶ್ಯಶೂದ್ರಚಂಡಾಲದರ್ಶನೇಽಪಿ ಯತೋ ಬುಧಾಃ ॥ ೧೩೬ ॥
ಆಹುರಾಚಮನಂ ಶುದ್ಧ್ಯೈ ನ ತು ತಸ್ಯ ತಮಃಫಲಂ ।
ಇತೋಽಪಿ ಮಂದಬುದ್ಧೀನಾಂ ಯಾ ಶಂಕಾಖ್ಯಪಿಶಾಚಿಕಾ ॥ ೧೩೭ ॥
ತಮಃ ಪಾತೇನ ಚಕಿತಾ ದೂರಾದ್ದೂರತರಂ ಯಯೌ ।
ಮಹಾತಮಸಿ ಪಾತಸ್ತು ಮಿಥ್ಯಾದೃಷ್ಟ್ಯಾ ಭವೇತ್ಪರಂ ॥ ೧೩೮ ॥

ಊರ್ಧ್ವಪುಂಡ್ರವಿಲ್ಲದವನ ಮುಖವು ಸ್ಮಶಾನಕ್ಕೆ ಸದೃಶವಾದದ್ದು. ಅಂಥವನ ಮುಖವನ್ನು ನೋಡಿದಲ್ಲಿ ಆ ಪಾಪವನ್ನು ಕಳೆದುಕೊಳ್ಳುವುದಕ್ಕೆ ಸೂರ್ಯನನ್ನು ನೋಡಬೇಕು. ಹೀಗೆ ಸ್ಮೃತಿಯಲ್ಲಿ ನಿಂದಿತವಾದ, ಇರುವ ಮುಖವನ್ನೇ ನೋಡಿದಲ್ಲಿ ಶುದ್ಧಿಗೋಸ್ಕರ, ನೋಡಿದವನು ಸೂರ್ಯನನ್ನು ನೋಡಬೇಕೆಂದು ಮಾತ್ರ ಹೇಳಿದೆ. (ಇದೇ ರೀತಿಯಲ್ಲಿ) ನೋಡಲು ಅರ್ಹರಲ್ಲದ ಶೂದ್ರರು, ಚಂಡಾಲರು ಇವರನ್ನು ನೋಡಿದರೂ ಜ್ಞಾನಿಗಳು, ಹಾಗೆ ನೋಡಿದವನು ಶುದ್ಧನಾಗುವುದಕ್ಕೆ ಆಚಮನ ಮಂತ್ರವನ್ನು ಹೇಳುವರು. ಅಂತಹವರಿಗೆ ತಮಃ ಪ್ರವೇಶವು ಫಲವಾಗಿ ಹೇಳಲಿಲ್ಲ. ಈ ಕಾರಣದಿಂದಲೂ ಮಂದ ಬುದ್ಧಿಗಳಿಗೆ ಬರಬಹುದಾದ ಮೊದಲು ಹೇಳಿದ ಶಂಕಾಪಿಶಾಚಿಯು 'ತಮಃ ಪಾತೇನ' ತಮಸ್ಸಿನಲ್ಲಿ ಬೀಳುವ ಫಲದಿಂದ ಭಯಪಟ್ಟು ಬಹುದೂರ ಹೊರಟುಹೋಯಿತು. ಇದರ ಅಭಿಪ್ರಾಯ:—ಮಂದ ಬುದ್ಧಿಗಳಿಗೂ ಕೂಡ, ಪರಮಾತ್ಮನಲ್ಲಿ ಇದ್ದ ಭೇದವನ್ನು ನೋಡುವುದರಿಂದ ಆಗುವ ಫಲವು ಹೇಳಿದೆ, ಎಂಬ ಶಂಕೆಯು ಬರುವುದಕ್ಕೆ ಅವಕಾಶವಿಲ್ಲ. ಹಿಂದೆ ಹೇಳಿದ ದೃಷ್ಟಾಂತಗಳಿಂದ ನಿಂದ್ಯವಾದ ಇದ್ದ ವಸ್ತುಗಳನ್ನು ನೋಡುವವನಿಗೆ ಅಲ್ಪವಾದ ಪಾಪಫಲವನ್ನು ಹೇಳಿದೆ. ಇಲ್ಲಿ ತಮಃಪ್ರವೇಶವಾದ ಬಹು ಕಠಿಣವಾದ ಪಾಪದ ಫಲವು ಹೇಳಿದೆ. ಆದ್ದರಿಂದ ಇಲ್ಲದಿರುವ ಭೇದವನ್ನು ಇದೆ ಎಂದು ತಿಳಿಯುವ ಮಹಾದೋಷವೇ ಇಲ್ಲಿ ಪ್ರಸಕ್ತವಾದದ್ದು. ಇದ್ದ ಭೇದವನ್ನು ನೋಡುವವನಿಗೆ ಹೇಳಿದ ಫಲ ಏಕೆ ಆಗಬಾರದು? ಎಂಬ ಶಂಕೆಗೆ ಅವಕಾಶವಿಲ್ಲ. ಇದನ್ನು ರೂಪಕದಿಂದ ಹೇಳಿದ್ದಾರೆ.

ಮಿಥ್ಯಾದೃಷ್ಟಿರ್ಲೌಕಿಕೀ ಚೇತ್ತಸ್ಯಾಶ್ಚ ನ ಮಹತ್ಫಲಮ್ ।
ಯಥಾ ರಜ್ಜ್ವಾವಹೇರ್ಜ್ಞಾನಾತ್ತುರ್ಭಯಕಂಪಾದಿಕಂ ಫಲಂ ॥ ೧೩೯ ॥

ಲೋಕವ್ಯವಹಾರದಲ್ಲಿ ಮಿಥ್ಯಾಜ್ಞಾನದಿಂದ ಹೆಚ್ಚು ಅನರ್ಥಫಲವಿಲ್ಲ. ಇದಕ್ಕೆ ದೃಷ್ಟಾಂತ. ಹಗ್ಗವನ್ನು ಸರ್ಪವೆಂದು ತಿಳಿದವನಿಗೆ ಭಯಕಂಪಾದಿಗಳು ಮಟ್ಟಿಗೆ ಆಗುತ್ತೆ.

ಕಿಂತು ವಿಷ್ಣೌ ಪರೇ ತತ್ತ್ವೇ ತದ್ಗುಣಾದೌ ಚ ಯನ್ನೃಣಾಂ ।
ಮಿಥ್ಯಾಜ್ಞಾನಂ ತೇನ ಪರಂ ತಮಃಪ್ರಾಪ್ತಿರ್ಭವೇತ್ಕಿಲ ॥ ೧೪೦ ॥

ಆದರೆ, ಸರ್ವೋತ್ತಮತತ್ತ್ವರೂಪಿಯಾದ ವಿಷ್ಣುವಿನಲ್ಲಿ ಮತ್ತು ಅವನ ಗುಣಾದಿಗಳಲ್ಲಿಯೂ ಮನುಷ್ಯರಿಗೆ ಮಿಥ್ಯಾಜ್ಞಾನವು ಬಂದಲ್ಲಿ ಅದರಿಂದ ಕೇವಲ ತಮಃಪ್ರಾಪ್ತಿರೂಪವಾದ ಫಲವೇ ಆದೀತಷ್ಟೆ. ಅಂದರೆ ಆಗಲೇ ಆಗುತ್ತದೆ.

ಅಂಧಂತಮಃ ಪ್ರವಿಶನ್ತಿ ಯೇ ತ್ವವಿದ್ಯಾಮುಪಾಸತೇ ।
ಇತಿ ಶ್ರುತಾವುಪನಿಷದ್ವೇದ್ಯೇ ವಿಷ್ಣೌ ತು ಯಃ ಪುಮಾನ್ ॥ ೧೪೧ ॥
ಅವಿದ್ಯಮಾನಂ ಸ್ವಗತಭೇದಂ ಜೀವಾಭಿದಾದಿಕಮ್ ।
ಉಪಾಸ್ತೇ ಸ ತಮೋ ಗಚ್ಛೇದಿತಿ ಸ್ಪಷ್ಟಮುದೀರಿತಮ್ ॥ ೧೪೨ ॥

"ಅಂಧಂತಮಃ ಪ್ರವಿಶಂತಿ ಯೇ ಅವಿದ್ಯಾಮುಪಾಸತೇ" (ಈಶಾವಾಸ್ಯ-೯) ಯಾರಾದರೆ ವಿಷ್ಣುವನ್ನು ವಿಪರೀತವಾಗಿ ತಿಳಿದು ಅನ್ಯಾಕಾರವಾಗಿ ಉಪಾಸನೆ ಮಾಡುವರೋ ಅವರು ಅಂಧಂತಮಸ್ಸನ್ನು ಪ್ರವೇಶಿಸುವರು. ಹೀಗೆ ಉಪನಿಷತ್ತುಗಳಿಂದಲೇ ತಿಳಿಯಬೇಕಾದ ವಿಷ್ಣುವಿನ ವಿಷಯದಲ್ಲಿ ಯಾವ ಮನುಷ್ಯನಾದರೆ ಆ ವಿಷ್ಣುವಿನಲ್ಲಿಲ್ಲದ ಸ್ವಗತ ಭೇದ, ಜೀವನಿಂದ ಅಭೇದ ಇವೇ ಮೊದಲಾದುವುಗಳನ್ನು ತಿಳಿದು ಉಪಾಸನೆ ಮಾಡುವನೋ ಅವನು ತಮಸ್ಸಿಗೆ ಹೋಗುವನು ಎಂಬುದಾಗಿ ಶ್ರುತಿಯಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ.

ಅತ ಏವಾಹ ಭಗವಾನ್ ಗೀತಾಯಾಮರ್ಜುನಂ ಪ್ರತಿ ।
"ಮಾಮಾತ್ಮ ಪರದೇಹೇಷು ಪ್ರದ್ವಿಷನ್ತೋಽಭ್ಯಸೂಯಕಾಃ ॥೧೪೩॥
ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥ ೧೪೪ ॥
ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌನ್ತೇಯ ತತೋ ಯಾನ್ತ್ಯಧಮಾಂ ಗತಿಮ್" ॥ ೧೪೫ ॥

ಆದ್ದರಿಂದಲೇ ಭಗವಂತನಾದ ಕೃಷ್ಣನು ಗೀತೆಯಲ್ಲಿ ಅರ್ಜುನನಿಗೆ ಹೀಗೆ ಹೇಳಿದ್ದಾನೆ. "ಅಯ್ಯಾ, ಅರ್ಜುನ! ಅಸೂಯೆವುಳ್ಳ ಯಾವ ಜನರು ತಮ್ಮ ದೇಹದಲ್ಲಿಯೂ ಇತರರ ದೇಹದಲ್ಲಿಯೂ ಇರುವ ನನ್ನನ್ನು ಅತಿಶಯ

ವಾಗಿ ದ್ವೇಷಮಾಡುವರೋ ಅಂತಹ ದ್ವೇಷಮಾಡುವ, ಯಾವಾಗಲೂ ಅಮಂಗಳರಾದ ಕ್ರೂರ ಮನುಷ್ಯಾಧಮರನ್ನು ಅಸುರಯೋನಿಗಳಲ್ಲಿ ಕೆಡವುತ್ತೇನೆ. ಪ್ರತಿ ಜನ್ಮದಲ್ಲಿಯೂ ಆ ಮೂಢರು ಅಸುರಯೋನಿಯನ್ನು ಹೊಂದಿದವರಾಗಿ ಎಲೈ ಕುಂತೀಕುಮಾರನೇ! ನನ್ನನ್ನು ಹೊಂದದೇನೇ ಕೊನೆಯಲ್ಲಿ ಅಧಮಗತಿಗೆ ಹೋಗುವರು.

ನೀಚೇ ಸ್ವಾತ್ಮನಿ ಸರ್ವೇಶಸ್ಯೈಕ್ಯಜ್ಞಾನಂ ಚ ಯನ್ನೃಣಾಂ ।
ಸೋಽಹಮಿತ್ಯಾದಿರೂಪಾ ಸಾ ಮಿಥ್ಯಾದೃಷ್ಟಿರ್ದುರಾತ್ಮನಾಂ ॥

ನೀಚನಾದ ತನ್ನಲ್ಲಿ "ಅವನೇ ನಾನು" ಎಂಬೀ ಪ್ರಕಾರವಾದ ಸರ್ವೇಶನಿಂದ ಐಕ್ಯಜ್ಞಾನವು ಯಾವುದೋ ಅದು ದುರಾತ್ಮರಲ್ಲಿರುವ ಮಿಥ್ಯಾಜ್ಞಾನ.

ಸ್ವೈವಾತ್ಮದೇಹೇ ವಿದ್ವೇಷ ಇತಿ ಕೃಷ್ಣಸ್ಯ ಸಮ್ಮತಮ್ ।
ನಘ್ನಂತಿ ನಾಪಿ ಬಧ್ನಂತಿ ಸ್ವಾತ್ಮದೇಹೇ ಜನಾರ್ದನಮ್ ॥ ೧೪೭ ॥

ಇದೇನೆ ಪರಮಾತ್ಮನನ್ನು ತನ್ನ ದೇಹದಲ್ಲಿ ದ್ವೇಷಮಾಡುವುದು ಎಂದು ಶ್ರೀಕೃಷ್ಣನ ಅಭಿಪ್ರಾಯ. ಜನಾರ್ದನನನ್ನು ತನ್ನ ದೇಹದಲ್ಲಿ ಹಿಂಸಿಸುವುದೂ ಇಲ್ಲ ಕಟ್ಟುವುದೂ ಇಲ್ಲ. ಅದು ಅಸಾಧ್ಯವಷ್ಟೇ.

ಅತಃ ಸೋಽಹಮಿತಿ ಭ್ರಾಂತಿರೇವ ದ್ವೇಷ ಇತೀರ್ಯತೇ ।
ಅನೀಶಸ್ಯೇಶತಾಧೀತ್ವಾತ್ಸೇಯಂ ಮಿಥ್ಯಾಮತಿರ್ನ ಕಿಮ್ ॥ ೧೪೮ ॥

ಆದ್ದರಿಂದ ನಾನೇ ಅವನು ಎಂಬ ಭ್ರಾಂತಿಜ್ಞಾನವೇ ದ್ವೇಷವೆಂದು ಹೇಳಲ್ಪಡುತ್ತೆ. ಈಶನಲ್ಲದ ತನ್ನನ್ನು ಈಶನೆಂದು ತಿಳಿಯುವುದು ಮಿಥ್ಯಾಜ್ಞಾನವಲ್ಲವೇನು?

ನಾರಾಯಣೋಽಯಮಿತಿ ಚ ಪರದೇಹಸ್ಥಿತೇಽಪಿ ಯಾ ।
ಜೀವೇ ಮಿಥ್ಯಾಮತಿರ್ನ್ಯೄಣಾಂ ಪರದೇಹೇಽಪಿ ಸಾ ಹರೇಃ ॥ ೧೪೯ ॥
ದ್ವೇಷ ಇತ್ಯುಚ್ಯತೇ ನಾನ್ಯಾ ಹಿಂಸಾದ್ಯವಿಷಯೋ ಪ್ರಭೌ ।

ಇನ್ನೊಬ್ಬನ ದೇಹದಲ್ಲಿರುವ ಜೀವನನ್ನು ಇವನು ನಾರಾಯಣನು ಎಂದು ತಿಳಿಯುವುದು ಮನುಷ್ಯರಿಗೆ ಅನ್ಯದೇಹದಲ್ಲಿರುವ ಹರಿಯ ವಿಷಯಕ ಮಿಥ್ಯಾಜ್ಞಾನವು. ಪರದೇಹದಲ್ಲಿರುವ ಪರಮಾತ್ಮನನ್ನು ದ್ವೇಷಮಾಡುವುದೂ

ಇದೇನೆ. ಬೇರೆ ಅಲ್ಲ. ಏಕೆಂದರೆ, ದ್ವೇಷಕಾರ್ಯವಾದ ಹಿಂಸಾದಿಗಳಿಗೆ ಪರದೇಹದಲ್ಲಿರುವ ಹರಿಯು ವಿಷಯನಾಗುವುದಿಲ್ಲ.

ನಿಂದಾಽಪ್ಯವಿದ್ಯಮಾನಸ್ಯ ದೋಷಸ್ಯೋತ್ಕೀರ್ತನಂ ಕಿಲ ॥ ೧೫೦ ॥
ಸಾ ಚ ವೈಕುಂಠಗೇ ಕೃಷ್ಣೇ ಘಟಮಾನಾ ನ ದೇಹಿನಾಮ್ ।
ಅಪೇಕ್ಷತೇ ದೇಹರೂಪಮುಪಾಧಿಂ ತೇನ ಸಾಽಪಿ ಚ ॥ ೧೫೧ ॥
ನಾತ್ರಾವಕಾಶಂ ಲಭತೇ ಯಾಽಸೂಯಾ ಸಾಽಪಿ ಚೇದೃಶೀ ।
ತಸ್ಮಾದ್ಬ್ರಹ್ಮಾಹಮಿತಿ ಚ ಬ್ರಹ್ಮಾಯಮಿತಿ ಯಾ ಚ ಧೀಃ ॥೧೫೨॥
ಸ್ವೈವಾತ್ಮದೇಹೇಽನ್ಯದೇಹೇ ದ್ವೇಷಃ ಸ್ಯಾನ್ನ ತತೋಽಪರಾ ।

ಇಲ್ಲದಿದ್ದ ದೋಷವನ್ನು ಹೇಳುವುದು ನಿಂದಾ ಎನ್ನಿಸಿಕೊಳ್ಳುತ್ತೆಯಷ್ಟೇ. ಅಂಥಾ ನಿಂದೆಯನ್ನು ವೈಕುಂಠದಲ್ಲಿರುವ ಕೃಷ್ಣನ ವಿಷಯದಲ್ಲಿ ಮಾಡಲು ಸಾಧ್ಯ. ಆದರೂ ಅಲ್ಲಿನ ಕೃಷ್ಣನನ್ನು ಜೀವರು ನಿಂದಿಸಬೇಕಾದರೆ 'ಮಾಮಾತ್ಮ ಪರದೇಹೇಷು ಪ್ರದ್ವಿಷಂತಿ' ಎಂಬೀ ಕೃಷ್ಣನ ವಾಕ್ಯದಲ್ಲಿ ಕಂಡುಬರುವ ದೇಹರೂಪ ಉಪಾಧಿಯು ಬೇಕಾಗಿಲ್ಲ. ಇದರ ಅಭಿಪ್ರಾಯ:— ಗೀತಾವಾಕ್ಯದಲ್ಲಿ ಕೃಷ್ಣನು "ತನ್ನ ದೇಹದಲ್ಲಿಯೂ ಪರರ ದೇಹದಲ್ಲಿಯೂ ಅಸುರರು ನನ್ನನ್ನು ದ್ವೇಷಿಸುತ್ತಾರೆ" ಎಂದು ಹೇಳಿರುವನಷ್ಟೆ. ಇದು ವೈಕುಂಠದಲ್ಲಿರುವ ಕೃಷ್ಣನಿಗೆ ಅನ್ವಯಿಸುವುದಿಲ್ಲ. ಆ ಕೃಷ್ಣನ ರೂಪವು ಜೀವರ ದೇಹದಲ್ಲಿಲ್ಲ. ಕೃಷ್ಣನ ಅಭಿಪ್ರಾಯವು "ದೇಹದಲ್ಲಿರುವ ಪರಮಾತ್ಮನ ರೂಪವನ್ನು ಅಸುರರು ದ್ವೇಷಿಸುತ್ತಾರೆ" ಎಂದು. ಆದ್ದರಿಂದ ವೈಕುಂಠದಲ್ಲಿರುವ ಕೃಷ್ಣನನ್ನು ಅಸುರರು ದ್ವೇಷಿಸುತ್ತಾರೆ ಎಂದು ಕೃಷ್ಣನ ವಾಕ್ಯದ ತಾತ್ಪರ್ಯ ಏಕೆ ಆಗಬಾರದು? ಎಂಬ ಶಂಕಾ ಕೂಡುವುದಿಲ್ಲ. ಅಸೂಯಾ ಎಂಬುದು ಯಾವುದು ಉಂಟೋ ಅದೂ ಇದೇನೇ. ಅಂದರೆ ಇಲ್ಲದಿದ್ದ ದೋಷವನ್ನು ಆರೋಪಿಸುವುದು. ಆ ದೋಷವು ಯಾವುದೆಂದರೆ—ನಾನು ಬ್ರಹ್ಮ ಇವನು ಬ್ರಹ್ಮ ಎಂಬ ಜ್ಞಾನ. ಹೀಗೆ ತಿಳಿಯುವುದರಿಂದ ಜೀವನಲ್ಲಿರುವ ದೋಷಗಳನ್ನು ನಿರ್ದೋಷನಾದ ಕೃಷ್ಣನಲ್ಲಿ ಆರೋಪಿಸಿದಂತಾಯಿತು. ಇದೇನೇ ತನ್ನ ದೇಹದಲ್ಲಿಯೂ, ಅನ್ಯದೇಹದಲ್ಲಿಯೂ ಇರುವ ಪರಮಾತ್ಮನಲ್ಲಿ ಅಸೂಯಾ ಮಾಡುವುದು. ಇದಕ್ಕಿಂತ ಬೇರೆಯಾದದ್ದು ಅಭಿಪ್ರೇತವಾದದ್ದಲ್ಲ.

ಅಸ್ಯಾಶ್ಚಾಧೋಲೋಕಗತಿಃ ಫಲಮತ್ರೈವ ಕೀರ್ತ್ಯತೇ ॥ ೧೫೩ ॥

ಇಂಥಾ ಅಸೂಯೆಗೆ ಫಲವು ಅಧೋಲೋಕ ಪ್ರಾಪ್ತಿಯೆಂದು ಆ ಕೃಷ್ಣನ ವಾಕ್ಯದಲ್ಲಿಯೇ ಹೇಳಲ್ಪಟ್ಟಿದೆ.

ಯತಃ ಕೃಷ್ಣಃ ಸ್ವವಿಷಯಮಿಥ್ಯಾದೃಷ್ಟ್ಯೈವ ದುರ್ಗತಿಂ ।
ಅಭಿಪ್ರೈತಿ ತತೋಽನ್ಯತ್ರಾಪೀದೃಶಸ್ಯ ತಮೋ ದಿಶೇತ್ ॥ ೧೫೪ ॥

ಕೃಷ್ಣನು, ತನ್ನ ವಿಷಯಕ ಮಿಥ್ಯಾಜ್ಞಾನದಿಂದ ದುರ್ಗತಿಯಾಗುತ್ತೆಂದು ಅಭಿಪ್ರಾಯಪಟ್ಟಿರುವುದರಿಂದ ಇತರ ಕಡೆಯಲ್ಲಿಯೂ ಅಂದರೆ ಪ್ರಕೃತ ಪರಮಾತ್ಮನ ರೂಪಗುಣಕ್ರಿಯಾದಿಗಳಲ್ಲಿ ಇಲ್ಲದ ಪರಸ್ಪರ ಭೇದವನ್ನು ಇದೆಯೆಂದು ತಿಳಿಯೋಣ ರೂಪ ಮಿಥ್ಯಾಜ್ಞಾನವೂ ಅಂಧಂತಮಃ ಪ್ರವೇಶ ರೂಪವಾದ ಫಲವನ್ನು ಕೊಟ್ಟೀತು.

ಏವ ಚಾನೇಕಧಾ ವಿಷ್ಣೌ ಯಾತು ಮಿಥ್ಯಾಮತಿರ್ನೃಣಾಮ್ ।
ತಯೈವ ಸ್ಯಾತ್ತಮಃ ಪ್ರಾಪ್ತಿರ್ನತು ಕೇವಲನಿನ್ದಿತಾತ್ ॥ ೧೫೫ ॥
ನಗ್ನಯೋಷಿದ್ದರ್ಶನಾದೇರ್ಲೌಕಿಕ ಭ್ರಮತೋಽಪಿವಾ ।
ತಮಃ ಪ್ರಾಪ್ತಿರ್ಭವೇನ್ನೄಣಾಮಿತಿ ಸರ್ವಸ್ಯ ಸಮ್ಮತಂ ॥ ೧೫೬ ॥

ಈ ರೀತಿಯಲ್ಲಿ ವಿಷ್ಣು ವಿಷಯಕವಾದ ಅನೇಕ ವಿಧ ಮಿಥ್ಯಾಜ್ಞಾನದಿಂದ ಮನುಷ್ಯರಿಗೆ ತಮಃಪ್ರಾಪ್ತಿಯು ಆಗುತ್ತದೆ. ನಿಂದಿತವಾದ ಬೆತ್ತಲೆ ಇರುವ ಸ್ತ್ರೀಯನ್ನು ನೋಡೋಣದರಿಂದಲೂ ಹಾಗೆಯೇ ಲೋಕದಲ್ಲಿ ಬರಬಹುದಾದ ಭ್ರಮೆಯಿಂದಲೂ (ಹಗ್ಗವನ್ನು ಸರ್ಪವನ್ನಾಗಿ ತಿಳಿಯೋಣ) ಮನುಷ್ಯರಿಗೆ ತಮಃಪ್ರಾಪ್ತಿಯು ಆಗುವುದಿಲ್ಲವೆಂಬುದು ಸರ್ವರಿಗೂ ಸಮ್ಮತವಾದದ್ದು.

ಅತೋ ವಿನಿನ್ದಿತಸತೋ ಜ್ಞಾನಾನ್ನಾತ್ರಾಧಮಾಗತಿಃ ।
ಶ್ರುತಾವುಕ್ತಾ ಕಿಂತು ಮಿಥ್ಯಾದೃಷ್ಟ್ಯೈವೇತಿ ವಿವೇಕಿಭಿಃ ॥ ೧೫೭ ॥
ಪೂರ್ವೋತ್ತರಜ್ಞೈರ್ವಕ್ತವ್ಯಂ ತಸ್ಮಾದ್ರೂಪೇಷು ಯಾಭಿದಾ ।
ಅವಿದ್ಯಮಾನಾ ತದ್ದರ್ಶೀ ದೂಷ್ಯತೇಽತ್ರ ನರಾಧಮಃ ॥ ೧೫೮ ॥

ಆದ್ದರಿಂದ ನಿಂದಿತವಾದ, ಇರುವ ವಸ್ತುವಿನ ಜ್ಞಾನದಿಂದ ಅಧಮ ಗತಿಯು ಆಗುವುದೆಂದು "ಮೃತ್ಯೋಸ್ಸಮೃತ್ಯುಮಾಪ್ನೋತಿ ಯ ಇಹ

ನಾನೇವ ಪಶ್ಯತಿ" ಎಂಬ ಈ ಶ್ರುತಿಯಲ್ಲಿ ಹೇಳಲಿಲ್ಲ. ಆದರೆ ಮಿಥ್ಯಾಜ್ಞಾನದಿಂದಲೇ ಎಂದು ಪೂರ್ವೋತ್ತರವನ್ನು ತಿಳಿದ ವಿವೇಕಿಗಳಿಂದ ಹೇಳಲ್ಪಡಬೇಕು. ಈ ಕಾರಣದಿಂದ ಪರಮಾತ್ಮನ ರೂಪಗಳಲ್ಲಿ ಅವಿದ್ಯಮಾನವಾದ ಭೇದವನ್ನು ತಿಳಿಯುವ ನರಾಧಮನು ಶ್ರುತಿಯಲ್ಲಿ ದೂಷಿಸಲ್ಪಟ್ಟಿರುವನು.

ಮೃತಗೇಹೇ ರೋದನಂ ಯನ್ನ ತತ್ ಕ್ಷುದಿತರೋದನಮ್ ।
ಕಿಂತು ಮಾತುಃ ಪಿತುರ್ಭ್ರಾತುರ್ವಾ ಮೃತತ್ವೇನ ರೋದನಮ್ ॥
ಯಥಾ ತಥಾಽತ್ರಾಪಿ ನಷ್ಟಪ್ರಾಯಮಿಥ್ಯಾತ್ವಚಿನ್ತನಾತ್ ।
ಅನರ್ಥಃ ಪ್ರೋಚ್ಯತೇ ಶ್ರುತ್ಯಾ ನತು ನಿನ್ದನಮಾತ್ರಶಃ ॥ ೧೬೦ ॥

ಚೇತನನಿಗೆ ತಮಃಪ್ರಾಪ್ತಿಯಾಗಬೇಕಾದರೆ ಅವನಲ್ಲಿ ಪ್ರಬಲ ದೋಷವಿರಬೇಕು. ಅಲ್ಪದೋಷದಿಂದ ತಮಃಪ್ರಾಪ್ತಿಯಾಗುವುದಿಲ್ಲ. ಸಾವು ಆದ ಮನೆಯಲ್ಲಿ ಅಳುವುದಕ್ಕೆ ಕಾರಣವಾದದ್ದು ತಾಯಿತಂದೆ ಅಥವಾ ಅಣ್ಣತಮ್ಮಂದಿರು ಮೃತರಾಗಿರುವುದು. ಹಸಿವು ಆದರೆ ಅಂತಹ ಅಳುವು ಇರುವುದಿಲ್ಲ. ಹಾಗೆಯೇ ತಮಃ ಪ್ರವೇಶವಾಗಬೇಕಾದರೆ ಮಿಥ್ಯಾಜ್ಞಾನರೂಪವಾದ ಪ್ರಬಲ ಕಾರಣವಿರಬೇಕು. ಕೇವಲ ನಿಂದಿತವಾದ ಅಲ್ಪಪಾಪಗಳಿಂದಲ್ಲ, ಎಂದು ಶ್ರುತಿಯಿಂದ ತಿಳಿಯಬರುತ್ತೆ.

ಇಹೇತಿ ಸ್ವಗತಂ ಭೇದಮೇವ ಧಿಕ್ಕುರ್ವತೀ ಶ್ರುತಿಃ ।
ಜಡೇಭ್ಯೋಽಖಿಲಜೀವೇಭ್ಯೋ ಬ್ರಹ್ಮಾದಿಭ್ಯಃ ಶ್ರಿಯೋಽಪಿ ಚ ॥
ಅನುಮೇನೇ ಹರೇರ್ಭೇದಂ ತತ್ಸ್ವಹಸ್ತಗತಾಸಿನಾ ।
ಪರಸ್ಯೈವ ಸ್ವಶಿರಶ್ಛೇದೋಽಭೂನ್ನಾತ್ರ ಸಂಶಯಃ ॥ ೧೬೨ ॥

ಇಹ (ಇಲ್ಲಿ) ಎಂದರೆ ಪರಮಾತ್ಮನಲ್ಲಿ ಎಂದು ಇರುವುದರಿಂದ ಪರಮಾತ್ಮನಲ್ಲಿ ಸ್ವಗತ ಭೇದವನ್ನು ಮಟ್ಟಿಗೆ ಧಿಕ್ಕರಿಸುವ ಶ್ರುತಿಯು ಜಡಪದಾರ್ಥಗಳಿಂದಲೂ ಬ್ರಹ್ಮಾದಿ ಸರ್ವಜೀವರುಗಳಿಂದಲೂ ರಮಾದೇವಿಯಿಂದಲೂ ಹರಿಗೆ ಭೇದವನ್ನು ಅನುಮೋದಿಸುತ್ತದೆ. ಆದ್ದರಿಂದ ಪರನಿಗೆ (ಮಾಯಾವಾದಿಗೆ) ತನ್ನ ಕೈಯ್ಯಲ್ಲಿದ್ದ ಕತ್ತಿಯಿಂದಲೇ ತನ್ನ ಶಿರಸ್ಸು ಛೇದವಾಯಿತು. ಇದರಲ್ಲಿ ಸಂಶಯವಿಲ್ಲ. ಇದರ ಅಭಿಪ್ರಾಯ :— ಮಾಯಾವಾದಿಗಳು ಭೇದನಿರಾಕರಣೆಯಲ್ಲಿ ತಮಗೆ ಸಹಾಯವಾಗುತ್ತೆಂದು ಯಾವ 'ನೇಹ ನಾನಾಸ್ತಿ ಕಿಂಚನ' ಎಂಬ ಶ್ರುತಿಯನ್ನು ಪ್ರಮಾಣೀಕರಿಸಿದರೋ ಅದೇ

ಶ್ರುತಿಯು ಭೇದವನ್ನು ಪ್ರತಿಪಾದಿಸುವುದರ ಮೂಲಕ ತಮಗೆ ಅತಿಶಯವಾಗಿ ಪ್ರೀತಿಗೆ ವಿಷಯವಾದ ಜೀವಪರಮಾತ್ಮರ ಅಭೇದವನ್ನು ನಾಶಮಾಡಿತು. ಶ್ರುತಿಯೇ ಕತ್ತಿ. ಜೀವಪರಮಾತ್ಮರ ಅಭೇದವೇ ಶಿರಸ್ಸು.

ಯದೀಯಂ ಭೇದಮಾತ್ರಸ್ಯ ನಿಷೇಧಾಯ ಶ್ರುತಿಃ ಸತೀ ।
ಪ್ರವೃತ್ತಾ ತರ್ಹಿ ನಾನಾ ನೇತ್ಯೇವ ಬ್ರೂಯಾದಿಹೇತಿ ತು ॥ ೧೬೩ ॥
ಸ್ವಾಧಾರಭೂತಬ್ರಹ್ಮೋಕ್ತಿರ್ವ್ಯರ್ಥೈವ ಸ್ಯಾದ್ವಿಚಾರಯ ।

ಈ ಶ್ರುತಿಯು ಭೇದವನ್ನು ಮಟ್ಟಿಗೆ ನಿಷೇಧಮಾಡುವುದರಲ್ಲಿ ಪ್ರವೃತ್ತವಾಗಿದ್ದಲ್ಲಿ "ನಾನಾ, ನ" ಭೇದ ಇಲ್ಲ ಎಂದು ಇಷ್ಟುಮಟ್ಟಿಗೆ ಹೇಳಬೇಕಾಗಿತ್ತು. ತನಗೆ (ಅಭೇದಕ್ಕೆ, ಭೇದಾಭಾವಕ್ಕೆ) ಆಧಾರಭೂತವಾದ ಬ್ರಹ್ಮನನ್ನು 'ಇಹ' ಎಂಬುದಾಗಿ ವೃಥಾ ಯಾಕೆ ಹೇಳುತ್ತಿತ್ತು. ವಿಚಾರಮಾಡು. 'ಇಹ' ಪದವು ಸಾರ್ಥಕವಾಗಬೇಕಾದರೆ ಇತರ ವಸ್ತುಗಳಿಂದ ಭೇದವು ಹರಿಯಲ್ಲುಂಟೆಂದೂ ಮತ್ತು ಹರಿಯಿಂದ ಭೇದವು ಇತರ ಪದಾರ್ಥಗಳಲ್ಲಿ ಉಂಟೆಂದೂ ಒಪ್ಪಬೇಕು.

ಗೃಹೇ ಘಟೋ ನೇತಿ ವಾಚಾ ನ ಹಿ ಗೇಹಾದ್ಬಹಿಃ ಸ್ಥಿತೇ ॥ ೧೬೪ ॥
ಘಟೇऽಪ್ಯಭಾವಂ ಧೀಮನ್ತೋ ವದನ್ತ್ಯೇವಮಿಹಾಪಿ ಚ ।
ಇಹೇತಿ ಪದಸಾಮರ್ಥ್ಯಾದ್ಭೇದೋऽನ್ಯತ್ರ ನ ನಿಷಿಧ್ಯತೇ ॥ ೧೬೫ ॥

ಮನೆಯಲ್ಲಿ ಘಟವಿಲ್ಲವೆಂಬ ಮಾತಿನಿಂದ (ಈ ಮಾತನ್ನು ಕೇಳಿದ) ಬುದ್ಧಿಶಾಲಿಗಳಾದ ಜನರು ಮನೆಯ ಹೊರಗೂ ಘಟವಿಲ್ಲವೆಂದು ಹೇಗೆ ಹೇಳುವುದಿಲ್ಲವೋ, ಇಲ್ಲಿಯೂ ಹಾಗೆಯೇ ಇಹ (ಇಲ್ಲಿ) ಎಂಬ ಪದದ ಸಾಮರ್ಥ್ಯದಿಂದ ಅನ್ಯತ್ರ ಇರುವ ಭೇದವನ್ನು ಈ ಶ್ರುತಿಯು ನಿರಾಕರಿಸುವುದಿಲ್ಲವೆಂದು ಹೇಳಬೇಕು.

ಕಿನ್ತ್ವಸಾಧಾರಣಾಧಾರಬಲಾದನ್ಯತ್ರ ಸರ್ವಥಾ ।
ಭೇದೋ ಭವೇನ್ನ ಚೇದೇತದ್ವಾಕ್ಯಸ್ಥೇಹಪದಂ ಮುಧಾ ॥ ೧೬೬ ॥

ಇಹ ಎಂದು ಆಧಾರವನ್ನು ಶ್ರುತಿಯು ನಿರ್ದೇಶಿಸಿರುವುದರಿಂದ ಭೇದವು ಈ ಆಧಾರದಲ್ಲಿ ಇಲ್ಲವೆಂಬುದರಿಂದಲೇ ಬೇರೆ ಕಡೆಯಲ್ಲಿ ಸರ್ವಥಾ ಭೇದ

ವುಂಟೆಂದು ಆಗುತ್ತೆ. ಹಾಗಿಲ್ಲದಲ್ಲಿ ಇಹ=ಇಲ್ಲಿ ಎಂಬ ಈ ಪದವು ವ್ಯರ್ಥ ವಾದೀತು.

ತನ್ಮಧ್ವಮತವೇತ್ತೄಣಾಮಗ್ರೇ ಶೌರ್ಯಂ ನ ಕಸ್ಯಚಿತ್ ।
ಯಥಾ ನ ಮೃಗಶಾಬಸ್ಯ ಹರ್ಯಕ್ಷಾಗ್ರೇ ಪರಾಕ್ರಮಃ ॥ ೧೬೭ ॥

ಆದ್ದರಿಂದ ಸಿಂಹದ ಎದುರಿಗೆ ಜಿಂಕೇಮರಿಯ ಪರಾಕ್ರಮವು ಹೇಗೆ ನಿಲ್ಲುವುದಿಲ್ಲವೋ ಹಾಗೆ ಮಧ್ವಾಚಾರ್ಯರ ಮತವನ್ನು ತೀಳದವರ ಎದುರಿಗೆ ಯಾವನ ಪರಾಕ್ರಮವೂ ಇಲ್ಲ.

ತಥಾ ತತ್ತ್ವವಿದಾಮಗ್ರೇ ನ ಕಸ್ಯಾಪಿ ಪರಾಕ್ರಮಃ ।

ಹಾಗೆಯೇ ತತ್ತ್ವವನ್ನು ತಿಳಿದವರ ಎದುರಿಗೆ ಯಾವನ ಪರಾಕ್ರಮವೂ ಇಲ್ಲ.

ಮೂಲರೂಪಾವತಾರಾಣಾಂ ನಾನಾತ್ವಸ್ಯ ನಿಷೇಧನೇ ॥ ೧೬೮ ॥
ಯಥಾಽವತಾರಾಃ ಸನ್ತ್ಯೇವ ನಾನಾಕಾರ್ಯಕರಾ ಭುವಿ ।
ತಥಾ ಧರ್ಮಾನಿತಿ ಪ್ರೋಕ್ತಾನನ್ತಧರ್ಮಾಶ್ಚ ಧರ್ಮಿಣಿ ॥ ೧೬೯ ॥
ಹರೌ ಸನ್ತ್ಯೇವ ನಾನಾತ್ವಮಾತ್ರಂ ತೇಷಾಂ ನಿಷಿಧ್ಯತೇ ।

ಮೂಲರೂಪದಿಂದ ಅವತಾರರೂಪಗಳಿಗೆ ಭೇದವಿಲ್ಲೆಂದು ಹೇಳುವುದ ರಿಂದ ಹೇಗೆ ಭೂಮಿಯಲ್ಲಿ ಅನೇಕ ವಿಧವಾದ ಕಾರ್ಯಗಳನ್ನು ಮಾಡುವ ಅನೇಕ ಅವತಾರರೂಪಗಳು ಇದ್ದೇ ಇವೆಯೋ ಹಾಗೆಯೇ "ಏವಂ ಧರ್ಮಾನ್ ಪೃಥಕ್ ಪಶ್ಯನ್" (ಕಾ. ೨.೧.೧೪) ಎಂಬ ಶ್ರುತಿಯಲ್ಲಿ ಪರಮಾತ್ಮನ ಧರ್ಮಗಳನ್ನು ಪರಮಾತ್ಮನಿಂದ ಭಿನ್ನವಾಗಿ ತಿಳಿದವನಿಗೆ ಅನರ್ಥ ಹೇಳಿರು ವುದರಿಂದ ಅನಂತಧರ್ಮಗಳು ಹರಿಯಲ್ಲಿವೆ. ಅವುಗಳ ಭೇದಮಟ್ಟಿಗೆ ಇಲ್ಲ ಎಂಬುದಾಗಿ ಶ್ರುತಿಯು ತಿಳಿಸುತ್ತೆ.

ಅತೋಽವತಾರಾ ಧರ್ಮಾಶ್ಚ ಹಸ್ತಪಾದಾದಯೋ ಹರೇಃ ॥ ೧೭೦ ॥
ಐಶ್ವರ್ಯಸ್ಯ ಮಹಿಮ್ನ್ಯೇವ ಸನ್ತಿ ಶ್ರುತಿಶತೋದಿತಾಃ ।
ಭೇದಸ್ತು ನ ಕದಾಪ್ಯೇಷಾಂ ನಿತ್ಯಾನಾಂ ಜ್ಞಾನರೂಪಿಣಾಂ ॥೧೭೧॥

ಆದ್ದರಿಂದ ನೂರಾರು ಶ್ರುತಿಗಳಲ್ಲಿ ಉಕ್ತವಾದ ಅವತಾರಗಳೂ, ಹಸ್ತ ಪಾದಾದಿಗಳೂ, ಪೂರ್ಣಾನಂದತ್ವ ಸ್ವಾತಂತ್ರ್ಯಾದಿ ಧರ್ಮಗಳೂ ಹರಿಗೆ ಇವೆ.

ಆದರೆ ಅವನ ಅಚಿಂತ್ಯೈಶ್ವರ್ಯ ಮಹಿಮೆಯಿಂದ ನಿತ್ಯವಾದ ಮತ್ತು ಜ್ಞಾನ ಸ್ವರೂಪವಾದ ಇವುಗಳಲ್ಲಿ ಭೇದವಾದರೆ ಯಾವಾಗಲೇ ಆಗಲಿ ಇಲ್ಲ.

ಯತೋಂಗುಷ್ಠ ನಖಸ್ಯಾಪಿ ಶಕ್ತಿರ್ಬ್ರಹ್ಮಾಂಡಖಂಡನೇ ।
ಸ ಕಥಂ ಹರಿವಚ್ಛಕ್ತೋ ಹರೇರ್ಭಿನ್ನೋ ಭವೇದ್ವದ ॥ ೧೭೨ ॥

ಬ್ರಹ್ಮಾಂಡ ಖರ್ಪರವನ್ನು ಶೀಳುವುದರಲ್ಲಿ ಹೆಬ್ಬೆಟ್ಟಿನ ಉಗುರಿಗೂ ಕೂಡ ಶಕ್ತಿ ಇರುವುದರಿಂದ, ಹರಿಯಂತೆ ಶಕ್ತಿಯುಳ್ಳ ಆ ಉಗುರು ಹೇಗೆ ತಾನೇ ಹರಿಯಿಂದ ಭಿನ್ನವಾದೀತು ಹೇಳು.

ಈದೃಶಶ್ಚಾತಿಶಕ್ತೋಽಸೌ ಯದ್ಯನ್ಯಃ ಸ್ಯಾಜ್ಜನಾರ್ದನಾತ್ ।
ತದೇಶ್ವರಸ್ಯ ದ್ವಯತೋ ಜಗನ್ನಾಶೋ ಭವಿಷ್ಯತಿ ॥ ೧೭೩ ॥

ಇಂತಹ ಮಹಾಶಕ್ತಿಯುಳ್ಳ ಈ ಉಗುರು ಜನಾರ್ದನನಿಂದ ಅನ್ಯವಾಗಿದ್ದಲ್ಲಿ ಇಬ್ಬರು ಈಶ್ವರರ ದೆಸೆಯಿಂದ ಜಗತ್ತಿನ ನಾಶವಾಗುವುದು.

ಅತೋ ನಖೋಽಪ್ಯಸ್ತಿ ಮಹಾನ್ನಖವಾನಸ್ತಿ ಚೇಶ್ವರಃ ।
ಭೇದಮಾತ್ರಂ ತಯೋರ್ನಾಸ್ತಿ ನೇಹ ನಾನೇತಿ ವಾಗ್ಬಲಾತ್ ॥

೧೭೨ ರಿಂದ ೧೭೪ ನೇ ಶ್ಲೋಕಗಳ ಅಭಿಪ್ರಾಯ:— ನಖ ಅವಯವ, ನಖವುಳ್ಳ ಹರಿಯು ನಖರೂಪ ಅವಯವವುಳ್ಳವನು. ಬ್ರಹ್ಮಾಂಡ ಖರ್ಪರವನ್ನು ಶೀಳಿದ್ದರಿಂದ ನಖಕ್ಕೆ ಮಹದೈಶ್ವರ್ಯ ಕಂಡುಬಂದಿದೆ. ಅವಯವಿಯಾದ ಹರಿಯಾದರೋ ಮಹದೈಶ್ವರ್ಯವುಳ್ಳವನು. ಇವೆರಡಕ್ಕೂ ಭೇದವಿದ್ದಲ್ಲಿ, ಇಬ್ಬರು ಈಶ್ವರರಾದರು. ಅವರ ಪರಸ್ಪರ ಪ್ರೋಟಾಪ್ರೋಟಿಯಿಂದ ಲೋಕವು ನಷ್ಟವಾದೀತು. ಒಬ್ಬನೇ ಈಶ್ವರನೆಂದು ಹೇಳಬೇಕಾದರೆ ಹರಿಯ ನಖಕ್ಕೂ ಹರಿಗೂ ಭೇದವಿಲ್ಲವೆಂದೇ ಹೇಳಬೇಕು. ಈ ಪ್ರಮೇಯಕ್ಕೆ ಸಾಧಕವಾದದ್ದು 'ನೇಹ ನಾನಾಸ್ತಿ ಕಿಂಚನ' ಶ್ರುತಿ.

ಅಕ್ಷೀಯಮಾಣಾನಿ (ಮುದಾ) ಸದಾ ಪೂರ್ಣಾನಿ ತ್ರಿಪದಾನಿ ಚ ।
ಮದನ್ತಿ ಸ್ವೇಚ್ಛಯಾ ವಿಷ್ಣೋರಿತಿ ಯದ್ಗರ್ಜತಿ ಶ್ರುತಿಃ ॥ ೧೭೫ ॥
ಏಷ ನಿತ್ಯೋ ಬ್ರಾಹ್ಮಣಸ್ಯ ಮಹಿಮೇತಿ ಚ ಗರ್ಜತಿ ।
ತನ್ನಿತ್ಯಾನಾಂ ಹರೇಃ ಪಾದಾದ್ಯಂಗಾನಾಂ ತದ್ಗುಣಸ್ಯ ಚ ॥ ೧೭೬ ॥

ಭೇದಮಾತ್ರ ನಿಷೇಧೇಪಿ ಸ್ಯಾದಭಾವಃ ಕಥಂ ವದ ।

ವಿಷ್ಣುವಿನ ಕ್ಷಯವಿಲ್ಲದ, ಆನಂದದಿಂದ ಸದಾ ಪೂರ್ಣವಾದ ಮೂರು ಪಾದಗಳು ಸ್ವೇಚ್ಛೆಯಾಗಿ ಸುಖಪಡುತ್ತವೆ ಎಂಬುದಾಗಿ ಒಂದು ಶ್ರುತಿಯು ಗರ್ಜಿಸುತ್ತದೆ. ಅಲ್ಲದೇ ಆ ಪೂರ್ಣನಾದ ಪರಬ್ರಹ್ಮನ ಮಹಿಮೆಯೂ ನಿತ್ಯವೆಂಬುದಾಗಿ "ಏಷನಿತ್ಯೋ ಮಹಿಮಾ ಬ್ರಾಹ್ಮಣಸ್ಯ" ಎಂಬುವ ಮತ್ತೊಂದು ಶ್ರುತಿಯು ಗರ್ಜಿಸುತ್ತದೆ. ಹೀಗಿರುವುದರಿಂದ ನಿತ್ಯವಾದ ಹರಿಯ ಪಾದಾದಿ ಅಂಗಗಳಿಗೂ ಮತ್ತು ಗುಣಗಳಿಗೂ ಭೇದ ಮಾತ್ರವಿಲ್ಲೆಂದ ಮಟ್ಟಿಗೆ ಅಂಗಗಳೂ, ಗುಣಗಳೂ ಇಲ್ಲವೆಂದು ಹೇಗೆ ಆದೀತು? ಹೇಳು. ಇದಕ್ಕೆ ಪ್ರಮಾಣ.

ಯಸ್ಯ ತ್ರೀ ಪೂರ್ಣಾ ಮಧುನಾ ಪದಾನ್ಯಕ್ಷೀಯಮಾಣಾ
ಸ್ವಧಯಾ ಮದನ್ತಿ ।
ಯ ಉ ತ್ರಿಧಾತು ಪೃಥಿವೀಮುತದ್ಯಾಮೇಕೋದಾಧಾರ
ಭುವನಾನಿ ವಿಶ್ವಾ ॥ (ಋ. ೨.೨.೨೪)

ಯಾವ ವಿಷ್ಣುವಿನ ಆನಂದದಿಂದ ಪೂರ್ಣವಾದ ಕ್ಷಯರಹಿತವಾದ ಮೂರು ಪಾದಗಳು ಸ್ವೇಚ್ಛೆಯಾಗಿ ಆನಂದಿಸುತ್ತಿವೆಯೋ ಮತ್ತು ಯಾವ ಒಬ್ಬ ವಿಷ್ಣುವೇ ಪ್ರಕೃತಿ ಪುರುಷ ಕಾಲಗಳಿಗೆ ಆಧಾರನಾಗಿದ್ದು ಪೃಥಿವಿಯನ್ನೂ ಅಂತರಿಕ್ಷವನ್ನೂ ಮತ್ತು ಎಲ್ಲ ಲೋಕಗಳನ್ನೂ ಧರಿಸಿದ್ದಾನೆಯೋ (ಅಂತಹ ವಿಷ್ಣುವಿಗೆ ಪ್ರೀತಿಕರವಾದ ನಿವೃತ್ತಕರ್ಮಗಳನ್ನು ನಾನು ಮಾಡಿಯೇನು) ಎಂದು ಅರ್ಥ.

ಆನನ್ದೋ ಬ್ರಹ್ಮ ವಿಜ್ಞಾನಂ ಬ್ರಹ್ಮೇತ್ಯಾದಿ ಶ್ರುತೀರಿತಾಃ ॥ ೧೬೭ ॥
ಆನನ್ದಾದ್ಯಾ ಬ್ರಹ್ಮಧರ್ಮಾಃ ಸಾಮಾನಾಧಿಕರಣ್ಯತಃ ।
ಅಭಿನ್ನಾಶ್ಚ ಯಥಾ ಸನ್ತಿ ತಥಾ ಧರ್ಮಾನಿತೀರಿತಾಃ ॥ ೧೬೮ ॥
ಧರ್ಮಾಶ್ಚ ಬ್ರಹ್ಮವತ್ಸನ್ತಿ ಭೇದಮಾತ್ರಂ ನಿಷಿಧ್ಯತೇ ।

'ಆನನ್ದೋ ಬ್ರಹ್ಮ, ವಿಜ್ಞಾನಂ ಬ್ರಹ್ಮ' ಈ ರೀತಿಯಲ್ಲಿ ಶ್ರುತಿಯಲ್ಲಿ ಹೇಳಲ್ಪಟ್ಟ ಆನಂದಾದಿ ಬ್ರಹ್ಮಧರ್ಮಗಳು ಬ್ರಹ್ಮ ಹೇಗೆ ಇದ್ದಾನೆಯೋ ಹಾಗೆಯೇ ಇವುಗಳೂ ಇರುವುವು. ಭೇದ ಮಾತ್ರ ನಿಷೇಧಿಸಲ್ಪಟ್ಟಿದೆ. "ವಿಜ್ಞಾನಂ ಬ್ರಹ್ಮ" ಅಂದರೆ ವಿಜ್ಞಾನವು ಬ್ರಹ್ಮನು. ಹೀಗೆ 'ವಿಜ್ಞಾನಂ'

ಎಂಬ ಪದವೂ ಬ್ರಹ್ಮ ಎಂಬ ಪದವೂ ಒಂದೇ ವಿಭಕ್ತ್ಯಂತವಾಗಿರುವುದರಿಂದ ಹೇಗೆ ಅಭಿನ್ನಗಳಾಗಿ ಇವೆಯೋ ಹಾಗೆಯೇ 'ಏವಂ ಧರ್ಮಾನ್ ಪೃಥಕ್ ಪಶ್ಯನ್' ಎಂಬಲ್ಲಿ ಹೇಳಲ್ಪಟ್ಟ ಅನೇಕ ಬ್ರಹ್ಮಧರ್ಮಗಳೂ ಕೂಡ ಬ್ರಹ್ಮ ಹೇಗೆ ಇದ್ದಾನೆಯೋ ಹಾಗೆಯೇ ಇವೆ. ಆದರೆ ಭೇದಮಾತ್ರ ಇಲ್ಲ.

[ಸಾಮಾನಾಧಿಕರಣ್ಯಂ ನಾಮ ಸಮಾನವಿಭಕ್ತಿಕಶಬ್ದವಾಚ್ಯತ್ವಂ. ಅಂದರೆ ಒಂದು ವಸ್ತುವನ್ನು ಹೇಳುವಾಗ ಎರಡು ಒಂದೇ ವಿಭಕ್ತಿಯುಳ್ಳ ಶಬ್ದಗಳನ್ನು ಉಪಯೋಗಿಸಿದಲ್ಲಿ ಅವೆರಡಕ್ಕೂ ಸಾಮಾನಾಧಿಕರಣ್ಯವಿದೆ ಎಂದು ಹೇಳುತ್ತಾರೆ.]

ಸತ್ಯಃ ಸೋ ಅಸ್ಯ ಮಹಿಮೇತ್ಯಾದಿಶ್ರುತಿಬಲಾತ್ಸದಾ ॥ ೧೭೯ ॥
ಸತ್ಯಾನಾಮುಕ್ತರೀತ್ಯೈವ ನಿತ್ಯಾನಾಂ ಬ್ರಹ್ಮರೂಪವತ್ ।
ಅಸ್ತಿತ್ವೈವಾಖಿಲೈರ್ವಾಚ್ಯಾ ನತ್ವಭಾವಃ ಕಥಂಚನ ॥ ೧೮೦ ॥

'ಸತ್ಯಃ ಸೋ ಅಸ್ಯ ಮಹಿಮಾ' ಋಕ್ ೫-೭-೨೫) ಎಂಬ ಶ್ರುತಿಯ ಬಲದಿಂದ ಹಿಂದೆ ಹೇಳಿದ ರೀತಿಯಲ್ಲಿ ಸತ್ಯವಾದ ಮತ್ತು ನಿತ್ಯವಾದ ಬ್ರಹ್ಮ ಧರ್ಮಗಳು ಬ್ರಹ್ಮನಂತೆ ಇದ್ದೇ ಇವೆ ಎಂದೇ ಎಲ್ಲರೂ ಹೇಳಬೇಕು. ಇಲ್ಲವೆಂದು ಸರ್ವಥಾ ಹೇಳಲಾಗದು.

ಅಭಿನ್ನಾ ಬ್ರಹ್ಮಧರ್ಮಾಸ್ತು ಸತ್ಯಾ ವಾಚ್ಯಾಸ್ತ್ವಯಾಽಪಿ ಚ ।

ಬ್ರಹ್ಮಧರ್ಮಗಳು ಬ್ರಹ್ಮನಿಂದ ಅಭಿನ್ನವೆಂದೂ ಸತ್ಯವೆಂದೂ ನೀನೂ ಕೂಡ ಹೇಳಬೇಕು.

ಐಕ್ಯಂ ಸುಖಂ ಚ ವಿಜ್ಞಾನಂ ಸತ್ಯತ್ವಂ ನಿತ್ಯತಾಽಪಿ ಚ ॥ ೧೮೧ ॥
ನಿರ್ಗುಣತ್ವಂ ತಥಾ ನಿರ್ವಿಶೇಷತ್ವಂ ವಿಶ್ವವಿಭ್ರಮೇ ।
ಅಧಿಷ್ಠಾನತ್ವಂ ಚ ವೇದವೇದ್ಯತಾ ಚ ಮತೇ ತವ ॥ ೧೮೨ ॥
ಧರ್ಮಾ ಬ್ರಹ್ಮಣ್ಯೇವ ವಾಚ್ಯಾಸ್ತೇನ ಸತ್ಯಾ ವಿಚಾರಣೇ ।
ಭವೇಯುರ್ಯದಿ ಮಿಥ್ಯಾ ಸ್ಯುರಿಮೇ ಧರ್ಮಾಸ್ತದಾ ತವ ॥ ೧೮೩ ॥
ಐಕ್ಯಶೂನ್ಯಂ ಬ್ರಹ್ಮ ಭಿನ್ನಂ ಭವೇದಾನನ್ದವರ್ಜಿತಮ್ ।
ಅನಪೇಕ್ಷ್ಯಂ ಬ್ರಹ್ಮ ಭವೇದ್ ಜ್ಞಾನಶೂನ್ಯಂ ಘಟಾದಿವತ್ ॥

ಜಡಂ ಭವೇತ್ಸತ್ತ್ವಶೂನ್ಯಂ ಮಿಥ್ಯಾ ಸ್ಯಾನ್ನಿತ್ಯತೋಜ್ಝಿತಮ್ ।
ಅನಿತ್ಯಂ ಸ್ಯಾನ್ನಿರ್ಗುಣತ್ವಶೂನ್ಯಂ ಚ ಸಗುಣಂ ಭವೇತ್ ॥ ೧೮೫ ॥

ನಿರ್ವಿಶೇಷತ್ವಶೂನ್ಯಂ ಚ ಭವೇದ್ಬ್ರಹ್ಮ ವಿಶೇಷವತ್ ।
ಅಧಿಷ್ಠಾನತ್ವಶೂನ್ಯತ್ವೇ ನಸ್ಯಾತ್ತವ ಜಗದ್ಭ್ರಮಃ ॥ ೧೮೬ ॥

ವೇದವೇದ್ಯತ್ವಶೂನ್ಯತ್ವೇ ಮುಕ್ತಿರ್ನ ಸ್ಯಾಚ್ಛ್ರುತೀರಿತಾ ।
ಅತಃ ಸತ್ಯಾ ಇಮೇ ಧರ್ಮಾಃ ಸರ್ವೇ ವಾಚ್ಯಾಸ್ತ್ವಯೈವ ಹಿ ॥

(ಜೀವಬ್ರಹ್ಮರ) ಐಕ್ಯ ಆನಂದ ವಿಜ್ಞಾನ ಸತ್ಯತ್ವ ನಿತ್ಯತ್ವ ನಿರ್ಗುಣತ್ವ ಹಾಗೆಯೇ ನಿರ್ವಿಶೇಷತ್ವ ಮತ್ತು ವಿಶ್ವಭ್ರಾಂತಿಯಲ್ಲಿ ಅಧಿಷ್ಠಾನತ್ವ ಹಾಗೆಯೇ ವೇದಗಮ್ಯತ್ವ ಈ ಎಲ್ಲಾ ಧರ್ಮಗಳೂ ನಿನ್ನ ಮತದಲ್ಲಿ ಬ್ರಹ್ಮನಲ್ಲಿಯೇ ಹೇಳಬೇಕು. ಆದ್ದರಿಂದ ವಿಚಾರಮಾಡಿದರೆ, ಅವುಗಳು ಸತ್ಯವೂ ಆಗುವುವು. ಈ ಧರ್ಮಗಳು ಮಿಥ್ಯಾ ಆದಲ್ಲಿ (ಜೀವನಿಂದ) ಐಕ್ಯವಿಲ್ಲದ ಬ್ರಹ್ಮ ಭಿನ್ನನಾದಾನು ಮತ್ತು ಆನಂದವಿಲ್ಲದೆ ಬ್ರಹ್ಮನು (ಮುಮುಕ್ಷುಗಳಿಂದ) ಅನಪೇಕ್ಷ್ಯನಾದಾನು ಮತ್ತು ಜ್ಞಾನಶೂನ್ಯನಾದರೆ ಘಟಾದಿಗಳಂತೆ ಜಡನಾದಾನು. ಸತ್ವಶೂನ್ಯನಾದರೆ ಮಿಥ್ಯಾ ಆಗಬೇಕು. ನಿತ್ಯತ್ವವಿಲ್ಲದಲ್ಲಿ ಅನಿತ್ಯನಾಗಬೇಕು. ನಿರ್ಗುಣತ್ವವಿಲ್ಲದಲ್ಲಿ ಸಗುಣನಾಗಬೇಕು. ನಿರ್ವಿಶೇಷತ್ವವಿಲ್ಲದಲ್ಲಿ ವಿಶೇಷ ಉಳ್ಳವನಾಗಬೇಕು. ವಿಶ್ವಭ್ರಮಕ್ಕೆ ಅಧಿಷ್ಠಾನತ್ವವಿಲ್ಲದಲ್ಲಿ ಜಗತ್ತು ಭ್ರಾಂತಿ ಕಲ್ಪಿತವೆಂಬ ನಿನಗೆ ಇಷ್ಟವಾದ ಪ್ರಮೇಯವು ನಷ್ಟವಾದೀತು. ವೇದ ವೇದ್ಯತ್ವವಿಲ್ಲದಲ್ಲಿ ಶ್ರುತಿಯಲ್ಲಿ ಹೇಳಿದ ಮುಕ್ತಿಯು ಇಲ್ಲದೇ ಹೋಗಬೇಕಾದೀತು. ಅಂದರೆ ಬ್ರಹ್ಮಜ್ಞಾನದಿಂದ ಮೋಕ್ಷ. ಬ್ರಹ್ಮನನ್ನು ವೇದದಿಂದ ತಿಳಿಯಬೇಕು. ಬ್ರಹ್ಮನು ವೇದವೇದ್ಯನಲ್ಲದಲ್ಲಿ ಬ್ರಹ್ಮಜ್ಞಾನವೇ ಇಲ್ಲದೆ ಮುಕ್ತಿಯೇ ಇಲ್ಲದೇ ಹೋಗಬೇಕು. ಆದ್ದರಿಂದ ಈ ಎಲ್ಲಾ ಧರ್ಮಗಳೂ ಸತ್ಯವೆಂದು ನೀನೂ ಕೂಡ ಹೇಳಬೇಕು.

ಸತ್ಯಾನಾಂ ಬ್ರಹ್ಮಭಿನ್ನತ್ವೇ ಸದದ್ವೈತಮತಂ ಗತಮ್ ।
ಬ್ರಹ್ಮಣ್ಯೈಕ್ಯೇ ಚ ಧರ್ಮಾಣಾಂ ಧರ್ಮಿಣ್ಯೈಕ್ಯಮಭೂದ್ಬಲಾತ್ ॥

ಈ ಗುಣಗಳು ಸತ್ಯವಾದುವು. ಆದರೆ ಬ್ರಹ್ಮನಿಂದ ಭಿನ್ನವೆಂದು ಹೇಳಿದರೆ ಸತ್ಪದಾರ್ಥ ಎರಡಿಲ್ಲವೆಂಬ ನಿನ್ನ ಮತವು ಹೋಯಿತು. ಹಾಗಲ್ಲ

ಈ ಧರ್ಮಗಳೆಲ್ಲಾ ಬ್ರಹ್ಮನಿಂದ ಐಕ್ಯವಾಗಿವೆ ಎಂದರೆ ಧರ್ಮವುಳ್ಳ ಬ್ರಹ್ಮ ನಿಗೂ ಧರ್ಮಗಳಿಗೂ ಐಕ್ಯವಾಗಿ, ಬ್ರಹ್ಮನ ಏಕತ್ವವೂ (ಏಕತ್ವ=ಸ್ವಗತ ಭೇದಾಭಾವ) ತಾನಾಗಿಯೇ ಸಿದ್ಧಿಸುತ್ತೆ.

ಏವಂ ಚ ಸತ್ಯಾಸ್ತೇ ಸರ್ವಜ್ಞತ್ವಸರ್ವೇಶತಾದಯಃ ।
ಬ್ರಹ್ಮರೂಪಾಃ ಕಥಂ ನ ಸ್ಯುರನನ್ತಾ ಬ್ರಹ್ಮಣಿ ಶ್ರುತಾಃ ॥ ೧೮೯ ॥
ಧರ್ಮಾಶ್ಚ ಸರ್ವಜಗತಾಂ ಸೃಷ್ಟ್ಯಾದಾವುಪಯೋಗಿನಃ ।

ಏವಂ ಚ ಸರ್ವಜ್ಞತ್ವ ಸರ್ವೇಶ್ವರತ್ವ ಮೊದಲಾದ ಶ್ರುತಿಯಲ್ಲಿ ಹೇಳಿದ ಸರ್ವ ಜಗತ್ತಿನ ಸೃಷ್ಟ್ಯಾದಿಗಳಿಗೆ ಉಪಯೋಗವಾದ ಅನಂತ ಧರ್ಮಗಳು ಬ್ರಹ್ಮನ ಸ್ವರೂಪವೇ ಹೇಗೆ ಆಗದೇ ಹೋದಾವು ?

ಯದಿ ಬ್ರಹ್ಮೈಕತಾವಾದೇ ಸರ್ವಜ್ಞತ್ವಾದಯೋ ಗುಣಾಃ ॥ ೧೯೦ ॥
ನ ಸನ್ತ್ಯೇವ ಬ್ರಹ್ಮ ನ್ಯೈವಮುಸ್ತೀತ್ಯೇವಾಗತಂ ತ್ವಿತಿ ।
ಬ್ರೂಷೇ ತದಾ ತವೈಕ್ಯಾದ್ಯಮಪಿ ಸರ್ವಂ ಗಮಿಷ್ಯತಿ ॥ ೧೯೧ ॥
ಬ್ರಹ್ಮಮಾತ್ರಂ ತೂರ್ವರಿತಂ ಭವೇತ್ತೇನೈಕ್ಯರೂಪತಾ ।
ಆನನ್ದರೂಪತಾ ಜ್ಞಾನರೂಪಾದ್ಯಂ ಚ ಹಿ ತೇ ಗತಮ್ ॥ ೧೯೨ ॥

"ಬ್ರಹ್ಮ ಒಂದೇ ಇರುವುದು ಎಂಬ ವಾದದಲ್ಲಿ ಸರ್ವಜ್ಞತ್ವಾದಿಗುಣಗಳು ಇಲ್ಲವೇ ಇಲ್ಲ. ಆದ್ದರಿಂದ ನೀವು ಹೇಳುವ ರೀತಿಯಲ್ಲಿ ಬ್ರಹ್ಮನಲ್ಲಿ ಸರ್ವಜ್ಞ-ತ್ವಾದಿ ಗುಣಗಳು ಇವೆ. ಅವು ಬ್ರಹ್ಮನಿಂದ ಅಭಿನ್ನವಾದವುಗಳು ಎಂಬ ಪ್ರಮೇಯವೇ ಇಲ್ಲ" ಹೀಗೆ ನೀನು ಹೇಳಿದಲ್ಲಿ ಆಗ ನೀನು ಒಪ್ಪಿರುವ ಐಕ್ಯವೇ ಮೊದಲಾದುವುಗಳೆಲ್ಲವೂ ಹೋಯಿತು. ಬ್ರಹ್ಮಮಾತ್ರ ಉಳಿಯಿತು. ಆದರಿಂದ ಐಕ್ಯರೂಪತಾ ಆನಂದರೂಪತಾ ಜ್ಞಾನರೂಪತಾ ಇವೇ ಮೊದ ಲಾದದ್ದು ಬ್ರಹ್ಮನ ವಿಷಯದಲ್ಲಿ ನೀನು ಹೇಳುವುದೆಲ್ಲವೂ ಪಲಾಯನ ವಾಯಿತು.

ಅತಃ ಪ್ರಾಗುಕ್ತದೋಷೌಘೈರ್ದೂಷ್ಯಂ ಬ್ರಹ್ಮ ಭವೇತ್ತವ ।

ಆದ್ದರಿಂದ ಹಿಂದೆ ನಾವು ಹೇಳಿದ ಜಡತ್ವವೇ ಮೊದಲಾದ ಎಲ್ಲ ದೋಷಗಳಿಂದಲೂ ನಿನ್ನ ಬ್ರಹ್ಮನು ದೂಷ್ಯನಾದಾನು.

ಯದಿ ತದ್ರೂಪಧರ್ಮಾಶ್ಚ ಸ್ವಕಾರ್ಯಕರಣೇಕ್ಷಮಾಃ ॥ ೧೯೩ ॥

ಸನ್ತಿ ತರ್ಹ್ಯಸ್ಮದುಕ್ತಾಶ್ಚ ಧರ್ಮಾ ನ ಸ್ಯುಃ ಕಥಂ ವದ ।

ತಮ್ಮ ಕಾರ್ಯವನ್ನು ಮಾಡುವುದರಲ್ಲಿ ಶಕ್ತಿಯುಳ್ಳ ಐಕ್ಯ ಆನಂದತ್ವಾದಿ ಧರ್ಮಗಳು ಇರುವುವಾದರೆ, ನಾವು ಹೇಳುವ ಸರ್ವಜ್ಞತ್ವಾದಿ ಧರ್ಮಗಳು ಹೇಗೆ ತಾನೇ ಇರುವುದಿಲ್ಲ? ಹೇಳು.

ಯದ್ಯೇವಮಪಿ ಚೈಕ್ಯೇ ಸತ್ಯೇಕಶೇಷೋ ಭವೇದಿತಿ ॥ ೧೯೪ ॥
ಛಲಾನ್ನಿಮೀಲ್ಯಾಕ್ಷಿಣೀ ತ್ವಂ ವದಸಿ ಪ್ರಾಜ್ಞಸಂಸದಿ ।
ತದಾ ದ್ವಯೋಃ ಸತೋರೇಕಶೇಷಃ ಕಸ್ಯ ಭವೇದಿತಿ ॥ ೧೯೫ ॥
ತ್ವಯಾ ಮಯಾ ಕೋವಿದೈಶ್ಚ ವಿಚಾರ್ಯಂ ನ ಛಲಾದ್ಭವೇತ್ ।

ಹೀಗಿದ್ದರೂ ಬ್ರಹ್ಮನಿಂದ ಧರ್ಮಗಳು ಐಕ್ಯವಾದಲ್ಲಿ (ಬ್ರಹ್ಮ) ಒಂದೇ ಉಳಿಯುವುದು ಆಗುತ್ತದೆ, ಎಂದು ಎರಡು ಕಣ್ಣುಗಳನ್ನೂ ಮುಚ್ಚಿಕೊಂಡು ಛಲದಿಂದ ಪ್ರಾಜ್ಞರ ಸಭೆಯಲ್ಲಿ ನೀನು ಹೇಳಿದಲ್ಲಿ ಆಗ ಇರುವ ಎರಡರಲ್ಲಿ ಉಳಿಯುವುದು ಎಂಬುದು ಯಾವುದಕ್ಕೆ ಆಗುತ್ತದೆ ಎಂಬುದನ್ನು ನಿನ್ನಿಂದಲೂ ನನ್ನಿಂದಲೂ ವಿವೇಕಿಗಳಿಂದಲೂ ವಿಚಾರಿಸಲ್ಪಡಬೇಕು. ಛಲದಿಂದ ಬ್ರಹ್ಮ ಮಟ್ಟಿಗೆ ಉಳಿಯುತ್ತಾನೆಂಬುದು ಆಗುವುದಿಲ್ಲ.

ಸರ್ವಜ್ಞತ್ವಾದಯೋ ಧರ್ಮಾಃ ಸರ್ವಲೋಕೋಪಕಾರಿಣಃ ॥ ೧೯೬

ವೇದಾದೇರ್ಧಾರಣೇ ವಿಶ್ವಕರಣೇ ಭರಣೇ ಸತಾಂ ।
ಲೋಕಾಪಕಾರಿದೈತ್ಯಾನಾಂ ಸದಾ ಸಂಹರಣೇಽಪಿ ಚ ॥ ೧೯೭ ॥

ಉಪಕುರ್ಯುರ್ಧರ್ಮಶೂನ್ಯಧರ್ಮಿಣಾ ಕಿಂ ಪ್ರಯೋಜನಮ್ ।

ಸರ್ವಲೋಕಕ್ಕೂ ಉಪಕಾರವನ್ನು ಮಾಡುವ ಹರಿಗೆ, ಈ ಸರ್ವಜ್ಞತ್ವಾದಿ ಧರ್ಮಗಳು ವೇದವನ್ನು ಧರಿಸುವುದರಲ್ಲಿಯೂ ಸಜ್ಜನರನ್ನು ಕಾಪಾಡುವುದರಲ್ಲಿಯೂ ಲೋಕಕ್ಕೆ ಅಪಕಾರವನ್ನು ಮಾಡುವ ದೈತ್ಯರನ್ನು ಸದಾ ಸಂಹರಿಸುವುದರಲ್ಲಿಯೂ ಉಪಕಾರವನ್ನು ಮಾಡುತ್ತವೆ (ಉಪಯೋಗವಾಗುತ್ತವೆ) ಧರ್ಮಗಳಿಂದ ಶೂನ್ಯವಾದ ಧರ್ಮಿಯಿಂದ ಏನು ಪ್ರಯೋಜನ?

ಧರ್ಮಾಭಾವೇ ಧರ್ಮಿತ್ವೈವ ಕಥಂ ವಾ ಶೋಭತೇ ವದ ॥ ೧೯೮ ॥
ಛಿನ್ನಶಾ(ಖಸ್)ಖೀ ತರುರಿವ ಕ್ರಮಾಚ್ಛುಷ್ಕಃ ಸ್ವಯಂ ಪತೇತ್ ।

ಧರ್ಮವಿಲ್ಲದಿದ್ದಲ್ಲಿ ಧರ್ಮಿತ್ವವೇ ಹೇಗೆ ಶೋಭಿಸೀತು ಹೇಳು. ಕತ್ತರಿಸಲ್ಪಟ್ಟ ಕೊಂಬೆಗಳುಳ್ಳ ಗಿಡದಂತೆ ಕ್ರಮವಾಗಿ ಒಣಗಿ ತಾನೇ ಬಿದ್ದೀತು.

ನ ಫಲಾಯ ನ ಪುಷ್ಪಾಯ ನ ಚ ಚ್ಛಾಯಾದಿ ಸಮ್ಪದೇ ॥ ೧೯೯ ॥

ಫಲಕ್ಕೇ ಆಗಲೀ ಪುಷ್ಪಕ್ಕೇ ಆಗಲಿ ನೆರಳೇ ಮೊದಲಾದ ಮತ್ತಾವ ಸಂಪತ್ತಿಗೇ ಆಗಲಿ ಆ ಗಿಡವು ಉಪಯೋಗವಿಲ್ಲ.

ಜ್ಞಾನಾದಿಧರ್ಮಶೂನ್ಯಂ ತೇ ಬ್ರಹ್ಮ ಕಂ ಬೋಧಯೇದ್ವದ ।
ಆನಂದಯೇದ್ವಾ ಕಂ ಭಕ್ತಂ ಸೃಜೇದ್ವಾ ಕಸ್ಯ ಕಾಮಿತಮ್ ॥ ೨೦೦

ಜ್ಞಾನಾದಿ ಧರ್ಮಶೂನ್ಯನಾದ ನಿನ್ನ ಬ್ರಹ್ಮನು ಯಾರನ್ನು ತಾನೇ ಬೋಧಿಸಿಯಾನು? ಯಾವ ಭಕ್ತನನ್ನು ತಾನೇ ಆನಂದಿಸಿಯಾನು? ಯಾವನಿಗೆ ತಾನೇ ಇಷ್ಟವಾದದ್ದನ್ನು ಸೃಷ್ಟಿಸಿಯಾನು? ಹೇಳು.

ಅಂಧಾನುಗಾಂಧವನ್ಮಂದ ತ್ವನ್ಧಕೂಪೇ ಪತಿಷ್ಯಸಿ ।

(ಇಂತಹ ಜ್ಞಾನಾದಿಶೂನ್ಯ ಬ್ರಹ್ಮನನ್ನು ಆಶ್ರಯಿಸಿದಲ್ಲಿ) ನೀನು ಕುರುಡನನ್ನು ಅನುಸರಿಸಿದ ಕುರುಡನಂತೆ, ಎಲೋ ಮಂದ! ಅಂಧಃತಮಸ್ಸಿನಲ್ಲಿ ಬೀಳುವವನೇ ಆಗುತ್ತಿ.

ಅವತಾರಾಶ್ಚ ಮತ್ಸ್ಯಾದ್ಯಾಃ ಸರ್ವಲೋಕಹಿತೇ ರತಾಃ ॥ ೨೦೧ ॥
ಹಸ್ತಾಂಘ್ರಿಪೂರ್ವಾಣ್ಯಂಗಾನಿ ವಿಶ್ವರಕ್ಷಾಕರಾಣಿ ಚ ।
ಅವಶಿಷ್ಟಾ ಭವನ್ತ್ಯೇತೇ ಸರ್ವೇ ಯದ್ಬಹವೋಽಪ್ಯಮೀ ॥ ೨೦೨ ॥

ಸರ್ವಲೋಕಕ್ಕೆ ಹಿತವನ್ನು ಮಾಡುವುದರಲ್ಲಿ ಆಸಕ್ತಿಯುಳ್ಳ ಮತ್ಸ್ಯಾದ್ಯವತಾರಗಳೂ ಮತ್ತು ಪ್ರಪಂಚವನ್ನು ರಕ್ಷಣೆಮಾಡುವ ಹಸ್ತಪಾದವೇ ಮೊದಲಾದ ಅಂಗಗಳೂ ಅನೇಕಗಳಾದರೂ ಉಳಿದು ಇದ್ದೇ ಇರುತ್ತವೆ.

ಹಸ್ತಾಭಾವೇ ಕೇನ ಚಕ್ರಂ ಪ್ರಯುಂಜ್ಯಾತ್ಸುರವೈರಿಷು ।
ಪಾದಾಭಾವೇ ಕೇನ ಭಿನ್ದ್ಯಾದಜಾಂಡಂ ದೇವತಾಕೃತೇ ॥ ೨೦೩ ॥

ಹಸ್ತವಿಲ್ಲದಲ್ಲಿ ದೇವಶತ್ರುಗಳಾದ ಅಸುರರಮೇಲೆ ಚಕ್ರವನ್ನು ಯಾವುದ ರಿಂದ ಪ್ರಯೋಗಿಸಬೇಕು ? ಈ ಕಾರ್ಯಮಾಡಬೇಕಾದರೆ ಕೈ ಇರಬೇಕಷ್ಟೇ. ಪಾದವಿಲ್ಲದೇ ಹೋದರೆ, ದೇವತೆಗಳಿಗೋಸ್ಕರವಾಗಿ ಯಾವುದರಿಂದ ಬ್ರಹಾಂಡ ಖರ್ಪರವನ್ನು ಶೀಳಬೇಕು ?

ಕೇನ ಬ್ರೂಯಾಚ್ಛ್ರುತಿಶತಿಂ ಶೃಣುಯಾತ್ಕೇನ ತೇ ಸ್ತುತಿಂ ।

ಬಾಯಿಯಿಲ್ಲದಲ್ಲಿ ಶ್ರುತಿ ಸಮೂಹವನ್ನು ಹೇಳುವುದು ಯಾವುದರಿಂದ ? ಕಿವಿ ಇಲ್ಲದಲ್ಲಿ ನೀನು ಮಾಡುವ ಸ್ತೋತ್ರವನ್ನು ಯಾವುದರಿಂದ ಕೇಳಬೇಕು ?

ಮಧ್ಯದೇಹಸ್ತು ನೋ ಭುಂಕ್ತೆ ನ ಗೃಹ್ಣೀತೇ ಭಿನತ್ತಿ ನ ॥ ೨೦೪ ॥

ಕಿನ್ತ್ವಂಗದತ್ತಭುಕ್ತ್ಯೈವ ಸ್ವಯಂ ಜೀವೇನ್ನ ಚೇನ್ನ ಚ ।

ಉದರವು ಭೋಜನಮಾಡುವುದಿಲ್ಲ. ಯಾವುದನ್ನೂ ತೆಗೆದುಕೊಳ್ಳು ವುದಿಲ್ಲ. ಯಾವುದನ್ನೂ ಭೇದಿಸುವುದಿಲ್ಲ. ಆದರೆ ಹಸ್ತ ಮೊದಲಾದವು ಗಳಿಂದ ಕೊಟ್ಟದ್ದನ್ನು ಭುಂಜಿಸಿಯೇ ತಾನು ಜೀವಿಸುತ್ತದೆ. ಹಸ್ತಾದಿಗಳಿಲ್ಲ ದಲ್ಲಿ ಭೋಜನಾದಿಗಳು ಇಲ್ಲ. ಅವು ಇಲ್ಲದಲ್ಲಿ ಜೀವಿಸೋಣವೂ ಇಲ್ಲ.

ಯಥಾ ಘಟಶರಾವಾದಿ ನ ಚ ಸ್ನಾತ್ಯಪಿ ಸಂಪದಿ ॥ ೨೦೫ ॥

ಸರ್ವಲೋಕೋಪಕಾರಿಣ್ಯಾ ಮೃದೈಕಾನ್ತರ್ಗತಂ ಸದಾ ।
ಜೀವೇತ್ತಥಾ ಬ್ರಹ್ಮ ಜೀವಧರ್ಮಾದ್ಯಂತರ್ಗತಂ ತವ ॥ ೨೦೬ ॥

೨೦೫ ನೇ ಶ್ಲೋಕದಲ್ಲಿ 'ನ ಚ ಸ್ನಾತ್ಯಪಿ ಸಂಪದಿ' ಎಂದಿದೆ. ಈ ಪಾಠವನ್ನಿಟ್ಟುಕೊಂಡಲ್ಲಿ ಸಮಂಜಸವಾದ ಅರ್ಥವನ್ನು ಕೊಡುವ ಇದರ ಅನ್ವಯವು ಕಂಡುಬರಲಿಲ್ಲ. "ನಚಾಶ್ನಾತ್ಯಪಿ ಸಂಪದಿ" ಎಂದು ಪಾಠವಿದ್ದಲ್ಲಿ ಹಿಂದು ಮುಂದಿನ ವಾಕ್ಯಗಳಿಗನುಗುಣವಾಗಿ ಅರ್ಥಮಾಡಬಹುದು. ಅದು ಹೀಗೆ :— ಸಂಪತ್ತಿನಲ್ಲಿ ಗಡಿಗೆ ಮೊದಲಾದದ್ದು ಯಾವುದನ್ನೂ ತಿನ್ನುವುದಿಲ್ಲ. ಆದರೆ ಸರ್ವಲೋಕಕ್ಕೂ ಉಪಕಾರಿಯಾದ ಕೇವಲ ಮಣ್ಣಿನಿಂದ ಒಳಹೊಕ್ಕ ಲ್ಪಟ್ಟದ್ದಾಗಿ ಸದಾ ಜೀವಿಸುತ್ತದೆ. ಹಾಗೆಯೇ ಬ್ರಹ್ಮನು ತನ್ನಲ್ಲಿರುವ ಸರ್ವಜ್ಞತ್ವಾದಿ ಧರ್ಮಗಳಿಂದ ಜೀವಿಸಿಯಾನು. ಸಂಪದಿ ಎಂದು ಏಕೆ ಹೇಳಿರುವರು ? ಹಾಲು ಮೊಸರು ಮೊದಲಾದದ್ದು ಗಡಿಗೆಯಲ್ಲಿರಬಹುದು.

ಆದರೆ ಆ ಸಂಪದ್ರೂಪವಾದ ವಸ್ತುವನ್ನು ತಿಂದು ಗಡಿಗೆಯು ಇರುವುದಿಲ್ಲ. ಆದರ ಇರುವಿಕೆಯು ಮಣ್ಣಿನಮೇಲೆ ನಿಂತಿದೆ. ಹಾಗೆಯೇ ಬ್ರಹ್ಮನ ಇರುವಿಕೆಯೂ ಕೂಡ ಅವನ ಸ್ವಾತಂತ್ರ್ಯ, ಸರ್ವಜ್ಞತ್ವ, ಪೂರ್ಣಾನಂದತ್ವಾದಿ ಸ್ವರೂಪಭೂತವಾದ ಧರ್ಮಗಳಮೇಲೆ ನಿಂತಿದೆ. ಅವನು ಎಲ್ಲದಕ್ಕೂ ಆಶ್ರಯನಾದರೂ ಇನ್ನಾವುದನ್ನೂ ತಿಂದು ಜೀವಿಸಿಲ್ಲ. ಇದಕ್ಕೆ ಪ್ರಮಾಣ.

"ಅನಶ್ನನ್ನನ್ಯೋ ಅಭಿಚಾಕಶೀತಿ" "ನ ಚ ತದಶ್ನಾತಿ ಕಿಂಚನ".

ಶ್ಲೋಕದ ಅರ್ಥ :—ಹೇಗೆ ಮಣ್ಣಿನ ಗಡಿಗೆ ತಟ್ಟೆ ಮೊದಲಾದದ್ದು, ಸರ್ವಲೋಕಕ್ಕೂ ಉಪಕಾರಿಯಾದ ತನ್ನಲ್ಲಿರುವ ಮಣ್ಣಿನಿಂದ ಯಾವಾಗಲೂ ಜೀವಿಸೀತೋ ಹಾಗೆ ನಿನ್ನ ಬ್ರಹ್ಮನು ತನ್ನಲ್ಲಿರುವ ಸರ್ವಜ್ಞತ್ವಾದಿ ಧರ್ಮಗಳಿಂದ ಜೀವಿಸಿಯಾನು. ಇದರ ಅಭಿಪ್ರಾಯ ಹೀಗೆ:—ಹೇಗೆ ಮಣ್ಣನ್ನು ಬಿಟ್ಟು ಗಡಿಗೆ ಇರುವುದು ಸಾಧ್ಯವಿಲ್ಲವೋ ಹಾಗೆಯೇ ಸರ್ವಜ್ಞತ್ವಾದಿ ಧರ್ಮಗಳನ್ನು ಬಿಟ್ಟು ಬ್ರಹ್ಮವಸ್ತುವೇ ಸಿದ್ಧಿಸುವುದಿಲ್ಲ.

ಏಕಶೇಷಂ ವದಂಶ್ಚಾಪಿ ವೈಯಾಕರಣಪಂಡಿತಃ ।
ಬಹುತ್ವಾಖ್ಯವಿಭಕ್ತ್ಯರ್ಥಾನಪಿ ಪೂರ್ವಾನ್ವಿಲೋಪಯೇತ್ ॥
ಶೇಷಯೇದನ್ತಿಮಂ ಶಬ್ದಂ ಶೇಷಃ ಕಸ್ಯ ವದೋಚಿತಃ ।
ಪೂರ್ವಂ ಬ್ರಹ್ಮವಧಾತ್ಯಕ್ತ್ವಾಽನ್ತಿಮಂ ಧರ್ಮಾದಿ ಶೇಷಯ ॥

ಏಕಶೇಷವನ್ನು ಹೇಳುವವನಾದರೂ ವ್ಯಾಕರಣ ಪಂಡಿತನು ಸಮಾನ ವಿಭಕ್ತಿಗಳಾದ ಅನೇಕ ಪದಗಳಲ್ಲಿ ಹಿಂದಿನ ಪದಗಳನ್ನು ಲೋಪಮಾಡಿಯಾನು (ಲೋಪಮಾಡುತ್ತಾನೆ). ಕೊನೆಯ ಶಬ್ದವನ್ನು ಉಳಿಸಿಯಾನು (ಉಳಿಸುತ್ತಾನೆ) ಇಲ್ಲಿ ಪ್ರಸಕ್ತವಾದ ಸೂತ್ರವಿದು.

ಸರೂಪಾಣಾಮೇಕಶೇಷ ಏಕ ವಿಭಕ್ತೌ (೧-೨-೬೪). ಅರ್ಥ: ಸದೃಶ ರೂಪವುಳ್ಳ ಏಕವಿಭಕ್ತಿಕಗಳಾದ ಪದಗಳ ಕೊನೆಯ ಪದವು ಮಟ್ಟಿಗೆ ಉಳಿಯುತ್ತೆ.

Of a number of words having the same form and with the same case ending only the last word is retained.

ರಾಮಃ ಚ ರಾಮಃ ಚ=ರಾಮೌ

ರಾಮಶ್ಚ ರಾಮಶ್ಚ ರಾಮಶ್ಚ=ರಾಮಾಃ

ಇದನ್ನು ಏಕಶೇಷದ್ವಂದ್ವವೆಂದು ಕರೆಯುವುದುಂಟು.

ಪಿತಾ ಮಾತ್ರಾ. (೧-೨-೭೦)

ಮಾತಾಚ ಪಿತಾಚ=ಪಿತರೌ.

ಇದು "ತಾಯಿಯೂ ತಂದೆಯೂ" ಎಂಬಲ್ಲಿ ತಾಯಿತಂದೆಗಳು ಅನ್ನದೇ ತಂದೆಗಳು ಅಂದಹಾಗೆ.

"ಶೇಷಃ ಕಸ್ಯ ವದ ಉಚಿತಃ" ಯಾವುದರ ಉಳಿಸೋಣವು ಉಚಿತವಾದದ್ದು ಹೇಳು. ಅಭಿಪ್ರಾಯ ಹೀಗೆ. ಬ್ರಹ್ಮಚ ಧರ್ಮಾಶ್ಚ=ಧರ್ಮಾಃ ಇಲ್ಲಿ ಏಕಶೇಷದ್ವಂದ್ವವನ್ನು ಮನಸ್ಸಿನಲ್ಲಿಟ್ಟು "ಧರ್ಮಾಃ" ಅಂದರೆ ಬ್ರಹ್ಮನನ್ನು ಉಳಿಸವೆ ಧರ್ಮಗಳನ್ನು ಉಳಿಸುವುದು ಉಚಿತ.

Note : ಬ್ರಹ್ಮಚ, ಧರ್ಮಾಶ್ಚ=ಧರ್ಮಾಃ. ಹೀಗೆ ವಿಗ್ರಹವು ಕಂಡು ಬಂದಿಲ್ಲ. ಪ್ರಕರಣಕ್ಕೆ ಅನುಗುಣವಾಗಿ ಕಲ್ಪಿಸಿದೆ. ಹೀಗೆ ಕಲ್ಪಿಸುವುದು ಉಚಿತವೆಂದಲ್ಲಿ "ನ ಹಿ ದೃಷ್ಟಾಂತೇ ಸರ್ವಸಾಮ್ಯಂ" ಎಂಬೀ ನ್ಯಾಯವಿರುವುದರಿಂದ ಶ್ಲೋಕಾಭಿಪ್ರಾಯವನ್ನು ಹೀಗೆ ಹೇಳಬಹುದು.

'ಬ್ರಹ್ಮವಿದಾಪ್ನೋತಿ ಪರಂ' ಎಂಬಲ್ಲಿ ಬ್ರಹ್ಮನು ಮೊದಲು ಪ್ರಸಕ್ತನಾಗಿದ್ದಾನೆ. ಆಮೇಲೆ ಸತ್ಯಂ-ಜ್ಞಾನಂ-ಅನಂತಂ ಎಂದು ಅವನ ಅಸಾಧಾರಣ ಧರ್ಮಸಮೂಹವು ಪ್ರಸಕ್ತವಾಯಿತು. ಹೀಗೆಯೇ "ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ" ಎಂಬಲ್ಲಿ ಮೊದಲು ಬ್ರಹ್ಮನು ಜಿಜ್ಞಾಸಾಕ್ಕೆ ವಿಷಯನಾದನು. ಆಮೇಲೆ ಜಗಜ್ಜನ್ಮಾದಿ ಕರ್ತೃತ್ವ, ಪೂರ್ಣಾನಂದತ್ವವೇ ಮೊದಲಾದ ಅವನ ಅಸಾಧಾರಣ ಧರ್ಮಸಮೂಹವು ಪ್ರಸಕ್ತವಾಯಿತು. ಈಗ ಬ್ರಹ್ಮ ಅವನ ಅಸಾಧಾರಣ ಧರ್ಮಗಳ ಸಮೂಹ ಇವೆರಡರಲ್ಲಿ ಒಂದನ್ನೇ ಉಳಿಸಬೇಕೆಂದು ದೀಕ್ಷೆ ಇದ್ದವನು ಹೇಗೆ ರಾಮಶ್ಚ-ರಾಮಶ್ಚ ಎಂಬಲ್ಲಿ ಎರಡನೆಯ ರಾಮಶಬ್ದವನ್ನು ವೈಯಾಕರಣನು ಉಳಿಸುತ್ತಾನೋ ಹಾಗೆಯೇ ಬ್ರಹ್ಮನನ್ನು ಉಳಿಸದೇ ಬ್ರಹ್ಮನ ಗುಣಸಮೂಹವನ್ನುಳಿಸಬೇಕು. ಹೀಗೆ ಶ್ಲೋಕಾಭಿಪ್ರಾಯ.

ಬಹೋರನುಗ್ರಹೋ ನ್ಯಾಯ್ಯ ಇತಿ ಶಿಷ್ಟಾ ಬ್ರುವನ್ತಿ ಹಿ ।
ತ್ಯಜೇದೇಕಂ ಕುಲಸ್ಯಾರ್ಥೆ ಇತಿ ಚಾಹುಃ ಪುರಾತನಾಃ ॥ ೨೦೯ ॥

ಅನೇಕರಿಗೆ ಅನುಗ್ರಹಮಾಡುವುದು ನ್ಯಾಯವೆಂದು ಶಿಷ್ಟರು ಹೇಳುವರಷ್ಟೇ. ಅಲ್ಲದೇ ಕುಲವನ್ನು ಉಳಿಸುವುದಕ್ಕಾಗಿ ಒಬ್ಬನನ್ನು ತ್ಯಜಿಸಬೇಕು ಎಂಬುದಾಗಿಯೂ ವೃದ್ಧರು ಹೇಳುವರು.

ನೈಕಪಕ್ಷೇ ಪಕ್ಷಪಾತೋಽಸ್ತ್ಯಸ್ಮಾಕಂ ಚ ವಿವೇಕಿನಾಂ ।
ಯದ್ಯೇವಮಪಿ ಧರ್ಮ್ಯೇವ ರಕ್ಷ್ಯ ಇತ್ಯಾಗ್ರಹಸ್ತವ ॥ ೨೧೦ ॥

ತರ್ಹಿ ಧರ್ಮಾಶ್ಚ ರಕ್ಷ್ಯನ್ತಾಂ ದ್ವೌ ಚ ಸೂತೇ ಯತಃ ಶ್ರುತಿಃ ।
ಕನಿಷ್ಠೇಷ್ವೇವ ಪುತ್ರೇಷು ಮಾತಾ ಸ್ನೇಹವತೀ ಕಿಲ ॥ ೨೧೧ ॥

ನೀವೂ ಹಾಗೇ ಏಕೆ ಮಾಡಬಾರದು ಎನ್ನುವಿಯಾ? ಅಂದರೆ ಹೇಳುತ್ತಾರೆ. ವಿವೇಕಿಗಳಾದ ನಮಗೆ ಒಂದು ಪಕ್ಷದಲ್ಲಿ ಪಕ್ಷಪಾತವಿಲ್ಲದ್ದರಿಂದ ಬ್ರಹ್ಮನನ್ನೂ ಬ್ರಹ್ಮಧರ್ಮಗಳನ್ನೂ ಉಳಿಸುತ್ತೇವೆ. ಹೀಗಿದ್ದರೂ ಧರ್ಮಿ ಅಂದರೆ ಬ್ರಹ್ಮನನ್ನು ರಕ್ಷಿಸುವುದರಲ್ಲಿಯೇ ನಿನಗೆ ಆಗ್ರಹವೇನು? ಹಾಗಾದರೆ ಧರ್ಮವನ್ನೂ ರಕ್ಷಿಸು. ಶ್ರುತಿಯು ಬ್ರಹ್ಮನನ್ನೂ ಬ್ರಹ್ಮನ ಧರ್ಮಗಳನ್ನೂ ಹಡೆದಿದ್ದಾಳಷ್ಟೆ. ಶ್ರುತಿಯೆಂಬ ತಾಯಿಗೆ ಕಿರಿಯ ಪುತ್ರರಲ್ಲಿ ತಾನೇ ಸ್ನೇಹ.

ಸ್ವಗತೋ ಭೇದ ಏವೈಕಸ್ತ್ಯಜ್ಯತಾಂ ಯಂ ಶ್ರುತಿಃ ಸತೀ ।
ಧತ್ತೇ ನಾತ್ಮೋದರೇ ನಾಪಿ ಸೂತೇ ಕಿಂತು ನಿಷೇಧತಿ ॥ ೨೧೨ ॥

ಸ್ವಗತ ಭೇದಮಟ್ಟಿಗೆ ಬಿಡಲ್ಪಡಲಿ. ಈ ಸ್ವಗತ ಭೇದವನ್ನು ಸಾಧ್ವಿಯಾದ ಶ್ರುತಿಯು ತನ್ನ ಉದರದಲ್ಲಿ ಧರಿಸಲಿಲ್ಲ. ಹಡೆಯಲೂ ಇಲ್ಲ. ಆದರೆ ಅದನ್ನು ನಿಷೇಧಿಸುತ್ತಾಳೆ.

ಅತೋ ಬ್ರಹ್ಮಾಸ್ತು ಧರ್ಮಾಶ್ಚ ಸನ್ತು ಕಿಂ ತೇ ಗಮಿಷ್ಯತಿ ।
ಭೇದಮಾತ್ರಂ ತು ಮಾಸ್ತ್ವೇಷಾಂ ಯೋಽನ್ಧೇ ತಮಸಿ ಪಾತಯೇತ್

ಆದ್ದರಿಂದ ಬ್ರಹ್ಮ ಇರಲಿ. ಅದರ ಧರ್ಮಗಳೂ ಇರಲಿ. ಇದರಿಂದ ನಿನಗೆ ಹೋದದ್ದೇನು? ಇವುಗಳಿಗೆ ಭೇದಮಟ್ಟಿಗೆ ಬೇಡ. ಈ ಭೇದ ತಿಳಿಯೋಣವು, ಹಾಗೆ ತಿಳಿದವನಿಗೆ ತಮಃಪ್ರಾಪ್ತಿಗೆ ಕಾರಣವಾದೀತು.

ತವಾಪ್ಯೈಕ್ಯಮತಸ್ಥಸ್ಯ ಭೇದಮಾತ್ರವಿಮೋಚನಂ ।
ಉಚಿತಂ ನತು ಧರ್ಮಾಣಾಂ ಯದ್ಧರ್ಮಸ್ಥೋ ಭವಾನಪಿ ॥೨೦೪॥
ಸಭಾಮಧ್ಯಾದ್ಬಹಿಷ್ಕುರ್ಯುಃ ಕಿಲ ಧರ್ಮೋಜ್ಝಿತಂ ಬುಧಾಃ ।

ಐಕ್ಯಮತದಲ್ಲಿರುವ ನಿನಗೂ ಕೂಡ ಭೇದಮಾತ್ರ ಹೋಗೋಣವು ಉಚಿತ. ಧರ್ಮಗಳು ಹೋಗುವುದು ಉಚಿತವಲ್ಲ. ಏಕೆಂದರೆ, ನೀನೂ ಧರ್ಮದಲ್ಲಿರುವವನಷ್ಟೆ. ಹಾಗೆ ಧರ್ಮಬಿಟ್ಟವನಾದರೆ ಪಂಡಿತರು ನಿನ್ನನ್ನು ಸಭಾಮಧ್ಯದಿಂದ ಹೊರದೂಡುವರು. ಇಲ್ಲಿ 'ಧರ್ಮ' ಶಬ್ದದಮೇಲೆ ಶ್ಲೇಷವಿಟ್ಟು ಹೇಳಿರುವರು (ಧರ್ಮ ಮತ್ತು ಪರಮಾತ್ಮನ ಗುಣಗಳು). ಹೀಗೆ ಹೇಳುವುದರಿಂದ ವಾದಿರಾಜರ ಅಭಿಪ್ರಾಯವಿದು. ಪರಬ್ರಹ್ಮನು ಸರ್ವ ಶುಭಗುಣರಹಿತನೆಂದು ಪ್ರತಿಪಾದಿಸುವುದು ಅಧರ್ಮ. ಹಾಗೆ ಪ್ರತಿಪಾದಿಸುವವನು ಪಂಡಿತರ ಸಭೆಯಲ್ಲಿ ಕೂಡಲು ಯೋಗ್ಯನಲ್ಲ.

ಸ್ವಾಸಾಧಾರಣ ಧರ್ಮಾಣಾಂ ತ್ಯಾಗೇ ಬ್ರಹ್ಮೈವ ತೇ ಗತಮ್ ॥

ಬ್ರಹ್ಮನ ಅಸಾಧಾರಣ ಧರ್ಮಗಳನ್ನು ತ್ಯಾಗ ಮಾಡಿದಲ್ಲಿ ನಿನ್ನ ಬ್ರಹ್ಮನೇ ಇಲ್ಲದೇ ಹೋದ.

ವಿಪ್ರತ್ವಶೂನ್ಯೋ ವಿಪ್ರಃ ಕ್ವ ಗೋತ್ವಶೂನ್ಯಾ ಕ್ವ ಗೌರ್ವದ ।
ಘಟತ್ವಶೂನ್ಯಃ ಕ್ವ ಘಟಃ ಕ್ವ ಪಟತ್ವೋಜ್ಝಿತಃ ಪಟಃ ॥ ೨೦೬ ॥

ವಿಪ್ರತ್ವವಿಲ್ಲದ ವಿಪ್ರನುಂಟೇನು? ಗೋತ್ವವಿಲ್ಲದ ಗೋವುಂಟೇನು? ಘಟತ್ವವಿಲ್ಲದ ಘಟವೆಲ್ಲಿ ಬಂತು? ಪಟತ್ವವಿಲ್ಲದ ಪಟವೆಲ್ಲಿಯದು?

ಅತೋ ಬ್ರಹ್ಮಣಿ ಲೋಭಶ್ಚೇತ್ತಸ್ಯಾಸಾಧಾರಣಾನ್ಗುಣಾನ್ ।
ಬ್ರಹ್ಮತ್ವಸರ್ವಕರ್ತೃತ್ವಸರ್ವಜ್ಞತ್ವಾದಿಕಾನ್ ಶುಭಾನ್ ॥ ೨೦೭ ॥
ಧರ್ಮಾನ್ಸೂತ್ರಕೃತೈವೋಕ್ತಾನ್ಕಥಂ ತ್ಯಜಸಿ ಕೋವಿದ ।

ಆದ್ದರಿಂದ ಬ್ರಹ್ಮನನ್ನು ಉಳಿಸುವುದರಲ್ಲಿ ನಿನಗೆ ಲೋಭವಿದ್ದಲ್ಲಿ ಸೂತ್ರಕಾರರಿಂದಲೇ "ಓಂ ಪತ್ಯಾದಿಶಬ್ದೇಭ್ಯಃ ಓಂ" "ಓಂ ಸರ್ವಧರ್ಮೋಪಪತ್ತೇಶ್ಚ ಓಂ" ಇತ್ಯಾದಿ ಅನೇಕ ಸೂತ್ರಗಳಲ್ಲಿ ಹೇಳಲ್ಪಟ್ಟ ಬ್ರಹ್ಮನಲ್ಲಿರುವ ಬ್ರಹ್ಮತ್ವ ಸರ್ವ ಕರ್ತೃತ್ವ ಸರ್ವಜ್ಞತ್ವಾದಿ ಅನೇಕ ಅಸಾಧಾರಣ ಧರ್ಮಗಳನ್ನು ಎಲೋ ಪಂಡಿತನೇ! ಹೇಗೆ ತಾನೆ ತ್ಯಜಿಸುವಿ?

ಪುತ್ರೀವೈಧವ್ಯಭೀತೋ ಯತ್ಪಾತಿ ಜಾಮಾತರಂ ಜನಃ ॥ ೨೧೮ ॥
ಯತೋ ಜಾಮಾತೃಮರಣೇ ಪುತ್ರೀ ಚ ಸಹಧರ್ಮಿಣೀ ।
ಮೃತಾ ಭವೇತ್ತತೋ ಬ್ರಹ್ಮಕೃತೇ ಧರ್ಮಾಂಶ್ಚ ಪಾಲಯ ॥ ೨೧೯ ॥

ಮಗಳಿಗೆ ವೈಧವ್ಯ ಬರುವುದೆಂಬ ಭಯದಿಂದ ಜನರು ಅಳಿಯನನ್ನು ಕಾಪಾಡುವರು. ಏಕೆಂದರೆ, ಅಳಿಯನು ಮರಣ ಹೊಂದಿದರೆ ಸಹಧರ್ಮಿಣಿಯಾದ ಮಗಳೂ ಕೂಡ ಮೃತಳಾದಾಳು. ಆದ್ದರಿಂದ ಬ್ರಹ್ಮನನ್ನು ಉಳಿಸುವುದಕ್ಕಾಗಿ ಬ್ರಹ್ಮಧರ್ಮಗಳನ್ನು ಕಾಪಾಡು.

ಧರ್ಮಾಂಶ್ಚ ನೋಪಾಸತೇ ಯೇ ತ ಏವಾತ್ಮಹನಸ್ತ್ವಿತಿ ।
ಶ್ರುತಿಗೀತಾ ವಚಶ್ಚೇಮಮರ್ಥಂ ವಕ್ತ್ಯಹಮೇವ ನ ॥ ೨೨೦ ॥

ಯಾರು ಬ್ರಹ್ಮನ ಧರ್ಮಗಳನ್ನು ಉಪಾಸನೆ ಮಾಡುವುದಿಲ್ಲವೋ ಅವರು ಪರಮಾತ್ಮನನ್ನು ಕೊಂದವರು ಎಂಬ ಅರ್ಥವನ್ನು ಶ್ರುತಿಗೀತಾ ವಚನವು ಹೇಳುತ್ತದೆ. ನಾನು (ವಾದಿರಾಜರು) ಮಟ್ಟಿಗೆ ಹೇಳಿದ್ದಲ್ಲ.

" ನ ಚ ರಮನ್ತ್ಯಹೋ ಅಸದುಪಾಸನಯಾऽऽತ್ಮಹನೋ ಯದನುಶಯಾ ಭ್ರಮನ್ತ್ಯಭವಾಃ ಕುಶರೀರಭೃತಃ "

(ಭಾಗವತ । ದಶಮ । ೮೭-೨೪)

ಅಸದುಪಾಸನಯಾ=(ಪರಮಾತ್ಮನು ಹೇಗಿರುತ್ತಾನೋ ಹಾಗಲ್ಲದೆ ಬೇರೆಯಾಗಿ ಉಪಾಸನಾ ಮಾಡುವುದರಿಂದ) ಪರಮಾತ್ಮನ ಧರ್ಮಗಳು ಇಲ್ಲವೆಂದು ಉಪಾಸನೆ ಮಾಡುವುದರಿಂದ (ಇದೇ ಅಸದುಪಾಸನೆ)

ಆತ್ಮಹನಃ= ಪರಮಾತ್ಮನನ್ನು ಕೊಂದ (ಅಸುರರು)

ನ ಚ ರಮಂತಿ=ಆನಂದ ಪಡುವುದಿಲ್ಲ (ಆದರೆ ನಿತ್ಯ ನರಕವನ್ನು ಹೊಂದಿ ದುಃಖವನ್ನೇ ಅನುಭವಿಸುತ್ತಾರೆ.

ಅಹೋ=ಮಿಥ್ಯೋಪಾಸನೆಯಿಂದ ಎಂತಹ ಅನರ್ಥ ! !

ಪರಮಾತ್ಮನನ್ನು ಕೊಲ್ಲುವುದೆಂದರೆ ಇದು ಅಭಿಪ್ರಾಯ. ಯಾವ ಧರ್ಮವೂ ಇಲ್ಲದ ವಸ್ತುವು ಶೂನ್ಯಪ್ರಾಯ. ಬ್ರಹ್ಮನು ಶೂನ್ಯನೆಂದು ತಿಳಿಯುವುದೇ ಬ್ರಹ್ಮನನ್ನು ಕೊಲ್ಲುವುದು ಎಂದು ಅಭಿಪ್ರಾಯ.

ಭೃಗುವಲ್ಲ್ಯಾಂ ಯತೋ ಬ್ರಹ್ಮಾಽಽನನ್ದಾದ್ಯಾತ್ಮಕಮುಚ್ಯತೇ ।
ತಸ್ಮಾಚ್ಛ್ರುತಿರಿಯಂ ಚಾಸ್ಯ ಧರ್ಮಾಭಾವಂ ನ ಮನ್ಯತೇ ॥

"ಆನಂದೋ ಬ್ರಹ್ಮೇತಿ ವ್ಯಜಾನಾತ್" "ವಿಜ್ಞಾನಂ ಬ್ರಹ್ಮೇತಿ ವ್ಯಜಾನಾತ್" ಎಂದು ಭೃಗುವಲ್ಲಿಯಲ್ಲಿ ಬ್ರಹ್ಮನು ಆನಂದಾದಿ ಸ್ವರೂಪನೂ ಎಂದು ಹೇಳಿರುವುದರಿಂದ 'ನೇಹ ನಾನಾಸ್ತಿ ಕಿಂಚನ' ಶ್ರುತಿಗೆ ಬ್ರಹ್ಮನು ಸರ್ವಧರ್ಮರಹಿತನೆಂಬಲ್ಲಿ ತಾತ್ಪರ್ಯವಿಲ್ಲ.

ತತ್ರೈವ ಧರ್ಮಬಾಹುಲ್ಯಕೀರ್ತನಾದ್ಬಹುತಾಮಪಿ ।
ನ ನಿಷೇಧತಿ ಧರ್ಮಾಣಾಂ ಕಿನ್ತ್ವನನ್ತಾಶ್ಚ ಸನ್ತಿ ತೇ ॥ ೨೨ ॥

ಈ ಕಾಠಕ ಶ್ರುತಿಯಲ್ಲಿಯೂ ಹಿಂದೆ ಮುಂದೆ, ಆ ಬ್ರಹ್ಮನಿಗೆ ಅನೇಕ ಧರ್ಮಗಳನ್ನು ಹೇಳಿರುವುದರಿಂದ, ಧರ್ಮಗಳ ಬಹುತ್ವವನ್ನು ಶ್ರುತಿಯು ನಿಷೇಧ ಮಾಡುವುದಿಲ್ಲ. ಆದರೆ ಅನಂತ ಧರ್ಮಗಳು ಬ್ರಹ್ಮನಲ್ಲಿ ಉಂಟೆಂದೇ ಶ್ರುತಿಗೆ ತಾತ್ಪರ್ಯ.

ಭೇದಮಾತ್ರಂ ತು ಧರ್ಮಾಣಾಂ ಧರ್ಮಿಣಾ ಹರಿಣಾ ಸಹ ।
ನಾಸ್ತೀತ್ಯೇವಾಽಹ ಸಾ ಗೋತ್ರಕಲಹಾಯ ಯತೇತ ಕಾ ॥ ೨೩ ॥

ಧರ್ಮಗಳಿಗೆ ಧರ್ಮಿಯಾದ ಹರಿಯಿಂದ ಭೇದವು ಇಲ್ಲವೆಂದು ಮಾತ್ರ ಹೇಳುತ್ತದೆ. ಯಾವಳು ತಾನೇ ಸ್ವಗೋತ್ರದಲ್ಲಿ ಕಲಹ ಉಂಟುಮಾಡುವುದಕ್ಕೆ ಯತ್ನಿಸಿಯಾಳು? ಅಂದರೆ ಹಿಂದೆ ಮುಂದೆ ಧರ್ಮಗಳನ್ನು ಹೇಳುವುದೊಂದು ಗುಂಪು. "ನೇಹ ನಾನಾಸ್ತಿ ಕಿಂಚನ" ಎಂಬುದು ಮತ್ತೊಂದು ಧರ್ಮವಿಲ್ಲವೆಂದು ಹೇಳಿದಲ್ಲಿ ಸ್ವಗೋತ್ರ ಕಲಹದಂತೆ ಶ್ರುತಿಗಳಲ್ಲಿ ಪರಸ್ಪರ ವಿರೋಧ ಬರುವುದು.

ಇತ್ಯೇವ ಕಲ್ಪನಾಸಾಧ್ವೀ ಶ್ರುತಿಹಾರ್ದವಿದಾಂ ಸತಾಮ್ ।
ನ ಚೇತ್ಸ್ವಾಭಿನ್ನಸದ್ಧರ್ಮಾಭಾವೇ ಬ್ರಹ್ಮಾಪ್ಯಸದ್ಭವೇತ್ ॥೨೪॥

ನಹಿ ಸರ್ವವಿಶೇಷರಹಿತಮಿತ್ಯುಕ್ತೇ ತದಸ್ತೀತಿ ಸಿಧ್ಯತಿ, ವಾಚ್ಯತ್ವ, ಲಕ್ಷ್ಯತ್ವ, ಅಸ್ತಿತ್ವಾದೀನಾಮಪಿ ವಿಶೇಷತ್ವಾತ್. (5-14 ಗೀತಾ ತಾತ್ಪರ್ಯ) ಆದ್ದರಿಂದ ಶ್ರುತಿಯ ಹೃದಯವನ್ನು ತಿಳಿದ ಸಜ್ಜನರಿಗೆ ಬ್ರಹ್ಮನಿಗೂ ಬ್ರಹ್ಮನ ಗುಣಗಳಿಗೂ ಅತ್ಯಂತ ಅಭೇದವೆಂದು ಹೇಳುವುದೇ ಸಾಧುವಾದದ್ದು. ಹೀಗಿಲ್ಲ

ದಲ್ಲಿ ಬ್ರಹ್ಮನಿಂದ ಅಭಿನ್ನವಾದ ಸತ್ತಾರೂಪ ಧರ್ಮವೂ ಇಲ್ಲವೇ ಹೋದಲ್ಲಿ ಬ್ರಹ್ಮನೂ ಕೂಡ ಅಸತ್ತಾದಾನು (ಶೂನ್ಯನಾದಾನು).

ತತ್ಪ್ರವೃತ್ತಿರ್ನಿವೃತ್ತಿರ್ವಾ ಸಹ ಸ್ಯಾದ್ಧರ್ಮಧರ್ಮಿಣೋಃ ।
ಯತೋಽಂಗಾನಾಂ ವಿನಾಶೇಽಂಗೀ ನಶ್ಯಃ ಸರ್ವತ್ರ ದೃಶ್ಯತೇ ॥

ಅಂಗಗಳು ನಾಶವಾದರೆ ಅಂಗಿಯು ನಾಶವಾಗುತ್ತೆಂಬುದು ಎಲ್ಲ ಕಡೆಯಲ್ಲಿಯೂ ಕಂಡುಬರುವುದರಿಂದ ಧರ್ಮಧರ್ಮಿಗಳು ಇದ್ದರೆ ಜೊತೆಯಲ್ಲಿ ಇರುತ್ತವೆ. ಇಲ್ಲದಲ್ಲಿ ಎರಡೂ ಇರುವುದಿಲ್ಲ.

ಕಿಂ ಕಬನ್ಧಃ ಸ್ವಯಂ ಜೀವೇತ್ಸ್ವೋತ್ತಮಾಂಗ ಶಿರೋವಿನಾ ।
ಯತೋ ಬೋಧಸ್ಯ ವೈಧುರ್ಯಂ ನಾಶಕಾಲಂ ವಿದುರ್ಬುಧಾಃ ॥

ಅತಃ ಕದಾಽಪ್ಯಂಗನಾಶೋ ಜ್ಞಾನನಾಶಶ್ಚ ನೋಚ್ಯತಾಮ್ ।
ಭೇದಸ್ಯ ನಾಸ್ತಿತೈವಾತ್ರ ಯುಕ್ತಾ ಧರ್ಮಾತ್ಮಕಂ ಶ್ರುತಿಃ ॥ ೨೨ ॥

ಯದ್ವ್ಯಾಹ್ಯಾಹ ಬ್ರಹ್ಮವಲ್ಲ್ಯಾಂ................

ತನ್ನ ಉತ್ತಮಾಂಗ (ಶ್ರೇಷ್ಠಾಂಗವಾದ)ವಾದ ಶಿರಸ್ಸು ಇಲ್ಲದೇ ಮುಂಡವು ತಾನೇ ಜೀವಿಸುತ್ತೇನು? ಅಲ್ಲದೆ (ಕಾಯಿಲೆ ಇದ್ದವನಿಗೆ) ಜ್ಞಾನವಿಲ್ಲದ ಅವಸ್ಥೆ ಬಂದಾಗ ಮರಣಕಾಲವು ಸಮೀಪಿಸಿತೆಂದು ತಿಳುವಳಿಕೆಯುಳ್ಳವರು ಹೇಳುವರು. ಆದ್ದರಿಂದ ಯಾವಾಗಲೇ ಆಗಲಿ ಅಂಗನಾಶವೇ ಆಗಲಿ ಜ್ಞಾನನಾಶವೇ ಆಗಲಿ (ಪರಮಾತ್ಮನಿಗೆ) ಹೇಳಬಾರದು. ಭೇದವಿಲ್ಲವೆಂಬುದೇ ಅಲ್ಲಿ ಯುಕ್ತವಾದದ್ದು. ಏಕೆಂದರೆ, ಬ್ರಹ್ಮವಲ್ಲಿಯಲ್ಲಿ ಬ್ರಹ್ಮನು ಧರ್ಮ (ಗುಣ) ಸ್ವರೂಪನು ಎಂದು ಹೇಳಿದೆ. "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂದು ಬ್ರಹ್ಮನನ್ನು ಗುಣಸ್ವರೂಪನನ್ನಾಗಿ ವರ್ಣಿಸುತ್ತೆ. ಇದರ ಮುಖ್ಯ ಅಭಿಪ್ರಾಯ: ತೈತ್ತಿರೀಯ ಉಪನಿಷತ್ತಿನ ಬ್ರಹ್ಮವಲ್ಲಿಯಲ್ಲಿ ಬ್ರಹ್ಮನು ಸತ್ಯತ್ವ ಜ್ಞಾನತ್ವ ಅನಂತತ್ವ ಈ ಧರ್ಮಗಳ ಸ್ವರೂಪನು ಎಂದು ಹೇಳಿವೆ. ಬ್ರಹ್ಮನಿಂದ ಅಭಿನ್ನವಾದ ಈ ಧರ್ಮಗಳು ಇಲ್ಲವೆಂದಲ್ಲಿ ಬ್ರಹ್ಮನೇ ಇಲ್ಲವೆಂದು ಹೇಳಿದ ಹಾಗಾಯಿತು. ಆದ್ದರಿಂದ ಬ್ರಹ್ಮನಲ್ಲಿ ಧರ್ಮಗಳಿವೆ. ಅವು ಬ್ರಹ್ಮನಿಂದ ಅಭಿನ್ನವಾದವು ಎಂದೇ ಹೇಳಬೇಕು.

..................ಅವತಾರಾಶ್ಚ ಸರ್ವಶಃ ।
ಏಕೀಭವನ್ತಿ ಕಾರ್ಯಾನ್ತೇ ತತೋ ಮೂಲಸ್ವರೂಪಿಣಾ ॥೨೨೮॥
ಹರಿಣೇತಿ ಪುರಾಣಾನಿ ಗೃಣಂತಿ ಶ್ರುತಯೋಽಪಿ ಚ ।

ಪರಮಾತ್ಮನ ಎಲ್ಲ ಅವತಾರರೂಪಗಳೂ ಪ್ರಳಯಕಾಲದಲ್ಲಿ ಮೂಲ ರೂಪದಿಂದ ಐಕ್ಯವನ್ನು ಹೊಂದುತ್ತವೆ ಎಂಬುದಾಗಿ ಪುರಾಣಗಳೂ ಶ್ರುತಿಗಳೂ ಹೇಳುತ್ತವೆ.

ಆಧಾರಶ್ರುತಿ :—

" ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥
ಸ ಆತ್ಮನ ಆತ್ಮಾನಮುದ್ಧೃತ್ಯಾತ್ಮನ್ಯೇವ ವಿಲಾಪಯತ್ಯಥಾತ್ಮೈವ ಭವತಿ ।
ಸ ದೇವೋ ಬಹುಧಾ ಭೂತ್ವಾ ನಿರ್ಗುಣಃ ಪುರುಷೋತ್ತಮಃ ।
ಏಕೀಭೂಯ ಪುನಃ ಶೇತೇ ನಿರ್ದೋಷೋ ಹರಿರಾದಿಕೃತ್ ॥

ಈ ಶ್ರುತಿಯಲ್ಲಿ ಪರಮಾತ್ಮನಿಗೆ ತನ್ನಲ್ಲೇ ತನಗೆ ಲಯವು (ಐಕ್ಯವು) ಹೇಳಲ್ಪಟ್ಟಿವೆ.

ಕೃಷ್ಣಃ ಕೇಶಾತ್ಮಕೋ ವಿಷ್ಣೋರುತ್ತಮಾಂಗಭವೋಽಪಿ ಚ ॥
" ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥
ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ " ॥
ಇತ್ಯಾದಿ ಗೀತಾವಾಕ್ಯೇಷು ಸಾಕ್ಷಾದ್ಬ್ರಹ್ಮತಯೋಚ್ಯತೇ ।

ವಿಷ್ಣುವಿನ ಶಿರಸ್ಸಿನಲ್ಲಿನ ಕೇಶಸ್ವರೂಪನಾದ ಕೃಷ್ಣನು ಮುಂದೆ ತೋರಿಸುವ ಗೀತಾವಾಕ್ಯಗಳಲ್ಲಿ ಸಾಕ್ಷಾದ್ಬ್ರಹ್ಮನಾಗಿ ಹೇಳಲ್ಪಟ್ಟಿರುವನು. ಉದಾಹರಿಸಿದ ಗೀತಾವಾಕ್ಯಗಳ ಅರ್ಥವು ಹೀಗೆ :—ನಾನು ಸರ್ವಜಗತ್ತಿಗೂ ಸೃಷ್ಟಿಕರ್ತನು. ಲಯಕರ್ತನು. ದಾರದಲ್ಲಿ ಮಣಿಗಳ ಸಮೂಹವು ಹೇಗೋ

ಹಾಗೆ ನನ್ನಲ್ಲಿ ಈ ಸರ್ವ ಚರಾಚರಾತ್ಮಕವಾದ ಜಗತ್ತು ಪೋಣಿಸಲ್ಪಟ್ಟಿದೆ. ಬ್ರಹ್ಮಾದಿ ಕ್ಷರ ಪುರುಷರನ್ನು ಮೀರಿದವನಾದ್ದರಿಂದಲೂ ಅಕ್ಷರನಾಮಕಳಾದ ರಮಾದೇವಿಗಿಂತ ಉತ್ತಮನಾದ್ದರಿಂದಲೂ ಪುರುಷೋತ್ತಮನೆಂದು ಪೌರುಷೇಯಾಪೌರುಷೇಯ ಆಗಮಗಳಲ್ಲಿ ಪ್ರಸಿದ್ಧನಾಗಿರುವೆನು.

' ಏತೇ ಸ್ವಾಂಶಕಲಾಃ ಪುಂಸಃ ಕೃಷ್ಣಸ್ತು ಭಗವಾನ್ಸ್ವಯಮ್ ' ॥

ಈ ಪರಮ ಪುರುಷನ ಸ್ವರೂಪಾಂಶಗಳಾದ ಮತ್ಸ್ಯಾದಿ ರೂಪಗಳು ಸಾಕ್ಷಾತ್ ಮೂಲರೂಪೀ ಭಗವಾನ್ ಕೃಷ್ಣನೇ. ಅಂದರೆ ಮೂಲರೂಪಿ ಕೃಷ್ಣನಾಮಕ ನಾರಾಯಣನಿಗೂ ಮತ್ಸ್ಯಾದಿ ಅವತಾರ ರೂಪಗಳಿಗೂ ಅತ್ಯಂತ ಅಭೇದವೆಂದು ಅಭಿಪ್ರಾಯ.

ಇತಿ ಭಾಗವತೇ ವ್ಯಾಸೋಽಪ್ಯಾಹ ಮೀಮಾಂಸಕಾಗ್ರಣೀಃ ।
ಅತೋ ಬ್ರಹ್ಮಗುಣಾನಾಂ ಚ ಬ್ರಹ್ಮಾಂಗಾನಾಂ ಚ ಸರ್ವಶಃ ॥
ಮತ್ಸ್ಯಾದ್ಯನನ್ತರೂಪಾಣಾಂ ಬ್ರಹ್ಮಣಾ ಧರ್ಮಿಣಾ ಸಹ ।
ಭೇದಾಭಾವಪರಾ ಸೇಯಂ ಶ್ರುತಿರಿತ್ಯತಿ ಮಂಗಲಮ್ ॥ ೨೩೪ ॥

ಈ ರೀತಿಯಲ್ಲಿ ವಿಚಾರಮಾಡುವವರಲ್ಲಿ ಮುಂದಾಳುಗಳಾದ ವೇದ-ವ್ಯಾಸರೂ ಕೂಡ ಭಾಗವತದಲ್ಲಿ ಹೇಳಿರುವುದರಿಂದ ಬ್ರಹ್ಮನ ಗುಣಗಳಿಗೂ, ಬ್ರಹ್ಮನ ಅವಯವಗಳಿಗೂ ಮತ್ಸ್ಯಾದಿ ಅನಂತರೂಪಗಳಿಗೂ ಧರ್ಮಿಯಾದ ಬ್ರಹ್ಮನಿಂದ ಸರ್ವಾತ್ಮನಾ ಭೇದವಿಲ್ಲೆಂದು ಹೇಳುವುದರಲ್ಲಿಯೇ ಈ ಶ್ರುತಿಗೆ (ನೇಹ ನಾನಾಸ್ತಿ ಕಿಂಚನ) ತಾತ್ಪರ್ಯವೆಂದು ತಿಳಿಯುವುದು ಅತಿ ಮಂಗಳವು.

ತಸ್ಮಾಚ್ಛ್ರುತ್ಯರ್ಥಕುಶಲೋ ಮಧ್ವ ಏವ ಜಗದ್ಗುರುಃ ।
ಗುರುಂಮನ್ಯಾಸ್ತದನ್ಯೇ ತು ಹನ್ಯುರರ್ಥೈಃ ಸಹ ಶ್ರುತಿಮ್ ॥

ಆದ್ದರಿಂದ ಶ್ರುತ್ಯರ್ಥವನ್ನು ಪ್ರತಿಪಾದಿಸುವುದರಲ್ಲಿ ಕುಶಲರಾದ ಮಧ್ವಾಚಾರ್ಯರೇ ಜಗದ್ಗುರುಗಳು. ಅರ್ಥಸಹಿತವಾಗಿ ಶ್ರುತಿಯನ್ನು ಕೊಲ್ಲುವ ಇತರ ವ್ಯಾಖ್ಯಾನಕಾರರು ' ಗುರುಂ ಮನ್ಯರು '. ಗುರುಂ ಮನ್ಯರು ಎಂಬ ಪ್ರಯೋಗವು " ಪಡಿತಂ ಮನ್ಯ " ಎಂಬ ಪ್ರಯೋಗದಂತೆ. ಅಂದರೆ

ಗುರುಗಳೆಂದು ತಿಳಿದಿರುತ್ತಾರೆ. ಆದರೆ ಗುರುಗಳಲ್ಲ. ಅಭಿಪ್ರಾಯ:— 'ನೇಹ ನಾನಾಸ್ತಿ ಕಿಂಚನ' ಎಂಬ ಶ್ರುತಿಗೆ ಪ್ರಪಂಚವು ಇಲ್ಲವೆಂದು ಅರ್ಥ ಹೇಳಿದಲ್ಲಿ ಈ ಶ್ರುತಿಯೂ, ಶ್ರುತ್ಯರ್ಥವೂ ಪ್ರಪಂಚಕ್ಕೆ ಸೇರಿದ್ದಾದ್ದರಿಂದ ಅವೆರಡೂ ಇಲ್ಲವೆಂದು ಹೇಳಿದ ಹಾಗಾಯಿತು. ಇದೇನೇ ಶ್ರುತಿಯನ್ನೂ ಶ್ರುತ್ಯರ್ಥವನ್ನೂ ಕೊಲ್ಲೋಣವು.

ಇದಂ ಚ ಸರ್ವಮಿಥ್ಯಾತ್ವವಾದಿನಾಂ ಮಾಯಿನಾಂ ಭುವಿ ।
ಪ್ರಸಿದ್ಧಂ ಯೇ ಶ್ರುತಿಂ ಸ್ಪಷ್ಟಮತತ್ತ್ವಾವಾದಿನೀಂ ಜಗುಃ ॥ ೨೩೬ ॥

ಇದು (ಶ್ರುತಿಯನ್ನು ಕೊಲ್ಲುವುದು) ಸರ್ವವೂ ಮಿಥ್ಯಾ ಎಂದು ವಾದ ಮಾಡುವ ಮಾಯಾವಾದಿಗಳಿಗೆ ಪ್ರಸಿದ್ಧಿ. ಇವರು ಸ್ಪಷ್ಟವಾಗಿ ಶ್ರುತಿಯನ್ನು ಅತತ್ತ್ವಾವೇದಕವೆಂದು ಹೇಳುವರು. ಶ್ರುತಿಗೆ ಜೀವ ಅದರ ಪ್ರಾಮಾಣ್ಯ. ಅತತ್ತ್ವಾವೇದಕವು ಶ್ರುತಿಯೆಂದು ಹೇಳುವುದರಿಂದ ಅದರ ಪ್ರಾಮಾಣ್ಯವನ್ನು ಅಂದರೆ ಅದರ ಜೀವವನ್ನು ತೆಗೆದಂತಾಯಿತು. ಇದೇ ಶ್ರುತಿಯನ್ನು ಕೊಲ್ಲೋಣವು ಎಂದಭಿಪ್ರಾಯ.

ಕೃತಕತ್ವೋಕ್ತಿತಸ್ತಾರ್ಕಿಕಾಶ್ಚ ಜಘ್ನುಃ ಶ್ರುತಿಂ ಸತೀಂ ।
ಅನೀಶ್ವರತ್ವವಾದೀ ಚ ಶ್ರುತೇರ್ಮುಖ್ಯಾರ್ಥರೂಪಿಣಮ್ ॥ ೨೩೭ ॥

ಹರಿಮೇವ ಮೃಷಾ ಚಕ್ರೇ ಸೋಽಪಿ ಚಕ್ರೇ ಶ್ರುತೇರ್ಹತಿಮ್ ।
ಅನ್ಯೇ ತ್ವವೈದಿಕಾಃ ಸರ್ವವೇದಮೇವ ಜಹುರ್ನ ಕಿಮ್ ॥ ೨೩೮ ॥

ತಾರ್ಕಿಕರು ವೇದವು ಕೃತಕವು ಅಂದರೆ ಪೌರುಷೇಯ ಎಂದು ಹೇಳುವುದರ ಮೂಲಕ ಸಾಧ್ವಿಯಾದ ಶ್ರುತಿಯನ್ನು ಕೊಂದರು. ಈಶ್ವರನಿಲ್ಲವೆಂದು ವಾದಮಾಡುವ ಮೀಮಾಂಸಕನು ಶ್ರುತಿಗೆ ಮುಖ್ಯಾರ್ಥ ರೂಪನಾದ ಹರಿಯನ್ನೇ ಸುಳ್ಳುಮಾಡಿದನು. ಆದ್ದರಿಂದ ಅವನೂ ಕೂಡ ಶ್ರುತಿಯ ಸಂಹಾರವನ್ನು ಮಾಡಿದನು. ಜೈನ ಬೌದ್ಧಾದಿ ಇತರರು ಎಲ್ಲರೂ ವೇದವನ್ನು ಬಿಡಲಿಲ್ಲವೇನು? ಈ ಎರಡು ಶ್ಲೋಕಗಳ ಅಭಿಪ್ರಾಯ ಹೀಗೆ.

ತಾರ್ಕಿಕರು ವೇದಗಳು ಈಶ್ವರಕೃತವೆಂದು ಹೇಳುವರು. ಹೀಗೆ ಹೇಳುವುದರಿಂದ ಅವರು ಶ್ರುತಿಯನ್ನು ಕೊಂದಂತಾಯಿತು. ಅದು ಹೇಗೆ?

ಅಂದರೆ "ಅತಃ ಶ್ರುತಿತ್ವಮೇತಾಸಾಂ ಶ್ರುತಾ ಏವಾಖಿಲೈರ್ಜನೈಃ" ಹೀಗೆ ಬ್ರಹ್ಮಾಂಡ ಪುರಾಣದಲ್ಲಿದೆ. ವೇದಗಳು ಎಲ್ಲರಿಂದಲೂ ಶ್ರುತವಾದವುಗಳೇ (ಕೇಳಲ್ಪಟ್ಟವುಗಳೇ) ಹೊರ್ತು ಅವನ್ನು ಯಾರೂ ಮಾಡಲಿಲ್ಲ. ಇದಕ್ಕಾಗಿಯೇ ಅವುಗಳಿಗೆ ಶ್ರುತಿತ್ವವುಂಟು. ಅಂದರೆ ಶ್ರುತಿಗಳು ಎಂದು ಕರೆಯಲ್ಪಡುತ್ತವೆ. ಈಗ ತಾರ್ಕಿಕರು ಹೇಳುವಂತೆ ಶ್ರುತಿಯು ಈಶ್ವರಕೃತ ವಾದಲ್ಲಿ ಅದಕ್ಕೆ ಶ್ರುತಿತ್ವ ಹೋಯಿತು. ಇದೇನೇ ಶ್ರುತಿಯನ್ನು ಕೊಲ್ಲೋಣವೆಂಬುದು.

ಮೀಮಾಂಸಕರು ಯದ್ಯಪಿ ವೇದವು ಕೃತಕವಲ್ಲ. ಅದು ಅಪೌರುಷೇಯ ವೆಂದು ಹೇಳಿದರೂ ವೇದಕ್ಕೆ ಮುಖ್ಯಾರ್ಥಭೂತನಾದ ಈಶ್ವರನೇ ಇಲ್ಲ ವೆನ್ನುವರು. ಹೀಗೆ ಹೇಳುವುದರಿಂದ ಅವರೂ ಕೂಡ ಶ್ರುತಿಯನ್ನು ಕೊಂದಂತಾಯಿತು.

ಬೌದ್ಧರೇ ಮೊದಲಾದವರು ವೇದವು ಅಪ್ರಮಾಣವೆಂದು ತಿಳಿದು ಅದನ್ನು ಬಿಟ್ಟೇ ಬಿಟ್ಟರು. ಮಾಯಾವಾದಿಗಳಾದರೋ ವೇದದಲ್ಲಿನ ಬಹು ಭಾಗವು ಅತತ್ತ್ವಾವೇದಕವೆಂದು ಹೇಳುವುದರ ಮೂಲಕ ಅದಕ್ಕೆ ಅಪ್ರಾಮಾಣ್ಯ ವನ್ನು ತಂದೊಡ್ಡಿದರು. ಹಾಗಾದರೆ ವೇದವನ್ನು ಕಾಪಾಡಿದವರು ಯಾರು? ಇದಕ್ಕೆ ಉತ್ತರವನ್ನು ಮುಂದಿನ ಎರಡು ಶ್ಲೋಕಗಳಿಂದ ಹೇಳುತ್ತಾರೆ.

ವೇದಸ್ಯ ಸತ್ಯತಾವಾದೀ ವೇದಾರ್ಥಜಗತೋಽಪಿ ಚ ।
ಸತ್ಯತ್ವವಾದೀ ವೇದಸ್ಯ ಮುಖ್ಯಾರ್ಥಂ ಜಗದೀಶ್ವರಮ್ ॥ ೨೩೯ ॥

ಯಃ ಪ್ರತ್ಯಪಾದಿ ಸರ್ವಜ್ಞಃ ಪೂರ್ಣಪ್ರಜ್ಞೋ ಗುರುಃ ಸಹಿ ।
ತಸ್ಯಾಗ್ರೇ ಕಸ್ಯ ಗುರುತಾ ವದನ್ತು ಪ್ರತಿವಾದಿನಃ ॥ ೨೪೦ ॥

ವೇದವು ಸತ್ಯವೆಂದು ವಾದಿಸುವ, ವೇದಾರ್ಥವೂ ಜಗತ್ತೂ ಸತ್ಯವೆಂದು ವಾದಿಸುವ ವೇದಕ್ಕೆ ಮುಖ್ಯಾರ್ಥಭೂತನಾದವನು ಜಗದೀಶನಾದ ನಾರಾಯಣನೆಂದು ಪ್ರತಿಪಾದಿಸುವ ಯಾವ ಮಧ್ವಾಚಾರ್ಯರೋ ಅವರೇನೇ ಸರ್ವಜ್ಞರಾದ ಪೂರ್ಣಪ್ರಜ್ಞರೆಂಬ ಹೆಸರಿನಿಂದ ಪ್ರಸಿದ್ಧರಾದ ಗುರುಗಳು. ಅವರ ಮುಂದೆ ಯಾರಿಗೆ ಗುರುತ್ವ? ಪ್ರತಿವಾದಿಗಳು ಹೇಳಲಿ.

ತಚ್ಛಿಷ್ಯಾಣಾಂ ಚ ಪುರತೋ ಯಸ್ಮಾದುಕ್ತಪ್ರಕಾರತಃ ।
ಲಘುತಾಂ ಲೇಭಿರೇ ಸರ್ವೇ ಯೇ ದುರ್ವಾದಪ್ರವರ್ತಕಾಃ ॥ ೨೪೧

ಸ ಸರ್ವಜ್ಞೋ ವಿಜಯತೇ ಮಧ್ವಾಖ್ಯೋ ಜಗತಾಂ ಗುರುಃ ।

ಆ ಮಧ್ವಾಚಾರ್ಯರ ಶಿಷ್ಯರಾದ ನಮ್ಮಗಳ ಎದುರಿಗೆ ಹಿಂದೆ ಹೇಳಿದ ರೀತಿಯಲ್ಲಿ ದುರ್ವಾದವನ್ನು ಮಾಡುವ ಎಲ್ಲ ವಾದಿಗಳೂ ಲಘುತ್ವವನ್ನು ಹೊಂದಿದರು. ಅಂದರೆ ಪರಾಜಿತರಾದರು. ಅಂತಹ ಸರ್ವಜ್ಞರಾದ ಮಧ್ವಾಖ್ಯ ಜಗದ್ಗುರುಗಳು ಜಯಶೀಲರಾಗಿ ಬೆಳಗುತ್ತಾರೆ. ಇದರ ಅಭಿಪ್ರಾಯ. ನಾವು ಮಧ್ವಾಚಾರ್ಯರ ಶಿಷ್ಯರು. ಅವರ ಗ್ರಂಥಗಳನ್ನು ವ್ಯಾಸಂಗಮಾಡಿ ಅವರು ತೋರಿಸಿರುವ ಮಾರ್ಗದಲ್ಲಿ ವಾದಮಾಡಿ ಪರವಾದಿಗಳನ್ನು ಜಯಿಸಿದ್ದೇವೆ. ಅವರ ಅನುಗ್ರಹದಿಂದ ಈ ಜಯ. ಆದ್ದರಿಂದ ಈ ಜಯವು ಅವರದೇ. ಹೀಗೆಯೇ ಜಯತೀರ್ಥರೂ ವ್ಯಾಸರಾಯರೂ ಇವರೆಲ್ಲರೂ ಆಚಾರ್ಯರ ಮಾರ್ಗವನ್ನು ಅವಲಂಬಿಸಿ ಗ್ರಂಥಕರ್ತೃಗಳಾಗಿ ವಾದದಲ್ಲಿ ಪ್ರತಿವಾದಿಗಳನ್ನು ಜಯಿಸಿರುವರು ಎಂದು ಅಭಿಪ್ರಾಯ.

ಕಿಂ ಚೈಕೀಭಾವಪಕ್ಷೇ ತು ಬ್ರಹ್ಮೈವೋರ್ವರಿತಂ ಭವೇತ್ ॥
ಧರ್ಮಾ ನ ಸನ್ತೀತಿ ವದನ್ಸನ್ಮತಂ ನೈವ ವೇತ್ತಿ ಸಃ ।

ಯಾವನು ಬ್ರಹ್ಮನಿಗೂ ಬ್ರಹ್ಮಧರ್ಮಗಳಿಗೂ ಐಕ್ಯವುಂಟು ಎಂಬ ಪಕ್ಷದಲ್ಲಿ ಬ್ರಹ್ಮನು ಮಟ್ಟಿಗೆ ಉಳಿದಾನು, ಧರ್ಮಗಳು ಇಲ್ಲವೆಂದು ಹೇಳುವನೋ ಅವನು ಸಮೀಚೀನವಾದ ಅಭಿಪ್ರಾಯವನ್ನು ಅಥವಾ ಸಜ್ಜನರ ಮತವನ್ನು ತಿಳಿದವನಲ್ಲ.

*** ಬ್ರಹ್ಮಾಧೀಹೀತಿ ಭೃಗುಣಾ ಪೃಷ್ಟೋ ಯದ್ವರುಣೋ ಗುರುಃ ॥**

ಅನನ್ತಾದಿ ಗುಣಾನ್ದೇವಃ ಪ್ರಶ್ನೋತ್ತರತಯಾ ಜಗೌ ।
ಅನನ್ತಾದ್ಯಾ ಬ್ರಹ್ಮ ಕಿಲ ನಾನ್ಯದ್ಬ್ರಹ್ಮ ತತಃ ಕಿಲ ॥ ೨೪೪ ॥

---

* ಭೃಗುರ್ವೈ ವಾರುಣಿಃ ವರುಣಂ ಪಿತರಮುಪಸಸಾರ, ಅಧೀಹಿ ಭಗವೋ ಬ್ರಹ್ಮೇತಿ । ಏತತ್ಪ್ರೋವಾಚ, ಅನ್ನಂ ಪ್ರಾಣಂ ಚಕ್ಷುಃ ಶ್ರೋತ್ರಂ ಮನೋವಾಚಮಿತಿ ॥ ಭೃಗುವಲ್ಲಿ - ೧ ॥.

ಭೃಗು ಋಷಿಗಳು "ಬ್ರಹ್ಮನನ್ನು ಉಪದೇಶಿಸು" ಎಂದು ಪ್ರಾರ್ಥಿಸಿದಾಗ ಗುರುವಾದ ವರುಣದೇವರು ಪ್ರಶ್ನೆಗೆ ಉತ್ತರವಾಗಿ ಆನಂದಾದಿಗುಣಗಳನ್ನು ಹೇಳಿದರು. (ಅದ್ದರಿಂದ) ಆನಂದಾದಿಗುಣಗಳು ಬ್ರಹ್ಮನಷ್ಟೆ. ಅವುಗಳಿಂದ ಬೇರೆಯಾದ ಬ್ರಹ್ಮನಿಲ್ಲವಲ್ಲವೇ ?

ಯದ್ಯಸ್ತಿ ತರ್ಹಿ ವರುಣೋಪ್ಯುತ್ತರತ್ವೇನ ತದ್ವದೇತ್ ।
ವೇದೇಽಭಿಮಾನವಾನ್ವಾದೀ ಶೇಷಯೇತ್ತಾನ್ನ ದೂಷಯೇತ್ ॥

ಹಾಗಿದ್ದಲ್ಲಿ ವರುಣದೇವರು ಉತ್ತರವನ್ನಾಗಿ ಅದನ್ನು ಹೇಳಬೇಕಾಗಿತ್ತು. ವೇದದಲ್ಲಿ ಅಭಿಮಾನವುಳ್ಳ ವಾದಿಯು ಆ ಗುಣಗಳನ್ನು ಉಳಿಸಬೇಕು. ಅವುಗಳನ್ನು ಬ್ರಹ್ಮನಲ್ಲಿ ಇಲ್ಲವೆಂದು ಹೇಳಬಾರದು.

ತಾದ್ರೂಪ್ಯೇಣ ಬ್ರಹ್ಮ ಚಾಸ್ತು ನ ತತ್ಸರ್ವಾತ್ಮನಾ ತ್ಯಜೇತ್ ।
ಯತೋ ನ್ಯಾಯವಿದಃ ಸರ್ವೇ ಗುಣಾನ್ ಗೃಹ್ಣಂತಿ ಸಾಧವಃ ॥

ಇತ್ಯಾಹುಸ್ತೇನ ತತ್ತ್ಯಾಗೋ ನ ಮತ್ಯೈ ರೋಚತೇ ಸತಾಮ್ ।
ಇತಿ ಮನ್ಯಾಮಹೇ ತೇನ ತ್ವನ್ನ್ಯಾಯಸ್ತ್ವಾಂ ನಿಹಂತ್ಯಹೋ ॥

ಆನಂದಾದಿ ಧರ್ಮರೂಪದಿಂದ ಬ್ರಹ್ಮನು ಇರಲಿ. ಇದ್ದ ಧರ್ಮಗಳನ್ನು ಸರ್ವಾತ್ಮನಾ ಬಿಡಬಾರದು. ಹೀಗೆ ಏಕೆ ಮಾಡಬೇಕೆಂದಲ್ಲಿ ನ್ಯಾಯವನ್ನು ತಿಳಿದ ಸಾಧುಗಳೆಲ್ಲರೂ ಗುಣಗಳನ್ನು ಗ್ರಹಿಸುವರು (ಗುಣಗ್ರಾಹಿಗಳು) ಹೀಗೆ ಸಾಧುಗಳು ಹೇಳುವರು. ಆದ್ದರಿಂದ ಅವುಗಳನ್ನು ತ್ಯಾಗಮಾಡುವುದು ಸಜ್ಜನರ ಮನಸ್ಸಿಗೆ ರುಚಿಸುವುದಿಲ್ಲ. ಹೀಗೆ ನಾವು ತಿಳಿಯುತ್ತೇವೆ. ಇದರಿಂದ ನಿನ್ನ ನ್ಯಾಯವೇ ನಿನ್ನನ್ನು ಕೊಲ್ಲುತ್ತದೆ. 'ಸತ್ತ' ನ್ನು ಬಿಡಬಾರದು ಎಂಬ ನ್ಯಾಯ ಅಥವಾ ಏಕೀಭಾವ ಪಕ್ಷದಲ್ಲಿ ಬ್ರಹ್ಮನೊಬ್ಬನೇ ಉಳಿಯುತ್ತಾನೆಂಬ ನ್ಯಾಯ. ಇದರ ಅಭಿಪ್ರಾಯ 'ಯತ್ಸತ್ ತನ್ನ ಬಾಧ್ಯತೇ' ಯಾವುದು ಸದ್ರೂಪವಾದದ್ದೋ ಅದು ಬಾಧ್ಯವಾಗುವುದಿಲ್ಲ. ಬ್ರಹ್ಮನು ಸದ್ರೂಪನಾದ್ದರಿಂದ ಬಾಧ್ಯನಲ್ಲ. "ಆನಂದಂ ಬ್ರಹ್ಮೇತಿ ವ್ಯಜಾನಾತ್" ಎಂಬಲ್ಲಿ ಆನಂದಕ್ಕೂ ಬ್ರಹ್ಮನಿಗೂ ಅಭೇದ ಹೇಳಿದೆ. ಆದ್ದರಿಂದ ಆನಂದವೂ ಬ್ರಹ್ಮನಂತೆ ಸದ್ರೂಪವಾಗುತ್ತೆ. ಅಂತೂ ಆನಂದವೆಂಬ ಗುಣವು ಬ್ರಹ್ಮನಿಂದ ಅಭಿನ್ನವಾಗಿ

ಉಳಿಯಲೇಬೇಕು. ಹಾಗೆಯೇ ಬ್ರಹ್ಮನ ಎಲ್ಲಾ ಕಲ್ಯಾಣಗುಣಗಳೂ ಉಳಿಯಬೇಕು. ಇದು ಬ್ರಹ್ಮನು ನಿರ್ಗುಣನು ಎಂಬ ನಿಮ್ಮ ಮತಕ್ಕೆ ವಿರೋಧವಾದದ್ದು.

ಅತಃ ಶ್ರುತಿಸತೀ ಬ್ರಹ್ಮ ಕ್ಲೀಬಾತ್ಮಕಮುಪೈಕ್ಷತ ।
ತದ್ಧರ್ಮಾಣಾಮೇವ ಕರಂ ಜಗ್ರಾಹೇತಿ ಮತಿರ್ಮಮ ॥ ೨೪೮ ॥

ಆದ್ದರಿಂದ ನನಗೆ ಹೀಗೆ ತೋರುತ್ತೆ. ಶ್ರುತಿಯೆಂಬ ಸಾಧ್ವೀಮಣಿಯು ನಪುಂಸಕನಾದ ಬ್ರಹ್ಮನನ್ನು ಉಪೇಕ್ಷೆಮಾಡಿ ಅವನ ಧರ್ಮಗಳ ಹಸ್ತವನ್ನು ಹಿಡಿದಳು (ಬ್ರಹ್ಮ ಶಬ್ದ ನಪುಂಸಕಲಿಂಗ, ಧರ್ಮಶಬ್ದ ಪುಲ್ಲಿಂಗ). ಇದರ ಅಭಿಪ್ರಾಯ ಕಲ್ಯಾಣಗುಣಗಳಿಲ್ಲದ ಬ್ರಹ್ಮ ಶ್ರುತಿಗೆ ಸಮ್ಮತವಲ್ಲ.

ಕಾ ವಾ ನಿರುಪಾಧಿಪ್ರೇಮಾಸ್ಪದಮಾನನ್ದರೂಪಿಣಮ್ ।
ಪತಿಂ ಮುಂಚೇತ್ತಸ್ಯ ಚಾನುಭವಂ ಮುಂಚೇದ್ವಿವೇಕಿನೀ ॥ ೨೪೯ ॥

ವಿವೇಕಿಯಾದ ಯಾವಳು ತಾನೇ ಸ್ವಭಾವದಿಂದ ಪ್ರೀತಿಗೆ ವಿಷಯನಾದ ಆನಂದರೂಪಿಯಾದ ತನ್ನ ಪತಿಯನ್ನು ಬಿಟ್ಟಾಳು? ಅಥವಾ ಆನಂದಾನುಭವವನ್ನು ದೂರಮಾಡಿಯಾಳು?

ಯತೋ ಮೋಕ್ಷೋಽಪಿ ಚಾನನ್ದಾನುಭವತ್ವಾದಪೇಕ್ಷ್ಯತೇ ।
ಏವಂ ಶಾಸ್ತ್ರಾರ್ಥಕಥನೇ ಸರ್ವಮಾಸೀತ್ಸಮಂಜಸಂ ॥ ೨೫೦ ॥

ಹೀಗೇಕೆಂದರೆ, ಮೋಕ್ಷವೂ ಕೂಡ ಆನಂದಾನುಭವರೂಪವಾದ್ದರಿಂದ ಮುಮುಕ್ಷುಗಳಿಂದ ಅಪೇಕ್ಷಿತವಾಗಿದೆ. ಈ ರೀತಿಯಲ್ಲಿ ಶಾಸ್ತ್ರಾರ್ಥವನ್ನು ಉಪಪಾದಿಸಿದಲ್ಲಿ ವಿರೋಧವಿಲ್ಲದೇನೇ ಎಲ್ಲವೂ ಸಮಂಜಸವಾಗುತ್ತದೆ.

" ಯತ್ರ ಆನಂದಾಶ್ಚ ಮೋದಾಶ್ಚ ಪ್ರಮುದ ಆಸತೇ ತತ್ರ ಮಾಮಮೃತಂ ಕೃಧೀ " ಯಾವ ಲೋಕದಲ್ಲಿ ಆನಂದ ಮೋದ ಪ್ರಮೋದಗಳಿವೆಯೋ ಅಲ್ಲಿ ನನ್ನನ್ನು ಮುಕ್ತನನ್ನಾಗಿ ಮಾಡು. (ಋಕ್ ಪವಮಾನ)

ಶ್ರುತೇರಭಿಮತಾರ್ಥಸ್ಯ ರಕ್ಷಾಽಭೂದ್ಗುರುಶಿಷ್ಯಯೋಃ ।
ಪ್ರಶ್ನೋತ್ತರೇ ಪ್ರಕರಣಾದ್ಯನುಕೂಲೇ ಬಭೂವತುಃ ॥ ೨೫೧ ॥

ಹೀಗೆ ಅರ್ಥ ಹೇಳಿದಲ್ಲಿ ಶ್ರುತಿಗೆ ಅಭಿಪ್ರೇತವಾದ ಅರ್ಥದ ರಕ್ಷಣೆಯನ್ನು ಗುರು ಶಿಷ್ಯರು ಮಾಡಿದಂತಾಗುವುದು. ಅಲ್ಲದೆ ಪ್ರಶ್ನೋತ್ತರಗಳು ಪ್ರಕರಣಾದಿಗಳಿಗೆ ಅನುಕೂಲವಾಗುವುವು.

ಗುಣಾತ್ಮಕಂ ಬ್ರಹ್ಮ ಚಾಭೂದಭೌತಿಕ ಕಲೇವರಂ ।
ಅವಾಪ್ತಾನ್ಸ್ಪೃಷ್ಟಃ ಕೋವಿದಾರಾನಾಚಕ್ಷಾಣೋ ನಚೇದ್ಗುರುಃ ॥
ಸ್ಯಾದ್ಬ್ರಹ್ಮ ಪೃಚ್ಛತೇ ಯೋಽಸಾವಾನನ್ದಾದೀನ್ ಗುಣಾನ್ ಜಗೌ

ಬ್ರಹ್ಮನು ಗುಣಸ್ವರೂಪನೂ ಆದನು ಮತ್ತು 'ತಸ್ಯಪ್ರಿಯಮೇವ ಶಿರಃ' ಇತ್ಯಾದಿಗಳಿಂದ ಅಭೌತಿಕ ಶರೀರವುಳ್ಳವನೂ ಆದನು. ಭೃಗುಋಷಿಯು ಬ್ರಹ್ಮನನ್ನು ತಿಳಿಸಿಕೊಡು ಎಂಬುದಾಗಿ ಕೇಳಿದಾಗ ಬ್ರಹ್ಮನಲ್ಲದ ಆನಂದಾದಿ ಧರ್ಮಗಳನ್ನು ಉತ್ತರವಾಗಿ ಹೇಳಿದಲ್ಲಿ ಮಾವಿನಗಿಡವಾವುದೆಂದು ಪ್ರಶ್ನೆ ಮಾಡಿದವನಿಗೆ ಕೋವಿದಾರ ಗಿಡವನ್ನು ತೋರಿಸಿದಂತಾಯಿತು.

ಅತ ಏವಾಽಽಹ ಭಗವಾನ್ಪೂರ್ಣಪ್ರಜ್ಞೋ ಜಗದ್ಗುರುಃ ॥ ೨೫೩ ॥

ವಿಗ್ರಹೋ ಯಸ್ಯ ಸರ್ವೇ ಹಿ ಗುಣಾ ಏವೇತಿ ವೇದವಿತ್ ।
ಯೋ ಭೃಗೋಶ್ಚ ಗುರುಸ್ತಸ್ಯ ಗುರೋರಪಿ ಗುರುರ್ವರುತ್ ॥

ಆದ್ದರಿಂದಲೇ ಯಾರು ಭೃಗುವಿಗೆ ಗುರುವೋ ಆ ವರುಣನ ಗುರುವಿಗೂ ಗುರುವಾದ, ಪೂಜ್ಯರಾದ ಜಗದ್ಗುರು ಪೂರ್ಣಪ್ರಜ್ಞಾಚಾರ್ಯರು ದ್ವಾದಶ ಸ್ತೋತ್ರದಲ್ಲಿ (೮ನೇ ಅಧ್ಯಾಯ ೭ನೇ ಶ್ಲೋಕ) "ಎಲ್ಲ ಆನಂದಾದಿ ಗುಣಗಳೇನೇ ಯಾರ ದೇಹವೋ ಅಂತಹ ವಾಸುದೇವನನ್ನು" ಸ್ತೋತ್ರಾದಿಗಳಿಂದ ಸಂತೋಷಪಡಿಸುತ್ತೇನೆಂದು ಹೇಳಿರುವರು.

ಅಥ ಶ್ರೌತಗುಣಾನೇತಾನನಂಗೀಕುರ್ವತಾ ತ್ವಯಾ ।
ಸತ್ಯಜ್ಞಾನಾದಿ ಶಬ್ದೈಶ್ಚ ಯದ್ಯನ್ಯಾಪೋಹ ಈರ್ಯತೇ ॥ ೨೫೫ ॥

ತದಾ ಬೌದ್ಧಪ್ರಶಿಷ್ಯತ್ವಂ ಭವೇತ್ತವ ನ ಸಂಶಯಃ ।

ಈಗ ಶ್ರುತ್ಯುಕ್ತವಾದ ಆನಂದಾದಿಗುಣಗಳನ್ನು ಅಂಗೀಕಾರಮಾಡದ ನಿನ್ನಿಂದ "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬಲ್ಲಿ ಸತ್ಯಜ್ಞಾನಾದಿ

ಶಬ್ದಗಳಿಂದ ಬ್ರಹ್ಮನಲ್ಲಿ ಅಸತ್ಯಾದಿಗಳು ಇಲ್ಲವೆಂದು ಹೇಳಲ್ಪಟ್ಟಿವೆ, ಎಂದು ನೀನು ಒಪ್ಪಿದಲ್ಲಿ ಬುದ್ಧನ ಪ್ರತಿಪಿಸ್ಯತ್ವವು ನಿನಗೆ ಆದೀತು. ಇದರಲ್ಲಿ ಸಂಶಯವಿಲ್ಲ. ಅಭಿಪ್ರಾಯ:—ಸತ್ಯತ್ವ, ಜ್ಞಾನತ್ವ, ಆನಂದತ್ವ ಬ್ರಹ್ಮನಲ್ಲಿ ಉಂಟೆಂದು ಶ್ರುತಿಗೆ ತಾತ್ಪರ್ಯವಲ್ಲ. ಆದರೆ ಅಸತ್ಯತ್ವ, ಅಜ್ಞಾನತ್ವ, ಅನಾನಂದತ್ವ ಬ್ರಹ್ಮನಲ್ಲಿ ಇಲ್ಲವೆಂದು ಶ್ರುತ್ಯಭಿಪ್ರಾಯ. ಹೀಗೆಂದಲ್ಲಿ ಅನ್ಯಾಪೋಹವಾದಿಯಾದ ಬೌದ್ಧನ ಪ್ರಶಿಷ್ಯತ್ವವು ನಿನಗೆ ಬರುತ್ತೆ. ನೀನು ಬೌದ್ಧಮತಾವಲಂಬಿಯಾದಿ.

Note : ಅನ್ಯಾಪೋಹ=ವಿರುದ್ಧವಾದದ್ದನ್ನು ಹೊರಹಾಕೋಣ, ವಿರುದ್ಧವಾದದ್ದನ್ನು ನಿಷೇಧ ಮಾಡೋಣ, ವಿರುದ್ಧವಾದದ್ದನ್ನು ವ್ಯಾವೃತ್ತಿ ಮಾಡೋಣ (Exclusion or denial of the opposite). ಸತ್ಯಕ್ಕೆ ಅನ್ಯವಾದದ್ದು ಅಸತ್ಯ. ಸತ್ಯ ಶಬ್ದವು ಬ್ರಹ್ಮನಲ್ಲಿ ಅಸತ್ಯತ್ವವನ್ನು ನಿಷೇಧ ಮಾಡುತ್ತೆ. ಸತ್ಯತ್ವವನ್ನು ವಿಧಿಸುವುದಿಲ್ಲ.

ಬ್ರಹ್ಮ ಚ ಜ್ಞಾನರೂಪತ್ವಶೂನ್ಯಂ ಸ್ಯಾತ್ತಾರ್ಕಿಕೇಶ್ವರಃ ॥ ೨೫೬ ॥

ತಾರ್ಕಿಕನ ಮತದಲ್ಲಿ ಈಶ್ವರನು ಜ್ಞಾನಕ್ಕೆ ಆಶ್ರಯನೇ ಹೊರ್ತು ಜ್ಞಾನಸ್ವರೂಪನಲ್ಲ. ನೀನೂ ಕೂಡ "ಸತ್ಯಂ ಜ್ಞಾನಮನಂತಂ" ಎಂಬಲ್ಲಿ ಜ್ಞಾನತ್ವ ಬ್ರಹ್ಮನಲ್ಲಿಲ್ಲವೆಂದರೆ ಜ್ಞಾನರೂಪನಲ್ಲವೆಂದು ಹೇಳಿದಹಾಗಾಯಿತು. ಅಂತೂ ನಿನ್ನ ಬ್ರಹ್ಮನು ತಾರ್ಕಿಕನ ಈಶ್ವರನಂತಾದನು.

ಏಕವಿಂಶತಿ ದುಃಖಾನಾಮತ್ಯನ್ತಾಭಾವರೂಪತಾಮ್ ।
ಪ್ರಾಪ್ತಸ್ತ(ಸ್ಯೈ)ವೈಕ್ಯಲಾಭಾಖ್ಯ ಮೋಕ್ಷಶ್ಚೋಪೇಕ್ಷ್ಯತಾಮಗಾತ್
ಇತೋಽಪಿ ತಾರ್ಕಿಕಸ್ಯೈವ ಜಯೋಽಭೂತ್ತೇ ಮತಂಗತಂ ।
ಸುಖಾಭಾವಸ್ಯ ಲಾಭಾಯ ಪ್ರೇಕ್ಷಾವಾನ್ಪ್ರಯತೇತಕಃ ॥ ೨೫೮ ॥

ಇಪ್ಪತ್ತೊಂದು ದುಃಖಗಳ ಆತ್ಯಂತಿಕನಾಶವು ಮೋಕ್ಷವೆಂದು ತಾರ್ಕಿಕನ ಮತ. ಈ ಇಪ್ಪತ್ತೊಂದು ದುಃಖಗಳಲ್ಲಿ ಸುಖವೂ ಸೇರಿದೆ. ಇದರಿಂದ ಇಪ್ಪತ್ತೊಂದು ದುಃಖಗಳ ಅತ್ಯಂತಾಭಾವವು ಮೋಕ್ಷವು ಎಂದು

ಹೇಳಿದಹಾಗಾಯಿತು. ನೀನು ಹೇಳುವಂತೆ ಸತ್ಯಜ್ಞಾನಾನಂದಾದಿಗಳ ಅಭಾವವು ಬ್ರಹ್ಮಸ್ವರೂಪವಾದಲ್ಲಿ ಬ್ರಹ್ಮೈಕ್ಯರೂಪವಾದ ಮೋಕ್ಷವು ಸುಖಸ್ವರೂಪವಲ್ಲದೇ ಹೋದದ್ದರಿಂದ ವಿವೇಕಿಗಳಿಂದ ಅಪೇಕ್ಷ್ಯವಲ್ಲದ ಹಾಗಾಯಿತು. ಈ ಕಾರಣದಿಂದಲೂ ತಾರ್ಕಿಕನಿಗೇ ಜಯವಾಯಿತು. ತಾರ್ಕಿಕನು ಮೋಕ್ಷದಲ್ಲಿ ಸುಖವಿಲ್ಲವೆಂದು ಹೇಳುವನು. ನೀನಾದರೋ ಬ್ರಹ್ಮನು ಆನಂದಸ್ವರೂಪನೆಂದು ಹೇಳಿದರೂ ಬ್ರಹ್ಮನು ನಿರ್ಧರ್ಮಕನೆಂಬ ಮತವನ್ನು ರಕ್ಷಿಸುವುದಕ್ಕಾಗಿ ಬ್ರಹ್ಮನಲ್ಲಿ ಆನಂದತ್ವವು ಇಲ್ಲವೆಂದು ಕೊನೆಯಲ್ಲಿ ಹೇಳುತ್ತಿ. ಹೀಗೆ ಹೇಳುವುದರಿಂದ ತಾರ್ಕಿಕನು ಹೇಳುವ ಸುಖವಿಲ್ಲದ ಮೋಕ್ಷವೇ ಕೊನೆಯಲ್ಲಿ ನೀನು ಒಪ್ಪಿಕೊಂಡಂತಾಯಿತು. ಫಲಿತಾಂಶ ಏನೆಂದರೆ ತಾರ್ಕಿಕನೇ ಜಯಿಸಿದ. ನಿನ್ನ ಮಾತು ಹೋಯಿತು. ಯಾವ ಪ್ರೇಕ್ಷಾವಂತನು ತಾನೇ ಸುಖಾಭಾವ ಪ್ರಾಪ್ತಿಗಾಗಿ ಪ್ರಯತ್ನಿಸಿಯಾನು?

ಯದಿ ಸತ್ಯಪದಂ ಚಾಸತ್ಯಾನ್ಯಮಾತ್ರಾರ್ಥಮುಚ್ಯತೇ ।
ಸತ್ಯಂ ಪೃಥಙ್ ನಾಸ್ತಿ ಚ ತೇ ಬ್ರಹ್ಮಾ ಸದ್ಭಿನ್ನ ವಿಶ್ವವತ್ ॥ ೨೫೯ ॥
ಮೃಷೈವಾಭೂತ್ತೇನ ಶೂನ್ಯಮತಂ ತೇ ಮಸ್ತಕೇಽಪತತ್ ।

ಸತ್ಯ ಪದಕ್ಕೆ ಅಸತ್ಯದಿಂದ ಅನ್ಯ ಎಂದು ಮಾತ್ರ ಅರ್ಥವು ಎಂದು ಹೇಳಿ, ಸತ್ಯವು ಬೇರೇ ಇಲ್ಲವೆಂದು ಹೇಳಿದರೆ, ವಿಶ್ವದಂತೆ ಆ ಸತ್ತಿನಿಂದ ಭಿನ್ನವಾಗಿ ನಿನ್ನ ಬ್ರಹ್ಮನು ಮಿಥ್ಯವೇ ಆದನು. ಶೂನ್ಯ ಮತವು ನಿನ್ನ ತಲೆಯಮೇಲೆ ಬಿತ್ತು. ಇಲ್ಲಿ ಅನುಮಾನ ಹೀಗೆ

"ಬ್ರಹ್ಮಮಿಥ್ಯಾ ಅಸದನ್ಯತ್ವಾತ್ ವಿಶ್ವವತ್".

Note: 'ವಿಶ್ವವು ಮಿಥ್ಯಾ' ಎಂದು ಹೇಳುವ ಮಾಯಾವಾದಿಗಳು ಆ ವಿಶ್ವವು ಮೊಲದ ಕೋಡಿನಂತೆ ಅಸತ್ತಲ್ಲವೆಂದು ಹೇಳುತ್ತಾರೆ. ಬ್ರಹ್ಮನಲ್ಲಿ ಸತ್ಯತ್ವವು ಇಲ್ಲ, ಅಸದ್ಭಿನ್ನತ್ವವು ಇದೆ. ಹೀಗೆಂದಲ್ಲಿ ಸದಸದ್ವಿಲಕ್ಷಣರೂಪ ಮಿಥ್ಯಾತ್ವವು ವಿಶ್ವಕ್ಕೆ ಹೇಗೋ ಹಾಗೇ ಬ್ರಹ್ಮನಿಗೂ ಆದೀತು.

ಜ್ಞಾನಶಬ್ದೇನ ಚಾಜ್ಞಾನಮಾತ್ರಾನ್ಯತ್ವಮಭೂತ್ಪರವತ್ ॥ ೨೬೦ ॥
ಜ್ಞಾನತ್ವಂ ಬ್ರಹ್ಮಣಿ ನ ಚೇದ್ಬ್ರಹ್ಮಾಪಿ ಘಟಕುಡ್ಯವತ್ ।

ಜ್ಞಾನಾದನ್ಯದಭೂತ್ತಸ್ಮಾದನ್ಯತ್ವೇ ಬ್ರಹ್ಮಭಿನ್ನತಾ ॥ ೨೬೧ ॥
ಬ್ರಹ್ಮಣ್ಯೇವಾಭವದ್ಬ್ರಹ್ಮ ಚಾಭೂತ್ತೇ ಘಟಕುಡ್ಯವತ್ ।

ಮತ್ತು ಜ್ಞಾನಶಬ್ದದಿಂದ ಕೇವಲ ಅಜ್ಞಾನದಿಂದ ಅನ್ಯತ್ವವು ಮಾತ್ರ ಆಯಿತು, ಜ್ಞಾನತ್ವವು ಬ್ರಹ್ಮನಲ್ಲಿಲ್ಲ, ಹೀಗಾದರೆ ಬ್ರಹ್ಮನೂ ಕೂಡ ಘಟಾದಿಗಳ ಹಾಗೆ ಜ್ಞಾನದಿಂದ ಅನ್ಯನಾದನು. ಆದರಿಂದಲೂ ಅಂದರೆ ಜ್ಞಾನಾದನ್ಯನಿಂದಲೂ ಅನ್ಯನಾದಲ್ಲಿ ಬ್ರಹ್ಮನಿಂದ ಬೇರೆಯಾಗಿರುವುದು ಘಟಕುಡ್ಯಗಳಲ್ಲಿ ಹೇಗೋ ಹಾಗೆ ಬ್ರಹ್ಮನಲ್ಲಿಯೇ ಆಯಿತು. ಇದರ ಅಭಿಪ್ರಾಯ ಹೀಗೆ :— ಸತ್ಯಂ ಜ್ಞಾನಂ ಅನಂತಂ ಬ್ರಹ್ಮ ಎಂಬಲ್ಲಿ 'ಸತ್ಯಂ,' 'ಜ್ಞಾನಂ,' 'ಅನಂತಂ' ಇವು ಮೂರೂ ಬೇರೆ ಬೇರೆಯಾಗಿ ಬ್ರಹ್ಮನ ಲಕ್ಷಣಗಳು. 'ಬ್ರಹ್ಮ ಜ್ಞಾನಂ' ಎಂದರೆ ಜ್ಞಾನತ್ವವು ಬ್ರಹ್ಮನಲ್ಲಿದೆಯೆಂದಲ್ಲ, ಅಜ್ಞಾನತ್ವವು ಇಲ್ಲವೆಂದರ್ಥ. ಹೀಗೆ ಹೇಳುವುದರಲ್ಲಿ ದೋಷವನ್ನು ತೋರಿಸುತ್ತಾರೆ. ಜ್ಞಾನತ್ವವು ಬ್ರಹ್ಮನಲ್ಲಿಲ್ಲ. ಬ್ರಹ್ಮನು ಅಜ್ಞಾನದಿಂದನ್ಯನು. ಹೀಗೆಂದಲ್ಲಿ ಗಡಿಗೆ ಗೋಡೆ ಇವುಗಳಂತೆ ಬ್ರಹ್ಮನು ಜ್ಞಾನದಿಂದ ಅನ್ಯನಾದನು.

"ಬ್ರಹ್ಮ, ಜ್ಞಾನಾದನ್ಯಂ, ಜ್ಞಾನತ್ವಾಭಾವಾತ್, ಘಟಾದಿವತ್"

[ದೃಷ್ಟಾಂತದಲ್ಲಿ (ಘಟದಲ್ಲಿ) ಜ್ಞಾನಾದನ್ಯತ್ವವೂ ಜ್ಞಾನತ್ವಾಭಾವವೂ ಎರಡೂ ಇವೆ.] ಬ್ರಹ್ಮನು ಜ್ಞಾನದಿಂದ ಅನ್ಯನು, (ಅವನಲ್ಲಿ) ಜ್ಞಾನತ್ವವು ಇಲ್ಲದಿರುವುದರಿಂದ, ಘಟದ ಹಾಗೆ. ಈ ಅನುಮಾನದಿಂದ ಸಿದ್ಧಿಸಿದ್ದು ಇದು :— ಬ್ರಹ್ಮನು ಜ್ಞಾನಾದನ್ಯನು (ಜ್ಞಾನದಿಂದ ಬೇರೆಯಾದವನು). ಈಗ ಮಾಯಾವಾದಿಗಳು ಹೇಳುವಂತೆ, ಬ್ರಹ್ಮನು ಅಜ್ಞಾನಾದನ್ಯನು. 'ಅಜ್ಞಾನಂ' ಎಂದರೆ ಜ್ಞಾನಾದನ್ಯಂ. ಆದ್ದರಿಂದ ಬ್ರಹ್ಮ, ಅಜ್ಞಾನಾತ್ ಜ್ಞಾನಾದನ್ಯಾತ್=ಬ್ರಹ್ಮಣಃ, ಅನ್ಯಂ. ಬ್ರಹ್ಮನು ಬ್ರಹ್ಮನಿಂದ ಅನ್ಯನು ಎಂದಾಯಿತು.

ಬ್ರಹ್ಮ ಅಜ್ಞಾನಾದನ್ಯಂ, ಬ್ರಹ್ಮ ಜ್ಞಾನಾದನ್ಯಾದನ್ಯಂ, ಬ್ರಹ್ಮ ಬ್ರಹ್ಮಣಃ ಅನ್ಯಂ ಬ್ರಹ್ಮ ಬ್ರಹ್ಮನಿಂದ ಅನ್ಯನಾದರೆ, ಬ್ರಹ್ಮನಿಂದ ಅನ್ಯವಾದ ಘಟಕುಡ್ಯಗಳಿಗೆ ಸಮಾನನಾದನು.

ಅನಾನನ್ದಾನ್ಯತಾ ಚೈವಂ ಮಹಾದೋಷಕರಂ ತವ ॥ ೨೬೨ ॥
ಬ್ರಹ್ಮಾನನ್ದಾತ್ಮಕಂ ನೋ ಚೇದನಾನನ್ದಮಭೂದ್ಧಿ ತತ್ ।
ತಸ್ಮಾದನ್ಯತ್ವಕಥನೇ ಬ್ರಹ್ಮಣೋ ಬ್ರಹ್ಮಭಿನ್ನತಾ ॥ ೨೬೩ ॥
ಅಭೂದ್ವಲಾತ್ತೇನ ಚಾತ್ಮಾಶ್ರಯದೋಷೋ ಭವಿಷ್ಯತಿ ।
ಅನಂದಾತ್ಮಕಂ ಬ್ರಹ್ಮ ಭವೇಚ್ಚ ಘಟಕುಡ್ಯವತ್ ॥ ೨೬೪ ॥
ತೇನ ಚ ಬ್ರಹ್ಮಹತ್ಯಾಖ್ಯ ಮಹಾದೋಷೋ ಭವೇತ್ತವ ।

ಹೀಗೆಯೇ ಬ್ರಹ್ಮನು ಅನಾನಂದದಿಂದ ಭಿನ್ನನಾದಲ್ಲಿ ನಿನಗೆ ಬಹಳ ದೋಷ ಬರುವುದು. ಬ್ರಹ್ಮನು ಆನಂದಾತ್ಮಕನಲ್ಲದಲ್ಲಿ ಆ ಬ್ರಹ್ಮನು ಅನಾನಂದನಾದನು. ಆ ಅನಾನಂದದಿಂದಲೂ ಭಿನ್ನನಾದ ಪಕ್ಷದಲ್ಲಿ ಬ್ರಹ್ಮನಿಗೆ ಬ್ರಹ್ಮನಿಂದ ಭಿನ್ನತಾ ಅವಶ್ಯಕವಾಗಿ ಬಂತು. ಇದರಿಂದ ನಿನಗೆ ಆತ್ಮಾಶ್ರಯ ದೋಷ ಬರುತ್ತದೆ. ಬ್ರಹ್ಮ ಆನಂದಾತ್ಮಕಂ ನ–ಅನಾನಂದಾತ್ಮಕಂ. ಈಗ ಪುನಃ ಅನಾನಂದಾತ್ಮಕನಲ್ಲವೆಂದಲ್ಲಿ ಬ್ರಹ್ಮ, ಘಟಕುಡ್ಯಗಳಂತೆ ಬ್ರಹ್ಮನಿಂದ ಅನ್ಯನು ಆದನು. ಇದರಿಂದ ನಿನಗೆ ಬ್ರಹ್ಮಹತ್ಯಾದೋಷ ಬಂದೀತು. ಅಥವಾ 'ಬ್ರಹ್ಮ ಆನಂದಂ' ಎಂದರೆ, ಆನಂದತ್ವವು ಬ್ರಹ್ಮನಲ್ಲಿ ಇವೆ ಎಂದಲ್ಲ, ಬ್ರಹ್ಮನು ಅನಾನಂದನಲ್ಲ ಎಂದು ಅರ್ಥ. ಇದು ಮಾಯಾವಾದಿಗಳ ಅಭಿಪ್ರಾಯ. ಹೀಗೆ ಹೇಳುವುದರಲ್ಲಿನ ದೋಷವನ್ನು ತೋರಿಸುತ್ತಾರೆ.

ಆನಂದತ್ವವು ಬ್ರಹ್ಮನಲ್ಲಿಲ್ಲ. ಆದರೆ ಬ್ರಹ್ಮ ಅನಾನಂದನಲ್ಲ. ಹೀಗೆಂದಲ್ಲಿ ಗಡಿಗೆ ಗೋಡೆ ಇವುಗಳಂತೆ ಬ್ರಹ್ಮನು ಆನಂದಾದಿ ಅನ್ಯನಾದನು. "ಬ್ರಹ್ಮ ಆನಂದಾದನ್ಯಂ ಆನಂದತ್ವಾಭಾವಾತ್ ಘಟಕುಡ್ಯವತ್" ಬ್ರಹ್ಮನು ಆನಂದದಿಂದ ಅನ್ಯನು. ಅವನಲ್ಲಿ ಆನಂದತ್ವವಿಲ್ಲದಿರುವುದರಿಂದ ಗಡಿಗೆ ಗೋಡೆಯಂತೆ.

ಈ ಅನುಮಾನದಿಂದ ಸಿದ್ಧಿಸಿದ್ದು, ಬ್ರಹ್ಮನು ಆನಂದಾದನ್ಯನು ಅಂತ. ಈಗ ಮಾಯಾವಾದಿಗಳು ಹೇಳುವಂತೆ ಬ್ರಹ್ಮನು ಅನಾನಂದಾದನ್ಯನು ಆದಲ್ಲಿ "ಬ್ರಹ್ಮ, ಅನಾನಂದಾತ್ = ಆನಂದಾದನ್ಯಾತ್ = ಬ್ರಹ್ಮಣಃ ಅನ್ಯಂ" ಬ್ರಹ್ಮನು ಬ್ರಹ್ಮನಿಂದ ಅನ್ಯನು ಎಂದಾಯಿತು.

ಶ್ರೌತಸದ್ಧರ್ಮಶೂನ್ಯತ್ವಾತ್ತದ್ಬೌದ್ಧಾನುಸ್ಮೃತಾವಪಿ ॥ ೨೬೫ ॥

ತದ್ಬ್ರಹ್ಮರಕ್ಷಕಂ ಭೈಕ್ಷ್ಯಂ ನ ಲಬ್ಧಂ ತತ್ ಕ್ಷುಧಾರ್ದಿತಮ್ ।
ತವ ಬ್ರಹ್ಮ ಚ ತತ್ತತ್ತ್ವಶೂನ್ಯೋದರಮವೀವಿಶತ್ ॥ ೨೬೬ ॥

ಬೌದ್ಧರನ್ನು ಅನುಸರಿಸಿದರೂ ಕೂಡ ಶ್ರುತ್ಯುಕ್ತವಾದ ಉತ್ತಮ ಧರ್ಮಗಳು ಇಲ್ಲದೇ ಹೋಗಿ ನಿನ್ನ ಬ್ರಹ್ಮನನ್ನು ರಕ್ಷಿಸುವ ಭಿಕ್ಷಾನ್ನವು ಲಭಿಸಲಿಲ್ಲ. ಆದ್ದರಿಂದ ಹಸಿವಿನಿಂದ ಬಾಧಿತವಾದ ನಿನ್ನ ಬ್ರಹ್ಮವು ಶೂನ್ಯತತ್ವದ ಉದರವನ್ನು ಪ್ರವೇಶಿಸಿತು (ಶೂನ್ಯವಾಯಿತು).

ತುಷಾನ್ನವತ್ತ್ವೋದರಸ್ಯ ಬಾಧಕಾತ್ತೇನ ದಾಪಿತಾತ್ ।
ಸರ್ವಧರ್ಮಾಭಾವರೂಪ ವಿಷಮಿಶ್ರಾನ್ನ ಭಕ್ಷಣಾತ್ ॥ ೨೬೭ ॥

ಶೂನ್ಯತ್ವರೂಪಮರಣಂ ಪ್ರಾಪ್ಯ ನಷ್ಟಮಭೂದಹೋ ।
ಬ್ರಹ್ಮಹಾ ತ್ವಂ ಚ ತಮಸಿ ಪತಿಷ್ಯಸಿ ನ ಸಂಶಯಃ ॥ ೨೬೮ ॥

ಹೊಟ್ಟುಮಿಶ್ರವಾದ ಅನ್ನವನ್ನು ಭಕ್ಷಿಸುವುದರಿಂದ ಉಂಟಾಗುವ ಉದರ ಶೂಲೆಯಂತೆ ಅವನಿಂದ (ಬೌದ್ಧನಿಂದ) ಕೊಡಿಸಲ್ಪಟ್ಟ ಸರ್ವ ಧರ್ಮಾಭಾವರೂಪ ವಿಷಮಿಶ್ರವಾದ ಅನ್ನವನ್ನು ಭಕ್ಷಿಸುವುದರಿಂದ ನಿನ್ನ ಬ್ರಹ್ಮನು ಅಹೋ ಶೂನ್ಯತ್ವರೂಪ ಮರಣವನ್ನು ಹೊಂದಿ ನಷ್ಟನಾದನು. ಬ್ರಹ್ಮಹತ್ಯಮಾಡಿದ ನೀನಾದರೋ ತಮಸ್ಸಿನಲ್ಲಿ ಬೀಳುತ್ತಿ. ಇದರಲ್ಲಿ ಸಂಶಯವಿಲ್ಲ. ಈ ಶ್ಲೋಕಗಳ ಅಭಿಪ್ರಾಯ. ಸತ್ಯತ್ವವನ್ನು ತಂದುಕೊಡದ ಅಸತ್ಯಾನ್ಯತ್ವವು ಹೊಟ್ಟು. ಸರ್ವಧರ್ಮರಾಹಿತ್ಯವು ವಿಷಮಿಶ್ರವಾದ ಅನ್ನ. ಬ್ರಹ್ಮನಲ್ಲಿ ಯಾವ ಧರ್ಮವೂ ಇಲ್ಲವೆಂದಲ್ಲಿ ಬ್ರಹ್ಮನು ಶೂನ್ಯಸದೃಶನಾಗುವನಾದ್ದರಿಂದ ಸರ್ವಧರ್ಮರಾಹಿತ್ಯವು ವಿಷಸದೃಶವಾದದ್ದು ಆಯಿತು. ಇದು ಮಾಯಾವಾದಿಗಳು ಒಪ್ಪಿರುವರು. ಶೂನ್ಯಶಬ್ದವು ವಿಷ್ಣುಸಹಸ್ರನಾಮದಲ್ಲಿ ಬರುತ್ತೆ. 'ವೀರಹಾ ವಿಷಮಃ ಶೂನ್ಯಃ'. ಈ ಶೂನ್ಯಶಬ್ದಕ್ಕೆ ಶಂಕರಾಚಾರ್ಯರು ತಮ್ಮ ಸಹಸ್ರನಾಮ ಭಾಷ್ಯದಲ್ಲಿ ಹೀಗೆ ಅರ್ಥ ಮಾಡಿರುವರು. 'ಸರ್ವವಿಶೇಷರಹಿತತ್ವಾತ್ ಶೂನ್ಯವತ್ ಶೂನ್ಯಃ'. ಬ್ರಹ್ಮನಲ್ಲಿ (ವಿಷ್ಣುವಿನಲ್ಲಿ) ಯಾವ ವಿಶೇಷವೂ (ಯಾವ ಧರ್ಮವೂ) ಇಲ್ಲವಾದ್ದರಿಂದ ಅವನು ಶೂನ್ಯದಂತೆ ಶೂನ್ಯನು.

ಶ್ರುತೇರ್ಮುಖ್ಯಾರ್ಥಸನ್ತ್ಯಾಗಾತ್ಸಾ ಚ ತುಭ್ಯಂ ಪ್ರಕುಪ್ಯತಿ ।
ಲಘುಭಾವಪರಿತ್ಯಾಗಾದ್ಗುರುಭಾವಪರಿಗ್ರಹಾತ್ ॥ ೨೬ ॥

ಗೌರವಾಖ್ಯ ಮಹಾಭಾರಾದಪಿ ದೂಷ್ಯೋ ಭವಿಷ್ಯಸಿ ।

ಶ್ರುತಿಯ ಮುಖ್ಯಾರ್ಥವನ್ನು ಬಿಡೋಣದರಿಂದ ಆ ಶ್ರುತಿಯು ನಿನ್ನಲ್ಲಿ ಬಹು ಕೋಪಗೊಳ್ಳುತ್ತಾಳೆ. ಲಘುಮಾರ್ಗವನ್ನು ದೂರಮಾಡಿ ಗುರುಮಾರ್ಗವನ್ನು ಅವಲಂಬಿಸುವುದರಿಂದ ಗೌರವವೆಂಬ ಮಹಾದೋಷದ ಭಾರದಿಂದ ದೂಷ್ಯನಾಗುತ್ತಿ. 'ಸತ್ಯಂ, ಜ್ಞಾನಂ, ಅನಂತಂ, ಬ್ರಹ್ಮ' ಎಂಬೀ ಶ್ರುತಿಗೆ ಆ ಬ್ರಹ್ಮನಲ್ಲಿ ಸತ್ಯತ್ವ, ಜ್ಞಾನತ್ವ, ಅನಂತತ್ವ, ಈ ಧರ್ಮಗಳು ಇವೆಯೆಂದು ಅರ್ಥಮಾಡುವುದು ಸರಿಯಾದದ್ದು. ಇದು ಲಘುಮಾರ್ಗ. ಈ ಮಾರ್ಗವನ್ನು ನೀನು ಬಿಟ್ಟು ದೂಷ್ಯನಾದಿ ಎಂಬಭಿಪ್ರಾಯ.

ತ್ರಿಭಿಃ ಪದೈಶ್ಚ ತೇ ಬ್ರಹ್ಮ ಜಡೋಪಮಮಭೂತ್ಪರಮ್ ॥೨೭೦॥

ಜಡಾನ್ಯತಾ ತೇಽಭಿಮತಾ ತ್ವತಿದೂರೇ ಗತಾಽಭವತ್ ।

"ಸತ್ಯಂ, ಜ್ಞಾನಂ, ಅನಂತಂ" ಈ ಮೂರು ಪದಗಳಿಂದ ನಿನ್ನ ಬ್ರಹ್ಮನು ಕೇವಲ ಜಡಕ್ಕೆ ಸಮಾನನಾದನು. ಬ್ರಹ್ಮನು ಜಡದಿಂದ ಅನ್ಯನು ಎಂಬುದು ಯಾವುದು ನಿನಗೆ ಅಭಿಮತವಾದದ್ದೋ ಅದು ಬಹಳ ದೂರ ಹೋದದ್ದಾಯಿತು. ಅಂದರೆ 'ಸತ್ಯಂ, ಜ್ಞಾನಂ, ಅನಂತಂ' ಈ ಮೂರು ಪದಗಳಿಗೆ ಬ್ರಹ್ಮನಲ್ಲಿ ಸತ್ಯತ್ವ, ಜ್ಞಾನತ್ವ, ಅನಂತತ್ವ ಈ ಮೂರು ಧರ್ಮಗಳು ಇಲ್ಲವೆಂದು ಹೇಳುವುದರಿಂದ ನಿನ್ನ ಬ್ರಹ್ಮನು ಜಡವಾದಂತಾದನು. ನಿನಗೆ ಅಭಿಮತವಾದ ಬ್ರಹ್ಮನು ಜಡದಿಂದ ಬೇರೆಯಾಗಿರೋಣವು ಅತಿ ದೂರವಾಗಿ ಓಡಿಹೋಯಿತು. ನೀನು ಜಡದಲ್ಲಿ ಸದ್ಭಿನ್ನತ್ವ, ಜ್ಞಾನಾನ್ಯತ್ವ, ಪರಿಚ್ಛಿನ್ನತ್ವ ಈ ಮೂರನ್ನೂ ಒಪ್ಪಿರುವಿ. ಆದ್ದರಿಂದ ಬ್ರಹ್ಮನಲ್ಲಿ ಸತ್ಯತ್ವವಿಲ್ಲ, ಜ್ಞಾನತ್ವವಿಲ್ಲ, ಅನಂತತ್ವವಿಲ್ಲವೆಂದು ಅರ್ಥ ಹೇಳಿದಲ್ಲಿ ಜಡದಲ್ಲಿ ಒಪ್ಪಿರುವ ಧರ್ಮಗಳು ಬ್ರಹ್ಮನಲ್ಲಿ ಬಂದವು. ಅಂದರೆ ಬ್ರಹ್ಮನು ಜಡದಿಂದ ಬೇರೆಯಾಗಲಿಲ್ಲ. ಜಡದ ಸ್ವರೂಪವು ಹೇಗೋ ಹಾಗೇ ಬ್ರಹ್ಮಸ್ವರೂಪವೂ ಆಯಿತು.

ಈದೃಶಂ ಚ ತವ ಬ್ರಹ್ಮ ಭೃಗುಃ ಕಸ್ಮಾದ್ಗುರುಂ ಪ್ರತಿ ॥ ೨೭೧ ॥

ಅಧ್ಯಾಪಯೇತ್ಯರ್ಥಯೀತ ತಸ್ಮಾತ್ತ್ವದ್ವ್ಯಾಖ್ಯಯಾಽನಯಾ ।
ಉಭಾವಪ್ಯಶ್ರುತಗ್ರನ್ಥಾವುಭಾವಪಿ ಜಡಾತ್ಮಕೌ ॥ ೨೭೨ ॥

ಭವೇತಾಂ ಗುರುಶಿಷ್ಯೌ ತೌ ಸರ್ವಜ್ಞೌ ಲೋಕಸಮ್ಮತೌ ।

ಇಂತಹ ನಿನ್ನ ಬ್ರಹ್ಮನನ್ನು ಭೃಗುವು ಏಕೆ ತಾನೇ ಅಧ್ಯಯನ ಮಾಡಿಸೆಂದು ಗುರುವನ್ನು ಪ್ರಾರ್ಥಿಸಿಯಾನು? ಆದ್ದರಿಂದ ಈ ನಿನ್ನ ವ್ಯಾಖ್ಯಾನದಿಂದ ಗುರುಶಿಷ್ಯರಾದ ವರುಣನೂ ಭೃಗುವೂ ಗ್ರಂಥಶ್ರವಣ ಮಾಡದೇ ಇದ್ದವರೂ ಮತ್ತು ಇಬ್ಬರೂ ಜಡದಂತೆ ಅಜ್ಞರೂ ಆಪಾರು. ಆದರೆ ಇವರಿಬ್ಬರೂ ಸರ್ವಜನರಿಗೆ ಸಮ್ಮತರಾದ ಸರ್ವಜ್ಞರು.

ಕಿಂಚಾಸುಖಾನ್ಯತ್ವೇ ಬ್ರಹ್ಮ ತಚ್ಚ ಸ್ಯಾತ್ಸುಖತಾ ಯದಿ ॥ ೨೭೩ ॥

ಬ್ರಹ್ಮಣ್ಯೇವ ಭವೇನ್ನೋ ಚೇನ್ನ ಸ್ಯಾದೇವ ವಿಚಾರಣೇ ।
ಅಜ್ಞಾನಾನ್ಯತ್ವಮಪಿ ಚ ತದಾ ಸ್ಯಾತ್ ಜ್ಞಾನತಾ ಯದಿ ॥ ೨೭೪ ॥

ಬ್ರಹ್ಮಣ್ಯೇವ ಭವೇನ್ನೋ ಚೇನ್ನ ಭವೇದ್ವಿದುಷಾಂ ಮತೇ ।
ಅಸತ್ಯಾನ್ಯತ್ವಮಪಿ ಚ ಸತ್ಯತ್ವೇ ಸತಿ ಸಂಭವೇತ್ ॥ ೨೭೫ ॥

ನ ಚೇನ್ನ ಸ್ಯಾತ್ತೇನ ಚಾಭೂದನ್ಯಾಪೋಹಮತಂ ವೃಥಾ ।

ಅಲ್ಲದೆ ನಿನ್ನ ಬ್ರಹ್ಮನು ಅಸುಖದಿಂದ ಅನ್ಯನು. ಏಕೆಂದರೆ, 'ಆನಂದಂ ಬ್ರಹ್ಮ' ಎಂಬುವಲ್ಲಿ ಅನಾನಂದತ್ವವಿಲ್ಲವೆಂದು ಅರ್ಥಮಾಡಿದ್ದಿ. ಇದರಿಂದ ಅಸುಖದಿಂದ ಅನ್ಯನು ಎಂದು ಹೇಳಿದ ಹಾಗಾಯಿತು. ಇದು ಸುಖತ್ವ ಬ್ರಹ್ಮನಲ್ಲಿದ್ದರೇನೇ ಕೂಡುತ್ತದೆ. ಸುಖತ್ವವಿಲ್ಲವೆಂದಲ್ಲಿ ಕೂಡುವುದೇ ಇಲ್ಲ. ಇದು ವಿಚಾರದಿಂದ ಸಿದ್ಧಿಯಾಗುತ್ತೆ. ಹೀಗೆಯೇ ಬ್ರಹ್ಮನಲ್ಲಿ ಜ್ಞಾನತ್ವ ವಿದ್ದರೇನೇ ಅವನಲ್ಲಿ ಅಜ್ಞಾನಾನ್ಯತ್ವ ಕೂಡುತ್ತದೆ. ಇಲ್ಲದಲ್ಲಿ ಜ್ಞಾನಿಗಳ ಮತದಲ್ಲಿ ಕೂಡುವುದಿಲ್ಲ. ಹಾಗೆಯೇ ಸತ್ಯತ್ವವು ಬ್ರಹ್ಮನಲ್ಲಿದ್ದರೇನೇ ಅಸತ್ಯಾನ್ಯತ್ವವು ಅವನಲ್ಲಿ ಸಂಭವಿಸೀತು. ಇಲ್ಲದಲ್ಲಿ ಇಲ್ಲ. ಆದ್ದರಿಂದ ಅನ್ಯಾಪೋಹ ಮತವನ್ನು ಅನುಸರಿಸಿದ್ದು ಪ್ರಯೋಜನವಿಲ್ಲದೇ ಹೋಯಿತು. ನೀನು ಈ ಮತವನ್ನು ಅವಲಂಬಿಸಿದ್ದು ಸತ್ಯತ್ವ, ಜ್ಞಾನತ್ವ, ಆನಂದತ್ವ

ಧರ್ಮಗಳನ್ನು ಬ್ರಹ್ಮನಲ್ಲಿ ಇಲ್ಲವೆಂದು ಹೇಳುವುದಕ್ಕೆ. ಅಸತ್ಯತ್ವವಿಲ್ಲ, ಅಜ್ಞಾನತ್ವವಿಲ್ಲ, ಅನಾನಂದತ್ವವಿಲ್ಲ ಎಂದು ಹೇಳಿದರೆ ಸತ್ಯತ್ವ, ಜ್ಞಾನತ್ವ, ಆನಂದತ್ವ ಬ್ರಹ್ಮನಲ್ಲಿ ಒಪ್ಪಲೇಬೇಕು.

"ಸತ್ಯಂ ಜ್ಞಾನಮನಂತಂ ಬ್ರಹ್ಮೇತ್ಯತ್ರ ಸತ್ಯಾದಿ ಪದಾನಾಂ ಏಕಾರ್ಥತ್ವೇ ಪ್ರರ್ಯಾಯತ್ವಪ್ರಸಂಗಃ | ನಚ ಸತ್ಯತ್ವಾದಿ ವಿಶೇಷಾಭಾವೇಪಿ ಬ್ರಹ್ಮಣ್ಯ-ಸತ್ತ್ವಾದಿ ವ್ಯಾವೃತ್ತಿದ್ವಾರಾ ಪರ್ಯಾಯತ್ವಂ | ವ್ಯಾವರ್ತಕ ವಿಶೇಷಾಭಾವೇ ಬ್ರಹ್ಮಣ್ಯಸತ್ತ್ವಾದಿ ವ್ಯಾವೃತ್ತೇರಸಂಭವಾದ್ವೈಯರ್ಥ್ಯಾಚ್ಚ" || (ಸನ್ನ್ಯಾಯ ರತ್ನಾವಳಿ-ಅಧ್ಯಾಯ ೧, ಪುಟ ೧೨)

ಅರ್ಥ :—ಸತ್ಯಂ ಜ್ಞಾನಮನಂತಂ ಬ್ರಹ್ಮ ಎಂಬ ವಾಕ್ಯದಲ್ಲಿನ ಸತ್ತ್ವಾದಿ ಪದಗಳ ಅರ್ಥವು ಒಂದೇ ಆಗಿದ್ದ ಪಕ್ಷದಲ್ಲಿ ಆ ಪದಗಳಿಗೆ ಪರ್ಯಾಯತ್ವವು ಬರಬೇಕಾಗುತ್ತೆ. ಬ್ರಹ್ಮನಲ್ಲಿ ಸತ್ಯತ್ವಾದಿ ಧರ್ಮಗಳು ಇಲ್ಲದಿದ್ದರೂ ಅಸತ್ಯತ್ವ, ಅಜ್ಞಾನತ್ವ, ಪರಿಚ್ಛಿನ್ನತ್ವ ಇವುಗಳ ಅಭಾವವಿದೆಯೆಂದು ಹೇಳುವುದರಿಂದ ಪರ್ಯಾಯತ್ವ ದೋಷವು ಬರುವುದಿಲ್ಲವೆನ್ನುವಂತಿಲ್ಲ. ಬ್ರಹ್ಮನಲ್ಲಿ ಸತ್ಯತ್ವಾದಿ ಧರ್ಮಗಳು ಇಲ್ಲದಿದ್ದ ಪಕ್ಷದಲ್ಲಿ ಅವನಲ್ಲಿ ಅಸತ್ಯತ್ವಾದಿಗಳ ಅಭಾವವನ್ನು ಹೇಳಲಾಗುವುದಿಲ್ಲ ಮತ್ತು ಹಾಗೆ ಹೇಳುವುದರಿಂದ ಪ್ರಯೋಜನವೂ ಇಲ್ಲ.

ಯತೋ ವ್ಯಾವರ್ತಕಾಧೀನಾ ವ್ಯಾವೃತ್ತಿರ್ದೃಶ್ಯತೇ ಭುವಿ || ೨೭೬ ||

ಅಜೌ ವ್ಯಾವೃತ್ತತಾ ನೋ ಚೇತ್ ಕ್ಷಯ ಏವ ಭವಿಷ್ಯತಿ |

ಏಕೆಂದರೆ, ಲೋಕದಲ್ಲಿ ಯಾವುದಾದರೂ ಒಂದು ವಸ್ತುವನ್ನು ಕುರಿತು ಇದು ಅಸತ್ಯದಿಂದ ವ್ಯಾವೃತ್ತವಾದದ್ದು (ಅನ್ಯವಾದದ್ದು) ಎಂದರೆ ಅದು ಸತ್ಯವೆಂದೇ ಅರ್ಥ. ಒಂದು ಪದಾರ್ಥದಲ್ಲಿ ಅಸತ್ಯತ್ವವಿಲ್ಲವೆಂಬುದು ಕೂಡ-ಬೇಕಾದರೆ, ಆ ವಸ್ತುವಿನಲ್ಲಿ ಸತ್ಯತ್ವವಿರಲೇಬೇಕು. ಸತ್ಯತ್ವವಿಲ್ಲದ ವಸ್ತುವಿನಿಂದ ಅಸತ್ಯತ್ವವನ್ನು ವ್ಯಾವೃತ್ತಿಮಾಡುವುದು (ಹೊರಹಾಕುವುದು) ಆಗಲಾರದು. ವ್ಯಾವೃತ್ತಿ ಮಾಡುವುದೆಂದರೆ ಬಿಂಗಡಿಸುವುದು. ಬ್ರಹ್ಮನಲ್ಲಿ ಅಸತ್ಯದ ವ್ಯಾವೃತ್ತಿ ಇದೆ, ಬ್ರಹ್ಮನು ಅಸತ್ಯದಿಂದ ಅನ್ಯನು ಎಂದರ್ಥ.

*

ಬ್ರಹ್ಮಸತ್ಯಂ ಎಂಬಲ್ಲಿ 'ಸತ್ಯ' ಪದವು ಬ್ರಹ್ಮನು ಅಸತ್ಯನಲ್ಲ ಎಂದಿಷ್ಟೇ ಹೊರ್ತು ಬ್ರಹ್ಮನಲ್ಲಿ ಸತ್ಯತ್ವ ಇದೆ ಎಂದಲ್ಲ. ಹೀಗೆ ಆಗುವುದಿಲ್ಲ. ಅಸತ್ಯತ್ವವನ್ನು ಬ್ರಹ್ಮನಿಂದ ದೂರಮಾಡುವ ಸತ್ಯತ್ವವು ಬ್ರಹ್ಮನಲ್ಲಿದ್ದರೇನೇ ಅಸತ್ಯತ್ವವು ಬ್ರಹ್ಮನಿಂದ ದೂರವಾಗುತ್ತೆ. ದೇವದತ್ತನಲ್ಲಿ ಸತ್ಯವಚನವಿಲ್ಲದೆ ಅವನಲ್ಲಿ ಅಸತ್ಯವಚನವಿಲ್ಲವೆಂದು ಲೋಕದಲ್ಲಿ ಯಾರಾದರೂ ಹೇಳುವರೇನು ?

ವೈಶೇಷಿಕರ ಪ್ರಕ್ರಿಯ :—ವಿಶೇಷವೆಂಬುದು ಒಂದು ಪದಾರ್ಥ. ಇದು ಪರಮಾಣುಗಳಲ್ಲಿಯೂ ಇತರ ನಿತ್ಯವಸ್ತುಗಳಲ್ಲಿಯೂ ಇದೆ. ಒಂದು ನಿತ್ಯ ವಸ್ತುವಿನಲ್ಲಿ ಒಂದು ವಿಶೇಷ. ಒಂದು ಪರಮಾಣುವಿನಲ್ಲಿರುವ ವಿಶೇಷವು ಏನು ಮಾಡುತ್ತದೆ ಎಂದಲ್ಲಿ, ಅದು ಆ ಪರಮಾಣುವನ್ನು ಇತರ ಎಲ್ಲದರಿಂದಲೂ ಬೇರೆಮಾಡಿ ತೋರಿಸುತ್ತದೆ. ಪರಮಾಣುವಿನಲ್ಲಿ 'ವ್ಯಾವೃತ್ತತಾ' ಅಂದರೆ ಬೇರೆಯಾಗಿರೋಣವು ಇಲ್ಲದಲ್ಲಿ ವಿಶೇಷ ಬೇಕಾಗಿಲ್ಲ. ಆಗ ಅಂದರೆ, ಬೇರೆಯಾಗಿರೋಣವು ಇಲ್ಲದಲ್ಲಿ, ಅದು ಇಲ್ಲವೆಂದೇ ಹೇಳಿದ ಹಾಗಾಯಿತು. ಅಂದರೆ ಅದು ಕ್ಷಯವಾಯಿತು. ಈಗ ಬ್ರಹ್ಮನಲ್ಲಿ 'ಅಸತ್ಯ ವ್ಯಾವೃತ್ತತಾ' ಅಂದರೆ ಅಸತ್ಯದಿಂದ ಬೇರೆಯಾಗಿರೋಣವು ಇದೆಯೇ ಇಲ್ಲವೇ ? ಅದು ಇದೆ ಅಂದರೆ ಪರಮಾಣುವಿನಲ್ಲಿ ವಿಶೇಷವು ಹೇಗೋ ಹಾಗೆ ಅಸತ್ಯವ್ಯಾವೃತ್ತಿಗೆ ಪ್ರಯೋಜಕವಾದ ಸತ್ಯತ್ವವು ಬ್ರಹ್ಮನಲ್ಲಿ ಒಪ್ಪಬೇಕು. 'ಅಸತ್ಯ ವ್ಯಾವೃತ್ತತಾ' ಇಲ್ಲವೆಂದಲ್ಲಿ ಅಸತ್ಯನಾಗಿ ಶೂನ್ಯತಾವನ್ನು ಹೊಂದಿ ಬ್ರಹ್ಮನು ನಾಶನಾದಾನು.

ಅತಃ ಶ್ರುತ್ಯುಕ್ತಮಾರ್ಗೇಣ ಜ್ಞಾನಾನನ್ದಾದಿರೂಪತಾ ॥ ೨೭೭ ॥

ಸ್ಥಿರಾಽಭೂದ್ಬ್ರಹ್ಮಣಿ ಗುಣೇಷ್ವೇವಾಭೂಚ್ಚ ಶ್ರುತೇರ್ಭರಃ ।

ಆದ್ದರಿಂದ ಶ್ರುತಿಯಲ್ಲಿ ಹೇಳಿದ ರೀತಿಯಲ್ಲಿ ಜ್ಞಾನಾನಂದಾದಿ ರೂಪತ್ವವು ಬ್ರಹ್ಮನಲ್ಲಿ ಸ್ಥಿರವಾಯಿತು ಮತ್ತು ಶ್ರುತಿಗೆ ಭಾರವು (ತಾತ್ಪರ್ಯವು) ಗುಣಗಳನ್ನು ಹೇಳುವುದರಲ್ಲಿಯೇ ಎಂಬುದು ಸ್ಥಿರವಾಯಿತು.

ತಸ್ಮಾತ್ ಜ್ಞಾನಾನನ್ದಪೂರ್ವಾ ಧರ್ಮಾ ಬ್ರಹ್ಮಣಿ ನಿರ್ಮಲೇ ॥

ಸಂತ್ಯೇವ ತೇಷಾಂ ನಾನಾತ್ವಮಾತ್ರಂ ನ ಬ್ರಹ್ಮಣಾ ಸಹ ।

ಇತ್ಯೇವ ವಾಚ್ಯಂ ಮೀಮಾಂಸಾನಿಪುಣೈಃ ಶ್ರುತಿಕೋವಿದೈಃ ॥

ಆದಕಾರಣ ಜ್ಞಾನಾನಂದವೇ ಮೊದಲಾದ ಧರ್ಮಗಳು ನಿರ್ದೋಷನಾದ ಬ್ರಹ್ಮನಲ್ಲಿ ಇದ್ದೇ ಇವೆ. ಆದರೆ ಬ್ರಹ್ಮನಿಂದ ಆ ಧರ್ಮಗಳಿಗೆ ಭೇದ ಮಾತ್ರವಿಲ್ಲ. ಹೀಗೆಯೇನೇ ಶ್ರುತ್ಯರ್ಥ ಮಾಡುವುದರಲ್ಲಿ ನಿಪುಣರೂ ಆದವರು ಹೇಳಬೇಕು.

ಏಕೀಭಾವೇ ಕಥಂ ಬ್ರಹ್ಮ ಧರ್ಮಿಭಾವೋ ಭವೇದಿತಿ ।
ಶಂಕಾಯಾಃ ಪರಿಹಾರಸ್ತೇ ಯಃ ಸ್ಯಾತ್ಸಸ್ಯಾನ್ಮಮಾಪಿ ಚ ॥೨೮೦॥

ಬ್ರಹ್ಮನಿಗೂ ಬ್ರಹ್ಮನ ಗುಣಗಳಿಗೂ ಐಕ್ಯವೆಂದು ಹೇಳಿದರೆ, ಬ್ರಹ್ಮನು ಧರ್ಮಿಯಾಗಿರೋಣವು ಹೇಗಾಗುತ್ತದೆ? ಇದಕ್ಕೆ ದೃಷ್ಟಾಂತ-ಕೆಂಪುಹೂವು ಎಂಬಲ್ಲಿ ಹೂವು ಧರ್ಮಿ, ಕೆಂಪು ಧರ್ಮ. ಇವೆರಡೂ ಬೇರೆಯಾಗಿದ್ದರೆ ತಾನೇ ಕೆಂಪುಹೂವು ಎಂದಾಗುತ್ತೆ. ಕೆಂಪೂ ಹೂವೂ ಒಂದೇ ಆದಮೇಲೆ, ಕೆಂಪು ಧರ್ಮವೆಂದೂ ಹೂವು ಧರ್ಮಿ ಎಂದೂ ಹೇಗಾದೀತು ಎಂದಭಿಪ್ರಾಯ. ಈ ಶಂಕಾಪರಿಹಾರವು ನಿನಗೆ (ಮಾಯಾವಾದಿಗೆ) ಹೇಗೋ ನನಗೂ ಹಾಗೇ ಆದೀತು. ಬ್ರಹ್ಮನು ಬೇರೆಯಲ್ಲ—'ತತ್ತ್ವಮಸಿ' ಎಂಬ ವಾಕ್ಯದಿಂದ ಬೋಧಿತವಾದ ಐಕ್ಯವು ಬೇರೆಯಲ್ಲ ಎಂದು ನಿನ್ನ ಮತ. ಆದರೆ ಬ್ರಹ್ಮನು ಸ್ವಪ್ರಕಾಶನಾಗಿ ಸಿದ್ಧನಾಗಿದ್ದರೂ ಐಕ್ಯವು ಸಿದ್ಧಿಯಾಗಿಲ್ಲ ಎಂದು ಹೇಳುವಿ. ಆದೇಕೆಂದರೆ, ವೇದಾಂತಜನಿತಜ್ಞಾನದಿಂದ ಐಕ್ಯವು ಸಿದ್ಧಿಯಾಗಬೇಕು. ಹಾಗಲ್ಲದಿದ್ದಲ್ಲಿ ಬ್ರಹ್ಮಸಾಕ್ಷಾತ್ಕಾರಕ್ಕಾಗಿ ವೇದಾಂತವಿಚಾರವು ಅವಶ್ಯಕವಿಲ್ಲದೆ ಹೋಗಬೇಕು. ಇಲ್ಲಿ ನೀನು ಹೇಗೆ ಸಮಾಧಾನ ಹೇಳಬೇಕೋ ಹಾಗೆಯೇ ನಾವೂ ಸಮಾಧಾನ ಹೇಳಬೇಕು.

ವಿಶೇಷ ವಿಚಾರ

ಧರ್ಮೋಽಪ್ಯವಶ್ಯಂ ಕಾರ್ಯಾಯ ವಾಚ್ಯೋಽಭೂದೇಕತಾಽಪಿ ಚ ।
ನತೋ ದ್ವಿತ್ವಭಯಾದ್ವಾಚ್ಯಾ ತ್ವಯಾ ಶ್ರುತಿಬಲಾನ್ಮಯಾ ॥೨೮೧॥

ಧರ್ಮೋಽಪ್ಯಸ್ತ್ಯೇಕತಾಽಪ್ಯಸ್ತಿ ಧರ್ಮೀ ಚಾಸ್ತಿ ದ್ವಯೋರಪಿ ।
ಭೇದೋ ನಾಸ್ತಿ ತಥಾಪ್ಯಸ್ತಿ ಭೇದಕಾರ್ಯಂ ದ್ವಯೋರಪಿ ॥೨೮೨॥

ಭೇದಪ್ರತಿನಿಧಿಃ ಕೋಽಪಿ ಧರ್ಮ ಏವ ಪರಾಯಣಃ ।

ನೀನು ಎರಡು ಸದ್ವಸ್ತುಗಳು ಇಲ್ಲವೆಂದು ಒಪ್ಪಿರುತ್ತಿ. ಐಕ್ಯವು ಬ್ರಹ್ಮನಿಂದ ಬೇರೆಯಾದರೆ ಎರಡು ಸತ್ಪದಾರ್ಥಗಳು ಆದಾವು, ಎಂಬ ಭಯದಿಂದ ಅವೆರಡೂ ಬೇರೆಯಲ್ಲವೆಂದು ಹೇಳಬೇಕು. ನಾನಾದರೋ ಬ್ರಹ್ಮಧರ್ಮಗಳನ್ನು ಜಗತ್ಸೃಷ್ಟ್ಯಾದಿಕಾರ್ಯಕ್ಕಾಗಿ ಒಪ್ಪಿ ಶ್ರುತಿಯಲ್ಲಿ ಬ್ರಹ್ಮನಿಗೂ ಬ್ರಹ್ಮಧರ್ಮಗಳಿಗೂ ಭೇದ ತಿಳಿದವನಿಗೆ ಅನರ್ಥ ಹೇಳಿರುವುದರಿಂದ ಆ ಭೇದವಿಲ್ಲವೆಂದು ಹೇಳಬೇಕು. ಇದು ಹೇಗೆ ಸಾಧ್ಯ? ಎಂಬ ಶಂಕಾಪರಿಹಾರಕ್ಕಾಗಿ, ನಾವಿಬ್ಬರೂ ಭೇದವಿಲ್ಲದ ಕಡೆ ಭೇದಕಾರ್ಯ ಕಂಡುಬಂದಲ್ಲಿ ಆ ಭೇದಕಾರ್ಯವನ್ನು ನಿರ್ವಾಹ ಮಾಡುವ ಭೇದಕ್ಕೆ ಪ್ರತಿನಿಧಿಯಾದ ಯಾವುದೋ ಒಂದು ಧರ್ಮವನ್ನು ಅವಶ್ಯ ಆಶ್ರಯಿಸಬೇಕು. ಅಂದರೆ ಒಪ್ಪಬೇಕು.

ಯದೇವೇಹ ತದೇವಾಮುತ್ರೇತಿ ಮೂಲಸ್ವರೂಪತಃ ॥ ೨೮೩ ॥

ಅವತಾರಸ್ವರೂಪಾಣಾಂ ಮೃತ್ಯೋರ್ಮೃತ್ಯುಂ ಸ ಗಚ್ಛತಿ ।
ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ ॥

ಇತಿ ದ್ವಿರುಕ್ತ್ಯಾ ನಿಂದಾಖ್ಯೇನಾರ್ಥವಾದದ್ವಯೇನ ಚ ।
ಸಹಿತಾ ಶ್ರುತಿರೇಷೈವ ಭೇದಂ ತಾತ್ಪರ್ಯಪೂರ್ವಕಂ ॥ ೨೮೪ ॥

ನಿಷೇಧಂತೀ ಶ್ರುತಿಃ ಸೈವಾಮುತ್ರ ಚೇಹೇತಿ ಚ ಸ್ವಯಂ ।
ಸ್ಥಾನಭೇದಂ ಚ ರೂಪಾಣಾಂ ಸ್ಪಷ್ಟಂ ವದತಿ ಸಾದರಂ ॥ ೨೮೫ ॥

"ಯದೇವೇಹ ತದಮುತ್ರ" ಎಂಬ ಶ್ರುತಿಯು ಭೇದವನ್ನು ನಿಷೇಧ ಮಾಡುತ್ತದೆ. ಯಾವುದರ ಭೇದವನ್ನು ನಿಷೇಧಮಾಡುತ್ತದೆ? ಎಂದರೆ, ಯಾವುದು ಇಲ್ಲಿಯೋ ಅಂದರೆ ಯಾವುದು ಈ ಲೋಕದಲ್ಲಿದೆಯೋ ಅದೇನೆ ಅಲ್ಲಿ ಇದೆ. ಅಲ್ಲಿ ಇರುವುದು ಮೂಲರೂಪ. ಇಲ್ಲಿ ಇರುವುದು ಅವತಾರರೂಪಗಳು. ಅವತಾರರೂಪಗಳಿಗೆ ಮೂಲರೂಪದಿಂದ ಭೇದ ಇಲ್ಲ. ಈ ಭೇದದ ನಿಷೇಧದಲ್ಲಿ ಶ್ರುತಿಗೆ ತಾತ್ಪರ್ಯವಿದೆ ಎಂದು ತೋರಿಸುವುದಕ್ಕೆ ಭೇದವನ್ನು ತಿಳಿದವನಿಗೆ ಅನರ್ಥವನ್ನು ಎರಡಾವರ್ತಿ ನಿರೂಪಿಸುತ್ತದೆ. ಯಾವನು

ಮೂಲರೂಪಕ್ಕೂ ಅವತಾರರೂಪಗಳಿಗೂ ಭೇದವನ್ನು ತಿಳಿಯುತ್ತಾನೋ ಅವನು ಮೃತ್ಯುವಿನಿಂದ ಮೃತ್ಯುವನ್ನು ಹೊಂದುತ್ತಾನೆ. ಯಾವನು ಇವುಗಳಿಗೆ ಭೇದಾ-ಭೇದವನ್ನು ತಿಳಿಯುತ್ತಾನೋ ಅವನೂ ಮೃತ್ಯುವಿನಿಂದ ಮೃತ್ಯುವನ್ನು ಹೊಂದುತ್ತಾನೆ ಎಂಬುದಾಗಿ ಎರಡಾವರ್ತಿ ನಿಂದಾರೂಪವಾದ ಅರ್ಥವಾದವನ್ನು ಹೇಳಿ, ರೂಪಗಳಿಗೆ ಸ್ಥಾನಭೇದವನ್ನು ಸ್ಪಷ್ಟವಾಗಿಯೂ ಆದರಪೂರ್ವಕವಾಗಿಯೂ ಹೇಳುತ್ತದೆ. ರೂಪಗಳಿಗೆ ಸ್ಥಾನಭೇದವಿದೆ. ಆದರೆ ಆ ರೂಪಗಳಿಗೆ ಭೇದವಿಲ್ಲ ಎಂದು ಶ್ರುತಿಗೆ ತಾತ್ಪರ್ಯ.

ಇಹೇತ್ಯಾಧಾರತಾಮಾಹ ನೇಹ ನಾನೇತಿ ವಾಗಪಿ ।
ಆಧೇಯತಾಂ ಚ ರೂಪಾದೇರ್ಬ್ರುವ(ವಂತೀ)ತೀ ಭೇದನಾಸ್ತಿತಾಂ

ಸ್ಪಷ್ಟಮಾಹ ತಥಾ ಧರ್ಮಾನಿತಿ ವಾಕ್ಯ'ಪರೇಶಿತುಃ ।
ಧರ್ಮಾನ್ ಧರ್ಮಬಹುತ್ವಂ ಚೋರರೀಕೃತ್ಯ ನಿಷೇಧತಿ ॥ ೨೮೮ ॥

ಪೃಥಕ್ತ್ವಮಾತ್ರಂ ತದ್ದ್ರಷ್ಟುರನರ್ಥಂ ಚಾಪಿ ಶಂಸತಿ ।

ನೀರು ಪಾತ್ರೆಯಲ್ಲಿದ್ದರೆ, ಆಧಾರವಾದ ಪಾತ್ರೆಯಲ್ಲಿ "ಆಧಾರತಾ" ಎಂಬ ಧರ್ಮವಿದೆ. ಆಧೇಯವಾದ ನೀರಿನಲ್ಲಿ 'ಆಧೇಯತಾ' ಧರ್ಮವಿದೆ. ಆಧಾರ-ಆಧೇಯಗಳಿಗೆ ಲೋಕದಲ್ಲಿ ಬಹುಶಃ ಭೇದವು ಕಂಡುಬಂದಿದೆ. 'ನೇಹ ನಾನಾಸ್ತಿ ಕಿಂಚನ' ಎಂಬ ವಾಕ್ಯವೂ ಕೂಡ 'ಇಹ' ಎಂದು ಬ್ರಹ್ಮನಿಗೆ ಆಧಾರತೆಯನ್ನೂ ರೂಪಾದಿಗಳಿಗೆ ಆಧೇಯತೆಯನ್ನೂ ಹೇಳಿ ಅವುಗಳಿಗೆ ಭೇದವಿಲ್ಲವೆಂದು ಶ್ರುತಿಯು ಸ್ಪಷ್ಟವಾಗಿ ಹೇಳುತ್ತದೆ. ಅಲ್ಲದೆ ಈ ಪ್ರಕಾರ ಭೇದವನ್ನು ತಿಳಿದವನಿಗೆ ಅನರ್ಥವನ್ನೂ ಶ್ರುತಿಯು ಹೇಳುತ್ತದೆ. ಬ್ರಹ್ಮನಲ್ಲಿ ಅನಂತರೂಪಗಳೂ ಅನಂತಕಲ್ಯಾಣಗುಣಗಳೂ ಇವೆ. ಬ್ರಹ್ಮನಲ್ಲಿ ಗುಣಗಳು ಇವೆ ಎಂಬುವಾಗ ಬ್ರಹ್ಮನು ಆಧಾರ, ಗುಣಗಳು ಆಧೇಯ. ಆದರೆ ಪಾತ್ರೆಯಲ್ಲಿ ನೀರು ಇದೆ ಎಂಬಲ್ಲಿ ಹೇಗೆ ಆಧಾರವಾದ ಪಾತ್ರೆಗೂ ಆಧೇಯವಾದ ನೀರಿಗೂ ಭೇದವಿದೆಯೋ ಹಾಗೆ ಬ್ರಹ್ಮನಿಗೂ ಬ್ರಹ್ಮನ ಗುಣಗಳಿಗೂ, ರೂಪಗಳಿಗೂ ಭೇದವಿಲ್ಲ. ಆದರೂ ಪಾತ್ರೆಯಲ್ಲಿ ನೀರು ಎಂದು ಹೇಗೆ ವ್ಯವಹಾರ ಮಾಡುತ್ತೇವೆಯೋ ಹಾಗೆಯೇ ಬ್ರಹ್ಮನಲ್ಲಿ ಗುಣಗಳು ಎಂದು ವ್ಯವಹಾರ ಮಾಡುತ್ತೇವೆ. ಇಲ್ಲಿ ಭೇದಕಾರ್ಯವಿದೆ. ಆದರೆ ಭೇದವಿಲ್ಲ. ಭೇದದ

ಪ್ರತಿನಿಧಿಯಾಗಿ ಭೇದಕಾರ್ಯವನ್ನು ನಿರ್ವಹಿಸುವ ಪದಾರ್ಥದ ಯಾವ ಶಕ್ತಿಯೋ ಅದಕ್ಕೆ 'ವಿಶೇಷ'ವೆಂದು ಹೆಸರು.

ಏವಂ ಚಾನೇಕಧಾ ಭೇದಕಾರ್ಯಂ ಭೇದಸ್ಯ ದೂಷಣಂ ॥ ೨೮೯ ॥

ಸಹೈವ ಕುರ್ವತೀ ಭೇದಂ ಶ್ರುತಿರ್ವಾಕ್ಯಚತುಷ್ಟಯೇ ।
ಭೇದಾಭಾವೇಽಪ್ಯೇಕನಾಶೇಽಪರಸತ್ತ್ವಾಖ್ಯಕಾರ್ಯತಃ ॥ ೨೯೦ ॥

ಅನ್ಯೇಷಾಂ ಭೇದಕಾರ್ಯಾಣಾಂ ಘಟಕಂ ಚಾಪಿ ಕಂಚನ ।
ಸ್ವಯಮೇವ ಕಥಂ ನಾಹ ನ ಹೀಯಮವಿವೇಕಿನೀ ॥ ೨೯೧ ॥

ಏವಂಚ ನಾಲ್ಕು ವಾಕ್ಯಗಳಲ್ಲಿ ಅನೇಕ ಸಲ ಭೇದಕಾರ್ಯವನ್ನೂ ಭೇದದ ದೂಷಣೆಯನ್ನೂ ಒಟ್ಟಿಗೆ ಮಾಡುವ ಶ್ರುತಿಯು ಭೇದವಿಲ್ಲದಿದ್ದರೂ ಒಂದು ನಾಶವಾದರೆ ಮತ್ತೊಂದು ಉಳಿಯುವ ಭೇದಕಾರ್ಯವನ್ನು ಬಿಟ್ಟು ಇತರ ಭೇದಕಾರ್ಯಗಳನ್ನು ಘಟನೆಮಾಡಿಕೊಡುವ ಯಾವುದೋ ಒಂದನ್ನು ಕೂಡ ಏಕೆ ಹೇಳಲಿಲ್ಲ? ಹೇಳಿಯೇ ಇದ್ದಾಳೆ. ಶ್ರುತಿಯು ಅವಿವೇಕಿನಿಯಲ್ಲವಷ್ಟೆ? ಇಲ್ಲಿ ಭೇದಕಾರ್ಯವನ್ನು ಶ್ರುತಿಯು ಹೇಳುತ್ತೆ. ಭೇದವಿಲ್ಲವೆಂದೂ ಹೇಳುತ್ತೆ. ಆದ್ದರಿಂದ ಭೇದಕಾರ್ಯನಿರ್ವಾಹಮಾಡತಕ್ಕದ್ದು ಮತ್ತೊಂದು ಇದೆ ಎಂತಲೇ ಶ್ರುತಿಗೆ ಅಭಿಪ್ರಾಯ. ಇದೇ 'ವಿಶೇಷ'ವೆಂಬ ವಸ್ತುವಿನ ಶಕ್ತಿ.

ಶ್ರುತಿರ್ಯೇನ ವಿರುದ್ಧಾರ್ಥದ್ವಯಂ ತಸ್ಯೋಪಪಾದಕಂ ।
ವಿನೈವೋನ್ಮತ್ತವದ್ವಕ್ತಿ ಯೇಯಂ ವಾಕ್ಯಶ್ರವಣಾದಿನಾ ॥ ೨೯೨ ॥

ತತ್ತ್ವಸಾಕ್ಷಾತ್ಕಾರದಾತ್ರೀ ಮುಕ್ತಿದಾತ್ರೀ ಚ ಯೋಗಿನಾಂ ।

ಶ್ರವಣಾದಿಗಳಿಂದ ತತ್ತ್ವಸಾಕ್ಷಾತ್ಕಾರವನ್ನು ಸಂಪಾದಿಸಿಕೊಡುವ, ಯೋಗಿಗಳಿಗೆ ಮುಕ್ತಿಯನ್ನು ಕೊಡುವ, ಶ್ರುತಿಯು ಎರಡು ವಿರುದ್ಧಾರ್ಥಗಳನ್ನು, ಅವುಗಳನ್ನು ಉಪಪತ್ತಿ ಮಾಡುವುದು ಇಲ್ಲವೇನೇ ಉನ್ಮತ್ತಳಂತೆ ಹೇಳಿದಲ್ಲಿ ಶ್ರುತಿಯು ಅವಿವೇಕಿನಿಯೇ ಆದಾಳು. (ಹೀಗೆ ಹೇಳಿರುವುದು ವೇದಾಭಿಮಾನಿಯ ದೃಷ್ಟಿಯಿಂದ.)

‘ ಏತೇ ಸ್ವಾಂಶಕಲಾಃ ಪುಂಸಃ ಕೃಷ್ಣಸ್ತು ಭಗವಾನ್ ಸ್ವಯಂ ’ ॥

ಇತಿ ವಾಕ್ ಚ ತು ಶಬ್ದೇನ ವಿ(ಶಿ)ಶೇಷ್ಯಾಹೀಂದ್ರಶಾಯಿನಃ ।

ಕೃಷ್ಣಸ್ಯ ನೀಲವರ್ಣಸ್ಯ ಮತ್ಸ್ಯಾದ್ಯೈಃ ಸ್ವಾಂಶರಾಶಿಭಿಃ ॥ ೨೯೪ ॥

ಸಾಮಾನಾಧಿಕರಣ್ಯೇನ ಬೋಧಯತ್ಯೇಕತಾಂ ಸ್ಫುಟಂ ।

ಭೇದಾಭಾವಂ ದೃಢೀಚಕ್ರೇ ವಕ್ತಿ ಚಾಂಶಾಂಶಿತಾಮಪಿ ॥ ೨೯೫ ॥

"ಪರಮಪುರುಷನ ಮತ್ಸ್ಯಾದಿ ಅಂಶಗಳು ಭಗವಂತನಾದ ಸಾಕ್ಷಾತ್ ಮೂಲರೂಪಿ ಕೃಷ್ಣನೇನೇ" ಎಂಬೀ ಭಾಗವತ ವಾಕ್ಯದಲ್ಲಿನ "ತು" ಶಬ್ದದಿಂದ ಶೇಷಶಾಯಿ ನೀಲವರ್ಣ ಕೃಷ್ಣನಿಗೆ ತನ್ನ ಅಂಶಭೂತರಾದ ಮತ್ಸ್ಯಾದಿಗಳಿಂದ ಸಾಮಾನಾಧಿಕರಣ್ಯವನ್ನು ಸ್ಫುಟವಾಗಿ ಬೋಧಿಸುವುದರ ಮೂಲಕ ಅವುಗಳಿಗೆ ಮೂಲರೂಪದಿಂದ ಭೇದವಿಲ್ಲವೆಂಬುದನ್ನು ದೃಢಮಾಡಿ ಅಂಶಾಂಶಿಭಾವವನ್ನೂ ಹೇಳುತ್ತದೆ.

ಇತೋಽಪಿ ಕಾರ್ಯದ್ವಿತಯ ಘಟಕಂ ಚಾಪಿ ಕಂಚನ ।

ಕಥಂ ನೋವಾಚ ಯಾ ತತ್ತ್ವಂ ಮುಮೂರ್ಷೋರ್ವಕ್ತಿ ಸಂಸದಿ ॥

ಆದುದರಿಂದಲೂ ಈ ಎರಡು ಕಾರ್ಯಗಳನ್ನೂ (ಅಂದರೆ ಭೇದ ವಿಲ್ಲದಿರೋಣ ಮತ್ತು ಅಂಶಾಂಶಿಭಾವ) ಘಟನಮಾಡಿಸಿಕೊಡುವ ಯಾವುದೋ ಒಂದನ್ನು ಕೂಡ ಹೇಗೆತಾನೇ (ಭಾಗವತವಾಕ್) ಹೇಳದೇ ಹೋದಾಳು? (ಹೇಳದೇ ಹೋದೀತು.) ಈ ‘ ವಾಕ್ ’ ಎಂಬ ಸಾಧ್ವಿಯು ಮರಣ ಸಮೀಪಿಸಿದ ಪರೀಕ್ಷಿತನಿಗೆ ಜ್ಞಾನಿಗಳ ಸಭೆಯಲ್ಲಿ ತತ್ತ್ವವನ್ನು ಬೋಧಿಸುತ್ತಾಳೆ. ಆದ್ದರಿಂದ ಪರಸ್ಪರ ವಿರೋಧವಿಲ್ಲದ ಮಾತನ್ನು ಆಡಿರುವಳು. ವಿರೋಧವಿಲ್ಲದಿರಬೇಕಾದರೆ ಆಕೆಯು ‘ ವಿಶೇಷ ’ವೆಂಬ ಪರಮಾತ್ಮನಲ್ಲಿ ಶಕ್ತಿಯನ್ನು ಒಪ್ಪಿರಬೇಕು.

ತಥಾ ಮತ್ಸ್ಯಾದಿರೂಪಾಣಾಂ ನಾನಾತ್ವಂ ಮೂಲರೂಪಿಣಾ ।

ನಿಷೇಧಯಂತ್ಯಃ ಶ್ರುತಯಃ ಸ್ಮೃತಯಶ್ಚ ಸಹಸ್ರಶಃ ॥ ೨೯೬ ॥

ಕಾಲಭೇದಂ ಚ ರೂಪಾಣಾಂ ವೈಚಿತ್ರ್ಯಂ ಚಾನುಮೇನಿರೇ ।

ಹೀಗೆ ಮತ್ಸ್ಯಾದಿ ರೂಪಗಳಿಗೆ ಮೂಲರೂಪದಿಂದ ಭೇದವನ್ನು ನಿಷೇಧ ಮಾಡುವ ಸಹಸ್ರಾರು ಶ್ರುತಿಸ್ಮೃತಿಗಳು ಕಾಲ ಭೇದವನ್ನೂ ಮತ್ತು ರೂಪ ಗಳ ವೈಚಿತ್ರ್ಯವನ್ನೂ ಒಪ್ಪಿಕೊಂಡಿವೆ.

ಏವಂ ಚ ಭೇದರಹಿತೇ ದೃಷ್ಟಂ ಭೇದಪ್ರಯೋಜನಂ ॥ ೨೯೮ ॥

ಉಪಪಾದಯಿತುಂ ಶಕ್ತಿವಿಶೇಷಂ ಚ ಮಹಾಪ್ರಭೋಃ ।
ಕಿಂ ನಾಹುರ್ನ ಹಿ ಕಾರ್ಯಂ ಸ್ಯಾತ್ಕಾರಣೇನ ವಿನಾ ಕ್ವಚಿತ್ ॥

ಏವಂ ಚ ಭೇದವಿಲ್ಲದ ಸ್ಥಳದಲ್ಲಿ ಕಂಡುಬರುವ ಭೇದಕಾರ್ಯವನ್ನು ಉಪಪತ್ತಿ ಮಾಡುವುದಕ್ಕೆ (ನಿರ್ವಹಿಸುವುದಕ್ಕೆ) ಈ ಶ್ರುತಿಸ್ಮೃತಿಗಳು ಮಹಾಸಮರ್ಥನಾದ ಪರಮಾತ್ಮನ ಶಕ್ತಿವಿಶೇಷವನ್ನು ಹೇಳುವುದಿಲ್ಲವೇನು? ಕಾರಣವಿಲ್ಲದೇ ಯಾವುದೊಂದು ಕಾರ್ಯವೇ ಆಗಲಿ ಇಲ್ಲವೆಂಬುದು ಸುಪ್ರಸಿದ್ಧ.

ಆನಂದಾದೇರ್ಬ್ರಹ್ಮಭಾವಂ ಭೃಗುವಲ್ಲೀ ಶ್ರುತಿರ್ಜಗೌ ।
ಬ್ರಹ್ಮಧರ್ಮತ್ವಮಪ್ಯೇಷಾಂ ಬ್ರಹ್ಮವಲ್ಲೀ ಶ್ರುತಿರ್ಜಗೌ ॥ ೩೦೦ ॥

ಭೃಗುವಲ್ಲೀ ಶ್ರುತಿಯು 'ಆನಂದಂ ಬ್ರಹ್ಮೇತಿ ವ್ಯಜಾನಾತ್' ಎಂಬಲ್ಲಿ ಆನಂದಾದಿಗಳನ್ನು ಬ್ರಹ್ಮಸ್ವರೂಪವನ್ನಾಗಿ ಹೇಳಿತು. ಬ್ರಹ್ಮವಲ್ಲೀ ಶ್ರುತಿಯು 'ಆನಂದಂ ಬ್ರಹ್ಮಣೋ ವಿದ್ವಾನ್' ಎಂಬಲ್ಲಿ ಆನಂದವನ್ನು ಬ್ರಹ್ಮನ ಧರ್ಮ ವಾಗಿ ಹೇಳಿತು.

ಆನಂದಂ ಬ್ರಹ್ಮಣೋ ವಿದ್ವಾನಿತಿ ಸಾಽಪ್ಯಾಹ ಧರ್ಮತಾಂ ।
ಉಪಲಕ್ಷಣಯಾಽಽನಂದಾದೀನಾಂ ಬ್ರಹ್ಮಣಿ ಧರ್ಮಿಣಿ ॥ ೩೦೧ ॥

ಬ್ರಹ್ಮವಲ್ಲೀ ಶ್ರುತಿಯು 'ಆನಂದಂ ಬ್ರಹ್ಮಣೋ ವಿದ್ವಾನ್' ಬ್ರಹ್ಮನ ಆನಂದವನ್ನು ತಿಳಿದವನು ಎಂದು ಹೇಳಿದ್ದರಿಂದ ಆನಂದವನ್ನು ಬ್ರಹ್ಮನ ಧರ್ಮವಾಗಿ ಹೇಳುತ್ತದೆ. ಇಷ್ಟೇ ಅಲ್ಲ, ಹೀಗೆ ಹೇಳುವ ಮೂಲಕ ಉಪ- ಲಕ್ಷಣಯಾ ಆನಂದ, ಜ್ಞಾನ, ಇವೇ ಮೊದಲಾದ ಧರ್ಮಗಳನ್ನು ಧರ್ಮಿ ಯಾದ ಬ್ರಹ್ಮನಲ್ಲಿ ಹೇಳುತ್ತದೆ.

ಅತೋಽಪಿ ಮಾನದ್ವಯತಃ ಸಿದ್ಧೋಽಭೂದ್ಘಟಕೋ ಮಮ ।
ಭೇದಾಸಾಧಾರಣಂ ಕಾರ್ಯಂ ವಿನಾ ಪ್ರಾಮಾಣಿಕಂ ತು ಯತ್ ॥

ಭೇದಕಾರ್ಯಂ ತು ಕಾರ್ಯಸ್ಯೈವಾನ್ಯಥಾನುಪಪತ್ತಿತಃ ।
ಸಿದ್ಧೋಽಸೌ ಸಾಧಯೇದೇವ ನ ಹಿ ಕಾರ್ಯಮಕಾರಣಂ ॥ ೧೦೩ ॥

ಆದಕಾರಣ 'ಆನಂದಂ ಬ್ರಹ್ಮೇತಿ ವ್ಯಜಾನಾತ್' ಆನಂದವನ್ನು ಬ್ರಹ್ಮನೆಂದು ತಿಳಿದನು 'ಆನಂದಂ ಬ್ರಹ್ಮಣಃ' ಬ್ರಹ್ಮನ ಆನಂದ ಎಂಬೀ ಎರಡು ಪ್ರಮಾಣಗಳಿಂದ ಸಿದ್ಧವಾದ ಅಭೇದ, ಭೇದಕಾರ್ಯ, ಇವೆರಡೂ ಸಹ, ಯಾವುದು ಇಲ್ಲದಿದ್ದರೆ ಕೂಡುವುದಿಲ್ಲವೋ ಅದು ಅಂದರೆ ಪದಾರ್ಥದ 'ವಿಶೇಷ'ವೆಂಬ ಶಕ್ತಿಯೂ ನನಗೆ ಸಿದ್ಧವಾಯಿತು. ಅಂದರೆ, 'ಆನಂದಂ ಬ್ರಹ್ಮೇತಿ ವ್ಯಜಾನಾತ್' ಎಂಬಲ್ಲಿ ಬ್ರಹ್ಮನೇ ಆನಂದವೆಂದು ಹೇಳಿದೆಯಾಗಿ ಬ್ರಹ್ಮನಿಗೂ ಆನಂದಕ್ಕೂ ಅಭೇದಸಿದ್ಧಿಯಾಗಿದೆ. 'ಬ್ರಹ್ಮಣಃ ಆನಂದಂ' ಎಂಬಲ್ಲಿ ಬ್ರಹ್ಮನನ್ನು ಧರ್ಮಿಯಾಗಿಯೂ ಆನಂದವನ್ನು ಧರ್ಮವಾಗಿಯೂ ಹೇಳಿದೆ. ದೇವದತ್ತನ ದಂಡವೆಂಬಲ್ಲಿ ದೇವದತ್ತನಿಗೂ ದಂಡಕ್ಕೂ ಭೇದವಿದೆ. ಈ ಪ್ರಯೋಗವು ಬ್ರಹ್ಮನ ಆನಂದವೆಂಬ ಪ್ರಯೋಗಕ್ಕೆ ಸದೃಶವಾದದ್ದು. ಮೊದಲನೆಯದರಲ್ಲಿ ಭೇದಕಾರ್ಯವನ್ನು ದೇವದತ್ತನಿಗೂ ಅವನ ದಂಡಕ್ಕೂ ಇರುವ ಭೇದವು ಸಾಧಿಸಿಕೊಡುತ್ತದೆ. ಎರಡನೆಯದರಲ್ಲಿ ಭೇದಕಾರ್ಯವಿದೆ. ಆದರೆ ಭೇದವಿಲ್ಲ. ಕಾರಣವಿಲ್ಲದೇ ಕಾರ್ಯವಿರುವುದು ಅಶಕ್ಯ. ಆದ್ದರಿಂದ ಭೇದಕಾರ್ಯವನ್ನು ನಿರ್ವಾಹಮಾಡುವ ಬ್ರಹ್ಮನಲ್ಲಿರುವ 'ವಿಶೇಷ'ವೆಂಬ ಒಂದು ಶಕ್ತಿಯು ಅರ್ಥಾಪತ್ತಿಯಿಂದ ಸಿದ್ಧವಾಯಿತು.

ಅತಸ್ತತ್ತತ್ಪದಾರ್ಥಾನಾಂ ಸ್ವಭಾವಾಖ್ಯಾ ಪರಾಭಿಧಃ ।
ಚಿತ್ರಶಕ್ತಿವಿಶೇಷಾಖ್ಯೋ ವಿಶೇಷಃ ಸ್ಯಾನ್ನ ಚಾಪರಃ ॥ ೧೦೪ ॥

ಹೀಗೆ ಎಲ್ಲ ವಸ್ತುಗಳಲ್ಲಿಯೂ ಆ ವಸ್ತುಗಳ ಸ್ವಭಾವವಾದ ವಿಶೇಷವೆಂದು ಹೆಸರುಳ್ಳ ವಿಶೇಷ ಶಕ್ತಿಯನ್ನು ಒಪ್ಪಲೇಬೇಕು. ಬೇರೆ ಮಾರ್ಗವಿಲ್ಲ.

ಸಂಬಂಧಾಂತರಶೂನ್ಯೇಷ್ವಪ್ಯಭಾವಾದಿಷು ತಾರ್ಕಿಕಃ ।
ಯದಾವಿಶಿಷ್ಟಯೋಗ್ಯತ್ವಾಖ್ಯಾ ತೇಷ್ವೇವ ಕದಾಚನ ॥ ೧೦೫ ॥

ಶಕ್ತಿರಸ್ತೀತಿ ವದತಿ ಸ್ವಕಪೋಲಬಲಾತ್ಪರಂ ।

ತಾರ್ಕಿಕನು ಸಂಬಂಧಾಂತರವಿಲ್ಲದ ಅಭಾವಾದಿಗಳಲ್ಲಿಯೂ ಕೂಡ ಒಂದಾನೊಂದು ವಿಶಿಷ್ಟಯೋಗ್ಯತ್ವವೆಂದು ಹೆಸರುಳ್ಳ ಶಕ್ತಿಯನ್ನು ಕೇವಲ ತನ್ನ ಬುದ್ಧಿಯಿಂದ ಕಲ್ಪಿಸಿ ಹೇಳುತ್ತಾನೆ.

ತದಾ ಭೇದಾಭಾವಭೇದಕಾರ್ಯಯೋಃ ಶ್ರುತಿದ್ವಯಾತ್ ॥೩೦೬
ಸಿದ್ಧಯೋರ್ಘಟನಾ ಯೇಯಂ ಕಲ್ಪನೀಯೈವ ಕಲ್ಪನಾ ।

ಹೀಗೆ ಸ್ವಬುದ್ಧಿಯಿಂದ ತಾರ್ಕಿಕನು ಕಲ್ಪಿಸುತ್ತಾನೆ ಎಂದಮೇಲೆ, 'ಆನಂದಂ ಬ್ರಹ್ಮ' ಎಂಬಲ್ಲಿ ಭೇದವಿಲ್ಲದಿರುವುದೂ, 'ಆನಂದಂ ಬ್ರಹ್ಮಣಃ' ಎಂಬಲ್ಲಿ ಭೇದಕಾರ್ಯವೂ ಇವೆರಡೂ ಶ್ರುತಿದ್ವಯದಿಂದ ಸಿದ್ಧವಾಗಿರುವುದರಿಂದ ಅದನ್ನು ಘಟನೆಮಾಡುವುದಕ್ಕೆ ವಿಶೇಷವನ್ನು ಕಲ್ಪಿಸಬೇಕು ಎಂಬುದು ಸರಿಯಾದದ್ದೇನೆ.

ನೇಹ ನಾನೇತಿ ವಾಕ್ ಬ್ರೂತೇ ಭೇದಾಭಾವಂ ಪರಾತ್ಮನಿ ॥೩೦೭॥

ಸರ್ವಸ್ಯೇಶಾನ ಇತ್ಯಾದ್ಯಾ ಶ್ರುತಿರ್ವಕ್ತಿ ಗುಣಾನಪಿ ।
ಶ್ರುತಯಃ ಸ್ಮೃತಯಶ್ಚೈವ ಪ್ರಾಗುಕ್ತವಿಧಯಾಽಖಿಲಾಃ ॥ ೩೦೮ ॥

ಭೃಗುವಲ್ಲೀಬ್ರಹ್ಮವಲ್ಲೀಪೂರ್ವಾಶ್ಚ ಬಹುಧಾಸ್ಫುಟಂ ।
ಭೇದಾಭಾವಂ ಭೇದಕಾರ್ಯಂ ವರ್ಣಯಂತಿ ಪದೇಪದೇ ॥ ೩೦೯ ॥

ಪ್ರಮಾಣದ್ವಯರಕ್ಷಾರ್ಥಂ ರಾತ್ರೌ ಭುಕ್ತಿರ್ವಿವೇಕಿಭಿಃ ।
ಅದೃಷ್ಟ್ವಾಽಪಿ ಯಥಾಕಲ್ಪ್ಯಾ ತಥೇಯಮಪಿ ಕಲ್ಪನಾ ॥ ೩೧೦ ॥
ಪ್ರಾಮಾಣಿಕೀ ....

"ನೇಹ ನಾನಾಸ್ತಿ ಕಿಂಚನ" ಎಂಬ ಶ್ರುತಿಯು ಪರಮಾತ್ಮನಲ್ಲಿ ಯಾವ ಭೇದವೂ ಇಲ್ಲವೆಂದು ಹೇಳುತ್ತದೆ. 'ಸರ್ವಸ್ಯವಶೀ', 'ಸರ್ವಸ್ಯೇ-ಶಾನಃ', 'ಸರ್ವಸ್ಯಾಧಿಪತಿಃ' ಎಂಬಿವೇ ಮೊದಲಾದ ಶ್ರುತಿಗಳು ಮತ್ತು ಸ್ಮೃತಿಗಳೂ ಬ್ರಹ್ಮನ ಗುಣಗಳನ್ನು ಹೇಳುತ್ತವೆ. ಭೃಗುವಲ್ಲೀ ಬ್ರಹ್ಮವಲ್ಲೀ

ಮೊದಲಾದವು ಎಲ್ಲವೂ ಹಿಂದೆ ಹೇಳಿದ ರೀತಿಯಲ್ಲಿ ಅನೇಕಾವರ್ತಿ ಸ್ಫುಟ ವಾಗಿ ಭೇದಾಭಾವವನ್ನೂ ಭೇದಕಾರ್ಯವನ್ನೂ ಪದೇ ಪದೇ ವರ್ಣಿಸುತ್ತವೆ. ದೇವದತ್ತನು ರಾತ್ರಿಯಲ್ಲಿ ಭೋಜನಮಾಡುವುದು ಕಾಣದಿದ್ದರೂ, ಹಗಲು ಭೋಜನಮಾಡದೇ ಇರುವುದೂ ದಪ್ಪನಾಗಿರುವುದೂ ಪ್ರತ್ಯಕ್ಷದಿಂದ ಕಂಡು ಬಂದಿರುವುದರಿಂದ, ಹೇಗೆ ರಾತ್ರಿ ಭೋಜನವನ್ನು ವಿವೇಕಿಗಳು ಕಲ್ಪಿಸು ತ್ತಾರೋ ಹಾಗೆಯೇ ಇಲ್ಲಿಯೂ ವಿಶೇಷವೆಂಬ ಪದಾರ್ಥದ ಶಕ್ತಿಯನ್ನು ಕಲ್ಪಿಸು ವುದು ಪ್ರಮಾಣದ ಬಲವುಳ್ಳದ್ದು.

.... ನಚೇದರ್ಥಾಪತ್ತೇಃ ಸ್ಯಾದ್ಧಿಹ್ಯಮಾನತಾ ।
ನರತ್ವಂ ವಾ ಮೃಗತ್ವಂ ವಾ ಕೋ ನೃಸಿಂಹಸ್ಯ ಮೋಚಯೇತ್ ॥
ಕಿಂತ್ವಚಿಂತ್ಯೇಶಶಕ್ತ್ಯೈವ ಘಟಯೇದುಭಯಂ ಬುಧಃ ।

ಹಾಗಿಲ್ಲದಲ್ಲಿ ಅರ್ಥಾಪತ್ತಿಗೆ ಅಪ್ರಮಾಣತಾ ಬಂದೀತು. ನರತ್ವವನ್ನೇ ಆಗಲಿ ಮೃಗತ್ವವನ್ನೇ ಆಗಲಿ ನೃಸಿಂಹನಿಗೆ ಯಾವನು ತಾನೇ ಬಿಡಿಸಿ ಯಾನು? ಅಂದರೆ ಲೋಕದಲ್ಲಿ ನರತ್ವ ಮೃಗತ್ವ ಒಂದೇ ವ್ಯಕ್ತಿಯಲ್ಲಿ ಕಂಡು ಬಂದಿಲ್ಲವಾದರೂ ಪ್ರಮಾಣಸಿದ್ಧವಾದ ಈ ಎರಡರ ಸಮಾಗಮವನ್ನು ನರಸಿಂಹನಲ್ಲಿ ಒಪ್ಪದೇ ಇರಲು ಆಗುವುದೇನು? ಒಪ್ಪಲೇಬೇಕು. ಅದು ಹೇಗೆ ಸಾಧ್ಯ? ಪರಮಾತ್ಮನ ಅಚಿಂತ್ಯ ಶಕ್ತಿಯಿಂದ ಸಾಧ್ಯ.

ಏವಂಚ ಬ್ರಹ್ಮಣಿ ಪರೇ ಶ್ರುತಂ ಶ್ರುತಿಸಹಸ್ರ(ಶಃ)ತಃ ॥ ೩೧೨ ॥
ಅಭೇದಂ ಭೇದಕಾರ್ಯಂ ಚ ಕಃ ಪ್ರೇಕ್ಷಾವಾನ್ ಉಪೇಕ್ಷಯೇತ್ ।

ಏವಂಚ ಪರಬ್ರಹ್ಮನಲ್ಲಿ ಸಹಸ್ರಾರು ಶ್ರುತಿಗಳಲ್ಲಿ ಹೇಳಿರುವ ಅಭೇದ ವನ್ನೂ ಭೇದಕಾರ್ಯವನ್ನೂ ಯಾವ ಪ್ರೇಕ್ಷಾವಂತನು ಉಪೇಕ್ಷಿಸಿಯಾನು? ಅಂದರೆ ಅಭೇದವೂ ಪ್ರಮಾಣಸಿದ್ಧವಾಗಿದೆ—ಭೇದಕಾರ್ಯವೂ ಪ್ರಮಾಣ ಸಿದ್ಧವಾಗಿದೆ. ಹೀಗಿರುವಾಗ ಪ್ರಮಾಣಸಿದ್ಧವಾದ ಇವೆರಡನ್ನೂ ಸರಿಗೊಳಿಸು ವುದಕ್ಕೆ 'ವಿಶೇಷ'ವೆಂಬ ಒಂದು ಪದಾರ್ಥದ ಶಕ್ತಿಯುಂಟೆಂದು ಒಪ್ಪಲೇಬೇಕು.

ನ ಸ್ಥಾನತೋಽಪೀತಿ ಸೂತ್ರೇ ವ್ಯಾಸೋ ವಿಮಾವಮಾಂಸಕಾಗ್ರಣೀಃ ॥

ಹರೇರನಂತರೂಪಾಣಾಮನಂತಾನಂತದೇಹಿಷು ।

ಭಿನ್ನಭಿನ್ನಸ್ಥಾನಗಾನಾಮಪ್ಯನ್ಯೋಽನ್ಯಂ ಮಹಾಮತಿಃ ॥ ೩೧೪ ॥

ಊರೀಚಕ್ರೇ ಸ್ಥಾನಭೇದಂ ದೂರೀಚಕ್ರೇ ಚ ಭಿನ್ನತಾಂ ।

ಅನಂತಾನಂತ ಪ್ರಾಣಿಗಳಲ್ಲಿ ಪ್ರೇರಣೆಗಾಗಿ ಅನಂತರೂಪಗಳನ್ನು ತಾಳಿ, ಬೇರೆಬೇರೆ ಸ್ಥಾನಗಳಲ್ಲಿ ಪರಮಾತ್ಮನು ನೆಲಸಿರುವನು. ಇಲ್ಲಿ, ಶಾಸ್ತ್ರಾರ್ಥ ವಿಚಾರಮಾಡುವುದರಲ್ಲಿ ಅಗ್ರೇಸರರೂ ಮಹಾಜ್ಞಾನಿಗಳೂ ಆದ ವೇದವ್ಯಾಸರು ' ನ ಸ್ಥಾನತೋಽಪಿ ' ಎಂಬ ಸೂತ್ರದಲ್ಲಿ ಸ್ಥಾನಭೇದವನ್ನೊಪ್ಪಿ ಆ ಸ್ಥಾನಗಳಲ್ಲಿ ನಿಯಾಮಕನಾಗಿ ನೆಲಸಿರುವ ಪರಮಾತ್ಮನ ರೂಪಗಳಿಗೆ ಭೇದವಿಲ್ಲೆಂದು ನಿಶ್ಚಯಿಸಿರುತ್ತಾರೆ.

ಪ್ರಸಕ್ತವಾದ ಸೂತ್ರವಿದು. **" ಓಂ ನ ಸ್ಥಾನತೋಽಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ ಓಂ " ೩-೨-೧೧.**

ಸ್ಥಾನತೋಽಪಿ - ಸ್ಥಾನಭೇದವಿದ್ದರೂ, ಪರಸ್ಯ= ಪರಮಾತ್ಮನಿಗೆ, ಉಭಯ ಲಿಂಗಂ=ಭಿನ್ನರೂಪವು, ನ = ಇಲ್ಲ. ಹಿ - ಏಕೆಂದರೆ, ಸರ್ವತ್ರ=ಸರ್ವಸ್ಥಾನ ಗಳಲ್ಲಿ ಇರತಕ್ಕ ರೂಪಗಳಿಗೆ ಭೇದವಿಲ್ಲವೆಂದು " ಸರ್ವೇಷು ಭೂತೇಷು ಏತಮೇವ ಬ್ರಹ್ಮೇತ್ಯಾಚಕ್ಷತೇ" ಎಂಬೀ ಶ್ರುತಿಯಲ್ಲಿ ಹಾಗೆ ಹೇಳಿರುವುದರಿಂದ.

ತಸ್ಯಾಪ್ಯನುಮತೋ ದೃಷ್ಟಕಾರ್ಯದ್ವಯನಿಯಾಮಕಃ ॥ ೩೧೫ ॥

ಮಹಾಸಾಮರ್ಥ್ಯರೂಪೋಽಯಂ ವಿಶೇಷಃ ಪರಮಾತ್ಮನಿ ।

ಪ್ರಮಾಣದಿಂದ ತಿಳಿದುಬಂದಿರುವ ಅಭೇದ ಮತ್ತು ಭೇದಕಾರ್ಯ ಇವೆರಡಕ್ಕೂ ನಿಯಾಮಕವಾಗಿ ಉತ್ತಮ ಸಾಮರ್ಥ್ಯರೂಪವಾದ ಈ ವಿಶೇಷವು ಪರಮಾತ್ಮನಲ್ಲಿದೆ ಎಂಬುದು ಬಾದರಾಯಣರಿಗೂ ಸಮ್ಮತ.

ಯಶ್ಚಕ್ರೇ ಯುಕ್ತಿತೋಽನಂತಶ್ರುತೀನಾಂ ಚ ವಿನಿರ್ಣಯಂ ॥

ಸಯುಕ್ತಿವಿಧುರಂ ಸೂತ್ರಂ ಸಭಾಮಧ್ಯೇ ಕಥಂ ವದೇತ್ ।

ಅತಃ ಶ್ರುತ್ಯರ್ಥಕುಶಲೋ ಮಧ್ವ ಏವ ನ ಸಂಶಯಃ ॥ ೩೧೬ ॥

ಯಾವ ವ್ಯಾಸರು ಯುಕ್ತಿಯಿಂದ ಅನಂತಶ್ರುತಿಗಳ ಅರ್ಥವನ್ನು ನಿರ್ಣಯಮಾಡಿದರೋ ಅವರು ಯುಕ್ತಿಶೂನ್ಯವಾದ ಸೂತ್ರವನ್ನು ಸಭೆಯಲ್ಲಿ ಹೇಗೆ ತಾನೇ ಹೇಳಿಯಾರು? ಆದ್ದರಿಂದ ಶ್ರುತಿಯ ಅರ್ಥವನ್ನು ಮಾಡುವುದರಲ್ಲಿ ಕುಶಲರು ಮಧ್ವಾಚಾರ್ಯರೇ. ಇದರಲ್ಲಿ ಸಂಶಯವಿಲ್ಲ.

ಭೇದಾಸಾಧಾರಣಫಲಮೇಕಸತ್ತ್ವೇಽನ್ಯನಾಶನಮ್ ।
ಭೇದಾಭೇದೌ ತಸ್ಯ ಬಲಾನ್ಮೃದ್ಘಟಾದ್ಯೇಷು ಸಮ್ಮತೌ ॥ ೩೧೮ ॥

ಭೇದದ ಅಸಾಧಾರಣ ಫಲವು ಯಾವುದೆಂದರೆ, ಒಂದು ಇದ್ದು ಇನ್ನೊಂದು ನಾಶವಾಗುವುದು. ಅಂದರೆ ಘಟಪಟಗಳು ಭಿನ್ನವಾದ ವಸ್ತುಗಳು. ಘಟವು ನಾಶವಾದರೂ ಪಟವು ಉಳಿಯುತ್ತೆ. ಒಂದು ವೇಳೆ ಪಟವು ನಾಶವಾದರೂ ಘಟವು ಉಳಿಯುತ್ತೆ. ಇದು ಭೇದವುಳ್ಳ ಎರಡು ಪದಾರ್ಥಗಳು ಎಲ್ಲಿ ಕಂಡುಬಂದಿವೆಯೋ ಅಲ್ಲೆಲ್ಲಾ ಅನುಭವಸಿದ್ಧವಾದದ್ದು. ಈಗ ಘಟವು ನಾಶವಾದರೆ ಅದರ ಮಣ್ಣು ಉಳಿಯುತ್ತೆ. ಆದ್ದರಿಂದ ಘಟಕ್ಕೂ ಮಣ್ಣಿಗೂ ಭೇದ ಹೇಳಬೇಕು. ಆದರೆ ಘಟವು ಇರುವ ಕಾಲದಲ್ಲಿ ಮಣ್ಣೇ ಘಟವು. ಮಣ್ಣು ಬಿಟ್ಟು ಘಟವು ಇಲ್ಲ, ಮಣ್ಣೇ ಘಟಾಕಾರವಾಗಿದೆ, ಎಂದು ಅಭೇದವು ತೋರುತ್ತದೆ. ಹೀಗಿರುವುದರಿಂದ ಮಣ್ಣಿಗೂ ಘಟಕ್ಕೂ ಭೇದಾಭೇದವೆಂದು ವ್ಯವಹರಿಸಬೇಕು.

ಪ್ರಾಗುಕ್ತ ನಿತ್ಯಧರ್ಮಾದ್ಯಂ ನಶ್ಯೇದ್ಬ್ರಹ್ಮಕ್ಷಯೇ ಪರಂ ।
ತದ್ಬ್ರಹ್ಮವನ್ನಿತ್ಯಧರ್ಮೇ ಭೇದೋ ವನ್ಧ್ಯಾಸುತೋ ಭವೇತ್ ॥

ಬ್ರಹ್ಮನಲ್ಲಿರುವ ಧರ್ಮಗಳಾದರೋ ಕೇವಲ ಬ್ರಹ್ಮನಾಶವಾದರೇನೇ ನಾಶವಾಗುತ್ತವೆ. ಅಂದರೆ ಬ್ರಹ್ಮವೂ ನಾಶವಾಗುವುದಿಲ್ಲ. ಆದ್ದರಿಂದ ಬ್ರಹ್ಮನಂತೆ ನಿತ್ಯವಾದ (ಈ ಭೇದರೂಪ ಧರ್ಮವು) ಧರ್ಮದಲ್ಲಿ ಬ್ರಹ್ಮನಿಂದ ಭೇದವು ಬಂಜೆಯ ಮಗನಂತೆ ಆಯಿತು. ಅಂದರೆ ಭೇದವಿಲ್ಲವೆಂದು ಅರ್ಥ.

ಏಕಸ್ಯ ಸತ್ತ್ವೇಽಪ್ಯನ್ಯಸ್ಯ ನಾಶೋ ಯತ್ರ ಭವಿಷ್ಯತಿ ।
ಘಟಾದಾವಿವ ಭೇದೋಽಪಿ ಕಲ್ಪ್ಯಸ್ತತ್ರೈವ ಕೋವಿದೈಃ ॥ ೩೨೦ ॥

ಘಟದ ಹಾಗೆ ಎಲ್ಲಿ ಒಂದು ನಾಶವಾದರೂ ಮತ್ತೊಂದು ಉಳಿಯುತ್ತೋ ಅಲ್ಲಿಮಟ್ಟಿಗೆ ವಿವೇಕಿಗಳು ಭೇದವನ್ನು ಕಲ್ಪಿಸುತ್ತಾರೆ.

ಯಾವದ್ಬ್ರಹ್ಮತು ಯೇ ಧರ್ಮಾಃ ಸನ್ತಿ ಬ್ರಹ್ಮವದೇವ ಹಿ ।
ಸತಿ ಬ್ರಹ್ಮಣಿ ಯೇಷಾಂ ತು ನಾಶೋ ನಾಸ್ತಿ ಕದಾಚನ ॥ ೩೨೧ ॥

ಭೇದಸ್ಯ ಕಲ್ಪಕಾಭಾವಾದ್ಭೇದೋ ನೈವಾತ್ರ ಕಲ್ಪ್ಯತೇ ।
ನೇಹ ನಾನೇತಿ ವಾಗ್ವ್ಯಾಘ್ರೀ ಕಲ್ಪಿತಾಮಪಿ ಭಕ್ಷಯೇತ್ ॥೩೨೨॥

ಯಾವ ಧರ್ಮಗಳಾದರೆ ಬ್ರಹ್ಮನಂತೆ ಬ್ರಹ್ಮ ಇರುವವರೆಗೂ ಇರುತ್ತವೆಯೋ ಮತ್ತು ಬ್ರಹ್ಮನಿದ್ದಲ್ಲಿ ಯಾವುದರ ನಾಶವು ಯಾವಾಗಲೂ ಇಲ್ಲವೋ ಅಂತಹ ಧರ್ಮಗಳಿಗೆ ಬ್ರಹ್ಮನಿಂದ ಭೇದವನ್ನು ಕಲ್ಪಿಸುವುದಕ್ಕೆ ನಿಮಿತ್ತವಿಲ್ಲದಿರುವುದರಿಂದ ಅಲ್ಲಿ ಭೇದವನ್ನು ಕಲ್ಪಿಸುವುದಿಲ್ಲ. ಒಂದು ವೇಳೆ ಹಾಗೆ ಕಲ್ಪಿಸಿದರೂ ಕೂಡ 'ನೇಹ ನಾನಾಸ್ತಿ ಕಿಂಚನ' ಎಂಬ ಹೆಣ್ಣು ಹುಲಿಯು ಅದನ್ನು ತಿಂದುಬಿಟ್ಟೀತು. ಅಂದರೆ ಹಾಗೆ ಕಲ್ಪಿಸೋಣವು ಶ್ರುತಿ ವಿರುದ್ಧವಾಗುವುದೆಂದು ಅಭಿಪ್ರಾಯ.

ಅಭೇದಶ್ಚೋಚ್ಯತೇ ಸ್ಪಷ್ಟಂ ಭೇದಕಾರ್ಯಂ ಚ ದೃಶ್ಯತೇ ।
ತದಭಿನ್ನೇಷು ಕಾರ್ಯೇಷು ಭೇದಕಾರ್ಯನಿಯಾಮಕಂ ॥ ೩೨೩ ॥

ಭೇದಾದನ್ಯತ್ಕಲ್ಪನೀಯಂ ನ ಹಿ ಕಾರ್ಯಮಕಾರಣಮ್ ।
ಭಿದಾಂತು ಕಲ್ಪಕಾ ಭಾವಾದ್ಬ್ರಹ್ಮಧರ್ಮೇ ನ ಕಲ್ಪಯೇತ್ ॥

ಅಭೇದವೂ ಸ್ಪಷ್ಟವಾಗಿ ಹೇಳಲ್ಪಡುತ್ತೆ. ಭೇದಕಾರ್ಯವೂ ಕಂಡು ಬರುತ್ತೆ. ಆದ್ದರಿಂದ ಭೇದಕಾರ್ಯವನ್ನು ನಿರ್ವಾಹಮಾಡುವ, ಭೇದದಿಂದ ಭಿನ್ನವಾದ ಒಂದನ್ನು ಕಲ್ಪಿಸಬೇಕು. ಏಕೆಂದರೆ, ಕಾರಣವಿಲ್ಲದ ಕಾರ್ಯವು ಇರಲು ಸಾಧ್ಯವಿಲ್ಲ. ಬ್ರಹ್ಮಧರ್ಮಗಳಲ್ಲಿ ಭೇದವನ್ನು ಕಲ್ಪಿಸುವುದಕ್ಕೆ ನಿಮಿತ್ತವಿಲ್ಲದಿರುವುದರಿಂದ ಅದನ್ನು ಕಲ್ಪಿಸಲು ಆಗಬಾರದು.

ಏವಂಚ ಭೇದಾಭಾವೇಽಪಿ ಭೇದಕಾರ್ಯಂ ಕಥಂ ಭವೇತ್ ।
ಇತಿ ಮನ್ದಮತೇಃ ಶಂಕಾಪಂಕಂ ಪಂಕೇರುಹಂ ವಿನಾ ॥ ೩೨೫ ॥

ದೃಷ್ಟಕಾರ್ಯಬಲಾದುಕ್ತ್ವಾವ್ಯಾಘ್ರೀ ಚ ಭಯವರ್ಜಿತಾ ।
ಘುಟಿಕಃ ಕೋಽಪಿ ಸಂಭೂಯ ಸಭಾಮಧ್ಯಾದ್ಬಹಿಃ ಕ್ಷಿಪೇತ್ ॥

ಏವಂಚ ಭೇದವಿಲ್ಲದಿದ್ದರೂ ಭೇದಕಾರ್ಯವು ಹೇಗೆ ಆದೀತು ? ಎಂದು ಮಂದರು ಮಾಡುವ ಶಂಕೆಯನ್ನು ಕಂಡುಬಂದ ಕಾರ್ಯದ (ಆನಂದಂ ಬ್ರಹ್ಮಣಃ) ಸಾಮರ್ಥ್ಯದಿಂದ ಹಿಂದೆ ಹೇಳಿದ " ನೇಹ ನಾನಾಸ್ತಿ ಕಿಂಚನ " ಎಂಬ ಶ್ರುತಿರೂಪಿಯಾದ ಹೆಣ್ಣು ಹುಲಿಯು ಭಯರಹಿತಳಾಗಿ ಅಭೇದವನ್ನೂ ಭೇದಕಾರ್ಯವನ್ನೂ ಘಟನೆಮಾಡಿಕೊಡುವ ಒಂದನ್ನು (ವಿಶೇಷವನ್ನು) ಹಡೆದು ಸಭಾಮಧ್ಯದಿಂದ 'ಶಂಕಾಪಂಕಂ ಪಂಕೇರುಹಂ ವಿನಾ' ಎಂದರೆ ಭೇದಕಾರ್ಯವೆಂಬ ಪಂಕೇರುಹವನ್ನು (ಕಮಲ) ಉಳಿಸಿ ಭೇದವೆಂಬ ಶಙ್ಕಾ ಪಂಕವನ್ನು (ಕೆಸರನ್ನು) ಹೊರಗೆ ತಳ್ಳಿಯಾಳು.

ಪರಾಸ್ಯ ಶಕ್ತಿರ್ವಿವಿಧಾ ಶ್ರೂಯತೇ ಸಾಸ್ವಭಾವಜಾ ।
ಇತಿ ಶ್ರುತಿಸತೀಸೂನುರ್ಯತೋಽಯಂ ಘಟಕೋಽಹ್ಯಭೂತ್ ॥

[ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನ ಬಲ ಕ್ರಿಯಾ ಚ-ಶ್ವೇತಾಶ್ವತರ ಉ. ೬-೮]

ಶ್ರುತ್ಯರ್ಥ : ಈ ಪರಮಾತ್ಮನ ಉತ್ಕೃಷ್ಟವಾದ ಶಕ್ತಿಯು ಅನೇಕ ಪ್ರಕಾರವಾಗಿ ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತೆ. ಇವನ ಜ್ಞಾನ, ಬಲ, ಕ್ರಿಯಾ ಇವುಗಳು ಅವನ ಸ್ವಭಾವವಾದವುಗಳು. ಅಂದರೆ ಅವನ ಸ್ವರೂಪದಿಂದ ಬೇರೆಯಲ್ಲ.

ಶ್ಲೋಕಾರ್ಥ : ಈ ಶ್ರುತಿಯೆಂಬ ಪತಿವ್ರತೆಯಾದ ಸ್ತ್ರೀಯ ವಿಚಿತ್ರ ಶಕ್ತಿರೂಪ ವಿಶೇಷವೆಂಬ ಈ ಮಗನು ಅಭೇದವನ್ನೂ ಭೇದಕಾರ್ಯವನ್ನೂ ಸಮರ್ಥಿಸಿ ಕೊಡುವವನಾದಾನು. ಅಭಿಪ್ರಾಯ ಹೀಗೆ: ಪರಮಾತ್ಮನ ಜ್ಞಾನ, ಬಲ, ಕ್ರಿಯಾ ಇವೆಲ್ಲವೂ ಪರಮಾತ್ಮನ ಸ್ವರೂಪವೇ. ಪರಮಾತ್ಮನ ಸ್ವರೂಪವು ಪರಮಾತ್ಮನಿಂದ ಅಭಿನ್ನವಷ್ಟೆ ಇದರಿಂದ ಜ್ಞಾನವೇ ಮೊದ ಲಾದ ಪರಮಾತ್ಮನ ಧರ್ಮಗಳು ಪರಮಾತ್ಮನಿಂದಲೂ ಪರಸ್ಪರವಾಗಿಯೂ ಭೇದವಿಲ್ಲದವುಗಳು. ಆದರೂ ಪರಮಾತ್ಮನ ಜ್ಞಾನ, ಪರಮಾತ್ಮನ ಬಲ, ಪರಮಾತ್ಮನ ಕ್ರಿಯಾ ಎಂಬ ವ್ಯವಹಾರರೂಪವಾದ ಭೇದಕಾರ್ಯ ಕಂಡು ಬಂದಿದೆ. ಈ ಶ್ರುತಿಯಿಂದ ಭೇದಪ್ರತಿನಿಧಿಯಾದ ಪರಮಾತ್ಮನಲ್ಲಿರುವ ಒಂದು ಶಕ್ತಿಯನ್ನು ಒಪ್ಪಬೇಕು. ಇದೇ ವಿಶೇಷ.

ಯಸ್ಮಾದಾತ್ಮನಿ ಚಿತ್ರಾಶ್ಚ ಶಕ್ತಯಸ್ತ್ವಿತಿ ಸೂತ್ರಕೃತ್ ।
ಅಸ್ಯ ಶ್ರುತಿಕುಮಾರಸ್ಯ ಜಾತಕರ್ಮಾಪ್ಯಕಾರಯತ್ ॥ ೩೨೮ ॥

(ಈ ಶ್ಲೋಕದಲ್ಲಿರುವ 'ಯಸ್ಮಾತ್' ಶಬ್ದವು ಮುಂದಿನ ಶ್ಲೋಕದಲ್ಲಿರುವ 'ತಸ್ಮಾತ್' ಶಬ್ದದ ಜೊತೆಯಲ್ಲಿ ಹೋಗುತ್ತೆ.)

'ಓಂ ಆತ್ಮನಿ ಚೈವಂ ವಿಚಿತ್ರಾಶ್ಚ ಹಿ ಓಂ' (೨-೧-೨೯) ಈ ಬ್ರಹ್ಮಸೂತ್ರದಲ್ಲಿ ಪರಮಾತ್ಮನಲ್ಲಿ ವಿಚಿತ್ರ ಶಕ್ತಿಗಳಿವೆ, ಎಂದು ಹೇಳುವುದರ ಮೂಲಕ 'ಪರಾಸ್ಯಶಕ್ತಿರ್ವಿವಿಧೈವ ಶ್ರೂಯತೇ' ಎಂಬೀ ಶ್ರುತಿಸಾಧ್ವಿಯು ಹಡೆದ ಕುಮಾರನಿಗೆ (ವಿಶೇಷಕ್ಕೆ) ಸೂತ್ರಕಾರರು ಜಾತಕರ್ಮವನ್ನು ಮಾಡಿದರು.

ಸೂತ್ರಾರ್ಥ : ಪರಮಾತ್ಮನಲ್ಲಿಯೇ ಇಂತಹ ವಿಚಿತ್ರವಾದ ಶಕ್ತಿಗಳು ಇವೆ. ಜೀವನಲ್ಲಿಲ್ಲ. 'ವಿಚಿತ್ರಶಕ್ತಿಃ ಪುರುಷಃ ಪುರಾಣಃ' ಇತ್ಯಾದಿ ಶ್ರುತಿಗಳಿಂದ ಇದು ಸಿದ್ಧವಾಗಿದೆ.

ಶ್ರುತಿಗಳಿಗೆ ಅಭಿಮಾನಿ ರಮಾದೇವಿ. ಆಕೆಯ ಭರ್ತನಾದ ಬಾದರಾಯಣರೂಪೀ ನಾರಾಯಣನು ಆಕೆಯು ಹಡೆದ ಪುತ್ರನಿಗೆ ಜಾತಕರ್ಮ ಮಾಡುವುದು (ಶ್ರುತ್ಯರ್ಥವನ್ನು ನಿರ್ಣಯಮಾಡುವುದರ ಮೂಲಕ ವೃದ್ಧೀಕರಿಸುವುದು) ಯೋಗ್ಯವೇ ಸರಿ.

ನೇಹ ನಾನೇತಿ ವಾಕ್ ತಸ್ಮಾನ್ನಾನಾತ್ವಾಖ್ಯಂ ಮೃಗೀಶಿಶುಂ ।
ಖಾದನ್ನ್ಯಪಿ ಸ್ವಸುಃ ಪುತ್ರಂ ಸೂತ್ರಕಾರೇಣ ಚಾದೃತಂ ॥ ೩೨೯ ॥

ನೈನಂ ಸಾ ಖಾದಯೇದ್ಯಸ್ಮಾಲ್ಲೋ(ಕೇ)ಕವ್ಯಾಘ್ರೀ ಚ ಪುತ್ರಕಾನ್
ನಯನ್ತ್ಯಪಿ ಸ್ವದಂಷ್ಟ್ರಾಭ್ಯಾಂ ಪೀಡಯೇನ್ನೇತಿ ಚ ಶ್ರುತಿಃ ॥ ೩೩೦ ॥

ಈದೃಶೀ ಸಾ ಶಕ್ತಿರೂಪಂ ಘುಟಿಕಂ ಸ್ವಸ್ವಸುಃ ಸುತಂ ।
ದುರ್ವಾದಿಭ್ಯಃ ಕಿರಾತೇಭ್ಯೋ ರಕ್ಷೇದೇವೇತಿ ಮೇ ಮತಿಃ ॥ ೩೩೧ ॥

ಆದ್ದರಿಂದ 'ನೇಹ ನಾನಾಸ್ತಿ' ಎಂಬ ಶ್ರುತಿಯು ಭೇದವೆಂಬ ಜಿಂಕೆಮರಿಯನ್ನು ತಿಂದರೂ 'ಪರಾಸ್ಯಶಕ್ತಿಃ' ಎಂಬ ಶ್ರುತಿರೂಪ ತನ್ನ

ಸಹೋದರಿಯು ಹಡೆದ ಮತ್ತು ಸೂತ್ರಕಾರರಿಂದ ಆದರಿಸಲ್ಪಟ್ಟ ಮಗನಾದ ವಿಶೇಷ ರೂಪಶಕ್ತಿಯನ್ನು ತಿನ್ನುವುದಿಲ್ಲ. ಲೋಕದಲ್ಲಿ ಹೆಣ್ಣುಹುಲಿಯು ತನ್ನ ಪುತ್ರರನ್ನು ತನ್ನ ಹಲ್ಲಿನಿಂದ ತೆಗೆದುಕೊಂಡು ಹೋದರೂ ಅವುಗಳನ್ನು ಪೀಡಿಸುವುದಿಲ್ಲ. ಪರಮಾತ್ಮನಲ್ಲಿ ಸರ್ವಜ್ಞತ್ವಾದಿ ಗುಣಗಳಿದ್ದರೂ ಅವುಗಳಿಗೆ ಪರಮಾತ್ಮನಿಂದ ಭೇದವಿಲ್ಲೆಂಬುದನ್ನು ಸಾಧಿಸಿಕೊಡುವ ಶಕ್ತಿರೂಪ ವಿಶೇಷ ವೆಂಬ ತನ್ನ ಸಹೋದರಿಯ ಮಗನನ್ನು ದುರ್ವಾದಿಗಳೆಂಬ ಬೇಡರಿಂದ 'ನೇಹ ನಾನೇತಿ' ಶ್ರುತಿಯು ರಕ್ಷಿಸಲೇ ರಕ್ಷಿಸುತ್ತದೆ, ಎಂದು ನನ್ನ ಮತ.

ತಸ್ಮಾದೇಕಸ್ಯ ಸತ್ತ್ವೇಽಪಿ ಯೋಽನ್ಯನಾಶಃ ಪುರೋದಿತಃ ।
ಭೇದೈಕಸಾಧ್ಯಸ್ತಂ ತ್ವೇಕಂ ವಿನಾ ಕಾರ್ಯಾಂತರಂ ಶ್ರುತಮ್ ॥
ಸರ್ವಂಚ ಘಟಯೇದ್ಯಸ್ತು ಶಕ್ತ್ಯಾಖ್ಯೋಽಯಂ ಕುಮಾರಕಃ ।
ಯಮಸೂತ ಶ್ರುತಿವ್ಯಾಘ್ರೀ ಯಃ ಸ್ತುತಃ ಸೂತ್ರಕಾರಿಣಾ ॥೩೩॥
ಯೋ ವಿಷ್ಣೋಃ ಪೋಷಯೇದ್ಧರ್ಮಾನ್ನ ಕುತೋಽಪ್ಯಸ್ಯ ಸಾಧ್ವಸಮ್ ।

ಹಿಂದೆ (೩೧ನೇ ಶ್ಲೋಕದಲ್ಲಿ) ಹೇಳಿದಂತೆ ಒಂದು ಉಳಿದರೂ ಮತ್ತೊಂದು ನಾಶವಾಗುವುದು ಆವೆರಡರ ಪರಸ್ಪರ ಭೇದದಿಂದಲೇ ಸಾಧ್ಯ. (ಭೇದವಿದ್ದೆಡೆಯಲ್ಲಿಯೇ ಇದು ಕಂಡುಬಂದಿದೆ) ಈ ಒಂದು ಭೇದಕಾರ್ಯ ವನ್ನು ಬಿಟ್ಟು ಶ್ರುತಿಯಲ್ಲಿ ಹೇಳಿರುವ ಎಲ್ಲ ಭೇದಕಾರ್ಯವನ್ನೂ ಘಟನೆ ಮಾಡುವ ಯಾವ ವಿಶೇಷವೆಂಬ ಪರಮಾತ್ಮನಲ್ಲಿನ ಶಕ್ತಿರೂಪವಾದ ಕುಮಾರ ನನ್ನು ಶ್ರುತಿಯೆಂಬ ಹೆಣ್ಣುಹುಲಿಯು ಹಡೆದಳೋ, ಯಾವ ಕುಮಾರನು ಸೂತ್ರಕಾರರಿಂದ ಸ್ತುತಿಸಲ್ಪಟ್ಟನೋ ಯಾವನು ವಿಷ್ಣುವಿನ ಧರ್ಮಗಳನ್ನು ರಕ್ಷಿಸಿಯಾನೋ, ಆ ಕುಮಾರನಿಗೆ ಭಯವು ಯಾವುದರಿಂದಲೂ ಇಲ್ಲ. 'ವಿಶೇಷ'ವನ್ನು ನಿರಾಕರಿಸುವುದು ಅಸಾಧ್ಯವೆಂದು ಅಭಿಪ್ರಾಯ.

ತ್ವಯಾಪಿ ಸ್ವೀಯಕಾರ್ಯಾರ್ಥಂ ಸ್ವೀಕಾರ್ಯೋಽಯಂ ಮಯೈವ ನ ॥ ೩೪ ॥

ಈ 'ವಿಶೇಷ'ವು ನನ್ನಿಂದ ಮಾತ್ರಗೆ ಸ್ವೀಕರಿಸಲ್ಪಡಬೇಕೆಂದಲ್ಲ. ನಿನ್ನಿಂದಲೂ ನಿನ್ನ ಕಾರ್ಯಕ್ಕೋಸ್ಕರ ಸ್ವೀಕರಿಸಲ್ಪಡಬೇಕು.

ನೋ ಚೇದ್ಬ್ರಹ್ಮಸ್ವರೂಪಸ್ಯ ಸುಖಸ್ಯಾನುಭವಃ ಕಥಂ ।
ಕ್ರಮಾದೈಕ್ಯಸುಖಜ್ಞಾನನಿತ್ಯತ್ವಾದಿ ಗುಣಸ್ಯ ಚ ॥ ೩೩ ॥
ತವಾಪ್ಯವಶ್ಯಂ ಕಿಂ ಬ್ರಹ್ಮಧರ್ಮತ್ವಘಟನಾಽಮುನಾ ।
ಘಟಕೇನ ವಿನಾ ಭೂಯಾನ್ಮುಕ್ತೇಃ ಸಾಫಲ್ಯಸಿದ್ಧಯೇ ॥ ೩೪ ॥

ವಿಶೇಷ ಎಂದು ಹೇಳುವ ಬ್ರಹ್ಮನಲ್ಲಿರುವ ಶಕ್ತಿಯನ್ನು ನೀನು ಒಪ್ಪುವುದಿಲ್ಲ. ಬ್ರಹ್ಮನ ಸ್ವರೂಪಭೂತವಾದ ಸುಖದ ಅನುಭವವು ಹೇಗೆ ಆದೀತು? ಕ್ರಮವಾಗಿ ಐಕ್ಯ ಸುಖ ಜ್ಞಾನ ನಿತ್ಯತ್ವ ಇವೆಲ್ಲವನ್ನೂ ನೀನು ಬ್ರಹ್ಮನಲ್ಲಿ ಒಪ್ಪಬೇಕು. ಈ ಧರ್ಮಗಳು ಬ್ರಹ್ಮನಲ್ಲಿ ಘಟನವಾಗಬೇಕಾದಲ್ಲಿ ಘಟನ ಮಾಡಿಸಿಕೊಡುವ ಈ 'ವಿಶೇಷ'ವನ್ನು ಬಿಟ್ಟು ಹೇಗೆ ಆದೀತು? ಮುಕ್ತಿಯು ಪುರುಷಾರ್ಥವೆಂದು ಒಪ್ಪಬೇಕಾದಲ್ಲಿ ಮುಕ್ತಿಯು ಬ್ರಹ್ಮಾನಂದಾನುಭವವೆಂದು ನೀನು ಹೇಳಲೇಬೇಕು. (ಹಾಗೆ ಹೇಳಿಯೂ ಇದ್ದಿ.)

ದ್ವಯೋಶ್ಚ ಬ್ರಹ್ಮರೂಪತ್ವಾದ್ಭೇದೋ ನಾಸ್ತಿ ಪರಸ್ಯ ಚ ।
ವಾಚ್ಯಃ ಷಷ್ಠ್ಯರ್ಥಸಂಬಂಧಸ್ತತ್ರ ತಚ್ಛಕ್ತಿತಃ ಪರಮ್ ॥ ೩೫ ॥

ಜ್ಞಾನಾನಂದಗಳು ಬ್ರಹ್ಮಸ್ವರೂಪವಾದ್ದರಿಂದ ಅವು ಬ್ರಹ್ಮನಿಂದ ಬೇರೆಯಲ್ಲ. ಆದ್ದರಿಂದ ಬ್ರಹ್ಮನ ಜ್ಞಾನ, ಬ್ರಹ್ಮನ ಆನಂದ ಎಂಬುದಾಗಿ ಪ್ರಯೋಗದಲ್ಲಿ ಕಾಣುವ ಷಷ್ಠೀವಿಭಕ್ತಿಯಿಂದ ಸೂಚಿತವಾದ ಭೇದವ್ಯವಹಾರವು ಕೇವಲ 'ವಿಶೇಷ'ವೆಂಬ ಶಕ್ತಿಯಿಂದ ಸಾಧ್ಯವೆಂದು ನೀನು ಕೂಡ ಹೇಳಬೇಕು.

ಶಕ್ತಿರ್ವಿಶೇಷಯೇದ್ಯಸ್ಮಾದ್ವಿಶೇಷ ಇತಿ ಕಥ್ಯತೇ ।
ನ ಚ ಕಾರ್ಯಬ(ಲೋ)ಲಾನ್ನೇಯೋ ನ ಹಿ ಕಾರ್ಯಮಕಾರಣಂ ॥

ಈ ಶಕ್ತಿಯು ಭೇದವಿಲ್ಲದ ಬ್ರಹ್ಮಜ್ಞಾನ ಸುಖ ಇವುಗಳನ್ನು ವಿಶೇಷಿಸುತ್ತದೆ, ಎಂದರೆ ವಿವೇಕಿಸುತ್ತದೆ. ಆದ್ದರಿಂದ 'ವಿಶೇಷ'ವೆಂದು ಕರೆಯಲ್ಪಡುತ್ತದೆ. (ವಿಶೇಷಯತಿ ಇತಿ ವಿಶೇಷಃ) ವಿಶೇಷಯತಿ = Discriminates. ಹೀಗೆ ಒಪ್ಪದಿದ್ದರೆ, ಕಾರಣವಿಲ್ಲದೆ ಕಾರ್ಯವಾಯಿತೆಂದು ಹೇಳಬೇಕಾದೀತು. ಹಾಗೆ ಉಂಟೇನು? ಇಲ್ಲ.

ಸುಖರೂಪತ್ವಮಾತ್ರಾಚ್ಚ ಜ್ಞಾನರೂಪತ್ವಮಾತ್ರತಃ ।
ಫಲತ್ವಂ ಯದಿ ಕಥ್ಯೇತ ಸುಖಸ್ಯ ಜ್ಞಾನಿಕಾಂ ವಿನಾ ॥ ೩೩೯ ॥

ತರ್ಹಿ ಜೀವಸ್ಯೇವ ರೋಮಹರ್ಷಃ ಸ್ಯಾನ್ಮನಸೋಽಪಿ ಚ ।
ಯಸ್ಮಾದಿದಂ ಜಡಜ್ಞಾನಸುಖರೂಪಸ್ಯ ತೇ ಮತೇ ॥ ೩೪೦ ॥

ಮನಸೋಽಪ್ಯಸ್ತಿ ಕೇನಾಹುಃ ಸುಖಸ್ಯಾನುಭವಂ ಫಲಂ ।
ಸುಖಸ್ಯಾನುಭವತ್ವಂ ಚ ಚಿತ ಏವ ನ ಚೇತಸಃ ॥ ೩೪೧ ॥

ಅವತಾರಿಕಾ : ಮುಕ್ತಿಯು ಫಲರೂಪವಾಗಬೇಕು. ಹಾಗಿಲ್ಲದಲ್ಲಿ, ಅದಕ್ಕಾಗಿ ಯಾರೂ ಪ್ರಯತ್ನಪಡಲಾರರು. ಮುಕ್ತಿಯಲ್ಲಿ ಜೀವನು ಸುಖಾನುಭವವುಳ್ಳವನು. ಸುಖವನ್ನು ಅನುಭವಿಸುತ್ತಾನೆ ಎಂದರ್ಥ. ಅಂತು ಮುಕ್ತಜೀವನು ಸುಖಸ್ವರೂಪನೂ ಆಗಿ, 'ಅಹಂ ಸುಖೀ' ಎಂದು ಸುಖವನ್ನು ಅನುಭವಿಸುವವನೂ ಆಗಿದ್ದಾನೆ. ಇದು ನಮ್ಮ ಸಿದ್ಧಾಂತ. ಇವೆರಡೂ ಒಂದೇ ವ್ಯಕ್ತಿಯಲ್ಲಿ ಹೇಗೆ ಸಾಧ್ಯ? ಮೇಲೆ ನಿರೂಪಿಸಿರುವ ವಿಶೇಷದಿಂದ ಸಾಧ್ಯ.

ಸುಖದ ಅನುಭವವಿಲ್ಲದೇ ಕೇವಲ ಸುಖಸ್ವರೂಪವಾಗಿರುವುದು ಫಲ ರೂಪವಾಗುವುದಿಲ್ಲ. ಎಲ್ಲರೂ ಆನಂದವನ್ನನುಭವಿಸಬೇಕೆಂದು ಇಚ್ಛಿಸುತ್ತಾರೆಯೇ ಹೊರ್ತು, ನಾನು ಆನಂದಸ್ವರೂಪನಾಗಬೇಕೆಂದು ಬಯಸುವುದಿಲ್ಲ. ಅನುಭವಕ್ಕೆ ಬರದ ಆನಂದದಿಂದ ಏನು ಫಲ ?

ಶ್ಲೋಕಾರ್ಥ : ಸುಖದ ಅನುಭವವಿಲ್ಲದೇ ಸುಖರೂಪತ್ವಮಾತ್ರದಿಂದ ಮತ್ತು ಜ್ಞಾನತ್ವರೂಪಮಾತ್ರದಿಂದ ಫಲತ್ವವನ್ನು ಹೇಳುತ್ತೇನೆ ಎಂದು ನೀನು ಅಂದಲ್ಲಿ ಸುಖವನ್ನನುಭವಿಸುವ ಜೀವನಿಗೆ ಹೇಗೋ ಹಾಗೆ ಸುಖ ರೂಪವಾಗಿ ಪರಿಣಾಮಹೊಂದಿದ, ಆದ್ದರಿಂದಲೇ ಸುಖಸ್ವರೂಪವನ್ನು ತಾಳಿದ ಮನಸ್ಸಿಗೂ ರೋಮಾಂಚವನ್ನು ಹೇಳಬೇಕಾಗಿದೀತು. ಸುಖವು ಮನೋವೃತ್ತಿರೂಪವಾದದ್ದು. ಇದು ನಿನ್ನ ಮತ.

ಸುಖ ನನಗಿದೆ ಎಂಬ ಅನುಭವವು ಮನೆಯು ನನಗಿದೆ ಎಂಬುವ ಹಾಗೆ, ಚೇತನನಿಗೆ. ಸುಖವಾಗಿ ಪರಿಣಾಮವನ್ನು ಹೊಂದಿದ, ಆದ್ದರಿಂದಲೇ

ಸುಖಸ್ವರೂಪವಾದ ಮನಸ್ಸಿನ ವೃತ್ತಿಯಲ್ಲಿ ಇಲ್ಲಿ ನನ್ನ ಸುಖದಿಂದ ರೋಮಾಂಚವು ನನಗಾಯಿತು ಎಂದು ಜೀವನಿಗೇ ಅನುಭವವು. ಲೋಕ ವ್ಯವಹಾರವೂ ಹೀಗೇನೇ. ಸುಖವಾಗಿ ಪರಿಣಮಿಸದ ಜಡ ಮನಸ್ಸಿಗೆ ರೋಮಾಂಚವಾಗಿಲ್ಲ. ಹಾಗೆ ವ್ಯವಹಾರವೂ ಇಲ್ಲ. ಆದ್ದರಿಂದ ಸುಖಾನುಭವವೇ ಫಲವೆಂದು ಹೇಳಬೇಕು. ಸುಖಸ್ವರೂಪವಾಗಿರುವುದಲ್ಲ.

ಘಟಾದೀನಾಮನುಭ(ವೋ)ವೇ ಮನೋ ನತು ಸುಖಸ್ಯ ಚ ।
ಸುಖಸ್ಯ ಜ್ಞಾನಮೇವಾತ್ರ ಫಲಂ ವಾಚ್ಯಂ ತ್ವಯಾऽಪಿ ಚ ॥೩೪೨॥

ಘಟಾದಿಗಳ ಅನುಭವವು (ಇದು ಘಟ ಎಂಬ ಜ್ಞಾನವು) ಮನೋವೃತ್ತಿ (ಪರಿಣಾಮ) ರೂಪವಾದದ್ದು. ಸುಖದ ಅನುಭವವು ಹಾಗಲ್ಲ. ಹೀಗೆ ಒಪ್ಪಿರುವ ನೀನೂ ಕೂಡ ಸುಖದ ಜ್ಞಾನವೇ (ಅನುಭವವೇ) ಫಲವೆಂದು ಹೇಳಬೇಕು.

ಸುಖಸ್ಯಾನುಭವೋ ಯಸ್ತು ಸ ಸಾಕ್ಷೀತಿ ಮತಂ ತವ ।
ಅತಃ ಸುಖಸ್ಯಾನುಭವೋ ನ ಮನೋऽಭೂನ್ಮತೇऽಪಿ ತೇ ॥ ೩೪೩ ॥

ಸುಖದ ಅನುಭವವು ಯಾವುದೋ ಅದು ಸಾಕ್ಷಿ ಎಂದು ನಿನ್ನ ಮತ. ಆದ್ದರಿಂದ ನಿನ್ನ ಮತದಲ್ಲಿಯೂ ಕೂಡ ಸುಖದ ಅನುಭವವು ಮನಸ್ಸಾಗಲಿಲ್ಲ. (ಮನೋವೃತ್ತಿಯಾಗಲಿಲ್ಲ).

ತಸ್ಮಾನ್ಮನೋ ನ ಫಲವತ್ತವಾऽಪಿ ಚ ಮಮಾऽಪಿ ಚ ।
ಸುಖಾನುಭವರೂಪತ್ವಾದಾತ್ಮೈವ ಫಲವಾನಭೂತ್ ॥ ೩೪೪ ॥

ಆದ್ದರಿಂದ ನಿನಗೂ ನನಗೂ ಕೂಡ ಮನಸ್ಸು ಫಲವುಳ್ಳದೆಂದು ಆಗಲಿಲ್ಲ. ಸುಖಾನುಭವರೂಪನಾದ್ದರಿಂದ ಆತ್ಮನೇ (ಜೀವನೇ) ಫಲವುಳ್ಳವನಾದನು.

ಇದಾನೀಂ ಮಾನಸಸುಖೇ ಜ್ಞಾನಂ ಚ ಘಟತೇ ತವ ।
ಆತ್ಮಭಿನ್ನೇ ಜಡಸುಖೇ ಷಷ್ಠ್ಯರ್ಥಸ್ಯಾಪಿ ಸಂಭವಾತ್ ॥ ೩೪೫ ॥

ಈಗ ಆತ್ಮನಿಂದ ಭಿನ್ನವಾದ (ಮನೋವೃತ್ತಿರೂಪವಾದ) ಜಡಸುಖದ ವಿಷಯದಲ್ಲಿಯೂ ಸುಖದ ಜ್ಞಾನವೆಂಬುದಾಗಿ ಷಷ್ಠೀವಿಭಕ್ತಿಯು ಸಂಭವ

ವಾಗುವುದರಿಂದ ನಿನಗೂ ಕೂಡ ಮನಸ್ಸಿನ ಪರಿಣಾಮರೂಪವಾದ ಸುಖದ ವಿಷಯದಲ್ಲಿಯೂ ಸುಖದ ಜ್ಞಾನವೆಂದು (ಅನುಭವವೆಂದು) ಘಟನವಾಗುತ್ತೆ, ಅಂದರೆ ನೀನೂ ಒಪ್ಪಬೇಕು.

ಮುಕ್ತೌ ತು ಸ್ವಸುಖಸ್ಯೈವ ಜ್ಞಾನಂ ವಾಚ್ಯಂ ಫಲಾರ್ಥಿನಾ ।
ಭೇದಾಭಾವಾತ್ತನ್ನಿಮಿತ್ತ ಸಂಬಂಧಶ್ಚ ತಯೋರ್ನಹಿ ॥ ೩೪೬ ॥

ಅತಸ್ತತ್ತತ್ಸ್ವಭಾವಾಖ್ಯವಿಶೇಷೇಣೈವ ಕೇವಲಂ ।
ಸುಖಸ್ಯ ಜ್ಞಾ(ನಿ)ನತಾ ವಾಚ್ಯಾ ತ್ವಯಾಽಪಿ ಚ ಮಯಾಽಪಿ ಚ ॥

ಮುಕ್ತಿಯಲ್ಲಾದರೋ ಫಲವನ್ನು ಅಪೇಕ್ಷಿಸುವವನಿಂದ ಸ್ವರೂಪ ಸುಖದ ಜ್ಞಾನವು (ಅನುಭವವು) ಹೇಳಲ್ಪಡಬೇಕು. ಅಂದರೆ ಅವನು ಒಪ್ಪಬೇಕು. (ಮುಕ್ತಿಯಲ್ಲಿ ಯಾವ ಭೇದವೂ ಇಲ್ಲವೆಂದು ಒಪ್ಪಿರುವುದ ರಿಂದ). ಸ್ವರೂಪ ಸುಖಕ್ಕೂ ಅದರ ಜ್ಞಾನಕ್ಕೂ (ಅನುಭವಕ್ಕೂ) ಭೇದ ವಿಲ್ಲವಾದ್ದರಿಂದ ಸುಖಕ್ಕೂ ಸುಖದ ಜ್ಞಾನಕ್ಕೂ ಭೇದನಿಮಿತ್ತಕವಾದ ಸಂಬಂಧವು ಇಲ್ಲ. ಹೀಗಿರುವುದರಿಂದ ನೀನೂ, ನಾನೂ ಕೂಡ 'ಸುಖದ ಅನುಭವ' ಎಂದು ಹೇಳುವಾಗ ಷಷ್ಠೀವಿಭಕ್ತಿಯಿಂದ ಸೂಚಿತವಾದ ಸಂಬಂಧ ವನ್ನು (ಭೇದಪ್ರತಿನಿಧಿಯಾದ) ವಸ್ತುವಿನ ಸ್ವಭಾವವಾದ 'ವಿಶೇಷ' ವೆಂಬ ಶಕ್ತಿಯಿಂದ ಆಗುತ್ತೆಂದು ಹೇಳಬೇಕು (ಸಮರ್ಥಿಸಬೇಕು).

ಐಕ್ಯಂ ಚ ಮುಕ್ತಿಕಾಲೀನಂ ತಚ್ಚ ಬ್ರಹ್ಮಾತ್ಮಕಂ ತವ ।
ಕಸ್ಯೈಕ್ಯಮಿತಿ ಪೃಚ್ಛನ್ತಂ ಪ್ರತ್ಯೈಕ್ಯಂ ಬ್ರಹ್ಮಣಸ್ತ್ವಿತಿ ॥ ೩೪೮ ॥

ತ್ವಯಾಽಪಿ ಬ್ರಹ್ಮಸಂಬಂಧಸ್ತಸ್ಯ ವಾಚ್ಯೋ ಮಯೈವ ನ ।

ನಿನ್ನ ಮತದಲ್ಲಿ ಐಕ್ಯವು ಮುಕ್ತಿಕಾಲದಲ್ಲಿ ಉಂಟು. ಅದಾದರೋ ಬ್ರಹ್ಮಸ್ವರೂಪಭೂತವಾದದ್ದು. ಯಾರ ಐಕ್ಯವೆಂದು ಪ್ರಶ್ನೆಮಾಡುವವನಿಗೆ ಬ್ರಹ್ಮನ ಐಕ್ಯವೆಂದು ನಿನ್ನಿಂದಲೂ ಕೂಡ (ಐಕ್ಯವನ್ನು) ಬ್ರಹ್ಮಸಂಬಂಧಿ ಯಾಗಿ ಹೇಳಲ್ಪಡಬೇಕು. ನನ್ನಿಂದ ಮಾತ್ರಗೆ ಅಲ್ಲ.

ತಸ್ಮಾದ್ಧರ್ಮಸ್ಯ ತಾದ್ರೂಪ್ಯಂ ತದ್ಧರ್ಮತ್ವಂ ಚ ಸರ್ವಥಾ ॥

ತ್ವಯಾ ಮಯಾ ಚ ವಕ್ತವ್ಯಂ ಘಟನೀಯಂ ಚ ಕೇನಚಿತ್ ।

ಆದ್ದರಿಂದ ಬ್ರಹ್ಮನ ಧರ್ಮಕ್ಕೆ ಬ್ರಹ್ಮಸ್ವರೂಪವಾಗಿರುವುದೂ ಅದರ ಧರ್ಮವಾಗಿರುವುದೂ ಸರ್ವಥಾ ನಿನ್ನಿಂದಲೂ ನನ್ನಿಂದಲೂ ಹೇಳಲ್ಪಡಬೇಕು. ಯಾವುದಾದರೂ ಒಂದರಿಂದ ಇದನ್ನು ಸಮರ್ಥಿಸಲೂ ಬೇಕು.

ಮೋಕ್ಷೇ ಸುಖಸ್ಯ ಜ್ಞಾನಾಖ್ಯಸಂಬಂಧಘಟಕಸ್ತು ಯಃ ॥ ೩೫೦ ॥

ಸ ವಿಶೇಷೋ ಯತ್ರ ಯತ್ರ ಭೇದಹೀನೇ ಚ ವಸ್ತುನಿ ।
ಭೇದಕಾರ್ಯಂ ದೃಶ್ಯತೇ ಚೇತ್ತತ್ಸರ್ವಮಪಿ ನಿರ್ವಹೇತ್ ॥೩೫೧॥

ಮೋಕ್ಷದಲ್ಲಿ ಸುಖಜ್ಞಾನ ಉಂಟು ಎನ್ನುವಾಗ ಸುಖಕ್ಕೆ ಜ್ಞಾನವೆಂಬುದರ ಸಂಬಂಧವನ್ನು ಸಮರ್ಥಿಸಿಕೊಡುವುದು ಯಾವುದೋ ಅಂತಹ ವಿಶೇಷವು ಎಲ್ಲೆಲ್ಲಿ ಭೇದವಿಲ್ಲದ ವಸ್ತುವಿನಲ್ಲಿ ಭೇದಕಾರ್ಯವು ಕಂಡು ಬರುತ್ತೆಯೋ ಆ ಎಲ್ಲಾ ಭೇದಕಾರ್ಯವನ್ನೂ ನಿರ್ವಹಿಸೀತು. ವಿಚಾರ ಮಾಡುವುದು ಮನುಷ್ಯನಿಂದ ಸಾಧ್ಯವೆಂದಾಗ ಎಲ್ಲಾ ವಿಚಾರವನ್ನೂ ಒಬ್ಬ ಮನುಷ್ಯ ಮಾಡುತ್ತಾನೆ ಎಂಬುದು ಹೇಗಲ್ಲವೋ ಹಾಗೆ ಎಲ್ಲ ಕಡೆಯಲ್ಲಿಯೂ ಒಂದೇ ವಿಶೇಷ ಮಾಡುತ್ತೆಂದು ಅಭಿಪ್ರಾಯವಲ್ಲ.

ಯದೇಕಪಾದಪಚ್ಛೇತ್ತಾ ಪರಶುಃ ಪಾದಪಾನ್ತರಮ್ ।
ಯದಾ ಯದಾ ಛಿದಾಪೇಕ್ಷಾ ಛಿನತ್ತ್ಯೇವ ತದಾ ತದಾ ॥ ೩೫೨ ॥

ಯಾವಾಗ ಕೊಡಲಿಯು ಒಂದು ಗಿಡವನ್ನು ಕತ್ತರಿಸುತ್ತದೆಯೋ ಆಗ ಕೊಡಲಿಯು ಬೇರೆ ಗಿಡವನ್ನು ಕತ್ತರಿಸುವ ಅಪೇಕ್ಷೆಯುಂಟಾದಾಗೆಲ್ಲಾ ಕತ್ತರಿಸಲೇ ಕತ್ತರಿಸುತ್ತದೆ.

ಮೂಲರೂಪಾಭೇದವನ್ತೋಽಪ್ಯವತಾರಾ ಯಥಾ ಹರೇಃ ।
ಸನ್ತ್ಯೇವ ತದ್ವತ್ತದ್ಧರ್ಮಾಃ ಸಂತು ಕಿಂ ತೇ ಮತಂ ಗತಮ್ ॥

ಹರಿಯ ಅವತಾರರೂಪಗಳು ಹೇಗೆ ಮೂಲರೂಪದಿಂದ ಅಭೇದವುಳ್ಳವುಗಳೋ ಅದೇ ರೀತಿಯಲ್ಲಿ ಆ ಹರಿಧರ್ಮಗಳೂ ಕೂಡ ಹರಿಯಿಂದ ಅಭಿನ್ನಗಳಾಗಲೇನು? ಅದರಿಂದ ನಿನ್ನ ಮತಕ್ಕೇನು ಹಾನಿ ಬಂತು?

ಗುಣಾಭೇದೋಽಪಿ ಕಥಿತೋ ಭೃಗುವಲ್ಲೀಶ್ರುತೌ ಸ್ಫುಟಮ್ ।
ಆನಂದಂ ಬ್ರಹ್ಮಣೋ ವಿದ್ವಾನಿತ್ಯಾನಂದಸ್ಯ ಸೈವ ಹಿ ॥ ೩೫ ॥

ಬ್ರಹ್ಮಧರ್ಮತ್ವಮುಪ್ಯಾಹ ತೇನೈಕ್ಯೇಽಪಿ ಹಿ ಧರ್ಮತಾ ।
ಧರ್ಮಿತ್ವಂ ಚ ಕಥಂ ನಾಭೂದ್ಬ್ರಹ್ಮಣಸ್ತತ್ಸುಖಸ್ಯ ಚ ॥ ೩೬ ॥

ಗುಣದಿಂದ ಅಭೇದವೂ ಕೂಡ ಭೃಗುವಲ್ಲೀ ಶ್ರುತಿಯಲ್ಲಿ "ಆನಂದಂ ಬ್ರಹ್ಮೇತಿ ವ್ಯಜಾನಾತ್" ಎಂದು ಸ್ಫುಟವಾಗಿ ಹೇಳಿದೆ. ಅದೇ ಶ್ರುತಿಯು "ಆನಂದಂ ಬ್ರಹ್ಮಣೋ ವಿದ್ವಾನ್" ಎಂದು ಬ್ರಹ್ಮನ ಆನಂದವನ್ನು ತಿಳಿದವನು ಎಂಬಲ್ಲಿ, ಆನಂದಕ್ಕೆ ಬ್ರಹ್ಮಧರ್ಮತ್ವವನ್ನು ಹೇಳುತ್ತೆ. ಆದ್ದರಿಂದ ಬ್ರಹ್ಮಗೂ ಬ್ರಹ್ಮನ ಸುಖಕ್ಕೂ ಐಕ್ಯವಿದ್ದರೂ ಬ್ರಹ್ಮನು ಮತ್ತು ಸುಖವು ಧರ್ಮವೂ ಮತ್ತು ಧರ್ಮಿಯೂ ಹೇಗೆ ಆಗದೇಹೋದಾವು ?

ಗುಣಾನನ್ತ್ಯಂ ಚ ಗುಣಿತಾ ಮಯ್ಯನನ್ತಗುಣೇತ್ಯಿತಿ ।
ಯತೋ ಭಾಗವತೇ ಚೋಕ್ತಂ ತತಃ ಪ್ರಾಮಾಣಿಕಾವುಭೌ ॥

ಗುಣಗಳಿಗೆ ಅನಂತತ್ವವನ್ನೂ ಆ ಗುಣಗಳು ತನ್ನಲ್ಲಿವೆಯೆಂದೂನೂ ಭಾಗವತದಲ್ಲಿ ಶ್ರೀಕೃಷ್ಣನು ಹೇಳಿರುವುದರಿಂದ ಒಬ್ಬ ಬ್ರಹ್ಮನೇ ಗುಣಿಯೂ, ಗುಣವೂ ಎರಡೂ ಆಗಿರುವುದು ಪ್ರಾಮಾಣಿಕವಾದದ್ದು.

ಮಯ್ಯನಂತಗುಣೇಽನಂತೇ ಗುಣತೋಽನಂತವಿಗ್ರಹೇ ।
ಯದಾಽಽಸೀತ್ ತತ ಏವಾದ್ಯಃ ಸ್ವಯಂಭೂಃ ಸಮಭೂದಜಃ ॥
(ಭಾಗವತ ೬-೪-೪೮)

ಅನಂತ ಗುಣವುಳ್ಳ ಪ್ರತಿಯೊಂದು ಗುಣದಿಂದಲೂ ಅನಂತನಾದ ಮತ್ತು ಅನಂತ ರೂಪವುಳ್ಳ ಆದ್ದರಿಂದಲೇ ಅನಂತನೆಂದು ಕರೆಸಿಕೊಳ್ಳಲ್ಪಡುವ ನನ್ನಲ್ಲಿ, ಯಾವ ನಾಭಿಕಮಲವು ಸೃಷ್ಟಿಯ ಆದಿಯಲ್ಲಿ ಉಂಟಾಯಿತೋ ಅದರ ದೆಶೆಯಿಂದ ಎಲ್ಲರಿಗೂ ಮೊದಲನೆಯವನಾದ 'ಸ್ವಯಂ' ಶಬ್ದದಿಂದಲೂ 'ಅ' ಶಬ್ದದಿಂದಲೂ ಕರೆಸಿಕೊಳ್ಳಲ್ಪಡುವ ನನ್ನಿಂದ ಹುಟ್ಟಿದವನಾದ್ದರಿಂದ 'ಅಜಃ' 'ಸ್ವಯಂಭೂಃ' ಎಂದು ಕರೆಸಿಕೊಳ್ಳುವ ಚತುರ್ಮುಖ ಬ್ರಹ್ಮನು ಹುಟ್ಟಿದನು.

ಇಹಾಪಿ ಧರ್ಮಾನಿತಿ ವಾಗ್ಧರ್ಮಾಂಸ್ತದ್ಬಹುತಾಮಪಿ ।
ಅಂಗೀಕೃತ್ಯ ಮಿಥಸ್ತೇಷಾಂ ಪಾರ್ಥಕ್ಯಮಾತ್ರಂ ನಿಷೇಧತಿ ॥ ೩೫೭ ॥

ಹಾಗೆಯೇ ಇಲ್ಲಿಯೂ ಕೂಡ ಶ್ರುತಿಯು "ಏವಂ ಧರ್ಮಾನ್ ಪೃಥಕ್ ಪಶ್ಯನ್" ಎಂದು ಧರ್ಮಗಳನ್ನೂ ಆ ಧರ್ಮಗಳ ಬಹುತ್ವವನ್ನೂ ಅಂಗೀಕರಿಸಿ ಅವುಗಳಿಗೆ ಪರಸ್ಪರ ಭೇದವನ್ನು ಮಟ್ಟಿಗೆ 'ನೇಹ ನಾನಾಸ್ತಿ ಕಿಂಚನ' ಎಂದು ನಿಷೇಧಿಸುತ್ತದೆ.

ಯದಿ ಧರ್ಮನಿಷೇಧೋಽಪಿ ಶ್ರುತೇರಭಿಮತಸ್ತದಾ ।
ಏವಂ ಧರ್ಮಾಂಶ್ಚ ಸಂಪಶ್ಯಂಸ್ತಾನೇವಾನುವಿಧಾವತಿ ॥ ೩೫೮ ॥
ಇತಿ ಬ್ರೂಯಾದಿಯಂ ವಾಕ್ತು ಭೇದಮಾತ್ರನಿಷೇಧಿಕಾ ।

ಶ್ರುತಿಗೆ ಬ್ರಹ್ಮಧರ್ಮಗಳನ್ನು ನಿಷೇಧ ಮಾಡುವುದರಲ್ಲಿ ಅಭಿಪ್ರಾಯ ಇದ್ದಲ್ಲಿ "ಏವಂ ಧರ್ಮಾನ್ ಪಶ್ಯನ್ ತಾನೇವಾನುವಿಧಾವತಿ" ಎಂದು ಹೇಳಬೇಕಾಗಿತ್ತು. ಆಗ "ಹೀಗೆ ಧರ್ಮಗಳನ್ನು ನೋಡುವವನು ನಷ್ಟನಾಗುತ್ತಾನೆ" ಎಂದು ಅರ್ಥವಾಗುತ್ತಿತ್ತು. ಆದರೆ "ಏವಂ ಧರ್ಮಾನ್ ಪೃಥಕ್ ಪಶ್ಯನ್" ಎಂದು 'ಪೃಥಕ್' ಶಬ್ದವಿರುವುದರಿಂದ ಭೇದವನ್ನು ಮಾತ್ರ ನಿಷೇಧ ಮಾಡುವುದರಲ್ಲಿ ಶ್ರುತಿಗೆ ತಾತ್ಪರ್ಯ ಕಂಡುಬರುತ್ತೆ. ಧರ್ಮಗಳನ್ನು ನಿಷೇಧಮಾಡುವುದರಲ್ಲಿ ಅಲ್ಲ.

ಯಜಮಾನೋ ಜೀರ್ಣವಾಸಾ ನ ಭವೇದಿತಿ ವಾಗ್ಯಥಾ ॥ ೩೫೯ ॥

ತ್ಯಾಜಯೇಜ್ಜೀರ್ಣತಾಮೇವ ನತು ವಾಸೋಽಪಿ ಮೋಚಯೇತ್ ।
ತಥೇಯಮಪಿ ವೈ ವಾಕ್ ಪಾರ್ಥಕ್ಯಮಾತ್ರಂ ನಿಷೇಧತಿ ॥ ೩೬೦ ॥

"ನಜೀರ್ಣಮಲವದ್ವಾಸಾಃ ಸ್ನಾತಕಸ್ಸ್ಯಾತ್" ಎಂದರೆ ಯಜಮಾನನು ಜೀರ್ಣವಾದ ಮತ್ತು ಕೊಳೆಯುಳ್ಳ ವಸ್ತ್ರವನ್ನು ಧರಿಸಿದವನಾಗಬಾರದು. ಈ ವಾಕ್ಯದಲ್ಲಿ ಹೇಗೆ ವಸ್ತ್ರದಲ್ಲಿನ ಜೀರ್ಣತೆಯನ್ನೂ ಮಾಲಿನ್ಯವನ್ನೂ ಮಟ್ಟಿಗೆ ದೂರವಾಡುತ್ತದೆಯೋ, ಬಟ್ಟೆಯನ್ನಲ್ಲವೋ ಹಾಗೆಯೇ 'ಏವಂ ಧರ್ಮಾನ್ ಪೃಥಕ್ ಪಶ್ಯನ್' ವಾಕ್ಯವೂ ಕೂಡ ಭೇದವನ್ನು ಮಟ್ಟಿಗೆ

ನಿಷೇಧಿಸುತ್ತದೆಯೇ ಹೊರ್ತು ಪರಮಾತ್ಮನ ಧರ್ಮಗಳನ್ನು ನಿಷೇಧ ಮಾಡುವುದಿಲ್ಲ.

ಧರ್ಮಾನಂಗೀಕರೋತ್ಯೇವ ನ್ಯಾಯಃ ಕಿಲ (ನಿಯಾಮಕಃ) ನಿರಾಮಯಃ ।

ತಸ್ಮಾದ್ಬ್ರಹ್ಮ ಚ ತದ್ಧರ್ಮಾಶ್ಚೇತಿ ದ್ವಾವಪಿ ಸಮ್ಮತೌ ॥ ೩೬೧ ॥

ಪೃಥಕ್ತ್ವಮಾತ್ರಂ ತು ತಯೋರ್ನಾಸ್ತೀತ್ಯೇವಾಶಯಃ ಶ್ರುತೇಃ ।

"ಸ-ವಿಶೇಷಣೇ ಹಿ ವಿಧಿ-ನಿಷೇಧೌ ವಿಶೇಷ್ಯೇ ಬಾಧಾತ್ ವಿಶೇಷಣ-ಮುಪಸಂಕ್ರಾಮತಃ" ವಿಧಿನಿಷೇಧ ವಾಕ್ಯಗಳು ವಿಶೇಷಣವುಳ್ಳ ವಸ್ತುವಿಷಯಕ ವಾಗಿದ್ದು ವಿಶೇಷ್ಯಕ್ಕೆ ಸಂಬಂಧಪಡಲು ಪ್ರಮಾಣಬಾಧಿತವಿದ್ದಲ್ಲಿ, ಆ ವಿಧಿ ನಿಷೇಧಗಳು ವಿಶೇಷಣವನ್ನು ಕುರಿತು ಹೋಗುತ್ತವೆ. ಅಂದರೆ, ಆ ವಿಧಿ ನಿಷೇಧಗಳು ವಿಶೇಷಣವನ್ನು ವಿಧಿಸುತ್ತವೆ ಅಥವಾ ನಿಷೇಧಿಸುತ್ತವೆ. ಕಷ್ಟ ಪಡುವ ದೇವದತ್ತನಿಗೆ ಬುದ್ಧಿಶಾಲಿಯಾದ ಮಗನು ಇಲ್ಲ. ಇದು ನಿಷೇಧ ವಾಕ್ಯ. ಇದು ದೇವದತ್ತನಿಗೆ ಮಗನಿಲ್ಲದೇ ಇದ್ದರೂ ಕೂಡುತ್ತೆ. ಮಗನು ಇದ್ದು ಅವನು ಬುದ್ಧಿಯಿಲ್ಲದವನಾದರೂ ಕೂಡುತ್ತೆ. ಮಗನು ಇರುವುದು ಪ್ರಮಾಣದಿಂದ ಸಿದ್ಧವಾದರೆ 'ಇಲ್ಲ' ವೆಂಬುದು ಮಗನಿಲ್ಲವೆಂದು ಹೇಳುವುದಿಲ್ಲ. ಅವನ (ಮಗನ) ವಿಶೇಷಣವಾದ ಬುದ್ಧಿಯನ್ನು ನಿಷೇಧಿಸುತ್ತೆ. ಅಂದರೆ ಇಲ್ಲವೆಂದು ಹೇಳುತ್ತೆ. ಈ ನ್ಯಾಯವು ನಿರ್ದೋಷವಾದ್ದರಿಂದ "ಏವಂ ಧರ್ಮಾನ್ ಪೃಥಕ್ ಪಶ್ಯನ್" ಎಂಬ ಶ್ರುತಿಯಲ್ಲಿಯೂ ಕೂಡ, ಪ್ರಮಾಣ ಸಿದ್ಧವಾದ ಬ್ರಹ್ಮನನ್ನೂ, ಬ್ರಹ್ಮಧರ್ಮಗಳನ್ನೂ ಉಳಿಸಿ ಅವುಗಳ ಪರಸ್ಪರ ಭೇದವನ್ನು ಮಟ್ಟಿಗೆ ನಿರಾಕರಿಸುತ್ತದೆ, ಎಂಬುದೇ ಶ್ರುತಿಗೆ ತಾತ್ಪರ್ಯವೆಂದು ಹೇಳಬೇಕು.

ಏವಂ ಚಾಭಿನ್ನಯೋರ್ಧರ್ಮಧರ್ಮಿತಾ ಚಾರ್ಥಶಕ್ತಿತಃ ॥ ೩೬೨ ॥

ಘಟನೀಯಾ ಯತಃ ಕಾರ್ಯಮೇವ ಕಾರಣಕಲ್ಪಕಮ್ ।

ಕಾರಣಾದೃಷ್ಟಿಮಾತ್ರೇಣ ದೃಷ್ಟಂ ಕಾರ್ಯಂ ಪರಿತ್ಯಜನ್ ॥ ೩೬೩ ॥

ವ್ರೀಹ್ಯಂಕುರಾಣಾಂ ಯಃ ಕರ್ತಾ ತಸ್ಯಾದರ್ಶನ ಮಾತ್ರತಃ ।

ಸಿದ್ಧಾನ್ವ್ರೀಹೀನ್ಪರಿತ್ಯಜ್ಯ ಮತ್ತುಕಾಮೋ ನ ಸಂಶಯಃ ॥

ಭೇದವಿಲ್ಲದಿದ್ದರೂ ಹೀಗೆ ಬ್ರಹ್ಮನಿಗೂ ಬ್ರಹ್ಮನ ಧರ್ಮಗಳಿಗೂ ಒಂದು ಧರ್ಮ, ಒಂದು ಧರ್ಮಿ ಎಂಬ ವ್ಯವಹಾರ ರೂಪವಾದ ಭೇದಕಾರ್ಯವನ್ನು ನಿರ್ವಹಿಸುವ ಪದಾರ್ಥದ ಒಂದು ಶಕ್ತಿಯಿಂದ ಘಟನಮಾಡಬೇಕು. ಈ ಶಕ್ತಿಯೇ ವಿಶೇಷವೆಂಬುದು. ಏಕೆಂದರೆ ಕಾರ್ಯವೇ ಕಾರಣವನ್ನು ಕಲ್ಪಿಸಿ ಕೊಡತಕ್ಕದ್ದು. ಅಂದರೆ ಕಾರ್ಯ ಕಂಡಾಗ ಅದರ ಕಾರಣವನ್ನು ಕಾರ್ಯಬಲದಿಂದ ಅನುಮೇಯಿಸಬೇಕು. ಕಾರಣವು ಕಾಣಿಸದೇ ಇದ್ದ ಮಟ್ಟಿಗೆ ದೃಷ್ಟವಾದ ಕಾರ್ಯವನ್ನು ಬಿಟ್ಟುಬಿಡುವವನು, ಧಾನ್ಯ ಮತ್ತು ಮೊಳಕೆ ಇವಕ್ಕೆ ಕರ್ತನು ಕಾಣಿಸದಿದ್ದ ಮಾತ್ರಕ್ಕೆ ಸಿದ್ಧವಾದ ಧಾನ್ಯವನ್ನು ತ್ಯಜಿಸಿ ಸಾವು ಅಪೇಕ್ಷಿಸತಕ್ಕವನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ.

ತಸ್ಮಾತ್ಕೇನಾಪ್ಯುಪಾಯೇನ ದೃಷ್ಟಂ ಕಾರ್ಯಂ ವಿವೇಕಿಭಿಃ ।
ಸ್ವೀಕಾರ್ಯಮೇವ ನ ತ್ಯಾಜ್ಯಮಿತಿ ಸರ್ವಸ್ಯ ಸಮ್ಮತಮ್ ॥

ಆದ್ದರಿಂದ ಯಾವ ರೀತಿಯಿಂದಲಾದರೂ ಕಂಡುಬಂದ ಕಾರ್ಯವು ವಿವೇಕಿಗಳಿಂದ ಸ್ವೀಕರಿಸಲ್ಪಡಲೇಬೇಕು. ಅದನ್ನು ತ್ಯಜಿಸಕೂಡದು. ಇದು ಸರ್ವಸಮ್ಮತ.

ಪ್ರಮಾಣಶರಣೋ ವಾದೀ ಪ್ರಮಾಣಸ್ಯಾನುಸಾರತಃ ।
ವದೇತ್ಸರ್ವಂ ನ ಚೇತ್ಕೃಷ್ಣಶಿಶೋಃ ಪಾದೋ ಮೃದುಃ ಕಥಂ ॥

ಅಯೋಮಯಂ ದೃಢತರಂ ದುಷ್ಟಾವಿಷ್ಟಮನೋಽಭಿನತ್ ।
ದಧಾರೈಕೇನ ಹಸ್ತೇನ ಕಥಂ ಬಾಲೋ ಮಹಾಚಲಂ ॥ ೩೬೭ ॥

ಮಹಾಹಿದಂಷ್ಟ್ರಾಸಾಹಸ್ರದಷ್ಟೋಽಪ್ಯಭವದವ್ರಣಃ ।
ಕಥಂ ಶಿಶುರ್ಯಶೋದಾಯಾಸ್ತಸ್ಯಾಸ್ತ್ವಾಮಾಣಿಕಂ ತ್ವಿದಂ ॥

ಚಿತ್ರಶಕ್ತಿವಿಶೇಷೇಣ ಸರ್ವಂ ನಿರ್ವಾಹ್ಯಮೇವ ಹಿ ।
ಶಿಶೋರಘಟಿತಂ ಕಾರ್ಯಮಿತಿ ಮತ್ವಾ ವಿವೇಕಿಭಿಃ ॥ ೩೬೮ ॥

ತ್ಯಜ್ಯತೇ ಕಿಮನೋಭಂಗೋ ಗಿರ್ಯುದ್ಧರಣಮೇವವಾ ।
ಅಹಿದಂಷ್ಟ್ರಾಭಿಘಾತೋ ವಾ ಕೃಷ್ಣಸ್ಯ ಶಿಶುತಾಽಪಿ ವಾ ॥

ಉತ ತಸ್ಯ ಪದದ್ವಂದ್ವತಲೇ ಕೋಮಲತಾಽಪಿ ವಾ ।
ಕಿನ್ತ್ವದ್ಭುತಶಿಶೋಸ್ತಸ್ಯ ಸಾಮರ್ಥ್ಯಸ್ಯ ವಿಶೇಷತಃ ॥ ೩೭೧ ॥

ದೃಷ್ಟಂ ಕಾರ್ಯಂ ಸಮಸ್ತಂಚ ಘಟಯನ್ತ್ಯೇವ ಕೋವಿದಾಃ ।

ಪ್ರಮಾಣವನ್ನು ಆಶ್ರಯಿಸಿದ (ಪ್ರಮಾಣಾಧೀನನಾದ) ವಾದಿಯು ಪ್ರಮಾಣಾನುಸಾರವಾಗಿ ಸರ್ವವನ್ನೂ ಹೇಳಿಯಾನು. ಹಾಗಿಲ್ಲದಲ್ಲಿ ಶಿಶುವಾದ ಕೃಷ್ಣನ ಮೃದುವಾದ ಪಾದವು ಉಕ್ಕಿನಿಂದ ಮಾಡಿದ ದೃಢತರವಾದ ಮತ್ತು ದುಷ್ಟರಾಕ್ಷಸನಿಂದ ಆವಿಷ್ಟವಾದ ಭಂಡಿಯನ್ನು ಹೇಗೆ ಭೇದಿಸಿತು? ಹಾಗೆಯೇ ಬಾಲಕನಾದ ಕೃಷ್ಣನು ದೊಡ್ಡ ಬೆಟ್ಟವನ್ನು ಒಂದೇ ಹಸ್ತದಿಂದ ಹೇಗೆ ಧರಿಸಿದನು? ಮತ್ತು ಯಶೋದಾದೇವಿಯ ಶಿಶುವಾದ ಕೃಷ್ಣನು ಮಹಾ ಘಟಸರ್ಪದ ಸಹಸ್ರಾರು ಹಲ್ಲುಗಳಿಂದ ಕಚ್ಚಿಸಿಕೊಂಡರೂ ಹುಣ್ಣಿಲ್ಲದವನಾದನು. ಆದ್ದರಿಂದ ಪ್ರಾಮಾಣಿಕವಾದಂಥ ಕೃಷ್ಣನ ಕಾರ್ಯಗಳನ್ನು ಅವನಲ್ಲಿರತಕ್ಕ ಶಕ್ತಿವಿಶೇಷದಿಂದ ನಿರ್ವಹಿಸಬೇಕೇ ಹೊರ್ತು ಬೇರೆ ಅಲ್ಲ. ಅದು ಬಿಟ್ಟು ವಿವೇಕಿಗಳಾದವರು ಈ ಎಲ್ಲಾ ಕಾರ್ಯವೂ ಶಿಶುವಿನಿಂದ ಆಗಲಾರದೆಂದು ತಿಳಿದು ಭಂಡಿಯು ಮುರದದ್ದೇ ಆಗಲಿ ಕೃಷ್ಣನು ಬೆಟ್ಟವನ್ನು ಎತ್ತಿದ್ದೇ ಆಗಲಿ ಆ ಕೃಷ್ಣನ ಶಿಶುತ್ವವನ್ನೇ ಆಗಲಿ ಮತ್ತು ಅವನ ಎರಡು ಅಂಗಾಲುಗಳ ಕೋಮಲತೆಯನ್ನೇ ಆಗಲಿ ಬಿಡುವರೇನು? ಅವಿಲ್ಲವೆಂದು ಹೇಳುವರೇನು? ಆದರೆ ಆಶ್ಚರ್ಯಕರವಾದ ಆ ಶಿಶುವಿನ ಸಾಮರ್ಥ್ಯವಿಶೇಷದಿಂದ ಪಂಡಿತರಾದವರು ದೃಷ್ಟವಾದ ಈ ಎಲ್ಲಾ ಕಾರ್ಯವನ್ನೂ ಘಟನೆ ಮಾಡುವರು.

ಯತಃ ಕೃಷ್ಣಸ್ಯಾರ್ಭಕಸ್ಯ ಮುಖೇ ದೃಷ್ಟ್ವಾ ಚರಾಚರಂ ॥ ೩೭೨ ॥

ಯಃ ಶಶ್ವನ್ನಾತ್ಮದುಷ್ಟತೋಽಯಮಾತ್ಮಯೋಗಃ ಶಿಶೋರ್ಮಮ ।
ಇತ್ಯೇವಾಹ ಯಶೋದಾ ಪ್ರಾಕ್ ನ ಮೃಷಾ ನೋಪಚಾರತಃ ॥

ದೃಷ್ಟಂ ಕಾರ್ಯಮಿದಂ ಸರ್ವಮಿತಿ ದ್ಯೋತಯಿತುಂ ಕಿಲ ।
ಅತೋ ವಿಷ್ಣೋಶ್ಚರಿತ್ರಾಣಿ ವಿಚಿತ್ರಾಣಿ ಚ ಸರ್ವಶಃ ॥ ೩೭೪ ॥

ಕೃಷ್ಣನು ಮಣ್ಣು ತಿಂದನೆಂದು ಕೇಳಿ ಯಶೋದೆಯು ಕೃಷ್ಣನನ್ನು 'ಬಾಯಿ ತೆಗಿ ನೋಡೋಣ'ವೆಂದು ಹೇಳಿದಾಗ, ತೆಗೆದ ಬಾಯಿಯಲ್ಲಿ ಚರಾಚರಾತ್ಮಕವಾದ ಪ್ರಪಂಚವನ್ನೂ ತನ್ನನ್ನೂ ಕೃಷ್ಣನನ್ನೂ ಅಲ್ಲಿ ನೋಡಿ ಹೀಗೆ ಅನ್ನುವಳು :—

ಕಿಂ ಸ್ವಪ್ನ ಏತದುತ ದೇವಮಾಯಾ
ಕಿಂ ವಾ ಮದೀಯೋ ಬತ ಬುದ್ಧಿಮೋಹಃ ।
ಅಥೋ ಅಮುಷ್ಯೈವ ಮಮಾರ್ಭಕಸ್ಯ
ಯಃ ಕಶ್ಚನೌತ್ಪತ್ತಿಕಆತ್ಮಯೋಗಃ ॥

(ಭಾಗವತ ೧೦-೯-೪೦)

ಇಲ್ಲಿ ನಾಲ್ಕು ವಿಧವಾಗಿ ವಿಕಲ್ಪಮಾಡಿ ಕೊನೆಯ ವಿಕಲ್ಪವು ಯಾಥಾರ್ಥವೆಂದು ತೋರಿಸುತ್ತಾಳೆ. ಈ ಕಾಣಿಸಿದ್ದು ಸ್ವಪ್ನವೇ? ದೇವ ಮಾಯೆಯೇ? ನನ್ನ ಭ್ರಾಂತಿಯೇ? ಅಥವಾ ದೃಷ್ಟವಾದ ಕಾರ್ಯಕ್ಕೆ ಯಥಾರ್ಥವಾದ ಕಾರಣವಿರಬೇಕಾದ್ದರಿಂದ ಈ ನನ್ನ ಶಿಶುವಿನ ಸ್ವಾಭಾವಿಕ ವಾದ ಸಾಮರ್ಥ್ಯವಿಶೇಷವೇ? ಎಂದು ಹೇಳಿರುವಳು. ಇಲ್ಲಿ ಇದು ಸ್ವಪ್ನವೂ ಅಲ್ಲ, ದೇವಮಾಯೆಯೂ ಅಲ್ಲ. ಭ್ರಾಂತಿಯೂ ಅಲ್ಲ. ಇದಕ್ಕೆ ಕಾರಣ ಶ್ರೀಕೃಷ್ಣನಲ್ಲಿರುವ ಸ್ವಾಭಾವಿಕವಾದ ಮಹಿಮೆ ಎಂದು ನಿರ್ಣಯಿಸಿರುವಳು. ಆದ್ದರಿಂದ ವಿಷ್ಣುವಿನ ಎಲ್ಲ ಚರಿತ್ರೆಗಳೂ ವಿಚಿತ್ರವಾದುವುಗಳು.

ಗರೀಯಸ್ತ್ವಂ ಲಘೀಯಸ್ತ್ವಂ ಮಹತ್ತ್ವಮಣುತಾಂ ತಥಾ ।
ಗುಣಾನನನ್ತರೂಪಾಣಿ ಚಾಸಂಖ್ಯಾನ್ಯದ್ಭುತಾನಿ ಚ ॥ ೩೭ ॥
ವಿಚಿತ್ರತಚ್ಛಕ್ತಿರೂಪವಿಶೇಷೇಣೈವ ವರ್ಣಯೇತ್ ।
ಮೃಷಾತ್ವಮುಪಚಾರತ್ವಂ ಮನಸಾऽಪಿ ನ ಚಿನ್ತಯೇತ್ ॥ ೩೮ ॥

ಒಂದೇ ಕಾಲದಲ್ಲಿ ಭಾರವಾಗಿರೋಣ, ಲಘುವಾಗಿರೋಣ. ಮಹತ್ತಾಗಿ ರೋಣ, ಅಣುವಾಗಿರೋಣ, ಇವನ್ನೂ ಹಾಗೆಯೇ ಗುಣಗಳನ್ನೂ ಅಸಂಖ್ಯಾತ ವಾದ; ಅದ್ಭುತವಾದ ರೂಪಗಳನ್ನೂ ಆ ವಿಷ್ಣುವಿನಲ್ಲಿರುವ ವಿಚಿತ್ರವಾದ ಶಕ್ತಿರೂಪ ವಿಶೇಷ ಬಲದಿಂದ ಸಾಧ್ಯವೆಂದು ವರ್ಣಿಸಬೇಕು. ಅದು

ಸುಳ್ಳಿಂದೇ ಆಗಲಿ ಉಪಚಾರದಿಂದ ಹೇಳಿದೆಯೆಂದೇ ಆಗಲಿ ಮನಸ್ಸಿನಲ್ಲಿಯೂ ಕೂಡ ಚಿಂತಿಸಬಾರದು.

ಆಗೋಪಾಲಾವಿಪಾಲಂ ಚ ಜನಾ ವೈದಿಕಲೌಕಿಕಾಃ ।
ಶ್ರುತಯಃ ಸ್ಮೃತಯಶ್ಚೈವ ನಾನಾಸಮಯಿನೋಽಪಿ ಚ ॥ ೩೭೭ ॥

ನೃಸಿಂಹರಾಮಕೃಷ್ಣಾದಿರೂಪೇಷು ಹರಿಣಾಕೃತಂ ।
ಅನ್ಯಾಸಾಧ್ಯಂ ಸೇತುಬಂಧಧರೋದ್ಧರಣಪೂರ್ವಕಮ್ ॥ ೩೭೮ ॥

ಮಹಾಕಾರ್ಯಂ ಮಹಾಶಕ್ತ್ಯಾ ಘಟಯನ್ತಿ ಯತೋಽಖಿಲಾಃ ।
ಅತೋಽದ್ಭುತಾನ್ಯಘಟಿತಾನ್ಯಪಿ ಕಾರ್ಯಾಣಿ ಕೇಶವೇ ॥ ೩೭೯ ॥

ಮಹತ್ಯಾ ತಸ್ಯ ಶಕ್ತ್ಯೈವ ಘಟನೀಯಾನಿ ಸರ್ವಥಾ ।

ದನ ಕಾಯುವವರು, ಕುರಿ ಕಾಯುವವರು, ಮೊದಲುಮಾಡಿ ಸರ್ವ ವೈದಿಕ ಲೌಕಿಕ ಜನರೂ ಶ್ರುತಿ ಸ್ಮೃತಿಗಳೂ ವಿವಿಧ ಶಾಸ್ತ್ರ ಪ್ರವರ್ತಕರೂ ಕೂಡ ನೃಸಿಂಹರಾಮಕೃಷ್ಣಾದಿ ರೂಪಗಳಲ್ಲಿ ಹರಿಯಿಂದ ಮಾಡಲ್ಪಟ್ಟ ಇತರರಿಂದ ಸಾಧ್ಯವಲ್ಲದ ಸೇತುಬಂಧನ, ಭೂಮ್ಯುದ್ಧರಣ (ಮೇಲಕ್ಕೆ ಎತ್ತುವಿಕೆ) ಇವೇ ಮೊದಲಾದ ಮಹತ್ಕಾರ್ಯಗಳನ್ನು ಅವನಲ್ಲಿರುವ ಮಹಾಶಕ್ತಿಯಿಂದ ಎಲ್ಲರೂ ಕೂಡ ಘಟನೆಮಾಡುತ್ತಾರೆ. ಆದ್ದರಿಂದ ಅದ್ಭುತವಾದ ಬೇರೆ ರೀತಿಯಲ್ಲಿ ಘಟನೆಮಾಡಲು ಅಸಾಧ್ಯವಾದ ಕೇಶವನಲ್ಲಿ ಕಂಡುಬರುವ ಎಲ್ಲಾ ಕಾರ್ಯಗಳನ್ನೂ ಮಹತ್ತಾದ ಅವನ ಶಕ್ತಿಯಿಂದ ಸರ್ವಥಾ ಘಟನೆ ಮಾಡಬೇಕು. ಇದಕ್ಕೆ ಬೇರೆ ಮಾರ್ಗವಿಲ್ಲ.

ತದ್ಧರ್ಮಭೇದೋ ನಾಸ್ತ್ಯೇವ ಧರ್ಮಸ್ತ್ವಸ್ತಿ ತವೈಕ್ಯವತ್ ॥

ಸುಖವತ್ ಜ್ಞಾನವನ್ನಿತ್ಯತ್ವಾದಿ ಧರ್ಮಸಮೂಹವತ್ ।

ಆದ್ದರಿಂದ ಪರಮಾತ್ಮನಿಗೂ ಅವನ ಸ್ವಾತಂತ್ರ್ಯಾದಿ ಧರ್ಮಗಳಿಗೂ ಭೇದವಿಲ್ಲವೇ ಇಲ್ಲ. ಧರ್ಮಗಳಾದರೆ ಉಂಟು. ಹೇಗೆಂದರೆ ನೀನು ಒಪ್ಪಿರುವ ಐಕ್ಯದಂತೆ. ಇಷ್ಟೇ ಅಲ್ಲ. ಸುಖ, ಆನಂದ, ಜ್ಞಾನ, ನಿತ್ಯತ್ವ ಇವೇ ಮೊದಲಾದ ಧರ್ಮಸಮೂಹದಂತೆಯೂ, ಅಂದರೆ, ಭೇದವಿಲ್ಲದ

ಬ್ರಹ್ಮನಲ್ಲಿ ಈ ಧರ್ಮಗಳನ್ನು ನೀನು ಒಪ್ಪಿರುವುದರಿಂದ ನಮ್ಮಂತೆಯೇ ನೀನೂ ಈ ಪ್ರಮೇಯವನ್ನು ನಿರ್ವಾಹಮಾಡುವ ಉಪಾಯವನ್ನು ಹುಡುಕ ಬೇಕು.

ಅಭಿನ್ನೇಽಪ್ಯತಿ ಭೇದಸ್ಯ ಕಾರ್ಯಂ ಯಚ್ಚೂಯತೇ ಶ್ರುತೌ ॥

ತತ್ಸರ್ವಮರ್ಥಶಕ್ತ್ಯಾಖ್ಯವಿಶೇಷೇಣೈವ ನಿರ್ವಹೇತ್ ।
ತತೋ ವಿಶೇಷವಾದೇಽಸ್ಮಿನ್ವಿಶೇಷಃ ಕೋಽಪಿ ನಾವಯೋಃ ॥

ಭೇದವಿಲ್ಲದ ಎಡೆಯಲ್ಲಿ ಶ್ರುತಿಯಲ್ಲಿ ಹೇಳಲ್ಪಟ್ಟ ಭೇದಕಾರ್ಯವು ಯಾವುದೋ ಅದೆಲ್ಲವನ್ನೂ ವಸ್ತುವಿನ ಶಕ್ತಿರೂಪವಾದ ವಿಶೇಷದಿಂದಲೇ ನಿರ್ವಾಹಮಾಡಬೇಕು. ಆದ್ದರಿಂದ ಈ ವಿಶೇಷ ವಾದದಲ್ಲಿ ನಮ್ಮಿಬ್ಬರಿಗೂ ಯಾವ ವಿಶೇಷವೂ (ವ್ಯತ್ಯಾಸ) ಇಲ್ಲ.

ನೌರ್ನಾಸ್ತಿ ಚೇನ್ನದೀಂ ತರ್ತುಂ ಯಥಾ ಲಾಂಬುಸ್ತರೀನ್ನೃಣಾಂ ।
ದೃಷ್ಟಕಾರ್ಯಾರ್ಥಘಟನಾ ಘಟಿಕೇನ ತು ಕೇನಚಿತ್ ॥ ೩೮೩ ॥

ತ್ವಯಾ ಮಯಾ ಚ ಕರ್ತವ್ಯಾ ದೃಷ್ಟಕಾರ್ಯಂ ತು ನ ತ್ಯಜೇತ್ ।

ಹಡಗು ಇಲ್ಲದಲ್ಲಿ ನದಿಯನ್ನು ದಾಟಲು ಜನಗಳಿಗೆ ದೋಣಿಯು ಸಾಧನವಾಗುತ್ತದೆ. ಹಾಗೆಯೇ ಕಂಡುಬಂದ ಕಾರ್ಯವನ್ನು ಯಾವುದಾದರೂ ಒಂದು ಸಾಧನೆಯಿಂದ ನೀನೂ, ನಾನೂ ನಿರ್ವಾಹಮಾಡಬೇಕು. ಕಂಡು ಬಂದ ಕಾರ್ಯವನ್ನು ಬಿಡಲಾಗದು.

ಆಮಂತ್ರಣಂ ಪರೇ ಪಾರೇ ತವಾಪಿ ಚ ಮಮಾಪಿ ಚ ॥ ೩೮೪ ॥

ಧರ್ಮಧರ್ಮ್ಯೈಕ್ಯಘಟನಾ ಪಾಣಿಗ್ರಹಣಮಂದಿರೇ ।
ಕರ್ತವ್ಯಾಽನುಪಪತ್ತ್ಯಾಖ್ಯ ನದೀ ತೇನೋಭಯೋರಪಿ ॥ ೩೮೫ ॥

ವಿಶೇಷಾಖ್ಯಾ ಲಾಂಬುರೇವ ಗತಿರ್ನಾನ್ಯೇತಿ ಮೇ ಮತಿಃ ।

ಇನ್ನೊಂದು ದಡದಲ್ಲಿರುವ ಧರ್ಮ ಧರ್ಮಿಗಳ ಐಕ್ಯಘಟನಾರೂಪವಾದ ಪಾಣಿಗ್ರಹಣ ನೆರವೇರಿಸುವ ಮಂದಿರಕ್ಕೆ ನಿನಗೂ ನನಗೂ ಆಮಂತ್ರಣ ವುಂಟು. ಬೇರೆ ದಡವನ್ನು ಸೇರಲು ಅನುಪಪತ್ತಿಯೆಂಬ ನದಿಯನ್ನು

ನಾವಿಬ್ಬರೂ ದಾಟಬೇಕಾಗಿದೆ. ಭೇದವೆಂಬ ಹಡಗು ಇಲ್ಲದಿರುವುದರಿಂದ ವಿಶೇಷವೆಂಬ ದೋಣಿಯೇ ಗತಿ. ಬೇರೆ ಇಲ್ಲ. ಇದು ನನ್ನ ಅಭಿಪ್ರಾಯ.

ಮುಖಮಸ್ತೀತಿ ವಕ್ತವ್ಯಂ ದಶಹಸ್ತಾ ಹರೀತಕೀ ॥ ೩೮೬ ॥

ಇತಿವತ್ಪ್ರಾಜ್ಞಸದಸಿ ನ ವಾಚ್ಯಂ ಗರ್ಹಿತಂ ವಚಃ ।
ಅತಃ ಶ್ರುತ್ಯರ್ಥಕುಶಲೋ ಮಧ್ವ ಏವ ಜಗದ್ಗುರುಃ ॥ ೩೮೭ ॥

ಶ್ರುತಿತತ್ತ್ವಂಚ ವೇದಾಸೌ ಗುರುರ್ಯಸ್ತತ್ತ್ವವಾದಿನಾಮ್ ।
ಶ್ರುತ್ಯುಕ್ತಸರ್ವಕಾರ್ಯಾಣಾಂ ಸ ಏವ ಘಟನೇ ಪಟುಃ ॥ ೩೮೮ ॥

ಬಾಯಿಯಿರುವುದರಿಂದ ಅಳಲೆಕಾಯಿಯು ಹತ್ತು ಮೊಳ ಉದ್ದವಿದೆ ಎಂದು ಹೇಳತಕ್ಕದ್ದು ಹೇಗೆ ಗರ್ಹಿತ (ದೂಷ್ಯ) ವಾದ ಮಾತೋ ಹಾಗೆ ಗುಣಗುಣಿಗಳಿಗೆ ಅಭೇದವಿರಲಿ. ಅದಕ್ಕೆ ಕಾರಣ ಹುಡುಕಬೇಕಾದ್ದಿಲ್ಲ ಎಂಬುದೂ ಗರ್ಹಿತವು. ಆದ್ದರಿಂದ ಶ್ರುತಿಯನ್ನು ಅರ್ಥಮಾಡುವುದರಲ್ಲಿ ಜಗದ್ಗುರುಗಳಾದ ಮಧ್ವಾಚಾರ್ಯರೇನೇ ಕುಶಲರು. ತತ್ತ್ವವಾದಿಗಳಿಗೆ ಗುರುಗಳಾದ ಇವರು ಶ್ರುತ್ಯಭಿಪ್ರಾಯವನ್ನು ತಿಳಿದವರು. ಶ್ರುತಿಯಲ್ಲಿ ಉಕ್ತವಾದ ಸರ್ವಕಾರ್ಯಗಳನ್ನೂ ಸಮರ್ಥಿಸುವುದರಲ್ಲಿ ಅವರೇ ಪಟುಗಳು.

ದುರ್ವಾದೀನಾಂ ಕುಯುಕ್ತ್ಯಾಖ್ಯರಜಶ್ಶಕ್ತ್ಯಾಮೃತೋಪಮಾನ್ ।
ಹರೇರಭಿನ್ನಧರ್ಮಾದೀನನಂತಾಂಶ್ಶ್ರುತಿಚೋದಿತಾನ್ ॥ ೩೮೯ ॥

ಯೋಽಜೀವಯದ್ವಿಶೇಷಾಖ್ಯಗಂಧಮಾದನವಾಯುನಾ ।
ಸ ಮಧ್ವೋ ರಾಮಪಾದಾಬ್ಜಪರಿಚರ್ಯಾಪರಾಯಣಃ ॥ ೩೯೦ ॥

ಹನೂಮಾನ್ನಾತ್ರ ಸಂದೇಹೋ ದುರ್ಜನಾಟೋಪಭರ್ಜನಃ ।
ತನ್ಮಯೋಕ್ತಂ ಸಮಸ್ತಂ ಚ ಯುಕ್ತಿಯುಕ್ತಮಿತಿ ಸ್ಥಿತಮ್ ॥

ದುರ್ವಾದಿಗಳ ಕುಯುಕ್ತಿಗಳೆಂಬ ಧೂಳಿಯ ಶಕ್ತಿಯಿಂದ ಮೃತಪ್ರಾಯಗಳಾದ, ಶ್ರುತಿಯಲ್ಲಿ ಹೇಳಲ್ಪಟ್ಟ ಹರಿಯಿಂದ ಅಭಿನ್ನವಾದ ಅವನ ಅನಂತ ಧರ್ಮಾದಿಗಳನ್ನು 'ವಿಶೇಷ'ವೆಂಬ ಗಂಧಮಾದನ ಪರ್ವತದ

ವಾಯುವಿನಿಂದ ಯಾರು ಬದುಕಿಸಿದರೋ ಆ ಮಧ್ವಾಚಾರ್ಯರು ರಾಮ ಪಾದಾಬ್ಜ ಪರಿಚರ್ಯಾ ಪರಾಯಣರಾದ, ದುರ್ಜನರ ಗರ್ವವನ್ನು ನಾಶ ಮಾಡುವ ಹನುಮಂತದೇವರೇ. ಇದರಲ್ಲಿ ಸಂದೇಹವಿಲ್ಲ. ಆದ್ದರಿಂದ "ನೇಹ ನಾನಾಸ್ತಿ ಕಿಂಚನ" ಎಂಬ ಶ್ರುತಿಯನ್ನು ವ್ಯಾಖ್ಯಾನಮಾಡುವ ಸಂದರ್ಭದಲ್ಲಿ ನನ್ನಿಂದ ಹೇಳಲ್ಪಟ್ಟದ್ದೆಲ್ಲವೂ ಯುಕ್ತಿಯುಕ್ತವಾದದ್ದೆಂದು ಸಿದ್ಧಿಸಿತು.

ಇಲ್ಲಿಗೆ "ನೇಹ ನಾನಾಸ್ತಿ ಕಿಂಚನ" ಶ್ರುತಿಯ ವ್ಯಾಖ್ಯಾನವು ಮುಗಿಯಿತು.

'ಅಹಂ ಬ್ರಹ್ಮಾಸ್ಮಿ'

"ಯ ಏವಂ ವೇದಾಹಂ ಬ್ರಹ್ಮಾಸ್ಮೀತಿ ಸ ಇದಗುಂ ಸರ್ವಂ ಭವತಿ"
(ಬೃಹದಾರಣ್ಯ ೩-೫-೪)

ಬ್ರಹ್ಮಾಹಮಸ್ಮೀತಿ ವಾಕ್ಯಾದ್ಯದಿ ಬ್ರಹ್ಮ ಭವೇದ್ಭವಾನ್ ।
ತರ್ಹಿ ಶ್ರೌತಂ ಪರಬ್ರಹ್ಮ ಕಿಂ ನಾಭೂದಷ್ಟಮೋ ರಸಃ ॥ ೩೯೩ ॥

ಬ್ರಹ್ಮಾಹಮಸ್ಮಿ= ನಾನು ಬ್ರಹ್ಮನಾಗಿದ್ದೇನೆ ಎಂಬ ಈ ವಾಕ್ಯದಿಂದ ನೀನು ಬ್ರಹ್ಮನಾದಲ್ಲಿ ಶ್ರುತಿಪ್ರತಿಪಾದ್ಯನಾದ ಪರಬ್ರಹ್ಮನು ಎಂಟನೇ ರಸ ಆಗದೇ ಇದ್ದಾನೇಕೆ? ಆರೇ ರಸ ಇರುವುದು. ಏಳನೇ ರಸವೇ ಇಲ್ಲದ ಮೇಲೆ ಎಂಟನೇ ರಸ ಇಲ್ಲವೇ ಇಲ್ಲ. ಹಾಗೆ ಶ್ರುತ್ಯುಕ್ತ ಪರಬ್ರಹ್ಮನು ಇಲ್ಲದೇನೇ ಹೋದಾನು ಎಂದಭಿಪ್ರಾಯ.

ತಚ್ಚ ತ್ವಂ ಚ ಯದಿ ಬ್ರಹ್ಮ ಬ್ರಹ್ಮದ್ವೈತಮಭೂತ್ತದಾ ।
ಏವಂ ಚಾನಂತಜೀವಾನಾಂ ಬ್ರಹ್ಮತ್ವೇ ತ್ವದ್ವದೇವ ಹಿ ॥ ೩೯೪ ॥

ಬ್ರಹ್ಮಾಣ್ಯನಂತಾನ್ಯಭವನ್ ಜೀವೋಽಭೂದಷ್ಟಮೋ ರಸಃ ।
ಚಿತ್ರಂ ಜಗತಿ ನ ದ್ವೈತಂ ಕಿಲ ಬ್ರಹ್ಮಣಿ ತತ್ಕಿಲ ॥ ೩೯೫ ॥

ಶ್ರುತ್ಯುಕ್ತ ಬ್ರಹ್ಮನೂ ಬ್ರಹ್ಮ. ನೀನೂ ಬ್ರಹ್ಮ ಆದಲ್ಲಿ, ಆಗ (ಬ್ರಹ್ಮಾದ್ವೈತವಾಗದೇ) ಬ್ರಹ್ಮದ್ವೈತವಾಯಿತು. ಅಂದರೆ ಇಬ್ಬರು ಬ್ರಹ್ಮರಾದರು, ಎಂದು ಅಭಿಪ್ರಾಯ. ಏವಂಚ ನಿನ್ನಂತೆ ಅನಂತ ಜೀವರುಗಳಿಗೆ ಬ್ರಹ್ಮತ್ವ ಆದಲ್ಲಿ ಅನಂತ ಬ್ರಹ್ಮರಾದರು. ಜೀವನು ಎಂಟನೇ ರಸವಾದ. ಇದಲ್ಲವೇ ವಿಚಿತ್ರ? ಜಗತ್ತಿನಲ್ಲಿ ದ್ವೈತವಿಲ್ಲ. ಬ್ರಹ್ಮನಲ್ಲಿ ದ್ವೈತ. ಅಹಹ!!!

ಅಧೋ ನಿಪತಿತಂ ದ್ವೈತಂ ಹಂತೋರ್ಧ್ವೀಕ್ರಿಯತೇ ತ್ವಯಾ ।
ಜಗತಿ ತ್ಯಾಜಿತಂ ದ್ವೈತಂ ಯದ್ಬ್ರಹ್ಮಣಿ ಧೃಢೀಕೃತಮ್ ॥೩೯೫॥
ಅತೋಽಸ್ಮತ್ತೋಽಧಿಕೋ ಭೇದವಾದೀ ಹನ್ತ ಭವಾನಭೂತ್ ।

ಕೆಳಗೆ ಬಿದ್ದಿದ್ದ ದ್ವೈತವು ನಿನ್ನಿಂದ ಮೇಲಕ್ಕೆ ಏರಿಸಲ್ಪಡುತ್ತೆ. ಜಗತ್ತಿನಲ್ಲಿ ಇಲ್ಲದಂತೆ ಮಾಡಲ್ಪಟ್ಟ ದ್ವೈತವನ್ನು ಬ್ರಹ್ಮನಲ್ಲಿ ದೃಢಮಾಡಿದ್ದರಿಂದ ನಮಗಿಂತ ಅಧಿಕವಾಗಿ ಭೇದವಾದಿಯು ನೀನಾದಿ. ಇದು ನಮಗೆ ಬಹು ಸಂತೋಷ.

ಪ್ರಾಣೋ ವಾ ಅಹಮಸ್ಮೀತಿ ಶಕ್ರೇಣೈವೋದಿತೇ ಸತಿ ॥ ೩೯೬ ॥

ಕಿಂ ಶಕ್ರಸ್ಯ ಪ್ರಾಣನಾಮ್ನಾ ಹರಿಣೈಕ್ಯಮುದೀರ್ಯತೇ ।
ಅಜಾಂಡಚ್ಛೇದಸುಪಟುನಖೇನ ಬಲಿವೈರಿಣಾ ॥ ೩೯೭ ॥

ತ್ರಿಪದಾಕ್ರಾಂತಲೋಕೇನ ಸ್ವಸ್ಯ ಸ್ವಾರಾಜ್ಯದಾಯಿನಾ ।

ಪ್ರಾಣೋ ವಾ ಅಹಮಸ್ಮಿ = ನಾನು ಪ್ರಾಣನಾಗಿದ್ದೇನೆ ಎಂಬುದಾಗಿ ಇಂದ್ರನಿಂದ ಹೇಳಲ್ಪಟ್ಟಮಟ್ಟಿಗೆ ಶಕ್ರನಿಗೆ ಪ್ರಾಣನಾಮಕ ಹರಿಯಿಂದ ಐಕ್ಯವು ಶ್ರುತಿಯಲ್ಲಿ ಹೇಳಲ್ಪಟ್ಟಿತೇನು? ಹರಿ ಎಂಥವನೆಂದರೆ ಬ್ರಹ್ಮಾಂಡದ ಖರ್ಪರ ಛೇದಿಸಲು ಸಮರ್ಥವಾದ ನಖವುಳ್ಳವನು. ಬಲಿಯ ವೈರಿ. ಮೂರು ಹೆಜ್ಜೆಯಿಂದ ಮೂರು ಲೋಕವನ್ನು ಆಳಿದವನು. ತನಗೆ (ಶಕ್ರನಿಗೆ) ಸ್ವರ್ಗಾಧಿಪತ್ಯವನ್ನು ಬಲಿಯಿಂದ ಕಿತ್ತುಕೊಟ್ಟವನು. ಇಂತಹ ಹರಿಗೆ ಬಲಿಯಿಂದ ಬಾಧಿತನಾದ ಇಂದ್ರನಿಂದ ಐಕ್ಯವುಂಟೇನು?

ಶ್ರುತಿ : ತಮಿಂದ್ರ ಉವಾಚ-ಪ್ರಾಣೋ ವಾ ಅಹಮಸ್ಮಿ ಋಷೇ
ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ ॥
(ಐತರೇಯ ೨-೨-೩).

ಅರ್ಥ : ವೃತ್ರಾಸುರನನ್ನು ಸಂಹರಿಸಿದ ಮೇಲೆ ಮಹೇಂದ್ರತ್ವವನ್ನು ಪಡೆಯುವುದಕ್ಕಾಗಿ ಇಂದ್ರನು ಮಹಾವ್ರತವೆಂಬ ಯಜ್ಞವನ್ನು ಮಾಡಿದನು. ಆ ಯಜ್ಞದಲ್ಲಿ ಹೋತೃವಾಗಿದ್ದ ವಿಶ್ವಾಮಿತ್ರಋಷಿಯು ಬೃಹತೀಸಹಸ್ರವನ್ನು ಮೂರು ಸಲ ಶಂಸನ ಮಾಡಿದನು. ಮೂರನೇ ಸಲ ಶಂಸನ ಮಾಡಿದಾಗ ಇಂದ್ರನು 'ನಿನಗೆ ಏನು ವರ ಬೇಕೆಂದು' ವಿಶ್ವಾಮಿತ್ರನನ್ನು ಕೇಳಲು "ತ್ವಾಮೇವ ಜಾನೀಯಾಂ" ನಿನ್ನನ್ನೇ ತಿಳಿದೇನು, (ನಿನ್ನ ಜ್ಞಾನ ನನಗೆ ಬೇಕು ಎಂದಭಿಪ್ರಾಯ) ಎನ್ನಲು ಅದಕ್ಕೆ ಉತ್ತರರೂಪವಾಗಿ ಇಂದ್ರನು "ಪ್ರಾಣೋ ವಾ ಅಹಮಸ್ಮಿ ಋಷೇ" ಅಂದರೆ 'ಅಯ್ಯಾ, ಋಷಿಯೇ! ನಾನು ಪ್ರಾಣನಾಗಿದ್ದೇನೆ' ಹೀಗೆ ಉತ್ತರ ಕೊಟ್ಟನು. ಆದ್ದರಿಂದ ಈ ಪ್ರಕರಣದಲ್ಲಿ ಪ್ರಾಣ ಶಬ್ದದಿಂದ ವಾಚ್ಯನಾದವನು ಇಂದ್ರನು. ವಿಷ್ಣುವಲ್ಲ ಎಂದರೆ, ಅದು ಹಾಗಲ್ಲ. ವಿಷ್ಣುವೇ ಪ್ರಾಣಶಬ್ದವಾಚ್ಯನು. ಇಂದ್ರನಲ್ಲ. ಹಾಗಾದರೆ ಇಂದ್ರನು 'ನಾನೇ ಪ್ರಾಣನೆಂದು' ಏಕೆ ಹೇಳಿಕೊಂಡಿರುವನು? ಹೀಗೆಂದರೆ ಇಂದ್ರನಲ್ಲಿ ವಿಷ್ಣುವಿನ ಸಂಬಂಧ ಬಾಹುಳ್ಯವು ಇರುವುದರಿಂದ ಅಮುಖ್ಯ ವೃತ್ತಿಯಿಂದ, ಅಂದರೆ ಇಲ್ಲಿ ಲಕ್ಷಣಾವೃತ್ತಿಯಿಂದ, ತಾನು ಪ್ರಾಣನೆಂದು ಹೇಳಿಕೊಂಡಿರುತ್ತಾನೆ. ಇದಕ್ಕೆ ದೃಷ್ಟಾಂತ ಲೋಕದಲ್ಲಿ ಕಂಡುಬಂದಿದೆ. ಕೆಂಪಗೆ ಕಾದ ಉಕ್ಕಿನ ಗುಂಡನ್ನು ನೋಡಿ ಇದು ಅಗ್ನಿ ಎಂದು. ಅಗ್ನಿಯೂ ಕಬ್ಬಿಣದ ಗುಂಡೂ ಬೇರೆಯಾದರೂ ಬಹು ಅಗ್ನಿ ಸಂಬಂಧವಿರುವ ನಿಮಿತ್ತ ಕಬ್ಬಿಣದ ಗುಂಡನ್ನು ಬೆಂಕಿಯೆಂದು ವ್ಯವಹರಿಸುತ್ತೇವೆ. ಇಲ್ಲಿಯೂ ವಿಷ್ಣುವಿನ ಸಂಬಂಧಬಾಹುಳ್ಯ (ತಾತ್ಕಾಲಿಕ ಆವೇಶರೂಪ ಸಂಬಂಧ) ಇಂದ್ರನಲ್ಲಿರುವುದರಿಂದ ಪ್ರಾಣಾಖ್ಯ ವಿಷ್ಣುವೂ ಇಂದ್ರನೂ ಬೇರೆ ಆದರೂ 'ನಾನು ಪ್ರಾಣನು' ಎಂದು ಇಂದ್ರನು ಹೇಳಿದ್ದಾನೆ. ಹೀಗೆ ವೇದವ್ಯಾಸರು ಬ್ರಹ್ಮಸೂತ್ರದಲ್ಲಿ ಐಕ್ಯಶ್ರುತಿಗಳಿಗೂ ಭೇದಶ್ರುತಿಗಳಿಗೂ ವಿರೋಧವಿಲ್ಲದ ರೀತಿಯಲ್ಲಿ ವ್ಯಾಖ್ಯಾನ ಮಾಡುವ ಕ್ರಮವನ್ನು ತೋರಿಸುತ್ತಾರೆ. ಆ ಸೂತ್ರವಿದು :

ಓಂ ನ ವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮಸಂಬಂಧ ಭೂಮಾಹ್ಯಸ್ಮಿನ್ ಓಂ (ಬ್ರಹ್ಮಸೂತ್ರ ೧-೧-೨೯)

ಅರ್ಥ : ವಕ್ತುಃ=ಬೃಹತೀ ಸಹಸ್ರವನ್ನು ಶಂಸನಮಾಡುವ ವಿಶ್ವಾಮಿತ್ರನಿಗೆ, ಆತ್ಮೋಪದೇಶಾತ್= ಇಂದ್ರನು, 'ಪ್ರಾಣೋ ವಾ ಅಹಮಸ್ಮಿ

ಋಷೇ' ಋಷಿಯೇ! ನಾನು ಪ್ರಾಣನಾಗಿದ್ದೇನೆ, ಎಂದು ತನಗೂ ಪ್ರಾಣನಿಗೂ ಐಕ್ಯವನ್ನು ಉಪದೇಶಮಾಡಿರುವುದರಿಂದ, ನ= ವಿಷ್ಣುವು ಪ್ರಾಣನಲ್ಲ (ಇಂದ್ರನೇ ಪ್ರಾಣನು), ಇತಿ ಚೇತ್ = ಹೀಗೆ ಆಕ್ಷೇಪಮಾಡಿದರೆ (ನ= ಹಾಗಲ್ಲ) 'ಪ್ರಾಣೋಽಹಂ' ಎಂಬ ಇಂದ್ರನ ಮಾತು ಹೇಗೆ ಕೂಡುತ್ತೆ? ಇದಕ್ಕೆ ಸಮಾಧಾನ—ಅಧ್ಯಾತ್ಮ ಸಂಬಂಧ ಭೂಮಾಹ್ಯಸ್ಮಿನ್= ಅಧಿಕಾತ್ಮನಾದ ಅಂದರೆ ಉತ್ತಮಾತ್ಮನಾದ ವಿಷ್ಣುವಿನ ಸಂಬಂಧಬಾಹುಳ್ಯವು ಇಂದ್ರನಲ್ಲಿರುವುದರಿಂದ 'ಪ್ರಾಣೋಽಹಂ' ಎಂದು ಹೇಳಿಕೊಂಡಿರುತ್ತಾನೆ. ಆದ್ದರಿಂದ ಈ ಪ್ರಕರಣದಲ್ಲಿ ಅನೇಕ ಕಡೆ ಶ್ರುತವಾಗಿರುವ ಪ್ರಾಣನು ಇಂದ್ರನಲ್ಲ. ವಿಷ್ಣುವೇ. ಹೀಗೆ ಸಮಾಧಾನ ಪ್ರಕಾರವನ್ನು ವೇದವ್ಯಾಸರೇ ಸೂತ್ರದಲ್ಲಿ ತೋರಿಸಿರುವುದರಿಂದ 'ತತ್ತ್ವಮಸಿ' 'ಸೋಽಹಮಸ್ಮಿ' 'ಅಹಂ ಬ್ರಹ್ಮಾಸ್ಮಿ' ಇತ್ಯಾದಿ ಜೀವೇಶ್ವರರಿಗೆ ಸ್ವರೂಪೈಕ್ಯವನ್ನು ಬೋಧಿಸುವಂತೆ ತೋರುವ ಶ್ರುತಿಗಳಿಗೆ ಲಾಕ್ಷಣಿಕಾರ್ಥ ಅಥವಾ ಗೌಣಾರ್ಥಮಾಡಿ ವಿರೋಧ ಪರಿಹಾರ ಮಾಡಬೇಕೇ ಹೊರ್ತು, ಅಭೇದ ಹೇಳುವ ಶ್ರುತಿಗಳು ತತ್ತ್ವಾವೇದಕ ಭೇದ ಹೇಳುವ ಶ್ರುತಿಗಳು ಅತತ್ತ್ವಾವೇದಕ ಎಂದು ಕೆಲವು ವೇದಗಳಿಗೆ ಅಪ್ರಾಮಾಣ್ಯವನ್ನು ತರುವ ಸಮಾಧಾನವನ್ನು ಹೇಳಬಾರದು.

'ಅತ ಏವ ಪ್ರಾಣ' ಇತಿ ಸೂತ್ರೇ ಪ್ರಾಣೋ ಹರಿಸ್ತ್ವಿತಿ ॥ ೩೯೪ ॥

ಯತ್ರ ಸೂತ್ರಕೃದೇವಾಹ ಶ್ರುತಿತತ್ತ್ವವಿದಗ್ರಣೀಃ ।
ತಸ್ಮಾದಸ್ಮಿನ್ನೈನ್ದ್ರವಾಕ್ಯೇ ಯಃ ಪ್ರಾಣಃ ಹರಿರೇವ ಸಃ ॥ ೩೯೫ ॥

ವಾಚ್ಯಃ ಸೂತ್ರಮತಾಭಿಜ್ಞೈಸ್ತಸ್ಯೈಕ್ಯಂ ಚೋಕ್ತವರ್ತ್ಮನಾ ।
ಇಂದ್ರೇಽಸ್ಮಿನ್ ಬಾಧಿತಮಭೂದ್ವಾಚ್ಯೋಽನ್ಯೋಽರ್ಥಸ್ತತಃ ಶ್ರುತೇಃ

ಶ್ರುತಿಯ ತತ್ತ್ವವನ್ನು ತಿಳಿದವರಲ್ಲಿ ಅಗ್ರಣಿಗಳಾದ ಸೂತ್ರಕಾರರು 'ಅತ ಏವ ಪ್ರಾಣಃ' (೧-೧-೨೩) ಎಂಬ ಸೂತ್ರದಲ್ಲಿ ಪ್ರಾಣಶಬ್ದವಾಚ್ಯನು ಹರಿಯೆಂದು ಹೇಳಿರುವುದರಿಂದ ಈ 'ಪ್ರಾಣೋಽಹಂ' ಎಂಬ ಇಂದ್ರನ ವಾಕ್ಯದಲ್ಲಿ ಶ್ರುತನಾದ ಪ್ರಾಣನು ಹರಿಯೇ ಎಂದು ಸೂತ್ರಾಭಿಪ್ರಾಯವನ್ನು ತಿಳಿದವರಿಂದ ಹೇಳಲ್ಪಡಬೇಕು. ಏಕೆಂದರೆ, ಇಂದ್ರನು ಪ್ರಾಣನು ಎಂದು

ಹೇಳುವುದರಲ್ಲಿ ಮೇಲೆ ಹೇಳಿದ ಬಾಧಕವಿರುವುದರಿಂದು ಬೇರೆ ಅರ್ಥವನ್ನೇ ಹೇಳಬೇಕು.

ಕಿಂಚ ಸೂತ್ರೇ ಸೂತ್ರಕಾರಃ ಸ್ವಯಮೇವ ಹಿ ವಾಗಿಯಮ್ ।
ಅಧ್ಯಾತ್ಮಸಂಬಂಧಭೂಯಸ್ತ್ವೇನ ಶಕ್ರೇ ಮಹಾತ್ಮನಿ ॥ ೪೦೧ ॥
ಪ್ರವೃತ್ತೇತ್ಯಾಹ ಗಂಗಾಯಾಂ ಘೋಷ ಇತ್ಯಾದಿ ವಾಕ್ಯವತ್ ।

ಅಲ್ಲದೆ ಸೂತ್ರದಲ್ಲಿ [(೧-೧-೨೯)–ಶ್ಲೋಕ ೩೯೨] ಸೂತ್ರಕಾರರು ತಾವೇನೇ ಈ 'ಪ್ರಾಣೋಽಹಂ' ಎಂಬ ವಾಕ್ಯ ಅಧ್ಯಾತ್ಮನ ಅಂದರೆ ಪರಮಾತ್ಮನ ಆವೇಶರೂಪ ಸಂಬಂಧ ಬಾಹುಳ್ಯವು ಮಹಾತ್ಮನಾದ ಶಕ್ರನಲ್ಲಿ ಇರುವುದರಿಂದ 'ಗಂಗೆಯಲ್ಲಿ ಹಳ್ಳಿಯು' ಎಂಬುವ ವಾಕ್ಯವು ಹೇಗೋ ಹಾಗೆ ಲಕ್ಷಣಾವೃತ್ತಿಯಿಂದ ಪ್ರವೃತ್ತವಾಗಿದೆ, ಎಂದು ಹೇಳಿರುವರು. "ಗಂಗಾಯಾಂ ಘೋಷಃ" ಗಂಗೆಯಲ್ಲಿ ಹಳ್ಳಿ. ಗಂಗಾಪದವು ಗಂಗಾ ನದಿಯನ್ನು ತಿಳಿಸುವುದರಲ್ಲಿ ಶಕ್ತಿಯುಳ್ಳದ್ದು. ಈ ಅರ್ಥ ಹೇಳಿದಲ್ಲಿ ಹಳ್ಳಿಯು ಗಂಗಾಪ್ರವಾಹದಲ್ಲಿದೆ ಎಂದು ಅರ್ಥವಾಗುತ್ತೆ. ಇದು ಯೋಗ್ಯವಲ್ಲ. ಆದ್ದರಿಂದ ಗಂಗಾಪದವು ಇಲ್ಲಿ ಗಂಗಾಪ್ರವಾಹಕ್ಕೆ ಸಂಬಂಧಪಟ್ಟ ತೀರವನ್ನು ಹೇಳುತ್ತೆ. ಹೀಗೆ ಹೇಳುವುದೇ ಲಕ್ಷಣಾವೃತ್ತಿಯೆಂದು ಕರೆಯಲ್ಪಡುತ್ತೆ. 'ಪ್ರಾಣೋಽಹಂ' ಎಂಬ ಇಂದ್ರನ ಮಾತಿನಲ್ಲಿಯೂ ಹೀಗೆಯೇ 'ಅಹಂ' ಶಬ್ದವು ಇಂದ್ರನನ್ನು ಹೇಳದೇ ಅವನಲ್ಲಿ ಆವಿಷ್ಟನಾಗಿರುವ ವಿಷ್ಣುವನ್ನು ಹೇಳುತ್ತೆ.

ತಸ್ಮಾದೀದೃಶವಾಕ್ಯಾನಾಂ ಹರ್ಯೈರಪಿ ನ ಸಿದ್ಧ್ಯತಿ ॥ ೪೦೨ ॥
ಹರಿಣಾ ಲೋಕಗುರುಣಾ ಜೀವಸ್ಯಾನ್ಯೋಪಜೀವಿನಃ ।
ತ್ರಿದಶಾಧೀಶಶಕ್ರಸ್ಯಾಪ್ಯಯೋಗ್ಯಾ ಹರಿಣೈಕತಾ ॥ ೪೦೩ ॥
ತಸ್ಮಾದಪ್ರತಿಮಲ್ಲಾಽಭೂದ್ವೇದವಾಕ್ ತತ್ತ್ವವಾದಿನಾಮ್ ।

ಆದ್ದರಿಂದ ಇಂತಹ ವಾಕ್ಯಗಳಿಂದಲೇ ಆಗಲಿ ಬೇರೆ ಇತರ ವಾಕ್ಯಗಳಿಂದಲೇ ಆಗಲಿ ಅನ್ಯನಾದ ಪರಮಾತ್ಮನನ್ನು ಉಪಜೀವಿಸಿಕೊಂಡಿರುವ

ಜೀವನಿಗೆ ಲೋಕಗುರುವಾದ ಹರಿಯಿಂದ ಐಕ್ಯವು ಸಿದ್ಧಿಸುವುದಿಲ್ಲ. ಈ ಹರಿಯಿಂದ ಐಕ್ಯವು ದೇವಾಧೀಶನಾದ ಇಂದ್ರನಿಗೇನೇ ಯೋಗ್ಯವಲ್ಲದ ಮೇಲೆ ಅಲ್ಪರಾದ ಬೇರೆ ಜೀವರಿಗೆ ಯೋಗ್ಯವಾದೀತೇನು? ಆದ್ದರಿಂದ ತತ್ತ್ವವಾದಿಗಳು ಭೇದದಲ್ಲಿ ಪ್ರಮಾಣವಾಗಿ ಉದಹರಿಸುವ "ದ್ವಾಸುಪರ್ಣೇತ್ಯಾದಿ" ಶ್ರುತಿಯು ಪ್ರತಿಮಲ್ಲನಿಲ್ಲದಾಯಿತು. ಅಂದರೆ ಪ್ರತಿಪಕ್ಷವಿಲ್ಲದಾಯಿತು.

ಹಿಂದೆ ನಾನೇ ಪ್ರಾಣನೆಂದ ಸು
ರೇಂದ್ರನಾಶಯ ವ್ಯಾಸ ತತ್ಸಂ
ಬಂಧ ದಾಹುಳ್ಯದಲಿ ನಾನೇ ಪ್ರಾಣನೆಂದೆನಿಸಿ ।
ಎಂದು ತೋರನೆ ಬಲ್ಲ ಬುಧರದ
ರಿಂದ ನಾನೇ ಬ್ರಹ್ಮನೆಂಬೀ
ವೃಂದದುಕ್ತಿ ಬ್ರಹ್ಮಸಂಬಂಧದಲೆನಬೇಕು ॥

(ಸ್ವಪ್ನ ಪದ)

'ಸರ್ವಂ ಖಲ್ವಿದಂ ಬ್ರಹ್ಮ'

ಈಗ "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಶ್ರುತಿವಾಕ್ಯಕ್ಕೆ ಮಾಯಾವಾದಿಗಳು ಮಾಡಿರುವ ಅರ್ಥವನ್ನು ನಿರಾಕರಿಸುತ್ತಾರೆ.

***ಸರ್ವಂ ಖಲ್ವಿತಿ ವಾಕ್ಯಾಚ್ಚ ಘಟಕುಡ್ಯಾದಯೋ ಜಡಾಃ ॥೪೦೪॥**
ಬ್ರಹ್ಮತಾಂ ಯಾಂತಿ ನೋ ಚೇತ್ತೇ ಸರ್ವಶಬ್ದಃ ಪ್ರಕುಪ್ಯತಿ ।
ಅನಿದಂರೂಪಜೀವಸ್ಯ ಬ್ರಹ್ಮತಾ ಯದಿ ಕಥ್ಯತೇ ॥ ೪೦೫ ॥
ಇದಂ ಪದಂ ತದಾ ಕುಪ್ಯೇದ್ಯತಸ್ತನ್ನಾನಿದಂ ವದೇತ್ ।
ಸರ್ವ ಪದಂ ಚ ಯತ್ಕುಪ್ಯೇಜ್ಜೀವಮಾತ್ರಗ್ರಹೇ ತವ ॥ ೪೦೬ ॥

'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಶ್ರುತಿಗೆ ಸರ್ವವೂ ಬ್ರಹ್ಮನೆಂದು ಅರ್ಥಮಾಡಿದಲ್ಲಿ, ಗಡಿಗೆ ಗೋಡೆ ಮೊದಲಾದ ಸರ್ವ ಜಡಪದಾರ್ಥಗಳೂ ಕೂಡ ಬ್ರಹ್ಮತ್ವವನ್ನು ಹೊಂದುತ್ತವೆ. ಹಾಗಿಲ್ಲದಲ್ಲಿ 'ಸರ್ವ' ಶಬ್ದವು

* ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾನ್ತ ಉಪಾಸೀತ ॥ ಛಾಂ ೩-೧೪-೧.

ಕೋಪಿಸಿಕೊಂಡೀತು. ಅಂದರೆ 'ಸರ್ವ' ಶಬ್ದದ ಅರ್ಥವನ್ನು ಸಂಕೋಚ ಮಾಡಲಾಗುವುದಿಲ್ಲ, ಎಂದು ಅಭಿಪ್ರಾಯ. (ಅನಿದಂ) ದೃಶ್ಯಪ್ರಪಂಚದಿಂದ ಅಂದರೆ ಮಿಥ್ಯಾಭೂತವಾದ ಜಡಪ್ರಪಂಚದಿಂದ ಅನ್ಯನಾದ ಜೀವನಿಗೆ ಬ್ರಹ್ಮತ್ವವನ್ನು ಇಲ್ಲಿ ಹೇಳಿದೆ ಎಂದಲ್ಲಿ 'ಇದಂ' ಎಂಬ ಪದವು ಕೋಪ ಗೊಂಡೀತು. 'ಇದಂ' ಎಂಬ ಪದವು 'ಅನಿದಂ' ರೂಪನಾದ ಜೀವನನ್ನು ಹೇಳುತ್ತದೆಯೇನು? ಇಷ್ಟೇ ಅಲ್ಲ. ಜೀವನನ್ನು ಮಾತ್ರ ಇಟ್ಟುಕೊಂಡಲ್ಲಿ 'ಸರ್ವಂ' ಎಂಬ ಪದವೂ ಕೂಡ ಕೋಪಗೊಂಡೀತು.

ಕಥಂ ಮನ್ಮಾತ್ಮಲ್ಪಮರ್ಥಂ ವದಸ್ಯಜ್ಞಾತಿದುರ್ಮತೇ ।
ಯಾವನಾಲೌದನಾತ್ಕುಪ್ಯೇದ್ಯಥಾ ಕ(ರ್ಣಾ)ರ್ನಾಟಕಾಂಗನಾ ॥

ಎಲೈ ಅಜ್ಞ, ಅತಿ ದುಷ್ಟಬುದ್ಧಿಯುಳ್ಳವನೇ! ನನಗೆ ಅಲ್ಪಾರ್ಥವನ್ನು ಏಕೆ ಹೇಳುತ್ತೀ? ಎಂಬುದಾಗಿ ಜೋಳದ ಅನ್ನವನ್ನು ಹಾಕಿದರೆ ಕರ್ನಾಟಕ ಸ್ತ್ರೀಯು ಹೇಗೆ ಕೋಪಿಸಿಕೊಳ್ಳುವಳೋ ಹಾಗೆ 'ಸರ್ವ' ಶಬ್ದವು ಕೋಪಿಸಿ ಕೊಳ್ಳುತ್ತದೆ.

ಅನಿದಂರೂಪಜೀವಾರ್ಥವಾಚಿತ್ವೇ ಕಥಿತೇ ತ್ವಯಾ ।
ಇದಂ ಪದಂ ತಥಾ ಕುಪ್ಯೇತ್ಸ್ವಾಯೋಗ್ಯಾರ್ಥೇ ನಿಯೋಜನಾತ್ ॥

ಅಲ್ಪಾನ್ನದಾನೇ ಚ ಕುಪ್ಯೇದ್ಯಥಾ ಸ್ಥೂಲೋದರೀ ವಧೂಃ ।
ಸರ್ವಂ ಪದಂ ತಥಾ ಕುಪ್ಯೇಜ್ಜೀವಮಾತ್ರಪರಿಗ್ರಹೇ ॥ ೪೦೯ ॥

'ಇದಂ' ಪದಕ್ಕೆ 'ಅನಿದಂ' ರೂಪನಾದ ಜೀವನೆಂದು ನೀನು ಅರ್ಥ ಮಾಡಿದಲ್ಲಿ 'ಇದಂ' ಪದವು ತನಗೆ ಯೋಗ್ಯವಲ್ಲದ ಅರ್ಥ ಹೇಳಿದ್ದರಿಂದ ಕೋಪಿಸಿಗೊಂಡೀತು, ಮತ್ತು ಹೀಗೆ ಹೇಳುವುದರಿಂದ 'ಸರ್ವಂ' ಪದಕ್ಕೆ ಸಂಕೋಚಾರ್ಥಮಾಡಿದ್ದರಿಂದ ದೊಡ್ಡ ಹೊಟ್ಟೆಯುಳ್ಳ ವಧುವಿಗೆ ಅಲ್ಪಾನ್ನ ಹಾಕಿದರೆ ಹೇಗೋ ಹಾಗೇ ಅದು ಕೋಪಿಸಿಕೊಂಡೀತು.

ಈ ಎರಡು ಶ್ಲೋಕಗಳ ತಾತ್ಪರ್ಯ: "ಸರ್ವಂ ಖಲ್ವಿದಂ ಬ್ರಹ್ಮ" ಇಲ್ಲಿ 'ಇದಂ' ಪದಕ್ಕೆ ಜೀವನೆಂದು ಅರ್ಥಮಾಡಿದರೆ ಮೇಲಿನ ವಾಕ್ಯಕ್ಕೆ ಸರ್ವ

ಜೀವರೂ ಬ್ರಹ್ಮಾಭಿನ್ನರು ಅಥವಾ ಬ್ರಹ್ಮನಿಂದ ಐಕ್ಯವುಳ್ಳವರು ಎಂದು ಅರ್ಥವಾಯಿತು. ಹೀಗೆ ಹೇಳಿದಲ್ಲಿ ಎರಡು ದೋಷ. (೧) ಅನಿದಂ ರೂಪ ನಾದ ಜೀವನು ಇದಂ ಶಬ್ದದಿಂದ ವಾಚ್ಯನಾಗಿದ್ದಾನೆಂದು ಹೇಳುವುದು. (೨) ಜಡ ಪದಾರ್ಥಗಳನ್ನು ಬಿಟ್ಟು ಜೀವನನ್ನು ಮಾತ್ರ ಗ್ರಹಣಮಾಡಿದ್ದರಿಂದ 'ಸರ್ವಂ' ಶಬ್ದಕ್ಕೆ ಸಂಕೋಚಾರ್ಥ ಮಾಡಿದಂತಾಯಿತು.

ಚಿತ್ರಂ ತವೈಕ್ಯವಾಕ್ಯೇನ ಜಡಬ್ರಹ್ಮೈಕತಾ ಪರವಾ್ ।
ಸಿದ್ಧೇದ್ಯತೋ ಜಡಜಗದಾನಂತ್ಯಾತ್ಸರ್ವತೋಚಿತವಾ್ ॥ ೪೧೦ ॥

ಚಿನ್ಮಾತ್ರರೂಪಜೀವೈಕ್ಯವಾರ್ತಾಽಪ್ಯತ್ರ ನ ಶೋಭತೇ ।
ರೋದಿತಿ ಸ್ವೋದರಾಪೂರ್ತ್ಯಾ ಸಂಕೋಚೇ ಸರ್ವವಾಗಿಯಂ ॥

ಇದು ತಾನೇ ಆಶ್ಚರ್ಯ. ನಿನ್ನ ಐಕ್ಯವಾಕ್ಯದಿಂದ ಕೇವಲ ಜಡಕ್ಕೂ ಬ್ರಹ್ಮನಿಗೂ ಐಕ್ಯ ಸಿದ್ಧಿಸಿತು. ಏಕೆಂದರೆ, ಜಡವಾದ ಜಗತ್ತು ಅನಂತ ವಾದ್ದರಿಂದ ಜಡಜಗತ್ತಿಗೆ ಸರ್ವತ್ವವು ಉಚಿತವಾದದ್ದು. ಚೇತನಮಾತ್ರ ಸ್ವರೂಪನಾದ ಜೀವನಿಂದ ಐಕ್ಯದ ಸಮಾಚಾರವೇ ಅಲ್ಲಿ ಶೋಭಿಸುವುದಿಲ್ಲ. ಹಾಗೆ ಸಂಕೋಚಮಾಡಿದಲ್ಲಿ ಈ 'ಸರ್ವಂ' ಎಂಬ ವಾಕ್ (ಮಾತು) ಹೊಟ್ಟೆ ತುಂಬದಿರುವುದರಿಂದ ಅಳುತ್ತದೆ.

ರಸವದ್ಗಂಧವದ್ದೃಶ್ಯಂ ವಿಶ್ವಂ ಬಹು ಚ ಪೂರ್ತಯೇ ।
ಸ್ಥಾಪಯೇದ್ವಿರಸಂ ಜೀವಮೇವಾಸತ್ಯಂ ಕರೋತಿ ಚ ॥ ೪೧೨ ॥

'ಸರ್ವಂ' ಶ್ರುತಿಯು ರಸದಿಂದಲೂ ಗಂಧದಿಂದಲೂ ಕೂಡಿದ ಕಾಣ ಬಹುದಾದ ಪ್ರಪಂಚವನ್ನು (ಉದರಪೂರಣಕ್ಕಾಗಿ) ಹೊಟ್ಟೆ ತುಂಬಿಸಿ ಕೊಳ್ಳುವುದಕ್ಕಾಗಿ, ಸ್ಥಾಪಿಸೀತು (ಉಳಿಸೀತು). ರಸವಿಲ್ಲದ ಜೀವನನ್ನೇ ಅಸತ್ಯವನ್ನಾಗಿ ಮಾಡುತ್ತದೆ.

ಇಲ್ಲಿ ರೂಪಕಾಲಂಕಾರದಿಂದ ಹೇಳುತ್ತಾರೆ. 'ವಾಕ್' ಇದು ಸ್ತ್ರೀ ಲಿಂಗ. 'ಸರ್ವಂ' ಎಂಬ ವಾಕ್‌ರೂಪ ಸ್ತ್ರೀಯು ಭೋಜನಮಾಡಲು ರಸ ಗಂಧಗಳುಳ್ಳ ಕಾಣಿಸುವ ಜಗತ್ತನ್ನು ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ

ಸ್ಥಾಪಿಸಿಯಾಳು (ಉಳಿಸಿಯಾಳು) ಕಾಣಿಸದ ರಸ ಗಂಧ ಯಾವುದೂ ಇಲ್ಲದ ಜೀವನನ್ನು ಅಸತ್ಯನನ್ನಾಗಿ ಮಾಡಿಯಾಳು. ಹೀಗೆ ಹೇಳುವುದರ ಅಭಿಪ್ರಾಯವಿದು. ಸರ್ವ ಶಬ್ದಕ್ಕೆ ಸಂಕೋಚಾರ್ಥ ಹೇಳಿದರೂ ಸ್ವಲ್ಪ ವಾದದ್ದನ್ನು ಬಿಡುವ ಸಂಕೋಚಾರ್ಥವನ್ನು ಹೇಳಬೇಕು. ಜೀವಜಡಾತ್ಮಕ ವಾದ ಜಗತ್ತಿನಲ್ಲಿ ಜಡಾತ್ಮಕವಾದ ಪ್ರಪಂಚವು ಚೇತನಾತ್ಮಕ ಪ್ರಪಂಚ ಕ್ಕಿಂತ ಬಹುವಾದದ್ದು. ಆದ್ದರಿಂದ ಅಲ್ಪವಾದದ್ದನ್ನು ಬಿಟ್ಟು ಸರ್ವಶಬ್ದಕ್ಕೆ ಜಡಾತ್ಮಕವಾದ ಪ್ರಪಂಚವೆಂದೇ ನೀನು ಅರ್ಥಮಾಡಬೇಕು. ಹಾಗೆ ಮಾಡಿದಲ್ಲಿ ಬ್ರಹ್ಮನಿಗೆ ಜಡದಿಂದ ಐಕ್ಯವು ಹೇಳಿದ ಹಾಗಾಯಿತು. ಈ ಅರ್ಥ ವನ್ನು ಸಾಹಿತ್ಯ ವೈಖರಿಯಿಂದ ನಿರೂಪಿಸಿರುತ್ತಾರೆ.

ಸ್ವನಾಶಭೀತ್ಯಾ ಚಕಿತಾ ಕ್ಷಿಪೇನ್ನ ಚ ಜಡಂ ಜಗತ್ ।
ತದ್ಬ್ರಹ್ಮಾಭಿನ್ನತಾ ವಾಕ್ ತೇ ತ್ವದ್ವರ್ತ್ಮವ್ಯತಿರೇಕತಃ ॥ ೪೧೩ ॥
ಅಭೇದವಾದಿನೋ ಜೀವಾ ನ ಸನ್ತೀತ್ಯೇವ ಶಂಸತಿ ।

"ಸರ್ವಂ ಖಲ್ವಿದಂ ಬ್ರಹ್ಮ" ಎಂಬೀ ಶ್ರುತಿಯು ತಾನು ನಾಶವಾದೇನು ಎಂಬ ಭಯದಿಂದ ನಡುಗುವವಳಾಗಿ ಜಡವಾದ ಜಗತ್ತನ್ನು ದೂರ ಬಿಸಡುವು ದಿಲ್ಲ. ಇದರ ಅಭಿಪ್ರಾಯ. ಶ್ರುತಿಯಲ್ಲಿನ 'ಸರ್ವಂ' ಎಂಬ ಶಬ್ದವು ಜಡವೆಂದಿಟ್ಟುಕೊಂಡಲ್ಲಿ ಜಡಪ್ರಪಂಚವು ಬ್ರಹ್ಮವೆಂದು ಶ್ರುತಿಗೆ ಅರ್ಥವಾಗು ತ್ತದೆ. ಬ್ರಹ್ಮಸತ್ಯನಾದ್ದರಿಂದ ಆ ಬ್ರಹ್ಮನಿಂದ ಬೇರೆಯಲ್ಲದ ಜಡಜಗತ್ತು ಸ್ವರೂಪದಿಂದ ಸತ್ಯವಾಯಿತು. ಹೀಗಲ್ಲದೆ 'ಸರ್ವಂ' ಎಂದರೆ ಜೀವ ಸಮೂಹವೆಂದು ಅರ್ಥ ಮಾಡಿದಲ್ಲಿ, ಜೀವಸಮೂಹವು ಸತ್ಯವಾದೀತು. ಜಡವು ಸತ್ಯವಲ್ಲದೇ ಹೋಗಬೇಕು. ಶ್ರುತಿಯು ಜಡವಾದ್ದರಿಂದ ಶ್ರುತಿಯೂ ಇಲ್ಲದಂತಾಗಬೇಕಾದೀತು. ಆದ್ದರಿಂದ ತನ್ನ ನಾಶವಾದೀತು ಎಂಬ ಭಯ ದಿಂದ 'ಸರ್ವಂ' ಎಂಬ ಪದಕ್ಕೆ ಜಡಪ್ರಪಂಚವೆಂದು ಅರ್ಥಮಾಡುವುದ ರಲ್ಲಿಯೇ ಶ್ರುತಿಗೆ ತಾತ್ಪರ್ಯ. ಆದ್ದರಿಂದ ನಿನ್ನ ಬ್ರಹ್ಮನಿಂದ ಅಭೇದವನ್ನು ಹೇಳುವ "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ವಾಕ್ಯು ನಿನ್ನ ಮಾರ್ಗವನ್ನು ಬಿಟ್ಟು ಅಂದರೆ ನಿನ್ನ ಮತಕ್ಕೆ ವಿರುದ್ಧವಾಗಿ ಅಭೇದವಾದಿಗಳಿಗೆ ಜೀವ ಬ್ರಹ್ಮರಿಗೆ ಐಕ್ಯವನ್ನು ಹೇಳತಕ್ಕ ಜೀವರುಗಳೇ ಇಲ್ಲವೆಂದು ಪ್ರತಿಪಾದನೆ ಮಾಡಿದಂತಾಯ್ತು.

ಏತಾವತೈವ ಸಾರ್ಥಕ್ಯಾಜ್ಜಡಾನಸ್ಮಾಂಶ್ಚ ರಕ್ಷತಿ ॥ ೪೧೪ ॥

ಯನ್ನಾಸ್ತಿಕಃ ಸ್ವಯಂ ನಶ್ಯೇದಾಸ್ತಿಕಸ್ತು ನ ನಶ್ಯತಿ ।
ಯದ್ಯಭೇದಂ ತಸ್ಯವದೇಜ್ಜಗತೋಽಪಿ ವದೇದ್ಧಿತಂ ॥ ೪೧೫ ॥

'ಸರ್ವಂ' ಎಂಬ ಶಬ್ದದಿಂದ ಜಡವನ್ನು ತೆಗೆದುಕೊಂಡು ಅರ್ಥ ಮಾಡುವುದರಿಂದ ಜಡವನ್ನೂ ನಮ್ಮನ್ನೂ ಶ್ರುತಿಯು ರಕ್ಷಿಸುತ್ತದೆ. ಇದರ ಅಭಿಪ್ರಾಯ. ನಾವು (ತತ್ತ್ವವಾದಿಗಳು) ಬ್ರಹ್ಮನಿಂದ ಭಿನ್ನರಾದ ಜೀವರುಗಳು ಇರುವರು ಎಂದು ಒಪ್ಪಿರುವೆವು. ಶ್ರುತಿಯು ಜಡವು ಸತ್ಯವೆಂದು ಹೇಳಿತು. ಜೀವರು ಸತ್ಯವಲ್ಲವೆಂದು ಹೇಳಲಿಲ್ಲ. ಆದ್ದರಿಂದ ಆಸ್ತಿಕರಾದ ತತ್ತ್ವವಾದಿಗಳಿಗೆ ಜೀವ ಜಡ ಎರಡೂ ಉಳಿದ ಹಾಗಾಯಿತು. ಏಕೆಂದರೆ, ಇಲ್ಲವೆಂಬುವ ನಾಸ್ತಿಕನು ತಾನಾಗಿಯೇ ನಷ್ಟನಾದಾನು. ಆಸ್ತಿಕನಾದರೋ ಅಂದರೆ ಜೀವರು ಇದ್ದಾರೆಂದು ಹೇಳುವವನು ನಾಶವಾಗುವುದಿಲ್ಲ. ಜೀವನಿಂದ ಅಭೇದವನ್ನು ಹೇಳುತ್ತದೆ ಎಂದು ನೀನು ಅಂದಲ್ಲಿ ಜಡದಿಂದಲೂ ಅಭೇದವನ್ನು ಹೇಳುತ್ತದೆ ಎಂದೇ ಹೇಳಬೇಕು.

ಸಕೃಚ್ಛ್ರುತಸ್ಯ ವಾಕ್ಯಸ್ಯ ಕೋಽರ್ಥದ್ವಯಮುದೀರಯೇತ್ ।
ತತ್ಪ್ರವೃತ್ತಿನಿವೃತ್ತೀ ದ್ವೇ ಸಹೈವ ಜಡಜೀವಯೋಃ ॥ ೪೧೬ ॥

ಒಂದಾವರ್ತಿ ಶ್ರುತವಾದ ವಾಕ್ಯಕ್ಕೆ ಯಾರು ಎರಡರ್ಥವನ್ನು ಹೇಳಿಯಾರು? ಆದ್ದರಿಂದ 'ಸರ್ವಂ' ಎಂಬ ಶಬ್ದಕ್ಕೆ ಜೀವ, ಜಡ ಎರಡನ್ನೂ ಇಟ್ಟುಕೊಳ್ಳಬೇಕು, ಅಥವಾ ಎರಡನ್ನೂ ಬಿಡಬೇಕು. ಒಂದನ್ನು ಬಿಟ್ಟು ಇನ್ನೊಂದನ್ನು ಇಟ್ಟುಕೊಳ್ಳಲಾಗುವುದಿಲ್ಲ.

ಕಿಂ ಚ ಸಂಕೋಚಪಕ್ಷೇ ತೇ ಮತ್ಸ್ಯಾದ್ಯಾನ್ ಸ್ವೋಪಕಾರಕಾನ್ ।
ಶ್ರುತಿರ್ಬ್ರಹ್ಮೇತಿ ಶಂಸೇಚ್ಚ ತ್ಯಜೇದಾರ್ತಮಿದಂ ಜಗತ್ ॥ ೪೧೭ ॥

ಅಲ್ಲದೇ ಸರ್ವ ಶಬ್ದಕ್ಕೆ ಅರ್ಥ ಸಂಕೋಚಮಾಡಬೇಕಾದರೆ, ತನಗೆ ಉಪಕಾರವನ್ನು ಮಾಡುವ ಮತ್ಸ್ಯಾದಿ ಪರಮಾತ್ಮನ ರೂಪಗಳನ್ನು ಶ್ರುತಿಯು ಬ್ರಹ್ಮನೆಂದು ಶಂಸನ ಮಾಡೀತು. ದುಃಖಿಯಾದ ಜಗತ್ತನ್ನು ಬಿಟ್ಟೀತು.

ಅನಾರ್ತಬ್ರಹ್ಮಣಾ ಸಾಕಂ ಕಥಮಾರ್ತಾಭಿದಾಂ ವದೇತ್ ।
ಮತ್ಸ್ಯಾದಯೋಽಪಿ ಸರ್ವಜ್ಞಾ ಮೂಲರೂಪಂ ಚ ತಾದೃಶಮ್ ॥
ಅತಸ್ತಯೋರೈಕ್ಯಮೇವ ವದಾಮೀತ್ಯಾಶಯಃ ಶ್ರುತೇಃ ।

ದುಃಖರಹಿತನಾದ ಬ್ರಹ್ಮನಿಂದ ದುಃಖದಿಂದ ಕೂಡಿದ ಜೀವ ಸಮೂಹಕ್ಕೆ ಶ್ರುತಿಯು ಅಭೇದವನ್ನು ಹೇಗೆ ತಾನೇ ಹೇಳೀತು? ಮತ್ಸ್ಯಾದಿ ರೂಪಗಳು ಪ್ರತಿಯೊಂದೂ ಸರ್ವಜ್ಞವಾದವುಗಳು. ಮೂಲರೂಪವೂ ಅಂತಹುದೇ. ಆದ್ದರಿಂದ ಅವೆರಡಕ್ಕೂ ಐಕ್ಯವನ್ನು ಹೇಳುತ್ತೇನೆಂದು ಶ್ರುತಿಗೆ ಅಭಿಪ್ರಾಯ.

ಅನಂತಾನಂತರೂಪೇಣ ಸರ್ವಶಬ್ದಾಭಿಧೇಯತಾ ॥ ೪೧೯ ॥

ಸುತರಾಮಸ್ತಿ ತತ್ಸ್ವಾರ್ಥಪೂರ್ತ್ಯಾ ಸೋಽಪಿ ನ ಕುಪ್ಯತಿ ।
ಅತಸ್ತಂ ವಚ್ಮಿ ನೈವಾಹಂ ಹನ್ಮಿ ಮತ್ಸದೃಶಂ ಜಗತ್ ॥ ೪೨೦ ॥

ಶ್ರಿಯಾಽಭಿಮನ್ಯಮಾನಾಹಂ ಸಾಕ್ಷಾನ್ಮತ್ಸ್ಯಾದಿಕಾನಪಿ ।
ಯತಃ ಪಶ್ಯಾಮಿ ತೇ ನೇದಂ ಪದೇನಾಪಿ ಚ ವಚ್ಮಿ ತಾನ್ ॥೪೨೧॥

ಇತ್ಯಾಲೋಚ್ಯ ಶ್ರುತಿಃ ಸಾಧ್ವೀ ಮಧ್ವಸ್ಯೋಕ್ತಿಮಮಾನಯತ್ ।

ಪರಮಾತ್ಮನಿಗೆ ಅನಂತಾನಂತರೂಪಗಳಿರುವುದರಿಂದ ' ಸರ್ವ ' ಶಬ್ದ ದಿಂದ ವಾಚ್ಯತ್ವವು ಸುತರಾಂ ಅವನಿಗೆ ಉಂಟು. ಅಂದಮೇಲೆ, ಆ ಸರ್ವ ಶಬ್ದವೂ ಕೂಡ ಸರ್ವಶಬ್ದದ ಪೂರ್ಣಾರ್ಥವು ಬಂದುದರಿಂದ ಕೋಪಿಸಿ ಕೊಳ್ಳುವುದೂ ಇಲ್ಲ. ಆದ್ದರಿಂದ ಅವನನ್ನು ಸರ್ವಶಬ್ದದಿಂದ ಹೇಳುತ್ತೇನೆ. ನನಗೆ ಸದೃಶವಾದ ಜಗತ್ತನ್ನು ನಾಶಮಾಡುವುದಿಲ್ಲ. ಶ್ರೀದೇವಿಯಿಂದ ಅಭಿಮನ್ಯಮಾನಳಾದವಳು ನಾನು. ಸಾಕ್ಷಾತ್ತಾಗಿ ಮತ್ಸ್ಯಾದಿರೂಪಗಳನ್ನು ಕೂಡ ನೋಡುತ್ತೇನೆಯಾದ್ದರಿಂದ ಆ ಮತ್ಸ್ಯಾದಿರೂಪಗಳನ್ನು " ಸರ್ವಂ ಖಲ್ವಿದಂ ಬ್ರಹ್ಮ " ಎಂಬುದರಲ್ಲಿರುವ ' ಇದಂ ' ಪದದಿಂದ ಹೇಳುತ್ತೇನೆ. ಹೀಗೆ ಯೋಚಿಸಿ ಪತಿವ್ರತೆಯಾದ ಶ್ರುತಿಯು ಶ್ರೀ ಮಧ್ವಾಚಾರ್ಯರ ಉಕ್ತಿ ಯನ್ನು ಮರ್ಯಾದೆಮಾಡಿತು.

ರೂಪಕಾಲಂಕಾರದಿಂದ ಈ ವಾಕ್ಯವು ಹೊರಟಿದೆ. ಜಡವಾದ ಶ್ರುತಿಯು ಪರಮಾತ್ಮನ ರೂಪಗಳನ್ನು ನೋಡುತ್ತೇನೆಂದು ಹೇಳಿರುವುದು ತನಗೆ ಅಭಿಮಾನಿಯಾದ ಲಕ್ಷ್ಮೀದೇವಿಯು ಪರಮಾತ್ಮನ ರೂಪಗಳನ್ನು ನೋಡುತ್ತಾಳಾದ್ದರಿಂದ ಔಪಚಾರಿಕವು.

" ಅನಂತಾನಂತರೂಪೇಣ ಸರ್ವಶಬ್ದಾಭಿಧೇಯತಾ " ವಾಕ್ಯದ ವಿವರಣೆ : – ಇಲ್ಲಿ ಗೂಢವಾದ ಅಭಿಪ್ರಾಯವು ಹೀಗೆಂದು ತೋರುತ್ತೆ. 'ಸರ್ವಶಬ್ದಾಭಿಧೇಯತಾ' ಎಂಬಲ್ಲಿ ' ಸರ್ವ ಇತಿ ಶಬ್ದವಾಚ್ಯತಾ '–'ಸರ್ವ' ಎಂಬ ಶಬ್ದದಿಂದ ವಾಚ್ಯತಾ ಎಂದು ಒಂದರ್ಥ ಮತ್ತೊಂದು ಎಲ್ಲ ಶಬ್ದಗಳಿಂದ ವಾಚ್ಯತಾ. ಎಲ್ಲ ಪದಾರ್ಥಗಳಲ್ಲಿಯೂ ಅಂತರ್ಯಾಮಿಯಾಗಿ ಪರಮಾತ್ಮನು ಇರುವನಷ್ಟೆ. ಆಯಾಯಾ ಪದಾರ್ಥಗಳ ಹೆಸರು ಮುಖ್ಯವಾಗಿ ಅಂತರ್ಯಾಮಿಯದು. ' ಇದಂ ಸರ್ವಂ ' = ಇದೆಲ್ಲಾ – ಸರ್ವ ಪದಾರ್ಥಗಳಲ್ಲಿರುವ, ಅಂತರ್ಯಾಮಿರೂಪಗಳೆಲ್ಲಾ, ಬ್ರಹ್ಮ=ಬ್ರಹ್ಮವು (ಬ್ರಹ್ಮನು). ಮುಖ್ಯಾರ್ಥಕ್ಕೆ ಬಾಧಕವಿಲ್ಲದಲ್ಲಿ ಆ ಅರ್ಥವನ್ನೇ ಹೇಳುವುದು ಉಚಿತ. ಎದುರಿಗೆ ಕಾಣಿಸುವ ವಸ್ತುವಿಗೆ ' ಇದಂ ' ಎಂದು ಹೇಳಬೇಕು. ಪರಮಾತ್ಮನು ಕಾಣಿಸುವುದಿಲ್ಲವಲ್ಲ, ಈ ಬಾಧಕವಿರುವುದರಿಂದ ಅಮುಖ್ಯಾರ್ಥವನ್ನು ಹೇಳಿರಿ, ಎಂದರೆ ಇದು ಬಾಧಕವಲ್ಲ. ಶ್ರುತಿಗೆ ಅಭಿಮಾನಿಯಾದ ರಮಾದೇವಿಯು ಪರಮಾತ್ಮನ ರೂಪಗಳನ್ನು ನೋಡುತ್ತಾಳೆ. " ನನಗೆ ಕಾಣುತ್ತಿರುವ ಎಲ್ಲ ಪರಮಾತ್ಮನ ರೂಪಗಳೂ ಬ್ರಹ್ಮವೇ " ಖಲು = ಇದು ಪ್ರಮಾಣಪ್ರಮಿತವಾದದ್ದು. ಹೀಗೆ ಹೇಳಿದಲ್ಲಿ ' ಸರ್ವ ' ಶಬ್ದಕ್ಕೆ ಸಂಕೋಚಾರ್ಥ ಹೇಳಿದ ದೋಷ ಬರುವುದಿಲ್ಲ. ಬ್ರಹ್ಮ ಎಂದು ಹೇಳಿದ್ದರಿಂದ ಅಚ್ಯುತನ ಪ್ರತಿಯೊಂದು ರೂಪವೂ ಕಲ್ಯಾಣಗುಣಗಳಿಂದ ಸದಾ ಪೂರ್ಣವಾದದ್ದೆಂದು ಸಿದ್ಧಿಸಿತು.

'ಏಕಮೇವಾದ್ವಿತೀಯಂ ಬ್ರಹ್ಮ'

" ಸದೇವ ಸೌಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್ "
(ಛಾಂ ೬-೨-೧ ಶ್ರುತಿ)

ಬಹುವ್ರೀಹಿಸಮಾಸಾಚ್ಚ ಯತಸ್ತತ್ಪುರುಷೋ ಬಲೀ ॥ ೪೨೩ ॥
ತೇನಾದ್ವಿತೀಯವಾಗ್ಬ್ರಹ್ಮ ದ್ವಿತೀಯಂ ನೇತ್ಯುದೀರ್ಯ ಚ ।
ದ್ವಿತೀಯಾದ್ಭೇದಮೇವಾಹ ನ ತು ತಸ್ಮಾದಭಿನ್ನತಾಂ ॥ ೪೨೪ ॥
ಅಸ್ವತಂತ್ರಾಜ್ಜಡಾನ್ನೀಚಾತ್ಸ್ವತಂತ್ರಸ್ಯಾಖಿಲೇಶಿತುಃ ।
ನಾರಾಯಣಸ್ಯ ಪ್ರಲಯೇಽಲೀನಸ್ಯ ಚ ಮಹಾತ್ಮನಃ ॥ ೪೨೫ ॥

ಬಹುವ್ರೀಹಿ ಸಮಾಸಕ್ಕಿಂತ ತತ್ಪುರುಷ ಸಮಾಸವು ಬಲಿಷ್ಠವಾದ್ದರಿಂದ " ಅದ್ವಿತೀಯ "ವೆಂಬ ಮಾತು ಬ್ರಹ್ಮನನ್ನು ದ್ವಿತೀಯಂ – ಎರಡನೆಯದು, ಅಲ್ಲ ಎಂದು ಹೇಳಿ ಆ ಬ್ರಹ್ಮನಿಗೆ ಎರಡನೆಯದರಿಂದ ಭೇದವನ್ನು ಹೇಳುತ್ತದೆ. ಆದ್ದರಿಂದ (ಎರಡನೆಯದರಿಂದ) ಅಭೇದವನ್ನು ಹೇಳುವುದಿಲ್ಲ. ಎರಡನೆಯದರಿಂದ ಅಭೇದವನ್ನು ಏಕೆ ಹೇಳಬಾರದು ಎಂದಲ್ಲಿ ಪರಬ್ರಹ್ಮನಿಂದ ಎರಡನೆಯದಾದದ್ದು ಜೀವ, ಜಡಾತ್ಮಕವಾದ ಪ್ರಪಂಚ. ಅಸ್ವತಂತ್ರವಾದ ಜಡವಾದ, ನೀಚವಾದ ಈ ಪ್ರಪಂಚದ ದೆಶೆಯಿಂದ ಸ್ವತಂತ್ರನೂ, ಸರ್ವಸ್ವಾಮಿಯೂ ಮತ್ತು ಪ್ರಲಯದಲ್ಲಿ ಲೀನವಾಗದವನೂ ಆದ, ಮಹಾತ್ಮನಾದ ನಾರಾಯಣನಿಗೆ ಅಭೇದವು ಹೇಗೆ ಕೂಡುತ್ತದೆ. ಕೂಡುವುದಿಲ್ಲ. ಇದರ ಅಭಿಪ್ರಾಯ. ಬಹುವ್ರೀಹಿ ಸಮಾಸವಾದರೆ, ಹೀಗೆ ವಿಗ್ರಹ. 'ನ ವಿದ್ಯತೇ ದ್ವಿತೀಯಂ ಯಸ್ಯ ತದದ್ವಿತೀಯಂ' ಎಂದರೆ ಯಾವುದಕ್ಕೆ ಎರಡನೆಯದು ಇಲ್ಲವೋ ಅದು ಅದ್ವಿತೀಯ. ಅದ್ವೈತಿಗಳು ಹೀಗೆ ವಿಗ್ರಹಮಾಡಿ ಬ್ರಹ್ಮನಿಂದ ಬೇರೆಯಾದ ವಸ್ತು ಇಲ್ಲವೇ ಇಲ್ಲ. ಬ್ರಹ್ಮನೇ ಇರತಕ್ಕ ವಸ್ತು ಎಂದು ಅರ್ಥ ಮಾಡುತ್ತಾರೆ. ಅದ್ವಿತೀಯಂ ಎಂಬುದು ತತ್ಪುರುಷ ಸಮಾಸವೆಂದು ಇಟ್ಟುಕೊಂಡರೆ, ಅದರ ವಿಗ್ರಹವು ಹೀಗೆ :—ನ+ದ್ವಿತೀಯಂ=ಅದ್ವಿತೀಯಂ =ಎರಡನೆಯದು ಅಲ್ಲ ಅಂದರೆ ಎರಡನೆಯದರಿಂದ ಭಿನ್ನವಾದದ್ದು [ವ್ಯಾಕರಣ ಶಾಸ್ತ್ರದಲ್ಲಿ ಒಂದು ನ್ಯಾಯವುಂಟು. " ಎಲ್ಲಿ ಒಂದು ಸಮಸ್ತಪದಕ್ಕೆ

ತತ್ಪುರುಷ ಸಮಾಸದ ಅರ್ಥ ಹೇಳುವುದು ಸಾಧ್ಯವೋ ಅಲ್ಲಿ ಬಹುವ್ರೀಹಿ ಸಮಾಸದ ಅರ್ಥ ಹೇಳುವುದಕ್ಕೆ ಸಾಧ್ಯವಿದ್ದರೂ ತತ್ಪುರುಷ ಸಮಾಸಾರ್ಥ ಹೇಳುವುದೇ ಯೋಗ್ಯವಾದದ್ದು]. ಇಲ್ಲಿ ತತ್ಪುರುಷ ಸಮಾಸದಿಂದ ಲಬ್ಧವಾದ ಬ್ರಹ್ಮನು ಇತರ ವಸ್ತುಗಳಿಂದ ಬೇರೆಯಾದವನು ಎಂದು ಹೇಳುವುದೇ ಯೋಗ್ಯ.

ಗೌರನಶ್ವ ಇತಿ ಪ್ರೋಕ್ತೇ ಬಹುವ್ರೀಹಿ ಸಮಾಸತಃ ।
ಅಶ್ವೋ ನ ವಿದ್ಯತೇ ಯಸ್ಯೇತ್ಯರ್ಥಮುಕ್ತ್ವಾ ಭವಾನಿವ ॥ ೪೨೫ ॥

ಅವಿಪಾಲಾಚ್ಚ ಗೋಪಾಲಾನ್ನ ಹಿ ಗೌರಶ್ವರೂಪಕಾವನ್ ।
ಗೋಭಿನ್ನಾಶ್ವಮ್ಮೃಷಾತ್ವಂ ವಾ ಜಗತೋಽಸ್ಯ ಮೃಷಾತ್ವವತ್ ॥

ವದಂತಿ ಪಂಡಿತಾ ಲೋಕೇ ಕಿಂತು ತಸ್ಮಾದ್ವಿಲಕ್ಷಣಾತ್ ।
ಅತ್ಯಂತಭೇದಮೇವಾಹುರ್ಗೋಶ್ಚ ಗೋತ್ವಾದಿಧರ್ಮತಃ ॥ ೪೨೬ ॥

ಅಶ್ವಾದಿ ಲಕ್ಷಣಾಕಾರಸ್ಯೇತ್ಯೇವ ಹಿ ಸತಾಂ ಮತಂ ।

"ಗೌಃ ಅನಶ್ವಃ" ಎಂದು ಹೇಳಿದಲ್ಲಿ 'ಅನಶ್ವಃ' ಅಂದರೆ 'ಅಶ್ವಃ ನ ವಿದ್ಯತೇ ಯಸ್ಯ' ಯಾವುದಕ್ಕೆ ಕುದುರೆಯು ಇಲ್ಲವೋ ಎಂದು, ನೀನು ಯಾವ ರೀತಿಯಲ್ಲಿ 'ಅದ್ವಿತೀಯಂ' ಎಂಬ ಪದಕ್ಕೆ "ಯಾವುದಕ್ಕೆ ಎರಡನೆಯದು ಇಲ್ಲವೋ" ಎಂದು ಹೇಗೆ ಅರ್ಥಮಾಡುವಿಯೋ ಹಾಗೆ ಅರ್ಥ ಮಾಡಿದಲ್ಲಿ ಕುರಿ ಕಾಯುವವರು, ದನ ಕಾಯುವವರು ಮೊದಲುಗೊಂಡು ಗೋವಿಗೆ ಅಶ್ವರೂಪವನ್ನೇ ಆಗಲಿ ಅಥವಾ ಗೋವಿನಿಂದ ಭಿನ್ನವಾದ ಅಶ್ವವು ಸುಳ್ಳೆಂದೇ ಆಗಲಿ ನೀನು ಜಗತ್ತಿಗೆ ಮಿಥ್ಯಾತ್ವವನ್ನು ಹೇಳುವ ಹಾಗೆ, ಲೋಕದಲ್ಲಿ ಪಂಡಿತರು ಹೇಳುವರೇನು? ಆದರೆ ಗೋತ್ವಾದಿ ಧರ್ಮಗಳು ಗೋವಿನಲ್ಲಿರುವುದರಿಂದ ಅಶ್ವದಿಂದ ವಿಲಕ್ಷಣಾಕಾರವುಳ್ಳ ಗೋವಿಗೆ ಅದರಿಂದ (ಅಶ್ವದಿಂದ) ಅತ್ಯಂತ ಭೇದವೇ ಹೇಳುವರು. ಇದೇನೇ ಸಜ್ಜನರ ಮತ.

‘ ತತ್ತ್ವಮಸಿ ’

ಅತೋ ಜೀವೈಕತಾ ವಿಷ್ಣೋರ್ವಾಕ್ಯಾನಾಂ ಕೋಟಿಶೋಽಪಿ ಚ ॥

ನ ಭವೇದೇವ ತೇನಾಸೌ ಸರ್ವದೇವೋತ್ತಮೋತ್ತಮಃ ।

ಸರ್ವಸ್ಯೇಶಾನ ಇತ್ಯಾದ್ಯೈಃ ಶ್ರುತಿವಾಕ್ಯಶತೈಃ ಪ್ರಭುಃ ॥ ೪೨೯ ॥

ಸಿದ್ಧೋಽಭವಚ್ಛುದ್ಧಮಾಧ್ವಸಿದ್ಧಾಂತೋದಿತವರ್ತ್ಮನಾ ।

ಆದ್ದರಿಂದ ವಿಷ್ಣುವಿಗೆ ಜೀವನಿಂದ ಐಕ್ಯವು ಕೋಟ್ಯಂತರ (ಸಾವಕಾಶ) ವಾಕ್ಯಗಳಿಂದ ಕೂಡಾ ಆಗುವುದಿಲ್ಲ. ಹೀಗಿರುವುದರಿಂದ ಪ್ರಭುವಾದ ಶ್ರೀ ನಾರಾಯಣನು ನೂರಾರು (ನಿರವಕಾಶ) ಶ್ರುತಿವಾಕ್ಯಗಳಿಂದ ಶುದ್ಧವಾದ ಮಧ್ವಸಿದ್ಧಾಂತದಲ್ಲಿ ಹೇಳಿದ ರೀತಿಯಲ್ಲಿ ಸರ್ವದೇವೋತ್ತಮನೆಂದು ಸಿದ್ಧನಾದನು.

ಇದರ ಅಭಿಪ್ರಾಯ :—ಜೀವಬ್ರಹ್ಮರಿಗೆ ಐಕ್ಯವನ್ನು ಪ್ರತಿಪಾದಿಸುವಂತೆ ತೋರುವ ಅನೇಕ ವಾಕ್ಯಗಳಿದ್ದರೂ ಅವು ಸಾವಕಾಶವಾದ ವಾಕ್ಯಗಳು. ಅಂದರೆ ಜೀವಬ್ರಹ್ಮರಿಗೆ ಭೇದವನ್ನು ಹೇಳುವ ವಾಕ್ಯಗಳಿಗೆ ವಿರುದ್ಧವಲ್ಲದ ಅರ್ಥವನ್ನು ಅವುಗಳಿಗೆ ಮಾಡಬಹುದು. ಅನೇಕ ಶ್ರುತಿಗಳಲ್ಲಿ ಬ್ರಹ್ಮನು (ವಿಷ್ಣುವು) ಸ್ವತಂತ್ರನು, ಸರ್ವಸ್ವಾಮಿಯು, ಕರ್ಮಲೇಪವಿಲ್ಲದವನೂ ಇವೇ ಮೊದಲಾದ ಮಹಾಗುಣಗಳುಳ್ಳವನೆಂದು ಹೇಳಿರುತ್ತೆ. ಈ ಧರ್ಮಗಳು ಜೀವನಲ್ಲಿ ಇಲ್ಲ. ಆದ್ದರಿಂದ ಶ್ರುತಿಯಿಂದ ಕಂಡುಬರುವ ಜೀವೇಶ್ವರರ ಭೇದವು ಪರಮಾರ್ಥವಾದದ್ದು. ಶ್ರುತಿಯಿಂದಲೇ ತಿಳಿದುಬರುವ ಈ ಧರ್ಮಗಳು ಮಿಥ್ಯೆಯೆಂದು ಹೇಳಿದಲ್ಲಿ ಶ್ರುತಿಗೆ ಅಪ್ರಾಮಾಣ್ಯ ಬರುವುದು. ಅಂತೂ ಭೇದವನ್ನು ಹೇಳುವ ಶ್ರುತಿಗಳು ನಿ ರ ವ ಕಾ ಶ. ಆದ್ದರಿಂದ ಕೋಟ್ಯಂತರ ಸಾವಕಾಶ ಶ್ರುತಿಗಳು ನೂರಾರು ನಿರವಕಾಶ ಶ್ರುತಿಗಳನ್ನು ಬಾಧಿಸಲಾರವು.

ಶತಶೋ ದೇವದತ್ತೋಽಯಂ ಸಿಂಹ ಇತ್ಯುದಿತೇಽಪಿ ಚ ॥ ೪೩೦ ॥

ಸಿಂಹಸ್ಯ ಸಿಂಹತಾಕ್ರೌರ್ಯತಿರ್ಯಕ್ತ್ವಾಪಶುತಾದಿಕಾನ್ ।

ಧರ್ಮಾನ್ಬ್ರಹ್ಮಾ ಮಹೇಶೋ ವಾ ವಿಷ್ಣುರ್ವಾ ಸರ್ವಶಕ್ತಿಮಾನ್॥
ಉತ ಮಾನತಯಾ ಸರ್ವಸಮ್ಮತಾಽಽಪ್ತಸ್ಯ ವಾಗಿಯಂ ।
ವಿನಾಶಯೇತ್ಕಿಮುನ್ಮತ್ತ ವಿನಾ ಸಿಂಹವಿನಾಶನಮ್ ॥ ೪೩೨ ॥

ಎಲೈ ಉನ್ಮತ್ತನೇ, ನೂರಾವರ್ತಿ ದೇವದತ್ತನು ಸಿಂಹನೆಂದು ಹೇಳಿದರೂ ಬ್ರಹ್ಮನೇ ಆಗಲಿ ಮಹೇಶನೇ ಆಗಲಿ ಸರ್ವಶಕ್ತಿಯುಳ್ಳ ವಿಷ್ಣುವೇ ಆಗಲಿ ಮತ್ತು ಪ್ರಮಾಣವೆಂದು ಸರ್ವಸಮ್ಮತವಾದ "ಸಿಂಹೋ ದೇವದತ್ತಃ" ಎಂಬೀ ಆಪ್ತ ವಾಕ್ಯವೇ ಆಗಲಿ ಸಿಂಹದ ಸಿಂಹತ್ವವನ್ನೂ ಕ್ರೌರ್ಯವನ್ನೂ ತಿರ್ಯಕ್ ಪ್ರಾಣಿಯಾಗಿರುವುದನ್ನೂ ಅದರ ಪಶುತ್ವವನ್ನೂ ಅದರ ಇತರ ಎಲ್ಲ ಧರ್ಮಗಳನ್ನೂ, ಸಿಂಹವನ್ನು ನಾಶಮಾಡದೇ ನಾಶಮಾಡಿಯಾರೇನು? ನಾಶಮಾಡಲೇಲಾರರು.

ಕಿಂ ತ್ವನ್ಯೋನ್ಯವಿರುದ್ಧಾನಾಂ ಧರ್ಮಾಣಾಮೇವ ರಕ್ಷಣಂ ।
ಯಥಾ ಭವೇತ್ತಥಾ ವಾಕ್ಯಮುಖ್ಯಾರ್ಥೈಕ್ಯಮುಪೇಕ್ಷ್ಯ ಹಿ ॥

ಸಾದೃಶ್ಯಾಖ್ಯಮಮುಖ್ಯೈಕ್ಯಮೇವೋಕ್ತ್ವಾ ವಾಕ್ಯಮೀದೃಶಂ ।
ಯೋಜಯನ್ತಿ ಮಹಾತ್ಮಾನಃ ಸಿಂಹಸ್ಯ ಸದೃಶಸ್ತ್ವಿತಿ ॥ ೪೩೪ ॥

ಆದರೆ ಸಿಂಹಕ್ಕೂ ದೇವದತ್ತನಿಗೂ ಇರುವ ವಿರುದ್ಧ ಧರ್ಮಗಳು ಹೇಗೆ ಉಳಿದಾವೋ ಹಾಗೆ ವಾಕ್ಯದ ಮುಖ್ಯಾರ್ಥವಾದ ಐಕ್ಯವನ್ನು ಉಪೇಕ್ಷೆ ಮಾಡಿ ಇಂತಹ ವಾಕ್ಯವನ್ನು ಮಹಾತ್ಮರಾದವರು ದೇವದತ್ತನು ಸಿಂಹಕ್ಕೆ ಸದೃಶನು ಎಂಬ ಸಾದೃಶ್ಯರೂಪವಾದ ಅಮುಖ್ಯ ಐಕ್ಯವನ್ನು ಹೇಳಿ ಅರ್ಥ ಮಾಡುತ್ತಾರೆ.

ಈಷತ್ಸಾದೃಶ್ಯಮಾತ್ರೇಣ ಗೌಣೀಂವೃತ್ತಿಮುಪಾಶ್ರಿ(ತಾಃ) ತಃ ।
ಸಿಂಹೇ ವಾ ದೇವದತ್ತೇವಾ ಮೃಡಯನ್ತಿ ನ ವಾಗ್ಬಲಾತ್ ॥೪೩೫॥

ಸಿಂಹಕ್ಕೂ ದೇವದತ್ತನಿಗೂ ಇರುವ, ಸ್ವಲ್ಪ ಸಾದೃಶ್ಯಮಾತ್ರದಿಂದ ಗೌಣವೃತ್ತಿಯನ್ನು ಆಶ್ರಯಿಸಿ 'ದೇವದತ್ತನು ಸಿಂಹ' ಎಂದು ಹೇಳುವರು, ಹಾಗೆ ಹೇಳುವಾಗ ಸಿಂಹ ಎಂಬಲ್ಲಿಯೇ ಆಗಲೀ ದೇವದತ್ತ ಎಂಬಲ್ಲಿಯೇ ಆಗಲಿ ಆ ಶಬ್ದಗಳ ಮುಖ್ಯಾರ್ಥವನ್ನು ಆದರಿಸುವುದಿಲ್ಲ.

ಸ ಯ ಏಷೋಽಣಿಮೈತದಾತ್ಮ್ಯಮಿದಗ್ಂ ಸರ್ವಂ
ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ || (ಛಾಂ ೬-೮-೭)

ಏವಂ ತತ್ತ್ವಮಸೀತ್ಯುಕ್ತೇ ಸತ್ಯಪ್ಯಜ್ಞ ಸಹಸ್ರಧಾ ।
ಬ್ರಹ್ಮಸ್ಥಬ್ರಹ್ಮತಾ ಸರ್ವಜ್ಞತಾ ಸರ್ವೇಶತಾದಿಕಾನ್ ॥ ೪೩೬ ॥
ಧರ್ಮಾನ್ನಿರ್ಮೂಲಯೇತ್ಕೋ ವಾ ಸುಸ್ಥಿರಾನ್
ಶ್ರುತಿಸಮ್ಮತಾನ್ ।
ಕಿಂತು ಪ್ರಬಲಧರ್ಮಾಣಾಂ ಬಲಾತ್ತದ್ವಾಕ್ಯಮನ್ಯಥಾ ॥ ೪೩೭ ॥
ಯೋಜ್ಯಂ ಸಾದೃಶ್ಯಪೂರ್ವೇಽರ್ಥೇ ಶ್ರುತ್ಯರ್ಥಕುಶಲೈರ್ಬುಧೈಃ ।

ಇದೇ ರೀತಿಯಲ್ಲಿ "ತತ್ತ್ವಮಸಿ" ಎಂದು ಸಹಸ್ರಾವರ್ತಿ ಹೇಳಿದಲ್ಲಿಯೂ ಕೂಡ, ಎಲೈ ಅಜ್ಞನೇ! ಬ್ರಹ್ಮನಲ್ಲಿರುವ ಬ್ರಹ್ಮತ್ವ, ಸರ್ವಜ್ಞತ್ವ, ಸರ್ವೇಶತ್ವಾದಿ, ಶ್ರುತಿಗೆ ಸಮ್ಮತವಾದ ಆದ್ದರಿಂದಲೇ ಸುಸ್ಥಿರವಾದ, ಧರ್ಮಗಳನ್ನು ಯಾವನು ತಾನೇ ನಿರ್ಮೂಲಮಾಡಿಯಾನು? ಹೀಗೆ ಧರ್ಮಗಳನ್ನು ನಿರ್ಮೂಲಮಾಡುವುದರಲ್ಲಿ ಪ್ರಯತ್ನಿಸದೆ ಶ್ರುತಿಪ್ರಮಾಣದಿಂದ ಸಿದ್ಧವಾದ ಆದ್ದರಿಂದಲೇ ಪ್ರಬಲವಾದ ಧರ್ಮಗಳ ಸಾಮರ್ಥ್ಯದಿಂದ "ತತ್ತ್ವಮಸಿ" ಎಂಬ ವಾಕ್ಯವನ್ನು ಶ್ರುತ್ಯರ್ಥ ಮಾಡುವುದರಲ್ಲಿ ಕುಶಲರಾದವರು ಸಾದೃಶ್ಯವೇ ಮೊದಲಾದ ಅರ್ಥವನ್ನು ಹೇಳುವುದರ ಮೂಲಕ ಬೇರೆ ವಿಧವಾಗಿ ಯೋಜನೆ ಮಾಡುತ್ತಾರೆ.

ಇದರ ಅಭಿಪ್ರಾಯವನ್ನು ಮುಂದಿನ ಶ್ಲೋಕಗಳಿಂದ ವಿಶದ ಮಾಡುತ್ತಾರೆ :

ಚೇತನತ್ವಾಚ್ಚ ನಿತ್ಯತ್ವಾದಾನನ್ದತ್ವಾಚ್ಚ ವಿಷ್ಣುನಾ ॥ ೪೩೮ ॥
ಸಾದೃಶ್ಯಮಪಿ ಜೀವೇಽಸ್ತಿ ತೇನ ತತ್ತ್ವಮಸೀತಿ ವಾಕ್ ।
ಕಿಂಚಿತ್ಸಾದೃಶ್ಯಮಾಶ್ರಿತ್ಯ ತದ್ವತ್ತ್ವಮಸಿ ಕೇವಲಮ್ ॥ ೪೩೯ ॥
ನ ತು ಬ್ರಹ್ಮ ತದೇವ ತ್ವಮಸೀತ್ಯಾಹೇತಿ ಮೇ ಮತಿಃ ।

ಚೇತನತ್ವ, ನಿತ್ಯತ್ವ, ಆನಂದತ್ವ ಧರ್ಮಗಳು ಜೀವನಲ್ಲಿರುವುದರಿಂದ ಜೀವನಲ್ಲಿ ವಿಷ್ಣುವಿನ ಸಾದೃಶ್ಯವುಂಟು. ಈ ಕಾರಣದಿಂದ "ತತ್ತ್ವಮಸಿ"

ಎಂಬ ವಾಕ್ಯ, ಜೀವನಲ್ಲಿರುವ ಸ್ವಲ್ಪ ಬ್ರಹ್ಮಸಾದೃಶ್ಯವನ್ನು ಮಾತ್ರ ಆಶ್ರಯಿಸಿ ಕೊಂಡು, ಅದರಹಾಗೆ ನೀನೂ ಇದ್ದಿ ಎಂದು ಹೇಳುತ್ತದೆಯೇ ಹೊರ್ತು ಆ ಬ್ರಹ್ಮನೇ ನೀನಾಗಿದ್ದಿ ಎಂದು ಹೇಳುವುದಿಲ್ಲ, ಎಂದು ನನ್ನ ಅಭಿಪ್ರಾಯ.

ವೇದೇಽಪಿ ಯಜಮಾನೋಽಯಂ ಪ್ರಸ್ತರಸ್ತ್ವಿತಿ ಕೀರ್ತ್ಯತೇ ॥

ಅನಾದಿಕಾಲಮಾರಭ್ಯ ಹರೋ ವಾ ಹರಿರೇವ ವಾ ।
ಕಿಂ ಚಕಾರ ತಯೋರೈಕ್ಯಂ ಕಿಂ ಕರೋತಿ ಕರಿಷ್ಯತಿ ॥ ೪೪೧ ॥

ವಿಪಶ್ಚಿತ್ಕಶ್ಚಿದಪಿ ವಾ ಕಿಂ ಕುರ್ಯಾದೇಕತಾಂ ತಯೋಃ ।
ಅದ್ವೈತೇ ಭರವಾನ್ಮಂದ ಕೃತವಾನ್ ಕಿಂ ಗುರುಸ್ತವ ॥ ೪೪೨ ॥

ವೇದದಲ್ಲಿಯೂ ಕೂಡ ಯಜಮಾನನು ಈ ಪ್ರಸ್ತರವೆಂದು ಹೇಳಿದರೆ, ಅನಾದಿಕಾಲ ಮೊದಲುಗೊಂಡು ಹರನೇ ಆಗಲಿ ಹರಿಯೇ ಆಗಲಿ ಯಜಮಾನನಿಗೂ ಪ್ರಸ್ತರಕ್ಕೂ ಐಕ್ಯವನ್ನು ಹಿಂದೆ ಮಾಡಿದನೇ? ಈಗ ಮಾಡುತ್ತಾನೆಯೇ? ಮುಂದೆ ಮಾಡಹೋಗುವನೇ? ಯಾವ ಪಂಡಿತನೇ ಆಗಲಿ ಅವೆರಡಕ್ಕೂ ಐಕ್ಯಮಾಡಿಯಾನೇನು? ಎಲೈ ಮಂದ! ಅದ್ವೈತದಲ್ಲಿ ಭಾರವನ್ನಿಟ್ಟ (ಜೀವಬ್ರಹ್ಮರ ಅಭೇದದಲ್ಲಿ ದೀಕ್ಷೆಯುಳ್ಳ) ನಿಮ್ಮ ಗುರುವೇ ಆಗಲಿ ಅದನ್ನು ಮಾಡಿದನೇನು?

ಕಿಂ ತ್ವಾವಶ್ಯಕತಾಂ ಯಜ್ಞೇಷ್ವಭಿಪ್ರೇತ್ಯ ತಯೋರ್ದ್ವಯೋಃ ।
ಗುಣಸಾದೃಶ್ಯಮಾತ್ರೇಣ ವಾಗ್ವೈದಿಕ್ಯಪಿ ವರ್ತತೇ ॥ ೪೪೩ ॥

ಆದರೆ ಯಜ್ಞದಲ್ಲಿ ಯಜಮಾನನೂ, ಪ್ರಸ್ತರವೂ (ದರ್ಭೆಯ ಮುಷ್ಟಿಯೂ) ಇವೆರಡೂ ಅಗತ್ಯವಾಗಿರಬೇಕು. ಯಜಮಾನ ಮತ್ತು ಪ್ರಸ್ತರ ಇವೆರಡಕ್ಕೂ ಇರುವ ಯಾಗಸಾಧನತ್ವರೂಪಗುಣಸಾದೃಶ್ಯದಿಂದ ಮಾತ್ರ ಪ್ರಸ್ತರವು ಯಜಮಾನನೆಂದು ವೇದವಾಕ್ಯವೂ ಕೂಡ ಗೌಣವೃತ್ತಿಯಿಂದ ಐಕ್ಯವನ್ನು ಹೇಳುತ್ತದೆ.

ಇತ್ಯೇವ ವೇದಮೀಮಾಂಸಾಕರ್ತಾರೋಽಪಿ ವದನ್ತಿ ಹಿ ।
ಅತಸ್ತತ್ತ್ವಮಸೀತ್ಯಾದಿವಾಕ್ಯೇಽಪಿ ಹರಿಣಾ ಸಹ ॥ ೪೪೪ ॥

ತ್ವಂ ಪದಾರ್ಥಸ್ಯ ಜೀವಸ್ಯ ಚೇತನತ್ವಾದಿನಾ ಪರಮ್ ।
ಸಾದೃಶ್ಯಮುಚ್ಯತೇ ಜೀವೇ ನ ತು ನೀಚೋಚ್ಚಯೋಸ್ತಯೋಃ ॥

ಸರ್ವಜ್ಞಾಸರ್ವಜ್ಞಯೋಶ್ಚ ತಥೈವ ಸುಖದುಃಖಿನೋಃ ।
ವಿರುದ್ಧೈಕ್ಯಮತಿಂ ಕುರ್ಯಾತ್ಕಃ ಪ್ರೇಕ್ಷಾವಾನ್ವಿಚಾರಯ ॥ ೪೪೬ ॥

ಹೀಗೆಯೇನೆ ಪೂರ್ವಮೀಮಾಂಸಕರೂ ಕೂಡ ಯಜಮಾನನಿಗೂ ಪ್ರಸ್ತರಕ್ಕೂ ಭೇದವಿಟ್ಟುಕೊಂಡು ಗೌಣಾರ್ಥವನ್ನು ಮಾಡುತ್ತಾರೆ. ಆದ್ದರಿಂದ "ತತ್ತ್ವಮಸೀ"ತ್ಯಾದಿ ವಾಕ್ಯದಲ್ಲಿಯೂ ಕೂಡ 'ತ್ವಂ' ಪದದ ಅರ್ಥಭೂತನಾದ ಜೀವನಲ್ಲಿರುವ, ಚೇತನತ್ವಾದಿ ಧರ್ಮಗಳನ್ನು ನಿಮಿತ್ತ ಮಾಡಿಕೊಂಡು ಅವನಿಗೆ ಹರಿಯ ಸಾದೃಶ್ಯಮಟ್ಟಿಗೆ ಹೇಳಿದೆ. ಆದರೆ ಉಚ್ಚತ್ವ, ನೀಚತ್ವ, ಸರ್ವಜ್ಞತ್ವ, ಅಸರ್ವಜ್ಞತ್ವ ಹಾಗೆಯೇ ಸುಖಿತ್ವ, ದುಃಖಿತ್ವ ಹೀಗೆ ವಿರುದ್ಧ ಧರ್ಮಗಳುಳ್ಳ ಬ್ರಹ್ಮಜೀವರ ವಿಷಯದಲ್ಲಿ ಯಾವ ಪ್ರೇಕ್ಷಾವಂತನು ತಾನೇ ಐಕ್ಯಬುದ್ಧಿಯನ್ನು ಮಾಡಿಯಾನು? ವಿಚಾರ ಮಾಡು.

ಅಥವಾ ಬದ್ಧಶಕುನೇರಾತ್ಮಬಂಧಕಶಂಕುನಾ ।
ಯಥಾತ್ಯಂತವಿಭೇದೋಽಸ್ತಿ ತವಾಪಿ ಚ ಮಮಾಪಿ ಚ ॥ ೪೪೭ ॥
ಸ ಯಥಾ ಶಕುನಿಶ್ಚೇತಿ ಶ್ರುತಿರಸ್ಯ ನಿದರ್ಶನಮ್ ।
ಯತಃ ಪ್ರಾಗಾಹ ತೇನಾತಸ್ತದ್ಭಿನ್ನಂ ವಸ್ತು ಕೇವಲಮ್ ॥ ೪೪೮ ॥
ತ್ವಮಸೀತಿ ಗುರುಃ ಪ್ರಾಹ ಸ್ತಬ್ಧಬುದ್ಧ್ಯಾ ಕುಮೇಧಸಮ್ ।
ಅಹಂ ಬ್ರಹ್ಮೇತಿ ಮನ್ವಾನಂ ಶಿಷ್ಯಂ ದೃಷ್ಟಾಂತಪೂರ್ವಕಮ್ ॥
ಶ್ವೇತಕೇತುಂ ಬೋಧಯಿತುಮಿತಿ ಮನ್ಯಾಮಹೇ ವಯಮ್ ।
ಸ್ತಬ್ಧಸ್ಯ ಸ್ತಬ್ಧತಾ ಬಾಹ್ಯಸರ್ವಜ್ಞೇನ ಮಹಾತ್ಮನಾ ॥ ೪೫೦ ॥
ಹರಿಣೈಕ್ಯಂ ಗುರುಃ ಶಿಷ್ಯಹಿತಕಾರೀ ಕಥಂ ವದೇತ್ ।

ಈ ಶ್ಲೋಕಗಳ ಅರ್ಥಾನುವಾದಕ್ಕೆ ಹೀಗೆ ಅವತಾರಿಕಾ:—ಜೀವಪರಮಾತ್ಮರ ವಿಷಯದಲ್ಲಿ ಭೇದವನ್ನು ಹೇಳುವ ಉಭಯ ಸಮ್ಮತವಾದ ಈ ವಾಕ್ಯವುಂಟು.

**ಸ ಯಥಾ ಶಕುನಿಃ ಸೂತ್ರೇಣ ಪ್ರಬದ್ಧೋ ದಿಶಂ ದಿಶಂ ಪತಿತ್ವಾಽ
ನ್ಯತ್ರಾಯತನಮಲಬ್ಧ್ವಾ ಬಂಧನಮೇವೋಪಾಶ್ರಯತೇ ।
ಏವಮೇವ ಖಲು ಸೋಮ್ಯ ತನ್ಮನೋ ದಿಶಂ ದಿಶಂ ಪತಿತ್ವಾನ್ಯತ್ರಾ-
ಯತನಮಲಬ್ಧ್ವಾ ಪ್ರಾಣಮೇವೋಪಾಶ್ರಯತೇ ।
ಪ್ರಾಣ ಬಂಧನಂ ಹಿ ಸೌಮ್ಯ ಮನ ಇತಿ ॥ (ಛಾಂ ೬-೮-೨)**

ಇದರ ಅರ್ಥ ಹೀಗೆ:—ದಾರದಿಂದ ಒಂದು ಗೂಟಕ್ಕೆ ಕಟ್ಟಿದ ಪಕ್ಷಿಯು ಅಲ್ಲಲ್ಲಿ ದೂರ ಓಡಾಡಿ ಎಲ್ಲಿಯೂ ಆಶ್ರಯ ಸಿಕ್ಕದೇ ಹೇಗೆ ಗೂಟವನ್ನೇ ಆಶ್ರಯಿಸುತ್ತದೆಯೋ ಹಾಗೆಯೇ ಮನನಮಾಡುವನಾದ್ದರಿಂದ ಮನೋನಾಮಕನಾದ ಜೀವನು ಜಾಗ್ರತಾವಸ್ಥೆಯಲ್ಲಿ ಇಂದ್ರಿಯಗಳ, ಮನಸ್ಸಿನ ವಿಕ್ಷೇಪದಿಂಟಾಗುವ ಅನೇಕ ವಿಧವಾದ ದುಃಖಾದಿಗಳನ್ನು ಅನುಭವಿಸಿ ಎಲ್ಲಿಯೂ ಶಾಂತಿಯನ್ನು ಹೊಂದದೆ ಸುಷುಪ್ತಾವಸ್ಥೆಯಲ್ಲಿ ಪ್ರಾಜ್ಞನಾಮಕ ಪರಮಾತ್ಮನನ್ನು ಆಲಿಂಗಿಸಿಕೊಂಡಿರುತ್ತಾನೆ. ಇಲ್ಲಿ ಗೂಟಕ್ಕೆ ದಾರದಿಂದ ಕಟ್ಟಿದ ಪಕ್ಷಿಗೂ ಗೂಟಕ್ಕೂ ಅತ್ಯಂತ ಭೇದವು ಸರ್ವ ಸಮ್ಮತ. ಮನೋನಾಮಕ ಜೀವನು ಪ್ರಾಣನಾಮಕ ಪರಮಾತ್ಮನ ಅಧೀನನಾಗಿ ಭಿನ್ನನಾಗಿದ್ದಾನೆಂದು ಈ ದೃಷ್ಟಾಂತವು ತಿಳಿಸುತ್ತೆ.

ಶ್ಲೋಕಾರ್ಥ:—ಹೀಗೆ ಹಿಂದೆ ಜೀವಪರಮಾತ್ಮರಿಗೆ ಭೇದವನ್ನು ಹೇಳಿರುವುದರಿಂದ 'ಸಃ ಆತ್ಮಾ ಅತತ್ ತ್ವಂ ಅಸಿ' ಹೀಗೆ ಪದ ವಿಭಾಗ ಮಾಡಿ, 'ಅತತ್' ಎಂದರೆ ಆ 'ಸನ್ನಾಮಕ' ಪರಮಾತ್ಮನಿಂದ ಕೇವಲ ಭಿನ್ನವಾದ ವಸ್ತು 'ತ್ವಮಸಿ' ನೀನು ಆಗಿದ್ದಿ, ಎಂಬುದಾಗಿ ಗುರುವಾದ ಉದ್ದಾಲಕನು ಸ್ತಬ್ಧ ಬುದ್ಧಿಯಿಂದ "ನಾನೇ ಬ್ರಹ್ಮ"ನೆಂದು ತಿಳಿದುಕೊಂಡಿರುವ ದುಷ್ಟಬುದ್ಧಿಯಾದ ಶಿಷ್ಯ ಶ್ವೇತುಕೇತುವಿಗೆ ದೃಷ್ಟಾಂತಗಳ ಪೂರ್ವಕ ತಿಳಿಸುವುದಕ್ಕಾಗಿ ಹೇಳುತ್ತಾನೆಂದು ನಾವು ತಿಳಿಯುತ್ತೇವೆ. ಹೀಗಲ್ಲದಲ್ಲಿ, ಶಿಷ್ಯನಿಗೆ ಹಿತವನ್ನು ಮಾಡುವುದರಲ್ಲಿ ಉದ್ಯುಕ್ತನಾದ ಗುರುವು ಸ್ತಬ್ಧನಾದ ಶಿಷ್ಯನಿಗೆ, ಸ್ತಬ್ಧತಾದಿ ದೋಷರಹಿತನೂ, ಸರ್ವಜ್ಞನೂ, ಮಹಾತ್ಮನೂ ಆದ ಹರಿಯಿಂದ ಐಕ್ಯವನ್ನು ಹೇಗೆ ಬೋಧಿಸಿಯಾನು?

**ಅಥವಾ ಕಾರಣತ್ವಾರ್ಥಪಂಚಮ್ಯಾಂ ಚಾಸ್ತಿ ತತ್ ಪದಮ್ ॥
ಇತ್ಯಾಹುಸ್ತೇನ ತತ್ತಸ್ಮಾತ್ತ್ವಂ ಜಾತೋಽಸೀತಿ ಕಥ್ಯತೇ ।**

ಸ್ತಬ್ಧಸ್ಯ ಬುದ್ಧಿಶುದ್ಧ್ಯರ್ಥಂ ಗುರುಣಾ ಹಿತಕಾರಿಣಾ ॥ ೪೫೨ ॥

ನತು ತತ್ಸರ್ವಜಗತಾಂ ಕಾರಣತ್ವೇನ ಸೂತ್ರಿತಮ್ ।
ವ್ಯಾಸೇನ ವೇದಮೀಮಾಂಸಾನಿಪುಣೇನ ಮಹಾತ್ಮನಾ ॥ ೪೫೩ ॥

ಜಿಜ್ಞಾಸ್ಯಂ ಪರಮಂ ಬ್ರಹ್ಮ ತ್ವಮಸೀತಿ ಮುನಿರ್ವದೇತ್ ।
ತತ್ತ್ವಜಿಜ್ಞಾಸಯಾ ಪ್ರಾಪ್ತಂ ಶಿಷ್ಯಂ ಪ್ರತಿ ಮಹಾಮತಿಃ ॥

ಏವಂ ಚಾವಕ್ರಮಾರ್ಗೇಽಸ್ಮಿನ್ಸತಿ ಕಂಟಕಿತೇಽಧ್ವನಿ ।
ಕೋವಾ (ಜಿಗಮಿಷೇತ್)ಽಕ್ಷಿಣೀ ಮಿಷೇತ್ಪ್ರಾಜ್ಞೋ
ನಹ್ಯುನ್ಮತ್ತೋ ಮುನೀಶ್ವರಃ ॥

ಈದೃಶೈಃ ಶತವಾಕ್ಯೈಶ್ಚ ತಸ್ಮಾದೈಕ್ಯಂ ನ ಸಿದ್ಧ್ಯತಿ ।

ಅಥವಾ 'ತತ್' ಪದವು ಕಾರಣತ್ವಾರ್ಥವನ್ನು ಬೋಧಿಸುವ ಪಂಚಮಿ ವಿಭಕ್ತಿಯಲ್ಲಿದೆಯೆಂದು ವೈಯಾಕರಣರು ಹೇಳುತ್ತಾರೆ. ಆದ್ದರಿಂದ ಸ್ತಬ್ಧನಾದ ಶಿಷ್ಯನ ಬುದ್ಧಿಶುದ್ಧ್ಯರ್ಥವಾಗಿ ಹಿತವನ್ನು ಮಾಡಬೇಕೆಂದಿರುವ ಗುರುವಿನಿಂದ, ತತ್=ತಸ್ಮಾತ್–ಆ ಪರಮಾತ್ಮನ ದೆಶೆಯಿಂದ, ತ್ವಂ=ನೀನು, ಅಸಿ=ಇದ್ದಿ ಅಂದರೆ ಜಾತೋಽಸಿ–ಹುಟ್ಟಿದ್ದಿ ಎಂದು ಹೇಳಲ್ಪಡುತ್ತೆ. ಇದು ಬಿಟ್ಟು ತತ್ತ್ವವಿಚಾರಮಾಡಲು ಪ್ರಾಪ್ತನಾದ ಶಿಷ್ಯನನ್ನು ಕುರಿತು ಮಹಾಜ್ಞಾನಿಯಾದ ಉದ್ದಾಲಕ ಮುನಿಯು ಮಹಾತ್ಮರಾದ, ವೇದಾರ್ಥವನ್ನು ಮಾಡುವುದರಲ್ಲಿ ನಿಪುಣರಾದ ಶ್ರೀ ವೇದವ್ಯಾಸರಿಂದ ' ಜನ್ಮಾದ್ಯಸ್ಯ ಯತಃ ' ಎಂಬ ಸೂತ್ರದಲ್ಲಿ ಸರ್ವಜಗತ್ತಿಗೂ ಕಾರಣನೆಂದು ಹೇಳಲ್ಪಟ್ಟ, ವಿಚಾರಕ್ಕೆ ವಿಷಯನಾದ "ಪರಬ್ರಹ್ಮನು ನೀನು ಆಗಿದ್ದೀ" ಎಂದು ಎಂದಿಗೂ ಉಪದೇಶಿಸಲಾರನು. ಈ ರೀತಿಯಲ್ಲಿ ವಕ್ರವಲ್ಲದ ಅರ್ಥ ಹೇಳತಕ್ಕ ಮಾರ್ಗವು ಇಲ್ಲಿ ಇರುವಾಗ ಮುಳ್ಳಿರುವ ಮಾರ್ಗದಲ್ಲಿ ಯಾವ ಪ್ರಾಜ್ಞನೇ ಆಗಲಿ ನಡೆಯಲು ಇಚ್ಛಿಸಿಯಾನು ? ಮುನಿಶ್ರೇಷ್ಠನಾದ ಉದ್ದಾಲಕನು ಉನ್ಮತ್ತನಲ್ಲವಷ್ಟೆ ? ಆದ್ದರಿಂದ ಇಂತಹ ನೂರಾರು ವಾಕ್ಯಗಳಿಂದಲೂ ಕೂಡ ಜೀವಬ್ರಹ್ಮರಿಗೆ ಐಕ್ಯವು ಸಿದ್ಧಿಸುವುದಿಲ್ಲ.

ತದ್ಬ್ರಹ್ಮೈವ ತು ತದ್ಬ್ರಹ್ಮ ತ್ವಂ ತದ್ಬ್ರಹ್ಮ ನ ಕರ್ಹಿಚಿತ್ ॥

ತ್ವಮೇವ ತ್ವಮಸಿ ಬ್ರಹ್ಮ ತತ್ತು ತ್ವಂ ಚ ನ ಕುತ್ರಚಿತ್ ।
ತತ್ತದೇವ ತ್ವಂ ತ್ವಮೇವೇತ್ಯಾವೃತ್ತ್ಯಾऽತ್ಯಂತಭಿನ್ನತಾಮ್ ॥

ಸ್ತಬ್ಧಸ್ಯ ಬುದ್ಧಿಶುದ್ಧ್ಯರ್ಥಮೇವೇತ್ಥಮುವದದ್ಗುರುಃ ।

ಇದು ನಾಲ್ಕನೇ ಅರ್ಥ. ಈ 'ತತ್ತ್ವಮಸಿ' ವಾಕ್ಯವನ್ನು 'ತತ್ ತತ್' 'ತ್ವಂ ತ್ವಮಸಿ' ಎಂದು 'ತತ್ ತ್ವಂ' ಈ ಎರಡು ಪದಗಳನ್ನು ಆವೃತ್ತಿ ಮಾಡಿ ಅಂದರೆ ಎರಡಾವರ್ತಿ ಹೇಳಿ ಅರ್ಥಮಾಡುತ್ತಾರೆ.

ಶ್ಲೋಕಾರ್ಥ :—ತತ್=ಆ ಬ್ರಹ್ಮನೇ, ತತ್=ಆ ಬ್ರಹ್ಮ; ನೀನು ಆ ಬ್ರಹ್ಮ ಸರ್ವಥಾ ಅಲ್ಲ. ತ್ವಂ=ನೀನೇನೆ, ತ್ವಮಸಿ=ನೀನಾಗಿದ್ದಿ. ಆ ಬ್ರಹ್ಮನು ನೀನು ಸರ್ವಥಾ ಅಲ್ಲ. ಅದು ಅದೇ, ನೀನು ನೀನೇ. ಹೀಗೆ 'ತತ್ ತ್ವಂ' ಪದಗಳನ್ನು ಆವೃತ್ತಿಮಾಡಿ ಬ್ರಹ್ಮನೂ, ಶ್ವೇತಕೇತುವೂ ಅತ್ಯಂತ ಭಿನ್ನರು ಎಂಬುದಾಗಿ ಗರ್ವಿಷ್ಠನಾದ ಪುತ್ರನ ಬುದ್ಧಿಯನ್ನು ಶುದ್ಧಿಮಾಡುವುದಕ್ಕಾಗಿ ಗುರುವಾದ ಉದ್ದಾಲಕನು ಒತ್ತಿ ಹೀಗೆ ಹೇಳಿದನು.

ಟಿಪ್ಪಣಿ : 'ತತ್ ತತ್' ಎಂಬುವಲ್ಲಿ ಎರಡನೇ ಆವರ್ತಿ 'ತತ್' ಪದವನ್ನು ಉಚ್ಚರಿಸುವಾಗ ಒತ್ತಿ ಉಚ್ಚರಿಸಬೇಕು. ಆಗ ಎರಡನೇ 'ತತ್' ಪದಕ್ಕೆ 'ತತ್ತು' ಅದೇನೇ ಎಂದು ಅರ್ಥವಾಗುತ್ತದೆ. ಈ ಅವಧಾರಣೆಯು 'ತತ್' ಪದದಿಂದ ಬೋಧ್ಯವಾದ ಬ್ರಹ್ಮನನ್ನು 'ತ್ವಂ' ಪದದಿಂದ ಬೋಧ್ಯನಾದ ಜೀವನಿಂದ ಬೇರೆ ಎಂದು ತಿಳಿಸುತ್ತದೆ. ಆದ್ದರಿಂದಲೇ ವಾದಿರಾಜರು 'ತತ್ ತತ್' ಎಂಬುವುದಕ್ಕೆ 'ತದ್ಬ್ರಹ್ಮೈವ ತು ತದ್ಬ್ರಹ್ಮ' ಎಂದು ಅರ್ಥ ಹೇಳಿ 'ತ್ವಂ ತದ್ಬ್ರಹ್ಮ ನ' ಎಂದು ಅವಧಾರಣಾರ್ಥವನ್ನು ವಿಶದಪಡಿಸಿದ್ದಾರೆ. ಹೀಗೆಯೇ 'ತ್ವಂ ತ್ವಮಸಿ' ಎಂಬಲ್ಲಿಯೂ ಎರಡನೇ ಆವರ್ತಿ 'ತ್ವಂ' ಪದವನ್ನು ಒತ್ತಿ ಉಚ್ಚರಿಸಬೇಕು.

ಸುಬನ್ತಂ ವಾ ತಿಙನ್ತಂ ವಾ ಪದಮೇಕತ್ರ ಸಂಗತಮ್ ॥ ೪೫೪ ॥

ಸರ್ವೋಪಕಾರಕಂ ಚೇತ್ಸ್ಯಾತ್ತ್ವಮಾಹುರ್ದೀಪಕಂ ಯಥಾ ।

ಸಾಯಂ ಪ್ರಚಕ್ರಮೇ ಗಂತುಮಾಲಯಂ ಸ್ವಂ ರವೇಃ ಪ್ರಭಾ ||

ಮುನೇರ್ಧೇನುಶ್ಚೇತಿ ಕಾವ್ಯಕಾರೋಽಪ್ಯಾಹ ಯತಃ ಸ್ಫುಟಮ್ |

ತತೋಽತ್ರ ತತ್ತ್ವಂ ಪದಯೋಃ ಕುತೋ ನಾವೃತ್ತಿರಿಷ್ಯತೇ ||೪೬೦||

ಇಲ್ಲಿ [ಸುಬಂತಂ ಅಂದರೆ ವಿಭಕ್ತಿಪ್ರತ್ಯಯ ಸೇರಿದ ನಾಮವಾಚಕ ಮತ್ತು ಸರ್ವನಾಮವಾಚಕ ಶಬ್ದಗಳು. 'ತಿಙಂತ' ವೆಂದರೆ ಪ್ರತ್ಯಯ ಸೇರಿದ ಕ್ರಿಯಾಪದಗಳು. ರಾಮಃ ಎಂಬುದು ಸುಬಂತ ಪದ. ಕರೋತಿ ಎಂಬುದು ತಿಙಂತ ಪದ] ಒಂದು ವಾಕ್ಯದ ಅರ್ಥವನ್ನು ನಿರೂಪಿಸುವಾಗ ಸುಬಂತ ಪದವೇ ಆಗಲಿ ತಿಙನ್ತ ಪದವೇ ಆಗಲಿ ಒಂದಕ್ಕೆ ಅನ್ವಯಿಸಿದ್ದು ಬೇರೆ ಯದಕ್ಕೂ (ಸರ್ವಕ್ಕೂ) ಅನ್ವಯಿಸಲು ಉಪಕಾರಿಯಾದಾಗ ಅಲ್ಲಿ ದೀಪಕಾಲಂಕಾರ ಉಂಟೆಂದು ಹೇಳುವರು. ಉದಾಹರಣೆ :

ರಘುವಂಶದಲ್ಲಿ ಕಾವ್ಯಕಾರನಾದ ಕಾಳಿದಾಸನೂ ಕೂಡ, ಸಾಯಂಕಾಲ ದಲ್ಲಿ ಸೂರ್ಯನ ಪ್ರಭೆಯು ತನ್ನ ಮನೆಗೆ ತೆರಳುವುದಕ್ಕೆ ಪ್ರಾರಂಭಿಸಿತು ಮುನಿಯ ಧೇನುವೂ ಸಹ ಎಂದು ಹೇಳಿರುವುದರಿಂದ "ಸಾಯಂ ಪ್ರಚಕ್ರಮೇ ಗಂತುಮಾಲಯಂ ಸ್ವಂ" ಎಂದು ಸೂರ್ಯಪ್ರಭಾಕ್ಕೆ ಹೇಳಿದ್ದರೂ ಧೇನು ವಿಗೂ ಅದನ್ನು ಆವೃತ್ತಿಮಾಡಿ ಅನ್ವಯಿಸಬೇಕೆಂದು ಸ್ಫುಟವಾಗಿ ಹೇಳಿದ್ದಾನೆ. ಆದ್ದರಿಂದ ಈ "ತತ್ತ್ವಮಸಿ" ಎಂಬ ವಾಕ್ಯದಲ್ಲಿ "ತತ್ ತ್ವಂ" ಪದಗಳ ಆವೃತ್ತಿಯು ಏಕೆ ಅಪೇಕ್ಷಿತವಲ್ಲ?

ಇಲ್ಲಿ ಪ್ರಸಕ್ತವಾದ ರಘುವಂಶದ ಶ್ಲೋಕವಿದು :

ಸಂಚಾರಪೂತಾನಿ ದಿಗಂತರಾಣಿ
ಕೃತ್ವಾ ದಿನಾಂತೇ ನಿಲಯಾಯ ಗಂತುಂ |
ಪ್ರಚಕ್ರಮೇ ಪಲ್ಲವರಾಗತಾಮ್ರಾ
ಪ್ರಭಾ ಪತಂಗಸ್ಯ ಮುನೇಶ್ಚ ಧೇನುಃ || (೨-೧೫)

ಇದರ ಅರ್ಥ :— ಸಂಚಾರದಿಂದ ದಿಕ್ಪ್ರದೇಶಗಳನ್ನು ಪವಿತ್ರವನ್ನಾಗಿ ಮಾಡಿ ಹೊಸ ಚಿಗುರಿನಂತೆ ಕೆಂಪು ಬಣ್ಣದ ಸೂರ್ಯಕಾಂತಿಯು ಮತ್ತು ಮುನಿಯ ಆಕಳು ದಿನಾಂತ್ಯದಲ್ಲಿ ಅಂದರೆ ಸಾಯಂಕಾಲದಲ್ಲಿ ಆಲಯಕ್ಕೆ ಹೋಗಲು ಮನಸ್ಸು ಮಾಡಿದುವು.

ದೀಪಕಾಲಂಕಾರವತೀಂ ಕುರು ಶ್ರುತ್ಯಂಗನಾಮಿಮಾಮ್ ।
ಪದದ್ವಯಾವೃತ್ತಿರೇಷಾ ಭೂಷಾಸ್ಯಾತ್ಪಾದಯೋರ್ದ್ವಯೋಃ ॥

"ದೀಪಕಾ" ಎಂಬ ಪದಕ್ಕೆ ಶ್ಲೇಷಾರ್ಥವನ್ನಿಟ್ಟುಕೊಂಡು ಶೃಂಗಾರವನ್ನೊಳಗೊಂಡ ಶ್ಲೋಕವನ್ನು ರಚಿಸುತ್ತಾರೆ.

ಶ್ರುತಿ ಎಂಬ ಈ ಅಂಗನೆಯನ್ನು ದೀಪದಿಂದ ಅಲಂಕಾರವುಳ್ಳವಳನ್ನಾಗಿ ಮಾಡು. ಶ್ರುತಿಯು ಸ್ತ್ರೀಲಿಂಗ. ಆದ್ದರಿಂದ ಹೆಂಗಸೆಂದು ರೂಪಕದಿಂದ ಹೇಳಿದ್ದಾರೆ. ಈಗ "ದೀಪಕಾ" ಎಂದರೆ ದೀಪ ಎಂತಲೂ, ಕಾವ್ಯದಲ್ಲಿ ದೀಪಕಾಲಂಕಾರವೆಂತಲೂ ಎರಡು ಅರ್ಥವಿರುವುದರಿಂದ ಶ್ರುತಿಗೆ ಅರ್ಥವನ್ನು ಹೇಳುವ ವೇಳೆಯಲ್ಲಿ 'ದೀಪಕಾ' ಅಂದರೆ 'ದೀಪಕಾಲಂಕಾರ' ಎಂದು ಅರ್ಥ ಹೇಳಬೇಕು. ರೂಪಕದಿಂದ ಶ್ರುತಿಯನ್ನು ಅಂಗನೆಯೆಂದು ಕರೆದಾಗ 'ದೀಪಕಾ' ಅಂದರೆ 'ದೀಪ' ಎಂದು ಅರ್ಥ ಹೇಳಬೇಕು. ಈಗ 'ತತ್ ತ್ವಂ' ಈ ಎರಡು ಪದಗಳ ಆವೃತ್ತಿಯು ಅಂದರೆ ಎರಡಾವರ್ತಿ ಹೇಳೋಣವು ಶ್ರುತಿಯೆಂಬ ಅಂಗನೆಯ ಎರಡು ಪಾದಗಳಿಗೆ ಭೂಷಣವಾಗುತ್ತೆ. 'ತತ್ ತ್ವಂ' ಪದಗಳನ್ನು ಅವೃತ್ತಿಮಾಡಿ ನಾವು ಮೇಲೆ ತೋರಿಸಿದಂತೆ ಅರ್ಥ ಹೇಳಿದರೆ ಶ್ರುತಿಗೆ ಯೋಗ್ಯವಾದ ಅರ್ಥವನ್ನು ಹೇಳಿದಂತಾಗುತ್ತೆ ಎಂದಭಿಪ್ರಾಯ.

ಆಪಾತತೋ ಬಾಧಿತಾರ್ಥವಾಕ್ಯೇಷ್ವೇವಮಬಾಧಿತಃ ।
ಅರ್ಥಃ ಸರ್ವಾತ್ಮನಾ ವಾಚ್ಯೋ ಮುಖ್ಯೇ ಯುಕ್ತೇ ನ ಲಕ್ಷಣಾ ॥

ಯಾವುದಾದರೂ ಒಂದು ವಾಕ್ಯಕ್ಕೆ ಮೇಲೆ ತೋರುವ ಅರ್ಥವು ಪ್ರಮಾಣಕ್ಕೆ ವಿರುದ್ಧವಾಗಿದ್ದಲ್ಲಿ ಆ ವಾಕ್ಯಕ್ಕೆ ಸರ್ವಾತ್ಮನಾ ಪ್ರಮಾಣಕ್ಕೆ ವಿರುದ್ಧವಲ್ಲದ ಅರ್ಥವನ್ನು ಹೇಳಲೇಬೇಕು. ಇಷ್ಟೇ ಅಲ್ಲದೆ ಪದಗಳಿಗೆ ಮುಖ್ಯಾರ್ಥವು ಯೋಗ್ಯವಾಗುತ್ತಿರಲು ಲಾಕ್ಷಣಿಕ ಅರ್ಥವನ್ನು ಹೇಳಬಾರದು.

ಜಗದ್ಗುರೂಣಾಂ ಚ ಗುರುರ್ಹ್ಯತೋಽಸೌ ಪುರುಷೋತ್ತಮಃ ।
ಯತಶ್ಶ್ವೇದ್ದಾಲಕಾಖ್ಯರ್ಷಿಂ ಸ್ವಗುರೂಕೃತ್ಯ ಕಂಚನ ॥ ೪೬ ॥
ತನ್ಮುಖಾದಖಿಲಂ ತತ್ತ್ವಂ ಶ್ರೋತುಂ ಸ್ತಬ್ಧೋಽಯಮಾಗತಃ ।
ಮಹತೋಽಪಿ ಮಹಾನ್ಸ್ವಸ್ಮಾತ್ತ್ವಾಯಂ ಸ್ತಬ್ಧೋಽಧಮಾಧಮಃ ॥

ತದಾಽನಯೋರೇಕತಾ ಸ್ಯಾದ್ಯದಿ ಶೃಂಗಂ ಭವೇನ್ನರಿ ।

ಪುರುಷೋತ್ತಮನು ಜಗದ್ಗುರುಗಳಾದ ರಮಾಬ್ರಹ್ಮಾದಿ ದೇವತೆಗಳಿಗೆ ಗುರುವು. ಶ್ವೇತಕೇತುವಾದರೋ ಒಬ್ಬಾನೊಬ್ಬ ಉದ್ದಾಲಕನೆಂಬ ಹೆಸರುಳ್ಳ ಋಷಿಯನ್ನು ತನ್ನ ಗುರುವನ್ನಾಗಿ ಎಣಿಸಿ ಅವನ ಮುಖದಿಂದ ಎಲ್ಲ ತತ್ತ್ವವನ್ನೂ ಕೇಳಲು ಬಂದಿರುವ ಸ್ತಬ್ಧನು. ಆದ್ದರಿಂದ ಮಹಾತ್ಮರಾದ ರಮಾಬ್ರಹ್ಮಾದಿಗಳಿಗೆ ಉತ್ತಮನಾದ ಪರಮಾತ್ಮನೆಲ್ಲಿ? ಅಧಮಾಧಮನಾದ ಈ ಸ್ತಬ್ಧನು ಎಲ್ಲಿ? ಇಂತಹ ಇಬ್ಬರಿಗೂ ಐಕ್ಯ ಕೂಡಿದಲ್ಲಿ ಮನುಷ್ಯನ ತಲೆಯಲ್ಲಿಯೂ ಕೊಂಬು ಇದ್ದೀತು.

ಇತ್ಯಾವೃತ್ತ್ಯಾ ಪ್ರಾಪ್ತಯುಕ್ತ್ಯಾ ಸ್ತಬ್ಧಂ ಶಿಷ್ಯಮಬೂಬುಧತ್ ॥

ಗುರುರುದ್ದಾಲಕೋ ಯೋಗೀತ್ಯರ್ಥೇ ಮುಖ್ಯತಮೇ ಸತಿ ।

ಪದದ್ವಯಸ್ಯ ಮುಖ್ಯಾರ್ಥಂ ತ್ಯಕ್ತ್ವಾ ಲಕ್ಷಣಯಾಽನಯೋಃ ।

ಅಮುಖ್ಯಾರ್ಥಕಥಾ ಯಾ ತೇ ಸಾ ವೃಥೇತಿ ಮತಿರ್ಮಮ ।

ಹೀಗೆ ತತ್ ತತ್, ತ್ವಂ ತ್ವಂ ಎಂದು ಆವೃತ್ತಿಮಾಡೋಣದರಿಂದ ತಿಳಿದುಬರುವ ಯುಕ್ತಿಯಿಂದ ಸ್ತಬ್ಧನಾದ ಶ್ವೇತಕೇತುವಿಗೆ ಯೋಗಿಯಾದ ಉದ್ದಾಲಕನು (ವಿರುದ್ಧ ಧರ್ಮಗಳುಳ್ಳ ನಿನಗೂ ಬ್ರಹ್ಮನಿಗೂ ಐಕ್ಯವು ಕೂಡುವುದಿಲ್ಲವೆಂದು) ಬೋಧಿಸಿದನು, ಎಂಬುದಾಗಿ ಮುಖ್ಯಾರ್ಥವು ಸಂಭವಿಸುತ್ತಿರಲು 'ತತ್ ತ್ವಂ' ಎರಡು ಪದಗಳ ಮುಖ್ಯಾರ್ಥವನ್ನು ತ್ಯಾಗಮಾಡಿ ಲಕ್ಷಣಾವೃತ್ತಿಯಿಂದ ಈ ಎರಡು ಪದಗಳಿಗೆ ಯಾವ ಅಮುಖ್ಯಾರ್ಥವನ್ನು ಕಥನ ಮಾಡುವಿಯೋ ಅದು ಪ್ರಯೋಜನವಿಲ್ಲದೆಂದು ನನ್ನ ಅಭಿಪ್ರಾಯ.

ಟಿಪ್ಪಣಿ:— 'ತತ್ತ್ವಮಸಿ' ಎಂಬಲ್ಲಿ ಸರ್ವಜ್ಞತ್ವಾದಿ ಗುಣವಿಶಿಷ್ಟನಾದ ಬ್ರಹ್ಮನು (ಈಶ್ವರನು) ಎಂದು 'ತತ್' ಪದದ ಅರ್ಥ. ಅಲ್ಪಜ್ಞನಾದ ಜೀವನು ಎಂದು 'ತ್ವಂ' ಪದದ ಅರ್ಥ. ಇವರಿಬ್ಬರಿಗೆ ಸಾಕ್ಷಾತ್ ಐಕ್ಯವು ಕೂಡುವುದಿಲ್ಲವಾದ್ದರಿಂದ 'ತತ್' ಪದವು ಬ್ರಹ್ಮನ ಸರ್ವಜ್ಞತ್ವಾದಿ ಗುಣಗಳನ್ನು ಬಿಟ್ಟು ಕೇವಲ ಚಿತ್ ಭಾಗವನ್ನು ಲಕ್ಷಣಾವೃತ್ತಿಯಿಂದ ಹೇಳುತ್ತದೆ. ಹಾಗೆಯೇ 'ತ್ವಂ' ಪದವು ಜೀವನಲ್ಲಿನ ಅಲ್ಪಜ್ಞತ್ವಾದಿ ಗುಣಗಳನ್ನು ಬಿಟ್ಟು

ಕೇವಲ 'ಚಿತ್' ಭಾಗವನ್ನು ಲಕ್ಷಣಾವೃತ್ತಿಯಿಂದ ಹೇಳುತ್ತದೆ. ಅಂತೂ 'ತತ್ತ್ವಮಸಿ' ಎಂದರೆ ಬ್ರಹ್ಮನಲ್ಲಿನ ಮತ್ತು ಜೀವನಲ್ಲಿನ 'ಚಿತ್ತು' ಒಂದೇ ಎಂದರ್ಥ. (ಇದು ಮಾಯಾವಾದಿಗಳ ಅರ್ಥ).

ಮುಖ್ಯೇ ಸಂಭವತಿ ಪ್ರಾಜ್ಞೈರಮುಖ್ಯಾರ್ಥೋ ನ ಮೃಗ್ಯತೇ ||

ಮುಖ್ಯಾರ್ಥವು ಆಗುತ್ತಿರಲು ಅಮುಖ್ಯಾರ್ಥವು ಪ್ರಾಜ್ಞರಿಂದ ಹುಡುಕಲ್ಪಡುವುದಿಲ್ಲ. (ಪ್ರಾಜ್ಞರು ಹೇಳುವುದಿಲ್ಲ).

ಇತ್ಥಮತ್ಯಂತಭೇದಾಖ್ಯತತ್ತ್ವವ್ಯಕ್ತ್ಯಾ ಹರಿರ್ಮಯಿ |
ತುಷ್ಟೋಽಭೂದಿತಿ ಹರ್ಷೇಣ ಪದದ್ವಯಮಿದಂ ಸ್ವಕಮ್ ||

ಪುನಃ ಪುನಶ್ಚಾವರ್ತಯತಿ ಸೇಯಂ ವಾಗಾಖ್ಯನರ್ತಕೀ |
ರಾಜ್ಞಾಮಗ್ರೇ ಯಥಾ ರಾಜಪ್ರೀತ್ಯೈ ನೃತ್ಯತಿ ನರ್ತಕೀ || ೪೬೯ ||

ತಥೇಯಂ ಚ ಪದಾವೃತ್ತಿಂ ಮನುತೇ ಪ್ರೀತಯೇ ಹರೇಃ |
ಯನ್ನರ್ತನಂ ಪೂರ್ವಪದಸ್ಯೈಕಸ್ಯೈವ ಪುನಃ ಪುನಃ || ೪೭೦ ||

ಅಗ್ರೇಽಪಿ ಸ್ಥಾಪನಂ ಪೂರ್ವಸ್ಥಾನೇಪಿ ಸ್ಥಾಪನಂ ವಿದುಃ |
ಅತೋಪಿ ದೃಷ್ಟಪೂರ್ವೇಯಂ ಯೋಜನಾ ಜನಸಮ್ಮತಾ ||೪೭೧||

ವಾಕ್ ಎಂಬ ನರ್ತಕಿಯು, ಜೀವ-ಪರಮಾತ್ಮರಿಗಿರುವ ಅತ್ಯಂತ ಭೇದವೆಂಬ ತತ್ತ್ವವನ್ನು ಸ್ಪಷ್ಟಮಾಡೋಣದರಿಂದ ಹರಿಯು ನನ್ನಲ್ಲಿ ಪ್ರೀತನಾದಾನು ಎಂದು ತಿಳಿದು ಹರ್ಷದಿಂದ ತನ್ನ ಈ ಎರಡು ಪದಗಳನ್ನು ಪುನಃ ಪುನಃ ಆವೃತ್ತಿಮಾಡುತ್ತಾಳೆ. ಯಾವ ರೀತಿಯಲ್ಲಿ ರಾಜರ ಮುಂದೆ ಅವರ ಪ್ರೀತಿಯನ್ನು ಪಡೆಯುವುದಕ್ಕಾಗಿ ನರ್ತಕಿಯು ನರ್ತನ ಮಾಡುತ್ತಾಳೋ ಹಾಗೆ ಈ ಪದದ ಆವೃತ್ತಿಯನ್ನು ಹರಿಗೆ ಪ್ರೀತಿಯೆಂದು ತಿಳಿಯುತ್ತಾಳೆ. ಮೊದಲನೆಯ ಪಾದವನ್ನೊಂದನ್ನೇ ಬಾರಿಬಾರಿಗೂ ಮುಂದೆಯೂ ಇಡೋಣ. ಹಿಂತೆಗೆದು ಮೊದಲಿನ ಸ್ಥಾನದಲ್ಲಿಯೂ ಇಡೋಣ ಯಾವುದೋ ಅದನ್ನು ನರ್ತನವೆಂದು ಕರೆಯುವರು. ಆದ್ದರಿಂದ ನಾವು ಇಲ್ಲಿ ಆವೃತ್ತಿಯಿಂದ ಮಾಡಿರುವ ವಾಕ್ಯಯೋಜನೆಯು ಜನಸಮ್ಮತವಾದದ್ದು ಹೊಸದಲ್ಲ. ಇಲ್ಲಿ ಶ್ಲೇಷಾಲಂಕಾರ. ಪದ=ಚರಣ ; ಪದ=ಶಬ್ದ.

ಉಪಪಾದಯೇತ್ಪರಾತ್ಮಾನಂ ಜೀವೇಭ್ಯೋ ಯಃ ಪದೇ ಪದೇ ।
ಭೇದೇನೈವ ನಚೈತಸ್ಮಾತ್ಪ್ರಿಯೋ ವಿಷ್ಣೋಸ್ತು ಕಶ್ಚನ ॥ ಇತಿ ಪಾದ್ಮೇ

ಇದರ ಅರ್ಥ :—ಯಾವನಾದರೆ ಪರಮಾತ್ಮನನ್ನು ಜೀವರುಗಳ ದೆಸೆಯಿಂದ ಭಿನ್ನನನ್ನಾಗಿ (ಅನ್ಯನನ್ನಾಗಿ) ಪದೇ ಪದೇ ಉಪಪಾದನೆ ಮಾಡುತ್ತಾನೆಯೋ ಅಂತಹವನಿಗಿಂತ ವಿಷ್ಣುವಿಗೆ ಹೆಚ್ಚಾಗಿ ಪ್ರಿಯನಾದವನು ಬೇರೆ ಯಾವನೂ ಇಲ್ಲ—ಪಾದ್ಮಪುರಾಣ (ಭಾಗವತ ತಾತ್ಪರ್ಯ).

ಕಾಕ್ವಾಽಪಿ ಬಾಧಿತಂ ವಾಕ್ಯಂ ಯೋಜಯನ್ತಿ ಮನೀಷಿಣಃ ।
ಅವಜ್ಞಾಸೂಚಕೋ ನೀಚಸ್ವರಃ ಕಾಕುರಿತೀರಿತಃ ॥ ೪೭೩ ॥

ಸೋ(ಸಾ)ಪ್ಯಪಾತಪ್ರತೀತಾರ್ಥಂ ಬಾಧಿತಂ ನೋಚಯೇತ್ಕಿಲ ।
ತಾತ್ಪರ್ಯಂ ನ ಕಿಲ ಸ್ವಾರ್ಥೇ ಕಾಕ್ವಾವಾಕ್ಯಂ ಯದುಚ್ಯತೇ ॥

ಅತಃ ಸ್ವಾರ್ಥಪರಿತ್ಯಾಗಃ ಕಾಕುವಾಕ್ಯೇ ನ ದೂಷಣಮ್ ।
ತಸ್ಯೈವ ತತ್ರ ತಾತ್ಪರ್ಯಂ ತಮೇವಾರ್ಥಂ ವದೇದ್ಬುಧಃ ॥೪೭೪॥

ವಿಷಂ ಭುಂಕ್ಷ್ವೇತಿ ವಾಕ್ಯಸ್ಯ ಭೋಜನಾದ್ವಿನಿವರ್ತನಮ್ ।
ಯಥಾ ತಾತ್ಪರ್ಯಲಬ್ಧೋಽರ್ಥಸ್ತಥಾ ಕಾಕುಗಿರಾಮಪಿ ॥ ೪೭೫ ॥

ವಿರುದ್ಧ ಏವ ವಾಕ್ಯಾರ್ಥ ಇತಿ ಸರ್ವಸ್ಯ ಸಮ್ಮತಮ್ ।
ಸ್ವಾರ್ಥತ್ಯಾಗಾಖ್ಯದೋಷೋಽಪಿ ತಸ್ಮಾದೇವ ನ ವಿದ್ಯತೇ ॥ ೪೭೬ ॥

(ಐದನೆಯ ಅರ್ಥ) ಬುದ್ಧಿವಂತರು ಪ್ರಮಾಣಕ್ಕೆ ವಿರುದ್ಧವಾದ ಅರ್ಥವನ್ನು ಕೊಡುವ ವಾಕ್ಯವನ್ನು ಕಾಕುಸ್ವರದಿಂದ ಉಚ್ಚಾರಣೆ ಮಾಡುವುದರ ಮೂಲಕ, ಆ ವಾಕ್ಯವನ್ನು ಪ್ರಮಾಣಕ್ಕೆ ವಿರುದ್ಧವಲ್ಲದಂತೆ ಯೋಜನೆ ಮಾಡುತ್ತಾರೆ. 'ಕಾಕು' ಎಂದರೆ ಅಸಮ್ಮತಿಯನ್ನು ಸೂಚಿಸುವ ನೀಚಸ್ವರ, ಎಂದು ಹೇಳಲ್ಪಟ್ಟಿದೆ. ಅದಾದರೋ ಮೇಲೆ ತೋರುವ ಪ್ರಮಾಣಕ್ಕೆ ವಿರುದ್ಧವಾದ ಅರ್ಥವನ್ನು ದೂರಮಾಡೀತಷ್ಟೆ? ನೀಚಸ್ವರದಿಂದ ಯಾವ ವಾಕ್ಯವು ಹೇಳಲ್ಪಡುತ್ತದೆಯೋ ಅಂತಹ ವಾಕ್ಯಕ್ಕೆ ಮೇಲೆ ತೋರುವ ತನ್ನ ಅರ್ಥದಲ್ಲಿ ತಾತ್ಪರ್ಯವಿಲ್ಲವಷ್ಟೆ? ಆದ್ದರಿಂದ ಕಾಕು ವಾಕ್ಯದಲ್ಲಿ ಕೇವಲ ಪದಗಳಿಂದ

ತೋರುವ ಅರ್ಥವನ್ನು ಬಿಡೋಣವು ದೋಷವಲ್ಲ. ಹೀಗೆ ಮೇಲೆ ತೋರುವ ಅರ್ಥವನ್ನು ಬಿಡುವುದರಲ್ಲಿಯೇ ಕಾಕು ವಾಕ್ಯಕ್ಕೆ ತಾತ್ಪರ್ಯ. ಆ ತಾತ್ಪರ್ಯಾರ್ಥವನ್ನೇ ತಿಳಿವಳಿಕೆಯುಳ್ಳವನು ಹೇಳಿಯಾನು.

ಪ್ರಕೃತ "ತತ್ತ್ವಮಸಿ" ಎಂದು ಕಾಕುವಿನಿಂದ ಹೇಳಿದರೆ, "ತತ್ತ್ವಮಸಿ ಅಹಹ!" (ಸ್ವತಂತ್ರನೂ ಸರ್ವಜ್ಞನೂ ಆದ) ಬ್ರಹ್ಮನು, (ಅಲ್ಪಜ್ಞನೂ ಅಸ್ವತಂತ್ರನೂ ಆದ) ನೀನು, ಆಗಿದ್ದೀ ಅಲ್ಲವೇ? ಅಹಹ!!! ಲೋಕದಲ್ಲಿಯೂ ಕೂಡ ಅಶುದ್ಧವಾದ ಅನ್ನವನ್ನು ಭೋಜನಮಾಡತಕ್ಕ ಮಗನನ್ನು ನೋಡಿ ತಂದೆಯಾದವನು ಕೋಪದಿಂದ 'ವಿಷವನ್ನು ತಿನ್ನು' ಎಂದು ಹೇಳಿದರೆ ಅಶುದ್ಧವಾದ ಅನ್ನವನ್ನು ತಿನ್ನಬೇಡವೆಂದು ಹೇಳುವುದರಲ್ಲಿ ತಾತ್ಪರ್ಯವು ಹೇಗೋ ಹಾಗೇ ಇಲ್ಲಿಯೂ ಕೂಡ ಕಾಕುವಿನಿಂದ "ತತ್ತ್ವಮಸಿ" ವಾಕ್ಯವನ್ನು ಉಚ್ಚರಿಸುವಾಗ ಸರ್ವಜ್ಞನಾದ ಪರಮಾತ್ಮನು ನೀನು ಅಲ್ಲ ಎಂಬುದರಲ್ಲಿ ತಾತ್ಪರ್ಯ. ಅಂತೂ ಇಂತಹ ಸಂದರ್ಭಗಳಲ್ಲಿ ಯಾವ ಅರ್ಥವು ವಾಕ್ಯಕ್ಕೆ ಮೇಲೆ ತೋರುತ್ತಿಯೋ ಅದಕ್ಕೆ ವಿರುದ್ಧವಾದ ಅರ್ಥದಲ್ಲಿಯೇ ತಾತ್ಪರ್ಯ. ಈಗ ಕಾಕುವಿನಿಂದ ತತ್ತ್ವಮಸಿ ಎಂಬ ವಾಕ್ಯಕ್ಕೆ ಅರ್ಥ ಹೇಳಿದಲ್ಲಿ ವಾಕ್ಯದಲ್ಲಿರುವ "ತತ್ ತ್ವಂ ಅಸಿ" ಈ ಪದಗಳ ಸ್ವಾರ್ಥವನ್ನು ತ್ಯಾಗಮಾಡಿದ ದೋಷವು ಇಲ್ಲ. ಅಲ್ಲದೆ ಯಾವ ವಾಕ್ಯಕ್ಕೆ ಯಾವುದನ್ನು ತಿಳಿಸುವುದರಲ್ಲಿ ತಾತ್ಪರ್ಯವೋ ಅದೇ ಆ ವಾಕ್ಯಕ್ಕೆ ಅರ್ಥ.

ಸ ಆತ್ಮಾ ಪ್ರಥಮಂ ತತ್ತ್ವಂ ತ್ವಂ ಚ ತಸ್ಮಾದನಂತರಮ್ ।
ತತ್ತ್ವಮೇವಾಸಿ ನಾತತ್ತ್ವಂ ಲೋಕಾಯತಮತೇ ಯಥಾ ॥
ಸ್ವತಂತ್ರಮಸ್ವತಂತ್ರಂ ಚ ತತ್ತ್ವಮಾಹುರ್ಯತೋ ಬುಧಾಃ ।
ಇತಿ ವಾಽರ್ಥೋ ಭವೇದಸ್ಯ ವಾಕ್ಯಸ್ಯಾತಿಮನೋಹರಃ ॥ ೪೭೮ ॥

ಪದವಿಭಾಗ ಹೀಗೆ:—೧) ಸಃ-ಆತ್ಮಾ-ತತ್ತ್ವಂ ೨) ತತ್-ತ್ವಂ-(ತತ್ತ್ವಂ) ೩) (ತ್ವಂ)-(ತತ್ತ್ವಂ) ಅಸಿ ಶ್ವೇತಕೇತೋ.

ಇಲ್ಲಿ ತತ್ತ್ವಂ ಪದವು ಎರಡು ಸಲ ತೆಗೆದುಕೊಂಡಿದೆ. ಎರಡನೇ ವಾಕ್ಯದಲ್ಲಿನ 'ತತ್ತ್ವಂ' ಎಂಬ ಪದವೂ ಮೂರನೇ ವಾಕ್ಯದಲ್ಲಿನ 'ತ್ವಂ' 'ತತ್ತ್ವಂ' ಪದಗಳೂ ಅಧ್ಯಾಹಾರ.

ವಾಕ್ಯಗಳಿಗೆ ಅರ್ಥ :—೧) ಆ ಸನ್ನಾಮಕ ಪರಮಾತ್ಮನು ಪ್ರಥಮ ತತ್ತ್ವ=ಮುಖ್ಯ ತತ್ತ್ವ.

೨) ತತ್=ತಸ್ಮಾತ್=ಅವನಿಂದ ಅನಂತರಂ=ಅನಂತರ ತ್ವಂ= ನೀನು ತತ್ತ್ವಂ=ತತ್ತ್ವವು ಅಂದರೆ ನೀನು ಅಸ್ವತಂತ್ರ ತತ್ತ್ವ=ಅಮುಖ್ಯ ತತ್ತ್ವ.

೩) ಎಲೈ ಶ್ವೇತಕೇತುವೇ! ತ್ವಂ=ನೀನು, ತತ್ತ್ವಂ=ತತ್ತ್ವವಾಗಿ, ಅಸಿ=ಇದ್ದಿ. ಚಾರ್ವಾಕನು ಹೇಳುವಂತೆ ನೀನು ಅತತ್ತ್ವವಲ್ಲ. ತತ್ತ್ವವೇ ಆಗಿದ್ದಿ.

ಶ್ಲೋಕಾರ್ಥ :—ಆ ಸನ್ನಾಮಕ ಪರಮಾತ್ಮನು ಪ್ರಥಮ ತತ್ತ್ವ. ನೀನು ಅವನ ಅನಂತರ ತತ್ತ್ವ (ಅಸ್ವತಂತ್ರ ತತ್ತ್ವ) ತತ್ತ್ವವೇ ಆಗಿದ್ದಿ. ಚಾರ್ವಾಕರು ಹೇಳುವಂತೆ ಅತತ್ತ್ವವಲ್ಲ. ಜ್ಞಾನಿಗಳು ತತ್ತ್ವವು ಸ್ವತಂತ್ರ ಮತ್ತು ಅಸ್ವತಂತ್ರ ಎಂದು ಎರಡು ಬಗೆಯಾದದ್ದು ಎಂಬುದಾಗಿ ಹೇಳುವರು. ಆದ್ದರಿಂದ "ಸ ಆತ್ಮಾ ತತ್ತ್ವಮಸಿ" ಎಂಬ ಈ ವಾಕ್ಯಕ್ಕೆ ಅತಿ ಮನೋಹರವಾದ ಈ ಅರ್ಥವು ಆದೀತು.

ಸೋಽಪಿ ಭಿಕ್ಷುರಯಂ ಚೇತಿ ಪ್ರೋಕ್ತೇ ಭಿಕ್ಷುಪದಂ ಯಥಾ ।
ಆವರ್ತತೇ ತಥಾ ತತ್ತ್ವಪದಂ ಚಾಽವರ್ತತಾಮಿಹ ॥ ೪೭೯ ॥

ಅವನೂ ಭಿಕ್ಷುವೇ. ಇವನೂ ಕೂಡ ಎಂದು ಹೇಳಿದರೆ ಇವನೂ ಕೂಡ 'ಭಿಕ್ಷು'ವು ಎಂಬುದಾಗಿ ಭಿಕ್ಷು ಪದವು ಹೇಗೆ ಆವರ್ತನೆ ಮಾಡಲ್ಪಡುತ್ತೆಯೋ ಹಾಗೆ ಇಲ್ಲಿಯೂ ತತ್ತ್ವಪದವು ಆವೃತ್ತಿಯಾಗಲಿ (ಸ ಆತ್ಮಾ ತತ್ತ್ವಂ, ತ್ವಂ ಚ ತತ್ತ್ವಮಸಿ).

ತತೋ ನಾದೃಷ್ಟಪೂರ್ವೇಯಮಪಿ ವಾಕ್ಯಸ್ಯ ಯೋಜನಾ ।
ಸಂಬುದ್ಧಿಮಧ್ಯಪುರುಷಶಕ್ತ್ಯೈವ ತ್ವಂ ಪದಂ ಬಲಾತ್ ॥ ೪೮೦ ॥

ಆಯಾತಿ ನ ಪೃಥಗ್ವಾಚ್ಯಂ ಪಶ್ಯ ಪ್ರಾಜ್ಞಾನುಶಾಸನವತ್ ।
ರಾಮಾವ ಮಾಂ ಹರೇ ಪಾಹಿ ಪಾಹಿ ಕೈಟಭಮರ್ದನ ॥ ೪೮೧ ॥

ಇತ್ಯಾದಿ ವಾಕ್ಯೇ ನ ಪೃಥಕ್ ತ್ವಂ ಪದಂ ಕಥ್ಯತೇ ಬುಧೈಃ ।
ಬಲಾದಾಯಾತೀದೃಶೇಷು ವಾಕ್ಯೇಷು ತ್ವಂ ಪದಂ ಕಿಲ ॥ ೪೮೨ ॥

ಆದ್ದರಿಂದ ನಾವು ಮಾಡತಕ್ಕ ವಾಕ್ಯಯೋಜನೆಯು ಹಿಂದೆ ಕಾಣದೇ ಇದ್ದುದಲ್ಲ. 'ತ್ವಮಸಿ' ಶ್ವೇತಕೇತೋ ಎಂಬ ಮೂರನೇ ವಾಕ್ಯದಲ್ಲಿ ಸಂಬೋಧನರೂಪವಾದ 'ಶ್ವೇತಕೇತೋ' ಎಂಬ ಮಧ್ಯಮ ಪುರುಷಪದ ಶಕ್ತಿಯಿಂದ 'ತ್ವಂ' ಪದವು ತಾನಾಗಿಯೇ ಬರುತ್ತೆ. ಪುನಃ ಹೇಳಬೇಕಾದ್ದಿಲ್ಲ. ಮುಂದೆ ತೋರಿಸುವ ಪ್ರಾಜ್ಞರ ಅನುಶಾಸನವನ್ನು ನೋಡು. 'ರಾಮಾವ ಮಾಂ' 'ಹರೇ ಪಾಹಿ' 'ಪಾಹಿ ಕೈಟಭಮರ್ದನ'. ಇಲ್ಲಿ ಹೇ ರಾಮ! ತ್ವಂ ಅವ ಮಾಂ, 'ಹರೇ ತ್ವಂ ಪಾಹಿ' ಕೈಟಭಮರ್ದನ; ಈ ವಾಕ್ಯಗಳಲ್ಲಿ ರಾಮ! ಅವ ಮಾಂ, 'ಹರೇ ಪಾಹಿ' 'ಪಾಹಿ ಕೈಟಭಮರ್ದನ' ಎಂದು ಮಾತ್ರ ಹೇಳಿದ್ದರೂ, ತ್ವಂ ಅವ, ತ್ವಂ ಪಾಹಿ, ತ್ವಂ ಪಾಹಿ ಎಂದು ಹೇಗೆ ಆಗುತ್ತದೆಯೋ ಹಾಗೇ ಇಲ್ಲಿಯೂ ಕೂಡ 'ಶ್ವೇತಕೇತೋ' ಎಂದಿರುವುದರಿಂದ 'ತ್ವಂ' ಪದವು ಹೇಳಬೇಕಾದ್ದಿಲ್ಲ. ಇಂತಹ ವಾಕ್ಯಗಳಲ್ಲಿ ಅವಶ್ಯಕವಾಗಿ 'ತ್ವಂ' ಪದವು ತಾನಾಗಿಯೇ ಬರುತ್ತೆಯಷ್ಟೇ?

ಇದಂ ಯದೈಹಿಕಂ ವಸ್ತು ಧನಧಾನ್ಯಗೃಹಾದಿಕಮ್ ।
ಯಚ್ಚ ತತ್ಪರಲೋಕಸ್ಥಂ ಸ್ವರ್ಗಮೋಕ್ಷಸುಖಾದಿಕಮ್ ॥ ೪೮೩ ॥

ತ್ವಮಸೀತ್ಯುಚ್ಯತೇ ಯದ್ಯಃ ಸೋಽಯಂ ಜೀವೋ ಗೃಹೇ ಗೃಹೇ ।
ಸ ಪ್ರಸಿದ್ಧಶ್ಚ ವೇದಾದಾವಾತ್ಮಾ ನಾರಾಯಣಾಭಿಧಃ ॥ ೪೮೪ ॥

ಆತ್ಮಾನಾತ್ಮಪದೋಕ್ತಾನಾಂ ಜೀವಾತ್ಮಪರಮಾತ್ಮನಾಮ್ ।
ಯತ್ಸಂಬನ್ಧ್ಯಖಿಲೇಶತ್ವಂ ಸರ್ವಜ್ಞತ್ವಂ ಸ್ವತಂತ್ರತಾ ॥ ೪೮೫ ॥

ಅನೀಶತ್ವಾಽಸ್ವತಂತ್ರತ್ವಮಲ್ಪಜ್ಞತ್ವಂ ಚ ದುಃಖಿತಾ ।
ಐತದಾತ್ಮ್ಯಮಿತಿ ಪ್ರೋಕ್ತಂ ಶಬ್ದವಾಕ್ಯಾರ್ಥವೇದಿಭಿಃ ॥ ೪೮೬ ॥

ಅಸಮನ್ತಾಚ್ಚ ಯದ್ವ್ಯಾಪ್ತಂ ಕಾಲಾಕಾಶಾದಿ ವಸ್ತು ಚ ।
ಏತತ್ಸರ್ವಂ ಯತೋ ಮಾನಸಿದ್ಧಂ ತತ್ತೇನ ಹೇತುನಾ ॥ ೪೮೭ ॥

ಸತ್ಯಮಿತ್ಯುಚ್ಯತೇ ಯಸ್ಮಾದ್ವಿಶ್ವಂ ಸತ್ಯಮಿತಿ ಶ್ರುತಾ ।
ತತ್ತಸ್ಮಾತ್ಸತ್ಯಮೇವೇತಿ ಶ್ವೇತಕೇತೋ ಮಹಾಮತೇ ॥ ೪೮೮ ॥
ಜಾನೀಹಿ ತೇನ ಮಿಥ್ಯಾತ್ವಭ್ರಮಂ ಸೋಽಹಮಿತಿ ಭ್ರಮುವನ್ ।
ಸ್ತಬ್ಧತಾಮಭಿಮಾನಂ ಚ ತ್ಯಕ್ತ್ವಾ ಸರ್ವೇಶ್ವರಂ ಹರಿಮ್ ॥ ೪೮೯
ಭಜಸ್ವ ಪುಂಡರೀಕಾಕ್ಷಂ ಯದೀಚ್ಛಸಿ ಪರಂ ಪದಮ್ ।
ಇತಿ ಸರ್ವಸ್ಯ ಸತ್ಯತ್ವಂ ತಥಾ ಜೀವೇಶಯೋರ್ಭಿದಾಮ್ ॥ ೪೯೦॥
ಸಯುಕ್ತಿಕಂ ಶ್ರುತೇರ್ದೃಷ್ಟ್ವಾ ಪ್ರೋವಾಚೋದ್ದಾಲಕೋ ಗುರುಃ ।

(ಏಳನೆಯ ಅರ್ಥ) "ಐತದಾತ್ಮ್ಯಂ, ಇದಂ, ಸರ್ವಂ, ತತ್ ಸತ್ಯಂ, ಸಃ, ಆತ್ಮಾ, ತತ್, ತ್ವಂ, ಅಸಿ, ಶ್ವೇತಕೇತೋ"

ಜೀವಾತ್ಮ ಪರಮಾತ್ಮ ಕಾಲಾಕಾಶಾದಿ ಜಡವಸ್ತು ಮತ್ತು ಇವುಗಳ ಸ್ವಭಾವವಾದ ಧರ್ಮಗಳು ಸತ್ಯವಾದದ್ದೇ ಎಂದು ಈ ವಾಕ್ಯಕ್ಕೆ ಅರ್ಥವಾಗುತ್ತೆಂದು ತೋರಿಸುತ್ತಾರೆ.

'ಇದಂ' ಎಂದರೆ ಧನಧಾನ್ಯ ಮನೆ ಇವೇ ಮೊದಲಾದ ಈ ಲೋಕದ ವಸ್ತು. 'ತತ್' ಎಂದರೆ ಪರಲೋಕದಲ್ಲಿರುವ ಸ್ವರ್ಗ ಮೋಕ್ಷ ಸುಖಾದಿಗಳು. ಪ್ರತಿಯೊಂದು ಮನೆಯಲ್ಲಿಯೂ 'ತ್ವಮಸಿ' ನೀನು ಇದ್ದಿ, ನೀನು ಇದ್ದಿ ಎಂದು ಯಾವನು ಕರೆಸಿಕೊಳ್ಳಲ್ಪಡುತ್ತಾನೋ ಆ ಜೀವ. 'ಸಃ' 'ಆತ್ಮಾ ನಾರಾಯಣಃ ಪರಃ' ಎಂಬುದಾಗಿ ವೇದಾದಿಗಳಲ್ಲಿ ಪ್ರಸಿದ್ಧನಾದ ನಾರಾಯಣನೆಂದು ಹೆಸರುಳ್ಳ ಪರಮಾತ್ಮನು. 'ಐತದಾತ್ಮ್ಯಂ' ಏತೇಷಾಂ ಆತ್ಮನಾಂ ಸಂಬಂಧಿ—ಏತದಾತ್ಮ ಸಂಬಂಧಿ ಅಥವಾ ಏತಯೋಃ ಆತ್ಮನೋಃ ಸ್ಸಂಬಂಧಿ "ಆತ್ಮ-ಅನಾತ್ಮ" ಪದಗಳಿಂದ ಹೇಳಿಸಿಕೊಳ್ಳಲ್ಪಡುವ ಪರಮಾತ್ಮ ಜೀವಾತ್ಮರಿಗೆ ಸಂಬಂಧಪಟ್ಟ ಯಾವ ಧರ್ಮಗಳೋ ಅವು. ಪರಮಾತ್ಮನಿಗೆ ಸಂಬಂಧಪಟ್ಟ ಧರ್ಮಗಳು ಸರ್ವಸ್ವಾಮಿತ್ವ, ಸರ್ವಜ್ಞತ್ವ, ಸ್ವತಂತ್ರತ್ವ ಇವೇ ಮೊದಲಾದವುಗಳು, ಇವು 'ಐತದಾತ್ಮ್ಯಂ' ಪದದಿಂದ ತಿಳಿಯಬರತಕ್ಕದ್ದೆಂದು ಶಬ್ದಾರ್ಥ ವಾಕ್ಯಾರ್ಥ ಬಲ್ಲವರು ಹೇಳುವರು. ಆತ್ಮಾ ಎಂಬ

ಪದಕ್ಕೆ ಕಾಲಾಕಾಶಾದಿ ವಸ್ತು ಎಂಬ ಅರ್ಥವನ್ನು ಈಗ ಮಾಡುತ್ತಾರೆ. ಎಲ್ಲ ಕಡೆಯಲ್ಲಿಯೂ ಯಾವುದು ಚೆನ್ನಾಗಿ ವ್ಯಾಪಿಸಿವೆಯೋ ಆ ವಸ್ತು ಸಮುದಾಯವು. 'ಆತ್ಮ' ಶಬ್ದದಿಂದ ವಾಚ್ಯವಾದದ್ದು ಕಾಲ, ಆಕಾಶ, ವರ್ಣ ಇವೆಲ್ಲವೂ ಹೀಗೆ ವ್ಯಾಪ್ತವಾದವುಗಳು. ಆದ್ದರಿಂದ ಅವು ಒಟ್ಟಿಗೆ 'ಆತ್ಮಾ' ಶಬ್ದದಿಂದ ಕರೆಯಲ್ಪಡುತ್ತವೆ. ಇವೆಲ್ಲವೂ ಪ್ರಮಾಣಸಿದ್ಧವಾದ್ದರಿಂದ ಸತ್ಯವೇ. ಅಲ್ಲದೇ "ವಿಶ್ವಂ ಸತ್ಯಂ" ಇತ್ಯಾದಿ ಶ್ರುತಿಸಿದ್ಧವಾದ್ದರಿಂದಲೂ, ಇವೆಲ್ಲವೂ ಸತ್ಯವೇನೇ. ಮಹಾಬುದ್ಧಿವಂತನಾದ ಶ್ವೇತಕೇತುವೇ ಹೀಗೆ ತಿಳಿ. "ಜಗತ್ತು ಮಿಥ್ಯೆಯೆಂಬ ಭ್ರಮೆಯನ್ನೂ, ಆ ಪರಮಾತ್ಮನೇ ನಾನು ಎಂಬ ಭ್ರಮೆಯನ್ನೂ, ಸ್ತಬ್ಧತೆಯನ್ನೂ, ನಾನು ಪಂಡಿತನೆಂಬ ಅಭಿಮಾನವನ್ನೂ ಬಿಟ್ಟು ಪರಮಪದವನ್ನು ಇಚ್ಛಿಸುವನಾದರೆ, ಸರ್ವೇಶ್ವರನೂ, ಭಕ್ತಭಯನಿವರ್ತಕನೂ ಆದ ಪುಂಡರೀಕಾಕ್ಷನನ್ನು ಭಜಿಸು." ಈ ಪ್ರಕಾರವಾಗಿ ಸರ್ವಜಗತ್ತಿನ ಸತ್ಯತ್ವವೂ, ಜೀವೇಶ್ವರರ ಭೇದವೂ ಸಯುಕ್ತಿಕವಾಗಿ ವೇದದ್ರಷ್ಟೃವಾದ ಉದ್ದಾಲಕ ಗುರುವು ಮಗನಿಗೆ ಹೇಳಿದನು.

ಏತಯೋರಾತ್ಮನೋರ್ಭಾವಃ ಸ್ವಭಾವೋ ಯಃ ಪುರೋದಿತಃ ॥

ತದ್ವೈತದಾತ್ಮ್ಯಶಬ್ದೋಕ್ತಂ ಪ್ರಾಗುಕ್ತ ವಿಧಯಾಽಥವಾ ।
ಐತದಾತ್ಮ್ಯಪದಸ್ಯೈಕಪದತ್ವಾಂಗೀಕೃತಾವಪಿ ॥ ೪೯೨ ॥

ತತ್ಸರ್ವಂ ಸತ್ಯಮಿತ್ಯೇವ ವಾಕ್ಯಯೋಜನಿಕಾ ಭವೇತ್ ।
ತತ್ತಸ್ಮಾನ್ಮಾನಸಿದ್ಧತ್ವಾ ಚ್ಛ್ರುತೌ ಸತ್ಯತ್ವಕೀರ್ತನಾತ್ ॥ ೪೯೩ ॥

ಇತಿ ಹೇತುದ್ವಯಂ ಪಕ್ಷಂ ಚಾಹ ತತ್ಪದಮೇವ ನಃ ।
ತತ್ತತ್ಪದಮಿದಂ ದ್ವೇಧಾ ತ್ರೇಧಾ ವಾಽಽವರ್ತತೇ ರಣೇ ॥ ೪೯೪ ॥

'ಐತದಾತ್ಮ್ಯಂ' ಎಂದರೆ ಈ ಇಬ್ಬರು ಆತ್ಮರ ಸ್ವಭಾವವೆಂಬುದಾಗಿ ಅರ್ಥಮಾಡಬಹುದು. ಹಿಂದೆ ಜೀವಾತ್ಮ ಪರಮಾತ್ಮರ ಸ್ವಭಾವಗಳು ವಿಲಕ್ಷಣವಾದದ್ದೆಂದು ಹೇಳಲ್ಪಟ್ಟಿತು. "ಐತದಾತ್ಮ್ಯ"ವೆಂದರೆ ಜೀವಾತ್ಮ ಪರಮಾತ್ಮರಿಗೆ ಸಂಬಂಧಪಟ್ಟ ಅಜ್ಞತ್ವ, ಸರ್ವಜ್ಞತ್ವಾದಿ ಧರ್ಮಗಳು ಎಂದು

ಅಲ್ಲಿ ಅರ್ಥಮಾಡಿದೆವು. ಈಗ ಅರ್ಥಮಾಡಿದ ರೀತಿಯಲ್ಲಿ ಜೀವ ಪರಮಾತ್ಮರ ಸ್ವಭಾವಗಳು ಎಂದು ಹೇಳಿದರೇ ಆಗಲಿ ಅಥವಾ ಅವರಿಬ್ಬರಿಗೆ ಸಂಬಂಧಪಟ್ಟ ಧರ್ಮಗಳು ಎಂದು ಹೇಳಿದರೇ ಆಗಲಿ ಜೀವ ಪರಮಾತ್ಮರ ಭೇದವೂ ಅವರ ಸ್ವಭಾವವೂ, ದಿಕ್ಕು, ಕಾಲ, ಆಕಾಶಾದಿ ಜಗತ್ತೂ, ಪರಲೋಕಗಳೂ, ಅಲ್ಲಿರುವ ವಸ್ತುಗಳೂ, "ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ" ಎಂಬೀ ವಾಕ್ಯದಿಂದಲೇ ಸತ್ಯವೆಂದು ಸಿದ್ಧವಾಯಿತು. ಈ ವಾಕ್ಯವು ಅನುಮಾನ ರೂಪವಾಗಿದ್ದು ವಿಶ್ವಸತ್ಯತ್ವವನ್ನು ಎರಡು ಹೇತುಗಳಿಂದ ಸಾಧಿಸುತ್ತದೆಂದು ತೋರಿಸುತ್ತಾರೆ. ಈ ವಾಗ್ಯುದ್ಧ ಪ್ರಕರಣದಲ್ಲಿ ಈ ವಾಕ್ಯದಲ್ಲಿನ 'ತತ್' ಪದವನ್ನು ಎರಡಾವರ್ತಿ ಅಥವಾ ಮೂರಾವರ್ತಿ ಆವೃತ್ತಿಮಾಡಿ ಅದನ್ನೇ ಅನುಮಾನಗಳಲ್ಲಿ "ಪಕ್ಷ"ವನ್ನಾಗಿಯೂ, "ಹೇತು"ವನ್ನಾಗಿಯೂ ಮಾಡಿ ವಾಕ್ಯಯೋಜನೆಯನ್ನು ಮಾಡುತ್ತಾರೆ. ಪ್ರತ್ಯಕ್ಷಾದಿ ಪ್ರಮಾಣಸಿದ್ಧವಾಗಿರುವುದು ಮತ್ತು ಶ್ರುತಿಯಲ್ಲಿ ಸತ್ಯವೆಂದು ಹೇಳಲ್ಪಟ್ಟಿರುವುದು ಇವೆರಡೂ ಹೇತುಗಳು. ಅನುಮಾನಗಳು ಈ ರೀತಿ ಇವೆ—

I ತತ್ (ಪಕ್ಷ)=ಅದೆಲ್ಲವೂ, ಸತ್ಯಂ=ಸತ್ಯವು. (ಹೇತು) ತತ್=ತಸ್ಮಾತ್=ಮಾನಸಿದ್ಧತ್ವಾತ್=ಪ್ರಮಾಣಸಿದ್ಧವಾದ್ದರಿಂದ.

II ತತ್ (ಪಕ್ಷ) = ಅದೆಲ್ಲವೂ, ಸತ್ಯಂ=ಸತ್ಯವು. ತತ್=ತಸ್ಮಾತ್ (ಹೇತು)=ಶ್ರುತ್ಯುಕ್ತತ್ವಾತ್=ಶ್ರುತಿಯಲ್ಲಿ ಹಾಗೆ ಹೇಳಿರುವುದರಿಂದ.

ಏವಂ ಚ ವಿಶ್ವಸತ್ಯತ್ವಸಾಧ್ಯಿಕಾಃ ಶ್ರುತಯೋಽಖಿಲಾಃ ।
ಸರ್ವಜ್ಞತ್ವಾದಿ ಧರ್ಮಾಣಾಂ ಸಾಧಕೋ ವೇದ ಏವ ಚ ॥೪೯॥

ಅಂತು ಎಲ್ಲ ಶ್ರುತಿಗಳೂ ವಿಶ್ವದ ಸತ್ಯತ್ವಕ್ಕೆ ಸಾಧಕಗಳಾಗುತ್ತವೆ. ಅಲ್ಲದೆ ಪರಮಾತ್ಮನ ಸರ್ವಜ್ಞತ್ವಾದಿ ಧರ್ಮಗಳಿಗೂ ವೇದವೇ ಸಾಧಕ.

ಭೇದಸ್ಯ ಸಾಧಿಕಾ ವಾಚಃ ಸೇಯಂ ವಾಕ್ಯೈಕವಾಕ್ಯತಾಂ ।
ಲಭನ್ತೇ ಶ್ರುತಯಃ ಸರ್ವಾಃ ಪ್ರಮಾಣಪದವೀಂ ಯಯುಃ ॥

ನಾವು ಹೇಳಿದ ರೀತಿಯಲ್ಲಿ ಅರ್ಥಮಾಡಿದರೆ ಭೇದವನ್ನು ಸಾಧಿಸುವ ವೇದವಾಕ್ಯಗಳೂ ಮತ್ತು ಈ ತತ್ತ್ವಮಸಿ ವಾಕ್ಯವೂ ಏಕವಾಕ್ಯತೆಯನ್ನು ಹೊಂದುತ್ತವೆ. ಪರಸ್ಪರ ವಿರೋಧವಿಲ್ಲದ ಅರ್ಥವನ್ನು ಹೇಳುವವುಗಳಾಗಿ

ಎಲ್ಲ ಶ್ರುತಿಗಳೂ ಪ್ರಮಾಣಸ್ಥಾನವನ್ನು ಸೇರಿದವು. (ಯಥಾರ್ಥವನ್ನು ಹೇಳುವವುಗಳಾಗುತ್ತವೆ.)

ಅಪೌರುಷೇಯವೇದೋಽಯಮಭೂನ್ನಾತತ್ತ್ವವೇದಕಃ ।
ಕ್ವಯೋಽಪಿ ಜಗತೋ ನಾಭೂದೇವಂ ಸತ್ಯಖಿಲಸ್ಯ ಚ ॥ ೪೯೭ ॥

ಪ್ರತ್ಯಕ್ಷಾದ್ಯನುಕೂಲೇ ಚ ಲಭ್ಯೇಽಸ್ಮಿನ್ಪದಸಂಪದಾ ।
ಅರ್ಥೇ ಸತಿ ಪದಂ ದದ್ಯಾದ್ಬುದ್ಧಿಮಾನ್ ಕಃ ಕದಧ್ವನಿ ॥ ೪೯೮ ॥

ಹೀಗೆ ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಅನುಕೂಲ ಅರ್ಥಮಾಡುವುದರಿಂದ ಅಪೌರುಷೇಯವಾದ ಈ ವೇದವು ಅತತ್ತ್ವವೇದಕವು ಆಗಲಿಲ್ಲ. ಈ ರೀತಿಯ ವಾಕ್ಯದಲ್ಲಿನ ಪದಗಳ ಸಾಮರ್ಥ್ಯದಿಂದ ಪ್ರತ್ಯಕ್ಷಾದಿಗಳಿಗೆ ಅನುಕೂಲವಾಗಿ ಯೋಗ್ಯವಾದ ಅರ್ಥವು ಈ ವಾಕ್ಯಕ್ಕೆ ಆಗುತ್ತಿರಲು, ಯಾವ ಬುದ್ಧಿಶಾಲಿಯು ತಾನೇ ನೀಚಮಾರ್ಗವನ್ನವಲಂಬಿಸಿ ಅಪ್ರಾಮಾಣಿಕವಾದ ಅರ್ಥವನ್ನು ಹೇಳಿಯಾನು?

ಏವಂಚಾನೇಕಧಾ ಬಾಧವಿಧುರಾರ್ಥಸ್ಯ ಸಂಭವೇ ।
ಬಾಧಿತಾರ್ಥಂ ವದನ್ವಾದೀ ಕೋವಾ ದೀನೋ ನ ಸಂಸದಿ ॥ ೪೯೯ ॥

ಈಗ ನಾವು ಹೇಳಿದ ರೀತಿಯಲ್ಲಿ ಪ್ರಮಾಣಬಾಧವಿಲ್ಲದ ಅನೇಕ ಅರ್ಥಗಳು ಸಂಭವಿಸುತ್ತಿರುವಾಗ ಈ ವಾಕ್ಯಕ್ಕೆ ಸಭೆಯಲ್ಲಿ ಪ್ರಮಾಣ ಬಾಧಿತವಾದ ಅರ್ಥವನ್ನು ಹೇಳುವ ಯಾವ ವಾದಿಯೇ ಆಗಲಿ ದೀನನಲ್ಲದೇ ಹೋದಾನು? ದೀನನೇ ಎಂದರ್ಥ. ನಿಗ್ರಹಸ್ಥಾನವನ್ನು ಸೇರುವನೆಂದು ಅಭಿಪ್ರಾಯ.

'ನಿರ್ಗುಣತ್ವ ಶ್ರುತಿವ್ಯಾಖ್ಯಾನ'

ನಿರ್ಗುಣತ್ವಶ್ರುತಿಶ್ಚಾಪಿ ಯದಿ ನಿರ್ಗುಣತಾಭಿಧಂ ।
ಧರ್ಮಂ ರಕ್ಷೇತ್ತದಾ ಸರ್ವಧರ್ಮಕ್ಷೇಪಕರೀ ನ ಸಾ ॥ ೫೦೦॥

ಈ (ಕೆಳಗೆ ಉದಾಹರಿಸಿದ) ನಿರ್ಗುಣತ್ವ ಶ್ರುತಿಯೂ ಕೂಡ, ನಿರ್ಗುಣತ್ವ ವೆಂಬ ಧರ್ಮವನ್ನು ರಕ್ಷಿಸಿದಲ್ಲಿ ಬ್ರಹ್ಮನಲ್ಲಿ ಸರ್ವಧರ್ಮಗಳನ್ನೂ ನಿರಾಕರಿಸಿ

ದಂತಾಗಲಿಲ್ಲ. ಅಂದರೆ, ಬ್ರಹ್ಮನಲ್ಲಿ ನಿರ್ಗುಣತ್ವಧರ್ಮವನ್ನು ಒಪ್ಪಿದ ಹಾಗಾಯಿತು.

[ಏಕೋ ದೇವಃ ಸರ್ವಭೂತೇಷು ಗೂಢಃ
ಸರ್ವವ್ಯಾಪೀ ಸರ್ವಭೂತಾಂತರಾತ್ಮಾ ।
ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥]
(ಶ್ವೇತಾಶ್ವತರ ೬-೧೧)

ಸಿದ್ಧಾಂತರೀತ್ಯಾ ಈ ಶ್ರುತಿಗೆ ಅರ್ಥ ಹೀಗೆ:—ಪ್ರಧಾನನೂ (ಮುಖ್ಯನೂ) ಸರ್ವಪ್ರಾಣಿಗಳಲ್ಲಿಯೂ ಗುಪ್ತವಾಗಿ ನೆಲೆಸಿರುವವನೂ, ಸರ್ವವ್ಯಾಪಿಯೂ, ಸರ್ವಪ್ರಾಣಿಗಳ ಪ್ರೇರಕನಾಗಿ ಅವರೊಳಗಿರುವವನೂ, ಸರ್ವಪ್ರಾಣಿಗಳು ಮಾಡುವ ಕರ್ಮಕ್ಕೆ ಸ್ವಾಮಿಯೂ, ಸರ್ವಪ್ರಾಣಿಗಳಿಗೆ ಆಶ್ರಯನೂ, ಸರ್ವವನ್ನೂ ಸಾಕ್ಷಾತ್ತಾಗಿ ನೋಡುವವನೂ, ಜ್ಞಾನರೂಪನೂ, ಜಡಾಮಿಶ್ರನೂ, ಸತ್ವಾದಿ ಗುಣರಹಿತನೂ ಆದವನು ಕ್ರೀಡಾದಿ ಗುಣವಿಶಿಷ್ಟನಾದ ಪರಮಾತ್ಮ.

ಭಾವಧರ್ಮಾನ್ ಕ್ಷಿಪನ್ತೀ ಸಾ ಯದ್ಯಭಾವಂ ರಿರಕ್ಷತಿ ।
ನಿರನಿಷ್ಟತ್ವನಿರ್ದೋಷತ್ವಾದೀನಾಂ ಭೀರ್ಗತಾ ಮಮ ॥ ೫೦೧ ॥

'ಏಷ ಸರ್ವಜ್ಞಃ' ಇವೇ ಮೊದಲಾದ ಭಾವಧರ್ಮಗಳನ್ನು ಈ ಶ್ರುತಿಯು ಬ್ರಹ್ಮನಲ್ಲಿ ಇಲ್ಲವೆಂದು ಹೇಳುತ್ತದೆ. ನಿರ್ಗುಣನು, ನಿರನಿಷ್ಟನು ಎಂಬೀ ಮೊದಲಾದ ಅಭಾವ ಧರ್ಮಗಳನ್ನು ರಕ್ಷಿಸುತ್ತದೆ ಎಂದು ನೀನು ಹೇಳುವುದಾದರೆ, ನಿರನಿಷ್ಟತ್ವ, ನಿರ್ದೋಷತ್ವ, ನಿರ್ಭಯತ್ವ ಇತ್ಯಾದಿ ಧರ್ಮಗಳ ಭಯವು ನನಗಿಲ್ಲ ಎಂದರೆ ಈ ಅಭಾವಧರ್ಮಗಳು ಬ್ರಹ್ಮನಲ್ಲಿ ಉಂಟು ಎಂದು ನೀನೇ ಒಪ್ಪಿರುವುದರಿಂದ ನಾನು ಸಾಧಿಸಬೇಕಾದ ಅವಶ್ಯಕತೆ ಇಲ್ಲದೇ ಹೋಯಿತು.

ಅಭಾವಾಭಾವರೂಪತ್ವಾದ್ರಕ್ಷೇದ್ಭಾವಂ ಚ ಸಾ ತದಾ ।
ನ ಚೇದ್ಭಾವಸ್ವರೂಪಾ ಸಾ ಸ್ವಯಮೇವ ಹತಾ ಭವೇತ್ ॥೫೦೨॥

ಭಾವವೂ ಅಭಾವರೂಪವಾದದ್ದು. ಅಂದರೆ ಬ್ರಹ್ಮನಲ್ಲಿ ಸರ್ವಜ್ಞತ್ವ ವಿದೆ. ಇದನ್ನು ಬ್ರಹ್ಮನಲ್ಲಿ ಸರ್ವಜ್ಞತ್ವಾಭಾವಾಭಾವ (ಸರ್ವಜ್ಞತ್ವ ಇಲ್ಲದೇ ಇರುವುದು ಇಲ್ಲ) ವಿದೆ ಎಂದು ಹೇಳಬಹುದು. ಎಲ್ಲ ಅಭಾವವನ್ನೂ ರಕ್ಷಿಸಿ ದಲ್ಲಿ ಸರ್ವಜ್ಞತ್ವಾಭಾವಾಭಾವವನ್ನೂ ಅಂದರೆ ಭಾವರೂಪವಾದ ಸರ್ವಜ್ಞತ್ವ ವನ್ನು ರಕ್ಷಿಸಬೇಕು. ಹೀಗಿಲ್ಲದಲ್ಲಿ ಶ್ರುತಿಯು (ಶ್ರುತಿಯ ಸ್ವರೂಪವು) ಭಾವರೂಪವಾದ್ದರಿಂದ ಭಾವರೂಪವನ್ನು ಉಳಿಸುವುದಿಲ್ಲವೆಂದರೆ ಶ್ರುತಿಯು ತಾನೇ ಇಲ್ಲದೆ ಹೋಗುತ್ತದೆ.

ಸಹಮಾನಾ ಗುರ್ವಭಾವಂ ಕಥಂ ಭಾವಂ ಲಘುಂ ತ್ಯಜೇತ್ ।
ಗುರ್ವಿಣೀಂ ಯೋ ವಹೇದ್ಧೀರೋ ನ ವಹೇತ್ಕಿಂ ಸ ಬಾಲಿಕಾಂ ॥

ಗುರುವಾದ ಅಂದರೆ ಹೆಚ್ಚು ವಿಷಯಗಳನ್ನೊಳಗೊಂಡ ಅಭಾವವನ್ನು ಸಹಿಸತಕ್ಕ ಶ್ರುತಿಯು, ಲಘುವಾದ ಭಾವವನ್ನು ಹೇಗೆ ತ್ಯಜಿಸೀತು? ದಪ್ಪಕ್ಕಿರ ತಕ್ಕವಳನ್ನು ಹೊರಬಲ್ಲವನು ಬಾಲಕಿಯನ್ನು ಹೊರಲಾರನೇನು?

ಸ್ವಪುತ್ರವತ್ಸ್ವಸುಃ ಪುತ್ರಾನ್ ಕಿಂ ನ ರಕ್ಷೇತ್ಕೃಪಾವತೀ ।

ತನ್ನ ಮಕ್ಕಳಂತೆ ತಂಗಿಯ ಮಕ್ಕಳನ್ನು ಕೃಪಾವಂತಳು ರಕ್ಷಿಸದೇ ಇದ್ದಾಳೇನು? ಅಂದರೆ "ಕೇವಲೋ ನಿರ್ಗುಣಶ್ಚ" ಎಂಬ ಶ್ರುತಿಯು ಹೇಗೆ "ನಿರವದ್ಯಃ, ನಿರ್ದೋಷಃ" ಈ ಪ್ರಕಾರವಾಗಿ ಪರಮಾತ್ಮನಲ್ಲಿ ದೋಷ ಗಳನ್ನು ನಿರಾಕರಿಸುತ್ತದೆಯೋ ಹಾಗೆಯೇ "ಏಷ ಸರ್ವಜ್ಞಃ" ಇತ್ಯಾದಿ ಶ್ರುತಿ ಗಳಲ್ಲಿ ಹೇಳಿರುವ ಭಾವರೂಪವಾದ ಧರ್ಮಗಳನ್ನು ಅಭಾವಾಭಾವರೂಪ ಗಳೆಂದೆಣಿಸಿ ಪರಮಾತ್ಮನಲ್ಲಿ ಅವು ಇವೆ ಎಂದು ತೋರಿಸಿಕೊಟ್ಟು "ಏಷ ಸರ್ವಜ್ಞಃ" ಎಂಬ ಶ್ರುತಿಗಳ ಪ್ರಾಮಾಣ್ಯವನ್ನು ರಕ್ಷಿಸುತ್ತದೆ, ಎಂದು ಹೇಳುವುದು ಯೋಗ್ಯವಾದದ್ದು ಎಂದು ಅಭಿಪ್ರಾಯ.

ದೂರೀಕುರ್ಯಾತ್ಪ್ರಕೃತ್ಯಾಖ್ಯಚಂಡಾಲೀಗರ್ಭಸಂಭವಾನ್ ॥
ಸತ್ವಾದೀನ್ ದುಃಖಚಿಂತಾದೀನಸ್ಪೃಶ್ಯಾನ್ ದುರ್ಗುಣಾನ್ಹರೌ ।
ಪವಿತ್ರಾಣಾಂ ಪವಿತ್ರೇ ಚ ಮಂಗಲಾನಾಂ ಚ ಮಂಗಲೇ ॥ ೫೦೫ ॥

ಪರಮಾತ್ಮನು ನಿರ್ಗುಣನೆಂದರೆ, ಸತ್ವಾದಿ ಗುಣರಹಿತನು ಎಂದರ್ಥ. ಅಂತು "ಕೇವಲೋ ನಿರ್ಗುಣಶ್ಚ" ಈ ಶ್ರುತಿಯೆಂಬ ಹೆಂಗಸು 'ಪ್ರಕೃತಿ'

ಎಂಬ ಚಂಡಾಲೀಗರ್ಭೋತ್ಪನ್ನವಾದ ಸತ್ವಾದಿ ಗುಣಗಳನ್ನೂ, ದುಃಖ ಚಿಂತಾದಿಗಳೇ ಮೊದಲಾದ ದುರ್ಗುಣಗಳನ್ನೂ, ಪವಿತ್ರವಾದ ವಸ್ತುಗಳಲ್ಲಿ ಪರಮ ಪವಿತ್ರನೂ, ಮಂಗಳಕರವಾದ ವಸ್ತುಗಳಲ್ಲಿ ಪರಮ ಮಂಗಳನೂ ಆದ ಹರಿಯಲ್ಲಿ ಅಂಟಿಸುವುದಿಲ್ಲ. ಅವನ್ನು ಹರಿಯಿಂದ ದೂರಮಾಡುವಳು.

ನಿರ್ಗುಣತ್ವಾಭಿಧಂ ಧರ್ಮಂ ಯದಿ ಸ್ವೋಕ್ತಮಪಿ ಕ್ಷಿಪೇತ್ ।
ಸುತರಾಂ ಶೋಭನಗುಣಾಂಸ್ತರ್ಹಿ ರಕ್ಷೇದ್ರಮಾಪತೌ ॥ ೫೦೬ ॥

ದ್ವೌ ನಞೌ ಪ್ರಕೃತಾರ್ಥಸ್ಯಾತಿಶಯಂ ಕುರುತಃ ಕಿಲ ।
ಅತೋ ಮೀಮಾಂಸಕಾಚಾರ್ಯಮಧ್ವಾಚಾರ್ಯಸ್ಯ ಸನ್ನಿಧೌ ।
ಕೋಽವಾ ವಾದೀ ಪ್ರತಿವದೇದ್ಯದ್ವಾಗೀಶೋ ಹ್ಯಸೌ ಗುರುಃ ॥

ಇತಿ ಶ್ರೀಮತ್ಕವಿಕುಲತಿಲಕ-ಭಾವಿ ಸಮೀರ ಶ್ರೀವಾದಿರಾಜ ಪೂಜ್ಯಚರಣವಿರಚಿತಾ (ಹರಿ) ಶ್ರುತಿತತ್ತ್ವಪ್ರಕಾಶಿಕಾ ಸಮಾಪ್ತಾ ॥

ತಾನೇ ಹೇಳಿದ್ದರೂ ನಿರ್ಗುಣತ್ವವೆಂಬ ಧರ್ಮವನ್ನು ಶ್ರುತಿಯು ಕಿತ್ತು ಹಾಕಿದಲ್ಲಿ (ಹರಿಯಲ್ಲಿಲ್ಲವೆಂದು ಹೇಳಿದಲ್ಲಿ) ಸ್ವಾತಂತ್ರ್ಯಾದಿ ಶೋಭನ ಗುಣಗಳನ್ನು ರಮಾಪತಿಯಲ್ಲಿ ರಕ್ಷಿಸೀತು. ಬ್ರಹ್ಮನಲ್ಲಿ ನಿರ್ಗುಣತ್ವವಿಲ್ಲವೆಂಬ ಮಾತು, ಎರಡು 'ನಞ್' ಒಳಗೊಂಡ ವಾಕ್ಯ. ಇದು ಯಾವಾಗಲೂ ಹೇಳತಕ್ಕ ಅರ್ಥದ ಅತಿಶಯವನ್ನು ತೋರಿಸತಕ್ಕದ್ದು. ದೇವದತ್ತನು ಐಶ್ವರ್ಯವಿಲ್ಲದವನಲ್ಲ ಎಂಬ ಮಾತು ದೇವದತ್ತನು ಐಶ್ವರ್ಯವುಳ್ಳವನು ಎಂಬ ಮಾತಿಗಿಂತ ಪ್ರಬಲವಾದದ್ದು (more emphatic). ಆದ್ದರಿಂದ ಮೀಮಾಂಸಕಾಚಾರ್ಯರಾದ ಮಧ್ವಾಚಾರ್ಯರ ಎದುರಿನಲ್ಲಿ ಯಾವ ವಾದಿಯು ತಾನೇ ಎದುರು ವಾದಿಸಿ ಗೆದ್ದಾನು? ಈ ಗುರುಗಳು ವಾಕ್ಕಿಗೆ ಅಭಿಮಾನಿಯಾದ ಭಾರತೀದೇವಿಗೆ ಸ್ವಾಮಿಯಲ್ಲವೇ?

ಇತಿ ಶ್ರೀ ಶ್ರುತಿತತ್ತ್ವಪ್ರಕಾಶಿಕಾ ಅನುವಾದವು ಸಮಾಪ್ತಿಯಾಯಿತು.

ಶ್ರೀಕೃಷ್ಣಾರ್ಪಣಮಸ್ತು.

ಅನುಬಂಧ (Appendix)

ಮಾಯಾವಾದಿಗಳಾದರೋ ಹೀಗೆ ಹೇಳುತ್ತಾರೆ.

"ಸಜಾತೀಯ ವಿಜಾತೀಯ ಸ್ವಗತ ಭೇದ ವರ್ಜಿತಂ ನಿರ್ವಿಶೇಷಂ ಬ್ರಹ್ಮೈವ ತತ್ತ್ವಂ"

ನಿರ್ವಿಶೇಷಂ - ನಿರ್ಧರ್ಮಕಂ = ಯಾವ ಧರ್ಮವೂ ಇಲ್ಲದ್ದು. ಸಜಾತೀಯ ಭೇದವೆಂದರೆ ಜೀವನಿಂದ ಭೇದ. ವಿಜಾತೀಯ ಭೇದವೆಂದರೆ ಜಡದಿಂದ ಭೇದ. ಸ್ವಗತ ಭೇದವೆಂದರೆ ತನ್ನಲ್ಲಿನ ಭೇದ.

ಸರ್ವಧರ್ಮರಹಿತನಾದ ಬ್ರಹ್ಮನೇ ತತ್ತ್ವ. ಈ ಬ್ರಹ್ಮನಲ್ಲಿ ಯಾವ ವಿಧವಾದ ಭೇದವೂ ಇಲ್ಲ. ಜೀವನಿಂದಲೇ ಆಗಲಿ ಜಡದಿಂದಲೇ ಆಗಲಿ ತನ್ನಲ್ಲಿಯೇ ಆಗಲಿ ಭೇದವಿಲ್ಲ. ಬ್ರಹ್ಮನಲ್ಲಿ ಜೀವಪ್ರತಿಯೋಗಿಕ ಭೇದವಿಲ್ಲ. ಅಂದರೆ ಜೀವನಿಂದ ಬೇರೆಯಾಗಿರೋಣವೆಂಬ ಧರ್ಮವು ಬ್ರಹ್ಮನಲ್ಲಿಲ್ಲ. ಹಾಗೆಯೇ ಜಡ ಪ್ರತಿಯೋಗಿಕ ಭೇದವೂ ಬ್ರಹ್ಮನಲ್ಲಿಲ್ಲ. ಯಾವುದರ ಭೇದವು ಬ್ರಹ್ಮನಲ್ಲಿಲ್ಲವೋ ಅದಕ್ಕೆ ಆ ಭೇದದ ಪ್ರತಿಯೋಗಿ ಎಂದು ಹೆಸರು. ಉದಾಹರಣೆ :—ಘಟವು ಪಟದಿಂದ ಬೇರೆಯಾಗಿದೆ. ಇದನ್ನು ಪಟಪ್ರತಿಯೋಗಿಕ ಭೇದ ಘಟದಲ್ಲಿದೆ ಎಂದು ವ್ಯವಹರಿಸುತ್ತಾರೆ. ಒಟ್ಟಿನಲ್ಲಿ ಹೀಗೆ ಹೇಳಿದ ಹಾಗಾಯಿತು. ನಮ್ಮ ದೇಹದಲ್ಲಿ ಕರಚರಣಾದಿಗಳ ಭೇದವು ಹ್ಯಾಗೋ ಹಾಗೆ ಬ್ರಹ್ಮನಲ್ಲಿ ಇಲ್ಲ. ಇದನ್ನೇ ಶ್ರೀಮಂತ್ರಾಲಯ ಸ್ವಾಮಿಗಳು ಹೀಗೆ ಅನುವಾದಮಾಡಿರುವರು. "ಜೀವ ಜಡ ಪ್ರತಿಯೋಗಿಕ ಸ್ವನಿಷ್ಠ-ಭೇದ ವರ್ಜಿತಂ ನಿರ್ಧರ್ಮಕಂ ಚ"

[ವೃಕ್ಷಸ್ಯ ಸ್ವಗತೋ ಭೇದಃ ಪತ್ರಪುಷ್ಪಫಲಾದಿಭಿಃ ।
ವೃಕ್ಷಾಂತರಾತ್ಸಜಾತೀಯೋ ವಿಜಾತೀಯಃ ಶಿಲಾದಿಭಿಃ ॥
ತಥಾ ಸದ್ವಸ್ತುನೋ ಭೇದತ್ರಯಂ ಪ್ರಾಪ್ತಂ ನಿವಾರ್ಯತೇ
ಐಕ್ಯಾವಧಾರಣದ್ವೈತಪ್ರತಿಷೇಧೈಸ್ತ್ರಿಭಿಃ ಕ್ರಮಾತ್ ॥]

[ಪಂಚದಶಿ, ಅಧ್ಯಾಯ ೨, ಶ್ಲೋಕ ೨೦-೨೧]

ಗಿಡದಲ್ಲಿನ ಎಲೆ ಹೂವು ಹಣ್ಣು ಇವುಗಳೆಲ್ಲರ ಪರಸ್ಪರ ಭೇದವು ಗಿಡದಲ್ಲಿದೆ. ಇದು ಗಿಡದ ಸ್ವಗತ ಭೇದ. ಒಂದು ಗಿಡ ಮತ್ತೊಂದು ಗಿಡದಿಂದ ಬೇರೆಯಾಗಿರೋಣವು ಸಜಾತೀಯ ಭೇದವು. ಒಂದು ಗಿಡ ಕಲ್ಲಿನಿಂದ ಬೇರೆಯಾಗಿರುವುದು ವಿಜಾತೀಯ ಭೇದ. "ಏಕಮೇವಾದ್ವಿತೀಯಂ" ಎಂಬ ವೇದವಾಕ್ಯವು ಈ ಮೂರು ಭೇದವೂ ಬ್ರಹ್ಮನಲ್ಲಿ ಇಲ್ಲವೆಂದು ಹೇಳುತ್ತದೆ. 'ಏಕಂ' ಎಂಬ ಪದದಿಂದ ಸ್ವಗತ ಭೇದವನ್ನೂ, 'ಏವ' ಎಂದು ಅವಧಾರಣ ಮಾಡುವ ಮೂಲಕ ಸಜಾತೀಯ ಭೇದವನ್ನೂ 'ಅದ್ವಿತೀಯಂ' ದ್ವೈತವನ್ನು ನಿಷೇಧಮಾಡುವುದರ ಮೂಲಕ ವಿಜಾತೀಯ ಭೇದವನ್ನೂ ಬ್ರಹ್ಮನಲ್ಲಿ ಇಲ್ಲವೆಂದು ಹೇಳುತ್ತದೆ.

ತತ್ತ್ವಂ=ಅನಾರೋಪಿತಂ.

ಆರೋಪ :—ರಜ್ಜುವನ್ನು (ಹಗ್ಗವನ್ನು) ಸರ್ಪವೆಂದು ತಿಳಿದಾಗ (ಭ್ರಾಂತಿಯಲ್ಲಿ ತೋರುವ) ಸರ್ಪವು ರಜ್ಜುವಿನಲ್ಲಿ ಆರೋಪಿತವಾಗಿದೆ. ಆದ್ದರಿಂದ ಸರ್ಪವು ತತ್ತ್ವವಲ್ಲ. ಹಾಗೆಯೇ ಈಶ್ವರ, ಜಗತ್ತು ಬ್ರಹ್ಮನಲ್ಲಿ ಆರೋಪಿತವಾಗಿವೆ.

"ತದಜ್ಞಾನವಶಾತ್ ಜಗದೀಶ್ವರಜೀವರೂಪೇಣ ಪ್ರತಿಭಾಸತೇ"

ಬ್ರಹ್ಮನೇ ಅಜ್ಞಾನವಶದಿಂದ ಜಗತ್ತು ಈಶ್ವರ ಮತ್ತು ಜೀವರೂಪವಾಗಿ ತೋರುತ್ತಾನೆ. ಜಡಪ್ರಪಂಚ ಮಿಥ್ಯಾ. ಜೀವೇಶ್ವರರಿಗೆ ಭೇದವಿಲ್ಲ. ಜೀವನು ಅಜ್ಞತ್ವ, ಪಾರತಂತ್ರ್ಯ, ದುಃಖ ಈ ಧರ್ಮಗಳಿಂದ ತೋರುತ್ತಾನೆ. ಈಶ್ವರನು ಸರ್ವಜ್ಞತ್ವ, ಸರ್ವಕರ್ತೃತ್ವ ಇತ್ಯಾದಿ ಧರ್ಮಗಳುಳ್ಳವನು. ಜೀವನ ಧರ್ಮಗಳೂ ಈಶ್ವರನ ಧರ್ಮಗಳೂ ಮಿಥ್ಯಾ. ಜೀವರು ಸ್ವರೂಪದಲ್ಲಿ ಬ್ರಹ್ಮನಿಂದ ಅಭಿನ್ನರು. ತತ್ತ್ವಮಸಿ ಇತ್ಯಾದಿ ವಾಕ್ಯಗಳನ್ನು ಗುರುಮುಖದಿಂದ ಕೇಳಿ ಅದರ ಅರ್ಥಜ್ಞಾನ ದ್ವಾರಾ ಅವಿದ್ಯಾನಿವೃತ್ತಿರೂಪ ಮೋಕ್ಷ ಹೊಂದುವರು.

"ಅಜ್ಞಾನಂ ಚ ನ ಜ್ಞಾನಾಭಾವಃ ಕಿಂತು ಭಾವರೂಪಂ ಅನಾದಿ ಅನಿರ್ವಾಚ್ಯಂ ಆವರಣ ವಿಕ್ಷೇಪ ವ್ಯಾಪಾರಂ."

ಅಜ್ಞಾನವೆಂದರೆ ಜ್ಞಾನಾಭಾವವಲ್ಲ. ಅಂದರೆ ದೇವದತ್ತನಿಗೆ ಜ್ಞಾನವಿಲ್ಲವೆಂಬುದನ್ನು ದೇವದತ್ತನಲ್ಲಿ ಜ್ಞಾನಾಭಾವವಿದೆಯೆಂದು ವ್ಯವಹರಿಸಬಹುದು. ದೇವದತ್ತನಲ್ಲಿ ಅಜ್ಞಾನವಿದೆ ಎಂದೂ ಹೇಳಬಹುದು. ಅಂತೂ ಮಾಯಾವಾದಿಗಳು ಹೇಳುವ ಅಜ್ಞಾನವು ಜ್ಞಾನದ ಇಲ್ಲದೆ ಇರೋಣವು ಅಲ್ಲ. ಆದರೆ ಅದು ಭಾವರೂಪವಾದದ್ದು. ಅನಾದಿಯಾದದ್ದು. ಅನಿರ್ವಚನೀಯವು. ಆವರಣ ವಿಕ್ಷೇಪ ವ್ಯಾಪಾರವುಳ್ಳದ್ದು. ಭಾವರೂಪವೆಂದರೆ 'ಅದು ಇದೆ ಎಂದು ವ್ಯವಹಾರ ಮಾಡುವುದಕ್ಕೆ ವಿಷಯವಾದದ್ದು. ಆದರೆ ಬ್ರಹ್ಮನಂತೆ 'ಪರಮಾರ್ಥ ಸತ್' ಅಲ್ಲ. ಮೊಲದ ಕೋಡಿನಂತೆ ಅತ್ಯಂತ ಅಸತ್ತಲ್ಲ. ಆದ್ದರಿಂದಲೇ ಅನಿರ್ವಚನೀಯವೆಂದು ಕರೆಯಲ್ಪಡುತ್ತೆ. ಆವರಣವೆಂದರೆ ಯಾವುದನ್ನು ಅಜ್ಞಾನವು ಆವರಿಸಿದೆಯೋ ಅದರ ಪ್ರಕಾಶಕ್ಕೆ ಪ್ರತಿಬಂಧಕ (ಅಡ್ಡಿ) ವಾಗಿರೋಣ, ಇಂತಹ ವ್ಯಾಪಾರವುಳ್ಳದ್ದು. ವಿಕ್ಷೇಪವೆಂದರೆ, ಅಜ್ಞಾನ ಯಾವುದನ್ನು ಆವರಿಸಿದೆಯೋ, ಅದು ಹೇಗಿದೆಯೋ ಅದಕ್ಕಿಂತ ಬೇರೆಯಾಗಿ ತೋರುವ ಹಾಗೆ ಮಾಡೋಣ.

"ತಚ್ಚ ಶಾಸ್ತ್ರಜನಿತತತ್ತ್ವಜ್ಞಾನನಿವರ್ತ್ಯತ್ವಾತ್ ಅಜ್ಞಾನಂ ಅವಿದ್ಯಾ ಇತ್ಯಾದಿಶಬ್ದೈಃ ಉಚ್ಯತೇ"

ಈ ಅಜ್ಞಾನವು ಶಾಸ್ತ್ರಾಭ್ಯಾಸದಿಂದ ಉತ್ಪನ್ನವಾದ ತತ್ತ್ವಜ್ಞಾನದಿಂದ ಹೋಗುತ್ತೆಯಾದ್ದರಿಂದ ಅಜ್ಞಾನ, ಅವಿದ್ಯೆ ಇವೇ ಮೊದಲಾದ ಶಬ್ದಗಳಿಂದ ಹೇಳಲ್ಪಡುತ್ತೆ. ('ಅಸುರ' ಶಬ್ದವು ಸುರವಿರೋಧಿಗಳಾದ ಅಸುರರಲ್ಲಿ ಹೇಗೆ ಪ್ರಯೋಗವೋ ಹಾಗೆ ನಞ ವಿರೋಧಾರ್ಥವುಳ್ಳದ್ದು).

"ತದ್ದ್ವಿವಿಧಂ ಮಾಯಾ ಅವಿದ್ಯಾ ಭೇದಾದಿತ್ಯೇಕೇ. ಅಪರೇ ತು ಸ್ವಾಶ್ರಯವ್ಯಾಮೋಹನಅವ್ಯಾಮೋಹನರೂಪವ್ಯಾಪಾರ ಭೇದಾತ್ ಏಕಮೇವ ವಸ್ತು ಅವಿದ್ಯಾ, ಮಾಯಾ ಇತ್ಯುಚ್ಯತ ಇತ್ಯಾಹುಃ."

ಈ ಅಜ್ಞಾನವು ಮಾಯಾ, ಅವಿದ್ಯಾ ಎಂದು ಎರಡು ವಿಧ ಎಂದು ಕೆಲವು ಮಾಯಾವಾದಿಗಳ ಅಭಿಪ್ರಾಯ. ಇತರರಾದರೋ, ತಾನು ಯಾವುದನ್ನು ಆಶ್ರಯಿಸಿದೆಯೋ ಅದನ್ನೇ ಮೋಹಪಡಿಸದೇ ಇರೋಣ, ಮೋಹ

ಪಡಿಸೋಣ ಈ ಎರಡು ವ್ಯಾಪಾರ ಭೇದದಿಂದ ಒಂದೇ ಅಜ್ಞಾನವಸ್ತುವು ಮಾಯೆಯೆಂದೂ ಅವಿದ್ಯೆ ಎಂದೂ ಹೇಳಲ್ಪಡುತ್ತದೆ.

" ತತ್ರ ಮಾಯಾವಚ್ಛಿನ್ನಬ್ರಹ್ಮೈವ ಈಶ್ವರ ಇತ್ಯುಚ್ಯತೇ. ಸ . ಚ ಮಾಯಾಮಯಸಾರ್ವಜ್ಞಸರ್ವೇಶ್ವರತ್ವಾದ್ಯುಪೇತೋ ವಿಯದಾದೇಃ ವಿಶ್ವಸ್ಯ ಕರ್ತಾ ಸ್ಥಾಪಕಃ ಸಂಹರ್ತಾ ಚ "

ಇವರಲ್ಲಿ ಮಾಯಾವಚ್ಛಿನ್ನ ಬ್ರಹ್ಮನೇ ಈಶ್ವರನೆಂದು ಅನ್ನಿಸಿಕೊಳ್ಳುತ್ತಾನೆ. ಅವಚ್ಛಿನ್ನ ಎಂದರೆ ಇಂಗ್ಲಿಷಿನಲ್ಲಿ 'Limited' ಎಂದು ಹೇಳಬಹುದು. ಆ ಈಶ್ವರನಾದರೋ ಮಾಯಾಮಯವಾದ ಸರ್ವಜ್ಞತ್ವ, ಸರ್ವೇಶ್ವರತ್ವಾದಿಗಳಿಂದ ಯುಕ್ತನಾಗಿ ಆಕಾಶಾದಿವಿಶ್ವಸೃಷ್ಟಿಕರ್ತನೂ ಪಾಲಕನೂ ಸಂಹಾರಕನೂ ಆಗಿದ್ದಾನೆ.

" ವಿಶ್ವಂ ಚ ನಸನ್ನಾಸನ್ನಸದಸತ್ಕಿಂತ್ವನಿರ್ವಾಚ್ಯಮೇವ, ಮಾಯೋಪಾದಾನಕಂ ಶುಕ್ತಿಕಾಯಾಂ ರಜತಮಿವ ಬ್ರಹ್ಮಣಿ ಆರೋಪಿತಮೇವ ಪ್ರತೀಯತೇ. ಅತ ಏವ ಈಶ್ವರಸ್ಯ ತತ್ಕರ್ತೃತ್ವಾದಿಕಮಪಿ ಮಾಯಾಮಯಂ ಮಿಥ್ಯೈವ "

ವಿಶ್ವವಾದರೋ ಬ್ರಹ್ಮನಂತೆ 'ಸತ್' ಅಲ್ಲ. ಏಕೆಂದರೆ ಬ್ರಹ್ಮಜ್ಞಾನದಿಂದ ಬಾಧ್ಯವಾಗುತ್ತದೆ. ಶಶವಿಷಾಣದಂತೆ 'ಅಸತ್' ಅಲ್ಲ. ಏಕೆಂದರೆ ಕಾಣಿಸುತ್ತೆ. ಕಿಂತು ಅನಿರ್ವಾಚ್ಯ. 'ಸತ್' ಎಂತಲೇ ಆಗಲಿ, 'ಅಸತ್' ಎಂದಾಗಲಿ 'ಸದಸತ್' ಎಂದಾಗಲಿ ಹೇಳಲಾಗುವುದಿಲ್ಲ. ವಿಶ್ವಕ್ಕೆ ಉಪಾದಾನ ಕಾರಣ ಮಾಯಾ. ಶುಕ್ತಿಯಲ್ಲಿ ಕಾಣುವ ಬೆಳ್ಳಿಯಂತೆ ಬ್ರಹ್ಮನಲ್ಲಿ ಆರೋಪಿತವಾಗಿಯೇ ವಿಶ್ವವು ತೋರುತ್ತೆ. ಆದ್ದರಿಂದ ಈಶ್ವರನ ಜಗತ್ಕರ್ತೃತ್ವಾದಿಗಳೂ ಕೂಡ ಮಾಯಾಮಯವು ಅಂದರೆ ಮಿಥ್ಯಾ.

'ಕಿಂತು ಅಸೌ ಅಧಿಷ್ಠಾನ ಯಾಥಾತ್ಮ್ಯ ಜ್ಞಾನವತ್ವಾನ್ನ ಮುಹ್ಯತಿ'

ಆದರೆ ಈಶ್ವರನು ಅಧಿಷ್ಠಾನ ಎಂದರೆ ಬ್ರಹ್ಮನ ಯಥಾರ್ಥ ಜ್ಞಾನವುಳ್ಳವನಾದ್ದರಿಂದ ಮೋಹಪಡುವುದಿಲ್ಲ.

" ಬ್ರಹ್ಮವಿವರ್ತರೂಪಂ ಜಗತ್ಪಶ್ಯತ್ಯೇವ ಕೇವಲಂ "

ಬ್ರಹ್ಮನಲ್ಲಿ ಆರೋಪಿತವಾಗಿ ಅಥವಾ ಅಧ್ಯಸ್ತವಾಗಿರುವ ಜಗತ್ತನ್ನು ಕೇವಲಂ=ಮೋಹಹೊಂದದೇ ನೋಡುತ್ತಾನೆ !

[Iswara merely sees the world superimposed on Brahman but is not deluded by it.]

" ಜೀವಸ್ತು ಅವಿದ್ಯಾವಚ್ಛಿನ್ನಂ ಬ್ರಹ್ಮೈವ. ದರ್ಪಣಾದ್ಯುಪಾಧ್ಯವಚ್ಛಿನ್ನಂ ಮುಖಮೇವ ಪ್ರತಿಮುಖಂ. ಅವಚ್ಛೇದ ಮಾತ್ರಂ ಅವಿದ್ಯಕಲ್ಪಿತತ್ವಾತ್ ಮಿಥ್ಯಾ. "

ಜೀವನಾದರೋ ಅವಿದ್ಯಾವಚ್ಛಿನ್ನ ಬ್ರಹ್ಮನೇ. ಹೇಗೆ ದರ್ಪಣಾದಿ ಉಪಾಧಿಯಿಂದ ಅವಚ್ಛಿನ್ನವಾದ ಮುಖವೇ ಪ್ರತಿಮುಖವೋ ಹಾಗೆ. ಬ್ರಹ್ಮ, ಮುಖ ; ಅವಿದ್ಯಾ, ದರ್ಪಣ ; ಪ್ರತಿಮುಖಂ, ಜೀವ ; ಅವಚ್ಛೇದ (ಭೇದ) ಮಾತ್ರ ಅವಿದ್ಯಾದಿಂದ ಉಂಟಾದ್ದರಿಂದ ಮಿಥ್ಯಾ.

ಯಥಾ ತತ್ರ ಬಿಂಬೇ ಮುಖೇ ಅವಿದ್ಯಮಾನಂ ಮಲಿನತ್ವಂ ದರ್ಪಣೋಪಾಧಿವಶಾತ್ ಪ್ರತಿಬಿಂಬೇ ಪ್ರತೀಯತೇ ತಥಾ ಅವಿದ್ಯಾ ವಶಾದೇವ ಪ್ರತ್ಯಗಾತ್ಮನಿ ಬ್ರಹ್ಮಪ್ರತಿಬಿಂಬೇ ಅಹಂಕಾರಾಖ್ಯಂ ದ್ರವ್ಯಂ ಅವಿದ್ಯೋಪಾದಾನಕಂ ಮಿಥ್ಯಾಭೂತಮೇವ ಆರೋಪ್ಯತೇ.

ಹೇಗೆ ಬಿಂಬವಾದ ಮುಖದಲ್ಲಿ ಇಲ್ಲದಿರುವ ಮಲಿನತ್ವವು ದರ್ಪಣರೂಪ ಉಪಾಧಿವಶದಿಂದ ಪ್ರತಿಬಿಂಬದಲ್ಲಿ ಕಾಣಿಸುತ್ತದೆಯೋ ಹಾಗೆಯೇ ಅವಿದ್ಯಾ ವಶದಿಂದ ಬ್ರಹ್ಮಪ್ರತಿಬಿಂಬನಾದ ಪ್ರತ್ಯಗಾತ್ಮನಲ್ಲಿ ಅವಿದ್ಯೆಯೇ ಉಪಾದಾನ ಕಾರಣವಾಗಿ ಉಳ್ಳ ಅಹಂಕಾರವೆಂಬ ಮಿಥ್ಯಾಭೂತವಾದ ದ್ರವ್ಯವು ಅಧ್ಯಸ್ತ (ಆರೋಪಿತ) ವಾಗುತ್ತದೆ.

" ತಚ್ಚ ಜ್ಞಾನಶಕ್ತಿಮಾಶ್ರಿತ್ಯ ಮನ ಇತಿ ಕ್ರಿಯಾಶಕ್ತಿಮಾಶ್ರಿತ್ಯ ಪ್ರಾಣ ಇತಿ ಚ ಗೀಯತೇ "

ಅಹಂಕಾರವು ತಿಳಿದುಕೊಳ್ಳುವ ಅಪೇಕ್ಷಯಾ ಮನಸ್ಸೆಂದು ಅನ್ನಿಸಿಕೊಳ್ಳುತ್ತದೆ. ಅಂದರೆ ತಿಳಿದುಕೊಳ್ಳುವುದು ಅಹಂಕಾರದ ಒಂದು ಶಕ್ತಿ. ಇದೇ ಅಹಂಕಾರವು ಅದರಲ್ಲಿರತಕ್ಕ ಕ್ರಿಯಾಶಕ್ತಿ ಅಪೇಕ್ಷಯಾ ಪ್ರಾಣವೆಂದು ಅನ್ನಿಸಿಕೊಳ್ಳುತ್ತದೆ.

" ತದ್ಧರ್ಮಾ ಏವ ಕರ್ತೃತ್ವ ಭೋಕ್ತೃತ್ವ ಸುಖದುಃಖಾದಯೋ ಜಪಾಕುಸುಮಗತಂ ಲೌಹಿತ್ಯಂ ಸ್ಫಟಿಕಮಣಾವಿವ ಸನ್ನಿಧಾನಾತ್ ಆತ್ಮನಿ ಆರೋಪ್ಯಂತೇ "

ಆ ಅಹಂಕಾರ ಧರ್ಮಗಳೇ ಆದ ಕರ್ತೃತ್ವ, ಭೋಕ್ತೃತ್ವ, ಸುಖ ದುಃಖಾದಿಗಳು ಜಪಾಕುಸುಮದ ಕೆಂಪು (ಕೆಂಪುದಾಸವಾಳದ ಹೂವಿನ ಕೆಂಪು) ಸ್ಫಟಿಕ ಮಣಿಯಲ್ಲಿ ಹತ್ತಿರವಿರೋಣದರಿಂದ ಕಾಣುವಂತೆ, ಆತ್ಮನಲ್ಲಿ ಆರೋಪಿಸಲ್ಪಡುತ್ತವೆ. ಅಂದರೆ ಇವೆಲ್ಲವೂ ಆತ್ಮನಲ್ಲಿ ಇದ್ದಂತೆ ತೋರುತ್ತವೆ.

ಸ ಚ ಅವಿದ್ಯಾಹಂಕಾರಾದ್ಯಧ್ಯಾಸದ್ರಷ್ಟಾ ಪ್ರತ್ಯಗಾತ್ಮಾ ಸಾಕ್ಷೀತ್ಯುಚ್ಯತೇ. ತಸ್ಯ ಸಾಕ್ಷಿತ್ವಮಪಿ ಆವಿದ್ಯಕಮೇವ ನ ಸತ್ಯಂ. ಯಥಾ ರಜತಾಧ್ಯಾಸೋ ಜ್ಞಾನಾರ್ಥರೂಪೋ ಮಿಥ್ಯಾ ತಥಾ ಅವಿದ್ಯಾಧ್ಯಾಸೋಪೀತಿ "

ಆ ಅವಿದ್ಯಾ ಅಹಂಕಾರಾದಿ ಆರೋಪಗಳನ್ನು ನೋಡತಕ್ಕ ಪ್ರತ್ಯಗಾತ್ಮನೇ 'ಸಾಕ್ಷಿ' ಎಂದು ಕರೆಯಲ್ಪಡುತ್ತಾನೆ. ಅವನ ಸಾಕ್ಷಿತ್ವವೂ ಕೂಡ ಅವಿದ್ಯಾ ನಿಮಿತ್ತಕವಾದ್ದರಿಂದ ಸತ್ಯವಲ್ಲ. ಸಾಕ್ಷಿದೃಷ್ಟವೆಂದ ಮಾತ್ರಕ್ಕೆ ಈ ಅವಿದ್ಯಾ ಆರೋಪವು ಸತ್ಯವಲ್ಲ-ಜ್ಞಾನ ಮತ್ತು ಅರ್ಥರೂಪವಾದ ರಜತಾಧ್ಯಾಸವು ಹೇಗೆ ಮಿಥ್ಯೆಯೋ ಹಾಗೆಯೇ ಅವಿದ್ಯಾಧ್ಯಾಸವೂ ಮಿಥ್ಯಾ.

ತೇ ಚ ದ್ವಿವಿಧಾಃ ಏಕಜೀವವಾದಿನೋ ಬಹುಜೀವವಾದಿನಶ್ಚೇತಿ. ಏಕ ಏವ ಬ್ರಹ್ಮಪ್ರತಿಬಿಂಬೋ ಜೀವಃ ಅನ್ಯೇ ಜೀವಾಃ ಜಡವತ್ ಸ್ವರೂಪೇಣೈವ ಕಲ್ಪಿತಾಃ ಯಥಾ ಸ್ವಪ್ನೇ ಯಥಾ ವಾ ಚಿತ್ರಭಿತ್ತೌ. ತತ್ರ ಯಃ ಪರಮಾರ್ಥತೋ ಜೀವಃ ತಸ್ಯ ತತ್ತ್ವಜ್ಞಾನೋದಯೇ ತತ್ಕಲ್ಪಿತೋಯಂ ಸರ್ವೋ ಬಾಹ್ಯಾಂತರ ರೂಪಃ ಪ್ರಪಂಚೋ ನಿವರ್ತತೇ ಪ್ರತೀತಿಮಾತ್ರ ಶರೀರತ್ವಾತ್ ಅನ್ಯಸ್ಯ ಪ್ರತ್ಯೇತುರಭಾವಾತ್ ಈಶ್ವರಭೇದಸ್ಯಾಪಿ ತೇನೈವ ಕಲ್ಪಿತತ್ವಾದಿತಿ ಏಕಜೀವವಾದಿನಾಂ ಮತಂ.

ಆ ಮಾಯಾವಾದಿಗಳು ಎರಡು ಪ್ರಕಾರ. ಏಕಜೀವವಾದಿಗಳೆಂದೂ ಬಹುಜೀವವಾದಿಗಳೆಂದೂ.

ಏಕಜೀವವಾದಿಗಳ ಮತ

ಬ್ರಹ್ಮನ ಪ್ರತಿಬಿಂಬನಾದ ಜೀವನು ಒಬ್ಬನೇ. ಇತರ ಜೀವರುಗಳು ಜಡದಂತೆ ಸ್ವರೂಪದಿಂದಲೇ ಕಲ್ಪಿತರಾದವರು. ಸ್ವಪ್ನದಲ್ಲಿ ಹೇಗೋ, ಚಿತ್ರಿತವಾದ ಗೋಡೆಯಲ್ಲಿ ಹೇಗೋ ಹಾಗೆ. ಅಲ್ಲಿ ಯಾವನು ಪರಮಾರ್ಥ ಜೀವನೋ ಅವನಿಗೆ ತತ್ತ್ವಜ್ಞಾನವು ಹುಟ್ಟಿದ ಕೂಡಲೇ ಅವನಿಂದ ಅಂದರೆ ಅವನ ಅಜ್ಞಾನದಿಂದ ಕಲ್ಪಿತವಾದ ಒಳಗಿನ ಸುಖದುಃಖಾದಿಗಳು ಹೊರಗಿನ ಘಟಪಟಾದಿ ಪ್ರಪಂಚವು ಕೇವಲ ತೋರುವಿಕೆಯಾದ್ದರಿಂದ ನಿವೃತ್ತವಾಗುತ್ತವೆ. (Since they are of the nature of ideas in the real Jeeva.) ಏಕೆಂದರೆ ಇವನನ್ನು ಬಿಟ್ಟು ತಿಳಿದುಕೊಳ್ಳುವವನು ಬೇರೆ ಇಲ್ಲವಾದ್ದರಿಂದ. ವ್ಯವಹಾರದಲ್ಲಿರತಕ್ಕ ಈಶ್ವರ ಜೀವಭೇದವು ಆ ಪರಮಾರ್ಥ ಜೀವನಿಂದಲೇ ಕಲ್ಪಿತವಾದ್ದರಿಂದ ತಿಳಿಯತಕ್ಕ ಈಶ್ವರನು ಬೇರೆ ಇಲ್ಲ. ಇದು ಏಕಜೀವವಾದ.

ಬಹುಜೀವವಾದಿನಾಂ ತು ಮುಖಮಿವ ಅನೇಕೇಷು ದರ್ಪಣೇಷು ಅನೇಕ ಅವಿದ್ಯಾಸು ಪ್ರತಿಬಿಂಬಿತಂ ಬ್ರಹ್ಮ ಅನೇಕ ಬ್ರಹ್ಮಭಾವಂ ಆಪದ್ಯತೇ. ತತ್ರ ವಿಚ್ಛೇದ ಮಾತ್ರಂ ಆರೋಪಿತಂ. ಜೀವಾಸ್ತು ಅನಂತಾಃ ಸ್ವರೂಪೇಣ ಸತ್ಯಾ ಏವ ತತ್ರ ಯಸ್ಯ ತತ್ತ್ವಜ್ಞಾನಮುತ್ಪದ್ಯತೇ ಸೋಽಪವೃಜ್ಯತೇ ಅನ್ಯೇ ಸಂಸರಂತೀತಿ.

ಬಹುಜೀವವಾದಿಮತ

ಬಹು ಜೀವವಾದಿಗಳ ಮತದಲ್ಲಿ ಅನೇಕ ದರ್ಪಣಗಳಲ್ಲಿ ಒಂದು ಮುಖವು ಅನೇಕ ಪ್ರತಿಬಿಂಬಗಳಾಗಿ ಕಾಣುವಂತೆ ಬ್ರಹ್ಮನು ಅನೇಕ ಅವಿದ್ಯಾಗಳಲ್ಲಿ ಪ್ರತಿಬಿಂಬಿಸಿ ಅನೇಕ ಜೀವಭಾವವನ್ನು ಹೊಂದುತ್ತಾನೆ. ಇಲ್ಲಿ ವಿಚ್ಛೇದ (ಭೇದ) ಮಾತ್ರ ಆರೋಪಿತವಾದದ್ದು. ಜೀವರು ಅನಂತರು. ಸ್ವರೂಪದಲ್ಲಿ ಸತ್ಯರಾದವರೇ. ಇಲ್ಲಿ ಯಾರಿಗೆ ತತ್ತ್ವಜ್ಞಾನ ಉಂಟಾಗುತ್ತದೆಯೋ ಅವನು ಮುಕ್ತನಾಗುತ್ತಾನೆ. ಇತರರು ಸಂಸಾರದಲ್ಲಿರುತ್ತಾರೆ.
